ಬುಧವಾರ, ಜನವರಿ 15, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 15 | ಪುಟ 14

• www.prajavani.net

prajavani.net | prajavani | Prajavani | Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ತಂತ್ರಜ್ಞಾನ
ಲಾಸ್ ಏಂಜಲೀಸ್‌ನ ಕಾಳ್ಗಿಚ್ಚನ್ನು ನಂದಿಸುವಲ್ಲಿ ತಂತ್ರಜ್ಞಾನದ ಕೊಡುಗೆ ವಿಶೇಷವಾಗಿದೆ

ಆಳ-ಅಗಲ: ಕೌಂಟಿ ರಚನೆ ಬಲವಾಗುತ್ತಿದೆಯೇ ಚೀನಾ ಹಿಡಿತ?

ಕಿಯೋನಿಕ್ಸ್: ದಯಾಮರಣ ಕೋರಿದ ವೆಂಡರ್ಸ್ 4B

ದೆಹಲಿ: ಜಾಟರ ಮತಕ್ಕಾಗಿ ಜಟಾಪಟಿ 9

ಸೆನ್ಸೆಕ್ಸ್	ನಿಫ್ಟಿ	₹/$
76,499	23,176	86.53

2nd PUC Board Exams
Most likely expected question & answers explained by Shri Pradeep Eshwar himself!!
•1 Mark •2 Marks •3 Marks •5 Marks
PARISHRAMA PU COLLEGE | NEET ACADEMY
For admissions call 080-24413400
Mr. Pradeep Eshwar
Founder & MD, Parishrama Group
MLA of Chikballapur Constituency
Scan to watch the video and follow the page for more
PRADEEP ESHWAR ಪ್ರದೀಪ್ ಈಶ್ವರ್ | FACEBOOK.COM/PRADEEPESHWARINSPIRE | INSTAGRAM.COM/PRADEEPESHWARINSPIRE

ಅಗ್ನಿ ಅವಘಡದಿಂದ ₹150 ಕೋಟಿ ನಷ್ಟ • ಜೈವಿಕ ತಂತ್ರಜ್ಞಾನದ ಸಂಶೋಧನೆಗಳ ಗುಚ್ಛ ಭಸ್ಮ

ನವೋದ್ಯಮ: 13 ಲ್ಯಾಬ್‌ಗೆ ಬೆಂಕಿ



ಬಯೋ ಇನೋವೇಶನ್ ಕೇಂದ್ರದಲ್ಲಿ ಮಂಗಳವಾರ ಮುಂಜಾನೆ ಬೆಂಕಿ ಅವಘಡ ಸಂಭವಿಸಿದ್ದು, ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸುವ ಕಾರ್ಯಾಚರಣೆ ನಡೆಸಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೈವಿಕ ತಂತ್ರಜ್ಞಾನ ಕ್ಷೇತ್ರದ ನವೋದ್ಯಮಗಳಿಗೆ ನೆರವಾಗಲು ಇಲ್ಲಿನ ಎಲೆಕ್ಟ್ರಾನಿಕ್ ಸಿಟಿಯಲ್ಲಿ ರಾಜ್ಯ ಸರ್ಕಾರ ಸ್ಥಾಪಿಸಿರುವ ಬೆಂಗಳೂರು ಬಯೋ ಇನೋವೇಶನ್ ಕೇಂದ್ರದಲ್ಲಿ (ಬಿಬಿಸಿ) ಮಂಗಳವಾರ ಮುಂಜಾನೆ ಸಂಭವಿಸಿದ ಅಗ್ನಿ ಅವಘಡದಲ್ಲಿ ಪ್ರಯೋಗಾಲಯಗಳು ಸಂಪೂರ್ಣ ಸುಟ್ಟು ಭಸ್ಮವಾಗಿವೆ.

ದುರ್ಘಟನೆಯಲ್ಲಿ ಏಳು ನವೋದ್ಯಮಗಳಿಗೆ ಸೇರಿದ 13 ಪ್ರಯೋಗಾಲಯಗಳು ಸಂಪೂರ್ಣ ಸುಟ್ಟುಹೋಗಿವೆ. ಇತರ ಎಂಟು ನವೋದ್ಯಮಗಳ ಪ್ರಯೋಗಾಲಯಗಳಿಗೆ ಭಾಗಶಃ ಹಾನಿಯಾಗಿದೆ. ಬಿಬಿಸಿಯ ₹42 ಕೋಟಿ ಮೌಲ್ಯದ ಸ್ವತ್ತುಗಳೂ ಸೇರಿದಂತೆ ಒಟ್ಟು ₹150 ಕೋಟಿ ಮೌಲ್ಯದ ಹಾನಿ ಸಂಭವಿಸಿದೆ ಎಂದು ಪ್ರಾಥಮಿಕ ಹಂತದಲ್ಲಿ ಅಂದಾಜು ಮಾಡಲಾಗಿದೆ.

ನವೋದ್ಯಮಗಳಿಗೆ ₹80 ಕೋಟಿಯಿಂದ ₹110 ಕೋಟಿಯಷ್ಟು ನಷ್ಟ ಸಂಭವಿಸಿರಬಹುದು ಎಂದು ಅಂದಾಜಿಸಲಾಗಿದೆ. 13 ಪ್ರಯೋಗಾಲಯಗಳಲ್ಲಿದ್ದ ಬಹುತೇಕ ಉಪಕರಣಗಳು, ಹೊಸ ಸಂಶೋಧನೆಗಳು, ದುಬಾರಿ ಮೊತ್ತದ ರಾಸಾಯನಿಕಗಳು ಬೆಂಕಿಗೆ ಆಹುತಿಯಾಗಿದ್ದು, ನಷ್ಟದ ಪ್ರಮಾಣ ಇನ್ನೂ ಹೆಚ್ಚಾಗುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಅಧೀನದಲ್ಲಿ ನಡೆಯುತ್ತಿರುವ ಬೆಂಗಳೂರು ಬಯೋ ಇನೋವೇಶನ್ ಕೇಂದ್ರದ ಎರಡನೇ ಮಹಡಿಯ ಪ್ರಯೋಗಾಲಯದಲ್ಲಿ ಮಂಗಳವಾರ ನಸುಕಿನ ಜಾವ ಬೆಂಕಿ ಕಾಣಿಸಿಕೊಂಡಿತ್ತು. ಬೆಳಿಗ್ಗೆ 6.15ರ ಸುಮಾರಿಗೆ ಸ್ಥಳ ತಲುಪಿದ ಅಗ್ನಿಶಾಮಕದ ದಳದ ಸಿಬ್ಬಂದಿ ಮಧ್ಯಾಹ್ನ 12ರವರೆಗೆ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಲು ಯಶಸ್ವಿಯಾದರು. ಅಷ್ಟರಲ್ಲಿ ಪ್ರಯೋಗಾಲಯದಲ್ಲಿದ್ದ ವಿವಿಧ ಬಗೆಯ ರಾಸಾಯನಿಕ, ಕಂಪ್ಯೂಟರ್, ಪ್ರಯೋಗಾಲಯದ ಯಂತ್ರೋಪಕರಣ, ಸೂಕ್ಷ್ಮದರ್ಶಕ, ತಂತ್ರಜ್ಞಾನ, ದಾಖಲೆ ಹಾಗೂ ವಿವಿಧ ಕಂಪನಿ ಜತೆಗೆ ಮಾಡಿಕೊಂಡಿದ್ದ ಒಡಂಬಡಿಕೆ ಪತ್ರಗಳು ಸುಟ್ಟು ಭಸ್ಮವಾಗಿವೆ ಎಂದು ಮೂಲಗಳು ತಿಳಿಸಿವೆ.

8ನೇ ಪುಟ ನೋಡಿ

ಸುಟ್ಟು ಹೋದ ಪ್ರಯೋಗಾಲಯ

•ಫರ್ಮ್‌ಬಾಕ್ಸ್ •ಪಿಕ್ಸ್-44 •ಅಜಿತಾ ಪ್ರೊಡ್ರಗ್ •ಗ್ಯಾಲೋರ್ ಟಿಎಕ್ಸ್ •ಐಕೇಸಿಯಾ •ಇಮ್ಯುನಿಟಾಸ್ •ಯೊಕೊಗಾವಾ

ಭಾಗಶಃ ಹಾನಿಯಾದ ಪ್ರಯೋಗಾಲಯ

•ಆ್ಯಟ್ರಿಮೆಡ್ ಫಾರ್ಮಾ •4-ಬೇಸ್ ಕೇರ್ •ಅನಾಬಯೋ •ಅನಾವಾ ಬಯೋ •ಪಾನ್‌ಡೋರಿಯಂ •ಆಕ್ಸೋನೆಕ್ಸೆ ಪ್ರಿಸ್ಯೂಡ್ ಲೈಫ್ ಸೈನ್ಸಸ್ •ಝಿಚ್ಚು

ರಾಸಾಯನಿಕದಿಂದ ಹೊತ್ತಿದ ಬೆಂಕಿ

‘ಬೆಂಗಳೂರು ಬಯೋ ಇನೋವೇಶನ್ ಕೇಂದ್ರದ ಎರಡನೇ ಮಹಡಿಯಲ್ಲಿದ್ದ ‘ಗ್ಯಾಲೋರ್ ಟಿಎಕ್ಸ್’ ಹೆಸರಿನ ನವೋದ್ಯಮದ ಪ್ರಯೋಗಾಲಯದಲ್ಲಿ ಹೊತ್ತಿ ಉರಿಯುವ ರಾಸಾಯನಿಕವನ್ನು ಅಸಮರ್ಪಕವಾಗಿ ದಾಸ್ತಾನು ಮಾಡಲಾಗಿತ್ತು. ರಾಸಾಯನಿಕಗಳ ಮಿಶ್ರಣದ ಪ್ರತಿಕ್ರಿಯೆಯಿಂದ ಬೆಂಕಿ ಹೊತ್ತಿಕೊಂಡಿದೆ’ ಎಂದು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ತಿಳಿಸಿದೆ.

‘ಹೊತ್ತಿ ಉರಿಯುವ ರಾಸಾಯನಿಕಗಳನ್ನು ಒಂದೇ ಕಡೆ ದಾಸ್ತಾನು ಮಾಡದಂತೆ ಸೂಚನೆ ನೀಡಲಾಗಿತ್ತು. ಅಂತಹ ರಾಸಾಯನಿಕಗಳನ್ನು ತೆರೆದ ಸ್ಥಳದಲ್ಲಿ ಇರಿಸುವಂತೆ ಸೂಚಿಸಲಾಗಿತ್ತು. ಅದನ್ನು ಪಾಲಿಸದೇ ಇರುವುದು ಅವಘಡಕ್ಕೆ ಕಾರಣವಾಗಿದೆ’ ಎಂದು ಇಲಾಖೆ ಹೇಳಿದೆ.

ಮಕರಜ್ಯೋತಿ ದರ್ಶನ

ಕೇರಳದ ಪತ್ತನಂತಿಟ್ಟ ಜಿಲ್ಲೆಯ ಶಬರಿಮಲೆಯಲ್ಲಿ ಮಂಗಳವಾರ ಅಯ್ಯಪ್ಪ ಸ್ವಾಮಿ ಭಕ್ತಾದಿಗಳು ಮಕರಜ್ಯೋತಿಗೆ ಸಾಕ್ಷಿಯಾದರು ಪಿಟಿಐ ಚಿತ್ರ

ಡಿ.ಫಾರ್ಮ: ಒಂದೇ ದಿನಾಂಕ ನಮೂದಿಸಿ 3 ಅಧಿಸೂಚನೆ

‘ಪರೀಕ್ಷಾ ಅಕ್ರಮ’ಕ್ಕೆ ದಾರಿ?

• ರಾಜೇಶ್ ರೈ ಚಟ್ಲ

91	345
ಡಿ.ಫಾರ್ಮ ಒಟ್ಟು ಪರೀಕ್ಷಾ ಕೇಂದ್ರಗಳು	ರಾಜ್ಯದಲ್ಲಿರುವ ಫಾರ್ಮಸಿ ಕಾಲೇಜುಗಳು

ಬೆಂಗಳೂರು: ಡಿ. ಫಾರ್ಮ ಪರೀಕ್ಷಾ ಪ್ರಾಧಿಕಾರ ಮಂಡಳಿಯು ಒಂದೇ ದಿನಾಂಕ ನಮೂದಿಸಿ ಹೊರಡಿಸಿರುವ ಮೂರು ಪ್ರತ್ಯೇಕ ಅಧಿಸೂಚನೆಗಳಲ್ಲಿ ಪರೀಕ್ಷಾ ಕೇಂದ್ರಗಳಿಗೆ 100ಕ್ಕೂ ಹೆಚ್ಚು ಡಿಪ್ಲೊಮಾ ಇನ್ ಫಾರ್ಮಸಿ (ಡಿ. ಫಾರ್ಮ) ಕಾಲೇಜುಗಳನ್ನು ಮರುಹಂಚಿಕೆ ಮಾಡಿರುವುದು ಅಕ್ರಮಕ್ಕೆ ಅವಕಾಶ ಮಾಡಿಕೊಡುವ ಉದ್ದೇಶ ಹೊಂದಿದೆ ಎಂಬ ಆರೋಪ ಎದುರಾಗಿದೆ.

ರಾಜ್ಯದ ವಿವಿಧ ಕಡೆ ಬುಧವಾರದಿಂದ (ಜ. 15) ಡಿ. ಫಾರ್ಮ ಪರೀಕ್ಷೆಗಳು ಆರಂಭವಾಗಲಿವೆ. ಮಂಡಳಿಯು ಜ. 7ರಂದು ಪರೀಕ್ಷಾ ಕೇಂದ್ರಗಳಿಗೆ ಕಾಲೇಜುಗಳನ್ನು ಹಂಚಿಕೆ ಮಾಡಿ ಅಧಿಸೂಚನೆ ಹೊರಡಿಸಿತ್ತು. ಅದೇ ದಿನಾಂಕವನ್ನು ನಮೂದಿಸಿ ಜ. 9 ಮತ್ತು 10ರಂದು ಅಧಿಸೂಚನೆಗಳನ್ನು ಹೊರಡಿಸಿರುವ ಮಂಡಳಿಯು, ಅದಾಗಲೇ ಪರೀಕ್ಷಾ ಕೇಂದ್ರಗಳಿಗೆ ಹಂಚಿಕೆ ಮಾಡಿದ್ದ ಕಾಲೇಜುಗಳನ್ನು ಅದಲುಬದಲು ಮಾಡಿದೆ. ಕಾಲೇಜುಗಳ ಮರು ಹಂಚಿಕೆ ಕುರಿತು ಇ-ಮೇಲ್ ಮೂಲಕ ಆಯಾ ಡಿ. ಫಾರ್ಮಸಿ ಕಾಲೇಜುಗಳಿಗೆ ಮಾಹಿತಿ ನೀಡಲಾಗಿದೆ.

ಯಾವುದೇ ಕಾರಣ ನೀಡದೆ ಕಾಲೇಜುಗಳ ಮರು ಹಂಚಿಕೆ ಮಾಡಿರುವ ಮಂಡಳಿಯ ನಡೆಯು ಸಂದೇಹಗಳಿಗೆ ಕಾರಣವಾಗಿದೆ. ಅಲ್ಲದೆ, ಕಾಲೇಜುಗಳ ಬೇಡಿಕೆಯಂತೆ ಈ ರೀತಿ ಅದಲುಬದಲು ಮಾಡಲಾಗಿದ್ದು, ಇದಕ್ಕೆ ಪ್ರತಿ ಕಾಲೇಜನಿಂದ ₹2 ಲಕ್ಷದಿಂದ ₹4 ಲಕ್ಷದವರೆಗೆ ಹಣ ಪಡೆದಿದ್ದಾರೆ ಎಂದು ಆರೋಪಿಸಲಾಗಿದೆ.

ರಾಜ್ಯದಾದ್ಯಂತ ಒಟ್ಟು 91 ಫಾರ್ಮಸಿ ಕಾಲೇಜುಗಳನ್ನು ಪರೀಕ್ಷಾ ಕೇಂದ್ರಗಳಾಗಿ ಮಾಡಿ, ಸುತ್ತಮುತ್ತಲಿನ ಕಾಲೇಜುಗಳನ್ನು ಈ ಕೇಂದ್ರಗಳಿಗೆ ಮಂಡಳಿಯು ಹಂಚಿಕೆ ಮಾಡಿತ್ತು. ನಂತರ ಹೊರಡಿಸಿದ ಪ್ರತ್ಯೇಕ ಅಧಿಸೂಚನೆಗಳಲ್ಲಿ ಅಕ್ಕಪಕ್ಕದ ಪರೀಕ್ಷಾ ಕೇಂದ್ರಗಳಿಗೇ ಕಾಲೇಜುಗಳನ್ನು ಮರು ಹಂಚಿಕೆ ಮಾಡಿದೆ. ಕಲಬುರಗಿ, ಬೆಂಗಳೂರು ಮತ್ತು ಬೀದರ್ ಭಾಗದ ಬಹುತೇಕ ಕಾಲೇಜುಗಳನ್ನು ಈ ರೀತಿ ಮರು ಹಂಚಿಕೆ ಮಾಡಿರುವುದು ಹಲವು ಸಂಶಯಗಳಿಗೆ ಎಡೆ ಮಾಡಿಕೊಟ್ಟಿದೆ.

‘ಈಗಾಗಲೇ ಆರೋಪ ಎದುರಿಸುತ್ತಿರುವ ನರ್ಸಿಂಗ್ ಕಾಲೇಜುಗಳಿಗೆ ಪರೀಕ್ಷಾ ಕೇಂದ್ರಗಳನ್ನು ನೀಡಲಾಗಿದೆ. ಇದನ್ನು ನೋಡಿದರೆ, ಡಿ. ಫಾರ್ಮ ಪರೀಕ್ಷಾ ಕೇಂದ್ರಗಳಲ್ಲಿ ಅಕ್ರಮ ನಡೆಸುವ ಸಲುವಾಗಿಯೇ ಖಾಸಗಿ ಕಾಲೇಜುಗಳೊಂದಿಗೆ ಮಂಡಳಿಯ ಅಧಿಕಾರಿಗಳು ಶಾಮೀಲಾಗಿರುವ ಶಂಕೆಯಿದೆ’ ಎಂದು ಆರೋಪಿಸಲಾಗಿದೆ.

5ನೇ ಪುಟ ನೋಡಿ

3.5 ಕೋಟಿ ಜನ ‘ಅಮೃತ ಸ್ನಾನ’

ಲಖನೌ: ವಿವಿಧ ಅಖಾಡಾಗಳ ಸಂತರು ಮತ್ತು ಸಾಧುಗಳು ಸೇರಿದಂತೆ ಸುಮಾರು 3.5 ಕೋಟಿ ಭಕ್ತರು ‘ಮಕರ ಸಂಕ್ರಾಂತಿ’ ದಿನದಂದು ಪ್ರಯಾಗ್‌ರಾಜ್‌ನ ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದರು. ಈ ಬಾರಿಯ ಮಹಾಕುಂಭ ಮೇಳದ ಮೂರು ‘ಅಮೃತ ಸ್ನಾನ’ಗಳಲ್ಲಿ ಇದು ಮೊದಲನೆಯದು. 9

ಆಟಗಾರರ ಪತ್ನಿಯರ ಪ್ರವಾಸ ಅವಧಿ ಕಡಿತ?



ನವದೆಹಲಿ (ಪಿಟಿಐ): ಆಸ್ಟ್ರೇಲಿಯಾದಲ್ಲಿ ಈಚೆಗೆ ನಡೆದ ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯಲ್ಲಿ ಸೋಲು ಅನುಭವಿಸಿದ ಭಾರತ ತಂಡದಲ್ಲಿ ಶಿಸ್ತು ಸಂಹಿತೆಯನ್ನು ಮತ್ತಷ್ಟು ಬಿಗಿಗೊಳಿಸಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಸಿದ್ಧತೆ ನಡೆಸಿದೆ.

ಅದರಲ್ಲಿ ಪ್ರಮುಖವಾಗಿ ತಂಡದ ಆಟಗಾರರು ತಮ್ಮ ಪತ್ನಿ ಮತ್ತು ಕುಟುಂಬದ ಸದಸ್ಯರೊಂದಿಗೆ ಪ್ರಯಾಣಿಸುವ ನಿಯಮದಲ್ಲಿ ಬದಲಾವಣೆ ಮಾಡುವ ಸಾಧ್ಯತೆ ಇದೆ. ಒಂದೊಮ್ಮೆ ಕ್ರಿಕೆಟ್ ಪ್ರವಾಸವು 45 ದಿನ ಅಥವಾ ಅದಕ್ಕಿಂತ ಹೆಚ್ಚಿದ್ದರೆ, ಕುಟುಂಬ ಸದಸ್ಯರು ಆಟಗಾರರೊಂದಿಗೆ ಗರಿಷ್ಠ 2 ವಾರ ಮಾತ್ರ ಇರಬಹುದು. ಆದರೆ ಪ್ರವಾಸವು ಕಡಿಮೆ ಸಂಖ್ಯೆಯ ದಿನಗಳನ್ನು ಹೊಂದಿದ್ದರೆ ಒಂದು ವಾರ ಮಾತ್ರ ಕುಟುಂಬ ಸದಸ್ಯರಿಗೆ ಅವಕಾಶವಿರಲಿದೆ.

ಆಸ್ಟ್ರೇಲಿಯಾ ಎದುರಿನ ಸರಣಿಯ ವೈಫಲ್ಯದ ಕುರಿತು ಭಾನುವಾರ ನಡೆದ ಅವಲೋಕನ ಸಭೆಯಲ್ಲಿ ಈ ಕುರಿತು ಚರ್ಚಿಸಲಾಯಿತು. ಈ ಸಂದರ್ಭದಲ್ಲಿ ಮುಖ್ಯ ಕೋಚ್ ಗೌತಮ್ ಗಂಭೀರ್, ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ, ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರ್ಕರ್ ಮತ್ತು ನಾಯಕ ರೋಹಿತ್ ಶರ್ಮಾ ಹಾಜರಿದ್ದರು.

ಜಾತ್ರೆಯ ಓಟ

ಕೊಪ್ಪಳದ ಗವಿಸಿದ್ಧೇಶ್ವರ ಮಠದ ಜಾತ್ರಾ ಮಹೋತ್ಸವ ಅಂಗವಾಗಿ ಮಂಗಳವಾರ ನಡೆದ ಓಟದ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ ಓಟಗಾರ್ತಿಯರು ಚಿತ್ರ: ಭರತ್ ಕಂದಕೂರ

ಅಪಘಾತ: ಸಚಿವೆ ಲಕ್ಷ್ಮೀ ಬೆನ್ನುಮೂಳೆ ಮುರಿತ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರು ಪ್ರಯಾಣಿಸುತ್ತಿದ್ದ ಕಾರು ಮಂಗಳವಾರ ನಸುಕಿನಲ್ಲಿ, ಜಿಲ್ಲೆಯ ಕಿತ್ತೂರು ತಾಲ್ಲೂಕಿನ ಅಂಬಡಗಟ್ಟಿ ಗ್ರಾಮದ ಬಳಿ ಮರಕ್ಕೆ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದೆ.

ಸಚಿವೆ ಲಕ್ಷ್ಮೀ ಅವರನ್ನು ಬೆಳಗಾವಿಯ ವಿಜಯಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರ ಬೆನ್ನಿನ ಎರಡು ಮೂಳೆಗಳು (ಎಲ್1 ಎಲ್4) ಅಲ್ಪಪ್ರಮಾಣದಲ್ಲಿ ಮುರಿದಿವೆ. ಕುತ್ತಿಗೆ ಭಾಗದಲ್ಲಿ (ಸಿ4, ಸಿ5) ಪೆಟ್ಟು ಬಿದ್ದಿದೆ. ಪ್ರಾಣಾಪಾಯ ಇಲ್ಲ.

ಕಾರಿನಲ್ಲಿದ್ದ ಲಕ್ಷ್ಮೀ ಅವರ ಸಹೋದರ, ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಅವರ ಮುಖ, ತಲೆ, ಕಿವಿ, ಭುಜಕ್ಕೆ ಗಾಯಗಳಾಗಿವೆ. ಕಾರು ಚಾಲಕ ಮತ್ತು ಗನ್‌ಮ್ಯಾನ್‌ಗೆ ಸಣ್ಣಪುಟ್ಟ ಗಾಯಗಳಾಗಿವೆ.

‘ಲಕ್ಷ್ಮೀ ಅವರಿಗೆ ಶಸ್ತ್ರಚಿಕಿತ್ಸೆಯ ಅಗತ್ಯವಿಲ್ಲ. ನಾಲ್ಕು ದಿನ ಆಸ್ಪತ್ರೆಯಲ್ಲಿ ಇರಿಸಿಕೊಳ್ಳಲಾಗುವುದು. ಆದರೆ, ಒಂದು ತಿಂಗಳು ಅವರು ವಿಶ್ರಾಂತಿ ಪಡೆಯಬೇಕು’ ಎಂದು ಅವರಿಗೆ ಚಿಕಿತ್ಸೆ ನೀಡಿದ ಡಾ.ರವಿ ಪಾಟೀಲ ತಿಳಿಸಿದ್ದಾರೆ.

ಹೇಗಾಯಿತು: ‘ರಾತ್ರಿ 11ರ ಸುಮಾರಿಗೆ ಬೆಂಗಳೂರಿನಿಂದ ಸಚಿವೆ ಮತ್ತು ಇತರರು ಕಾರಿನಲ್ಲಿ ಹೊರಟರು. ಅಂಬಡಗಟ್ಟಿ ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ವೇಗವಾಗಿ ಸಾಗುವಾಗ, ಎರಡು ನಾಯಿಗಳು ಅಡ್ಡ ಬಂದವು. ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಚಾಲಕ ಕಾರನ್ನು ಎಡಕ್ಕೆ ಓಡಿಸಿದರು. ಅದೇ ವೇಳೆಗೆ ಮುಂದೆ ದೊಡ್ಡ ಕ್ಯಾಂಟರ್ ವಾಹನ ನಿಧಾನವಾಗಿ ಚಲಿಸುತ್ತಿತ್ತು. ಅದಕ್ಕೂ ಡಿಕ್ಕಿ ಹೊಡೆಯದಂತೆ ಮಾಡಲು ಚಾಲಕ ಕಾರನ್ನು ಸರ್ವಿಸ್ ರಸ್ತೆಗೆ ಇಳಿಸಿದರು. ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿ ಹೊಡೆಯಿತು’ ಎಂದು ಮೂಲಗಳು ತಿಳಿಸಿವೆ.

5ನೇ ಪುಟ ನೋಡಿ

ಕೋಲಾರದಲ್ಲಿ ಪ್ರಾಯೋಗಿಕವಾಗಿ ಜಾರಿಯಾಗಿದ್ದ ಯೋಜನೆ

ನಾಡಿನಾದ್ಯಂತ ‘ಗೃಹ ಆರೋಗ್ಯ’

• ವರುಣ ಹೆಗಡೆ

ಬೆಂಗಳೂರು: ಮನೆ ಬಾಗಿಲಲ್ಲಿಯೇ ವಿವಿಧ ಆರೋಗ್ಯ ಸಮಸ್ಯೆಗಳನ್ನು ಪತ್ತೆ ಮಾಡಿ, ಔಷಧ ವಿತರಿಸುವ ‘ಗೃಹ ಆರೋಗ್ಯ’ ಯೋಜನೆಯನ್ನು ಫೆಬ್ರುವರಿಯಿಂದ ರಾಜ್ಯದಾದ್ಯಂತ ವಿಸ್ತರಿಸಲು ಆರೋಗ್ಯ ಇಲಾಖೆ ನಿರ್ಧರಿಸಿದೆ.

ಇದಕ್ಕಾಗಿ ವೈದ್ಯಕೀಯ ಸಿಬ್ಬಂದಿಗೆ ಅಗತ್ಯ ತರಬೇತಿ ಒದಗಿಸಿ, ಔಷಧಗಳ ಕಿಟ್‌ಗಳನ್ನು ದಾಸ್ತಾನು ಮಾಡಿಕೊಂಡಿದೆ. ಈ ಯೋಜನೆಗೆ 2024ರ ಅಕ್ಟೋಬರ್‌ನಲ್ಲಿ ಚಾಲನೆ ನೀಡಿ, ಪ್ರಾಯೋಗಿಕವಾಗಿ ಕೋಲಾರದಲ್ಲಿ ಪ್ರಾರಂಭಿಸಲಾಗಿತ್ತು.

ಸಮುದಾಯ ಆರೋಗ್ಯಾಧಿಕಾರಿಗಳು, ಪ್ರಾಥಮಿಕ ಸುರಕ್ಷಣಾಧಿಕಾರಿಗಳು ಹಾಗೂ ಆಶಾ ಕಾರ್ಯಕರ್ತೆಯರನ್ನು ಒಳಗೊಂಡ ತಂಡಗಳಿಗೆ ಅಗತ್ಯ ತರಬೇತಿ ಒದಗಿಸಲಾಗಿದೆ. ವೈದ್ಯರನ್ನೊಳಗೊಂಡ ತಂಡವು ಮೊದಲು ಗ್ರಾಮೀಣ ಪ್ರದೇಶದ ಮನೆಗಳಿಗೆ ಭೇಟಿ ನೀಡಿ ತಪಾಸಣೆ ನಡೆಸಲಿದೆ. ಬಳಿಕ ನಗರದ ಮನೆಗಳಲ್ಲಿ ತಪಾಸಣೆ ನಡೆಸಲಿದೆ.

> **ಯೋಜನೆಗೆ ಕೋಲಾರದಲ್ಲಿ ಉತ್ತಮ ಸ್ಪಂದನ ವ್ಯಕ್ತವಾಗಿರುವುದರಿಂದ ರಾಜ್ಯದಾದ್ಯಂತ ವಿಸ್ತರಣೆ ಮಾಡಲಾಗುವುದು**
> **ದಿನೇಶ್ ಗುಂಡೂರಾವ್**
> ಆರೋಗ್ಯ ಸಚಿವ

ಯೋಜನೆಯಡಿ ಪ್ರತಿ ಮನೆಗೂ ತೆರಳಿ, 30 ವರ್ಷ ಮೇಲ್ಪಟ್ಟ ಎಲ್ಲರಿಗೂ ತಪಾಸಣೆ ಮಾಡಲಾಗುತ್ತದೆ. ಮಧುಮೇಹ ಮತ್ತು ಅಧಿಕ ರಕ್ತದೊತ್ತಡ ಸಮಸ್ಯೆ ಎದುರಿಸುತ್ತಿರುವವರಿಗೆ ಒಂದು ತಿಂಗಳಿಗೆ ಸಾಕಾಗುವಷ್ಟು ಮಾತ್ರೆಗಳನ್ನೂ ನೀಡಲಾಗುತ್ತದೆ. ಈ ಔಷಧವನ್ನು ಪ್ರತಿ ತಿಂಗಳು ಪರಿಶೀಲಿಸಿ, ಮುಂದುವರಿಕೆಗೆ ಅಗತ್ಯವಿರುವ ಮಾತ್ರೆಗಳನ್ನು ಒದಗಿಸಲಾಗುತ್ತದೆ. ಮಂಗಳವಾರ, ಬುಧವಾರ, ಶುಕ್ರವಾರ ಮತ್ತು ಶನಿವಾರ ಈ ತಪಾಸಣೆ ನಡೆಯಲಿದ್ದು, ದಿನಕ್ಕೆ ತಲಾ 15 ಮನೆಗಳಿಗೆ ತಂಡಗಳು ಭೇಟಿ ನೀಡಿ ತಪಾಸಣೆ ಕಾರ್ಯ ನಡೆಸಲಿವೆ.

ಚಿಕಿತ್ಸೆಗೆ ವ್ಯವಸ್ಥೆ: ಗೃಹ ಆರೋಗ್ಯ ಯೋಜನೆಯಡಿ ಅಗತ್ಯ ಇದ್ದವರಿಗೆ ಹೆಚ್ಚಿನ ಚಿಕಿತ್ಸೆಯನ್ನೂ ಒದಗಿಸಲಾಗುತ್ತದೆ. ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಶಂಕಿತ ಪ್ರಕರಣಗಳನ್ನು ದೃಢಪಡಿಸಿ, ಹೆಚ್ಚಿನ ಚಿಕಿತ್ಸೆಗೆ ಶಿಫಾರಸು ಮಾಡುತ್ತಾರೆ. ತಾಲ್ಲೂಕು ಆರೋಗ್ಯಾಧಿಕಾರಿಗಳು ಕಾರ್ಯಕ್ರಮದ ಸಂಪೂರ್ಣ ಮೇಲ್ವಿಚಾರಣೆ ಮಾಡುತ್ತಾರೆ. ಪ್ರತಿ ದಿನ ಜಿಲ್ಲಾಮಟ್ಟದಿಂದ ಇಲಾಖೆಯು ವರದಿ ಪಡೆಯಲಿದೆ. ಬಾಯಿ ಕ್ಯಾನ್ಸರ್, ಗರ್ಭಕಂಠ ಕ್ಯಾನ್ಸರ್ ಹಾಗೂ ಸ್ತನ ಕ್ಯಾನ್ಸರ್‌ಗೆ ಸಂಬಂಧಿಸಿದಂತೆಯೂ ತಪಾಸಣೆ ನಡೆಸಿ, ದೃಢ ಪ್ರಕರಣಗಳನ್ನು ಜಿಲ್ಲಾ ಮಟ್ಟದ ಆಸ್ಪತ್ರೆಗಳಿಗೆ ಶಿಫಾರಸು ಮಾಡಲಾಗುತ್ತದೆ.

5B ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಒಳಪುಟಗಳಲ್ಲಿ

ಕದನವಿರಾಮ: ಹಮಾಸ್ ಸಮ್ಮತಿ? 8

‘ಪಿಒಕೆ ಇಲ್ಲದೆ ಕಾಶ್ಮೀರ ಅಪೂರ್ಣ’ 9

ದೇಹ ಅವಮಾನಿಸುವ ಹೇಳಿಕೆ ಒಪ್ಪಲಾಗದು: ಕೇರಳ ಹೈಕೋರ್ಟ್ 9

ADVERTORIAL

ಮಂಡಿನೋವು
ಸರ್ಜರಿ ಇಲ್ಲದೇ ಉಪಶಮನ

ನಿಮ್ಮ ದೇಹದ ಸ್ವಯಂ-ಗುಣಪಡಿಕೆಯ ಸಾಮರ್ಥ್ಯದ ಮೂಲಕ ನೋವನ್ನು ಉಪಶಮನಗೊಳಿಸುವ ಆಧುನಿಕ ನೈಸರ್ಗಿಕ ವಿಧಾನ



ಮೊಣಕಾಲು ನೋವಿನ ಉಪಶಮನಕ್ಕೆ ಪ್ಲೇಟ್ಲೆಟ್ ಪ್ಲಾಸ್ಮಾ ಚಿಕಿತ್ಸೆ ಚುಚ್ಚುಮದ್ದು

ಈ ಚಿಕಿತ್ಸೆಯು ಏಕೆ ಜನರ ಗಮನ ಸೆಳೆಯುತ್ತಿದೆ?
30-60 ನಿಮಿಷದ ವಿಧಾನ
ಆಸ್ಪತ್ರೆ ವಾಸವಿಲ್ಲ
48 ಗಂಟೆಗಳಲ್ಲಿ ನಿಮ್ಮ ಕೆಲಸಕ್ಕೆ ತೆರಳಬಹುದು

ಮೊಣಕಾಲು ನೋವು ಗಾಯ, ಸಂಧಿವಾತ, ಅಥವಾ ಸವೆತದಿಂದ ಉಂಟಾಗುತ್ತದೆ, ಈ ಕಾರಣದಿಂದಾಗಿ ಜೀವನದ ಗುಣಮಟ್ಟದ ಮೇಲೆ ಗಾಢವಾದ ಪ್ರಭಾವ ಬೀರುತ್ತದೆ.

ಪಿಆರ್‌ಪಿ ಚಿಕಿತ್ಸೆಯ ಹಂತಗಳು
STAGE 1: ರಕ್ತ ಸಂಗ್ರಹಣೆ

STAGE 2: ರಕ್ತದ ಪ್ಲೇಟ್ಲೆಟ್ ಬೇರ್ಪಡಿಕೆ
STAGE 3: ಪ್ಲೇಟ್ಲೆಟ್ ಸಂಗ್ರಹಿಸುವುದು

STAGE 4: ಹಾನಿಗೊಳಗಾದ ಪ್ರದೇಶಕ್ಕೆ ಪಿಆರ್‌ಪಿ ಚುಚ್ಚುವುದು

ಪ್ಲೇಟ್‌ಲೆಟ್-ರಿಚ್ ಪ್ಲಾಸ್ಮಾ (ಪಿಆರ್‌ಪಿ) ಚಿಕಿತ್ಸೆಯು ಮೊಣಕಾಲಿನ ಅಸ್ವಸ್ಥತೆಯನ್ನು ನಿವಾರಿಸುವಲ್ಲಿ ಮತ್ತು ಚಲನಶೀಲತೆಯನ್ನು ಹೆಚ್ಚಿಸುವಲ್ಲಿ ಸಾಕಷ್ಟು ಜನರ ಗಮನ ಸೆಳೆಯುತ್ತಿದೆ. ಇದು ನಿರಂತರ ನೋವಿನಿಂದ ಬಳಲುತ್ತಿರುವವರಿಗೆ ನವೀಕೃತ ಜೀವನವನ್ನು ನೀಡುತ್ತದೆ.

ಪಿಆರ್‌ಪಿ ಚಿಕಿತ್ಸೆಯು ಅತ್ಯಾಧುನಿಕ ವೈದ್ಯಕೀಯ ವಿಧಾನವಾಗಿದ್ದು, ಮೊಣಕಾಲು ನೋವನ್ನು ಅದರ ಮೂಲದಲ್ಲಿ ಉಪಶಮನಗೊಳಿಸಲು ದೇಹದ ನೈಸರ್ಗಿಕ ಗುಣಪಡಿಸುವ ಕಾರ್ಯವಿಧಾನಗಳನ್ನು ಬಳಸಿಕೊಳ್ಳುತ್ತದೆ. ಮಂಡಿಯ ನೋವಿನಿಂದ ಬಳಲುತ್ತಿರುವವರ ಸ್ವಂತ ಪ್ಲೇಟ್ಲೆಟ್ಗಳನ್ನು ಬಳಸಿಕೊಳ್ಳುವ ಮೂಲಕ, ಪಿಆರ್‌ಪಿ ಚುಚ್ಚುಮದ್ದು ಅಂಗಾಂಶದ ಸರಿಪಡಿಸುವಿಕೆ ಮತ್ತು ಪುನರುತ್ಪಾದನೆಯನ್ನು ಉತ್ತೇಜಿಸುತ್ತದೆ, ಮತ್ತು ಉರಿಯೂತವನ್ನು ಕಡಿಮೆ ಮಾಡುತ್ತದೆ.

ಬಹುಪಾಲು ಜನರಿಗೆ ಸಂಧಿವಾತ ನೋವನ್ನು ಸರ್ಜರಿ ಇಲ್ಲದೇ ಉಪಶಮನಗೊಳಿಸುವ ಸಾಧ್ಯತೆ ಇದೆ. 40–60 ವರ್ಷ ವಯಸ್ಸಿನಲ್ಲಿರುವ ಜನರು, ಸಂಧಿವಾತದ ರೋಗ ಲಕ್ಷಣಗಳು ಆರಂಭಿಕ ಹಂತಗಳಲ್ಲಿಯೇ ಕಂಡು ಬಂದಲ್ಲಿ, ಇವರ ಕ್ಲಿನಿಕ್‌ನಲ್ಲಿ ಸಹಾಯ ಪಡೆಯುವುದು ಉತ್ತಮ. ಇದರಿಂದಾಗಿ ನಂತರದ ವರ್ಷಗಳಲ್ಲಿ ಮಂಡಿಗೆ ಆಗುವ ತೀವ್ರವಾದ ಹಾನಿಯನ್ನು ತಡೆಗಟ್ಟಲು ಸಾಧ್ಯವಾಗುತ್ತದೆ.

ಇವರು ಕೊಡುವ ಪಿಆರ್‌ಪಿ ಚಿಕಿತ್ಸೆಯಿಂದ ನೋವುರಹಿತ ನಾಳೆಯ ಸಾಧ್ಯತೆಯಿದೆ. ಈಗಲೇ ಕರೆ ಮಾಡಿ ಮತ್ತು ಪ್ರಕಾಶಮಾನವಾದ ಭವಿಷ್ಯದತ್ತ ನಿಮ್ಮ ಮೊದಲ ಹೆಜ್ಜೆಯನ್ನು ಇರಿಸಿ.

ಬೆನ್ನು, ಕುತ್ತಿಗೆ, ಭುಜ, ಕಾಲು, ಪಾದ, ಕೆಳಬೆನ್ನು, ಕ್ಯಾನ್ಸರ್ ಮತ್ತಿತರ ನೋವಿಗೂ ಕೂಡ ಚಿಕಿತ್ಸೆಗಳು ಇಲ್ಲಿ ಲಭ್ಯವಿವೆ

ಅಲಿವಿಯೇಟ್
ನೋವು ನಿವಾರಣಾ ಕೇಂದ್ರಗಳು

ಬೆಂಗಳೂರಿನಲ್ಲಿ ಇವರ ಕ್ಲಿನಿಕ್ಸ್ ಇಲ್ಲಿವೆ
ಪೀಣ್ಯಾ ದಾಸರಹಳ್ಳಿ | ಸದಾಶಿವನಗರ | ಜಯನಗರ | ಇಂದಿರಾನಗರ | ವೈಟ್‌ಫೀಲ್ಡ್

CALL NOW 81475 50855 | 080 23614888

ಸಂಗಮೇಶ್ವರಪೇಟೆ: ಯುವಕನಿಗೆ ಮಂಗನ ಕಾಯಿಲೆ ದೃಢ

ಚಿಕ್ಕಮಗಳೂರು: ನರಸಿಂಹರಾಜಪುರ ತಾಲ್ಲೂಕಿನ ಸಂಗಮೇಶ್ವರ ಪೇಟೆಯ 25 ವರ್ಷದ ಯುವಕನಿಗೆ ಮಂಗನ ಕಾಯಿಲೆ ದೃಢಪಟ್ಟಿದೆ.

ತೀವ್ರ ಜ್ವರದಿಂದ ಬಳಲುತ್ತಿದ್ದ ಅವರನ್ನು ಕೊಪ್ಪ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ತಪಾಸಣೆ ನಡೆಸಲಾಗಿದೆ. ಸೋಂಕಿತ ವ್ಯಕ್ತಿಯ ರಕ್ತ ಪರೀಕ್ಷೆ ನಡೆಸಿದ್ದು ಕೆಎಫ್‌ಡಿ ಸೋಂಕು ತಗುಲಿರುವುದು ದೃಢಪಟ್ಟಿದೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಸೋಂಕಿತ ಯುವಕ ಸದ್ಯ ಮಣಿಪಾಲದ ಕೆಎಂಸಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ ಎಂದು ಅವರು ಹೇಳಿದ್ದಾರೆ.

ಸರ್ಕಾರಿ ನೌಕರರು, ಅಧಿಕಾರಿಗಳಿಗೆ ಕೆಆರ್‌ಎಸ್ ಆಗ್ರಹ

‘ಆಸ್ತಿ ವಿವರ ಬಹಿರಂಗ ಕಡ್ಡಾಯವಾಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್ಲ ಸರ್ಕಾರಿ ನೌಕರರು ಮತ್ತು ಅಧಿಕಾರಿಗಳು ಪ್ರತಿವರ್ಷ ಕಡ್ಡಾಯವಾಗಿ ತಮ್ಮ ಆಸ್ತಿ ವಿವರಗಳನ್ನು ಲೋಕಾಯುಕ್ತಕ್ಕೆ ಸಲ್ಲಿಸುವುದರ ಜೊತೆಗೆ ಸಾರ್ವಜನಿಕವಾಗಿ ಘೋಷಿಸಬೇಕು ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ (ಕೆಆರ್‌ಎಸ್) ಆಗ್ರಹಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೆಆರ್‌ಎಸ್‌ನ ರಾಜ್ಯ ಸಂಘಟನಾ ಕಾರ್ಯದರ್ಶಿ ಎಲ್. ಜೀವನ್, ‘ಸರ್ಕಾರಿ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು ತಮ್ಮ ಆಸ್ತಿ ವಿವರಗಳನ್ನು ಲೋಕಾಯುಕ್ತಕ್ಕೆ ಸಲ್ಲಿಸಬೇಕು ಎಂದು ಇತ್ತೀಚೆಗೆ ಲೋಕಾಯುಕ್ತವು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿತ್ತು. ಆದರೆ, ಇದಕ್ಕೆ ಸಚಿವಾಲಯದ ನೌಕರರು ಮುಖ್ಯ ಕಾರ್ಯದರ್ಶಿಯನ್ನು ಭೇಟಿಯಾಗಿ ಈ ಪ್ರಸ್ತಾವವನ್ನು ತಿರಸ್ಕರಿಸಬೇಕು ಎಂದು ಒತ್ತಡ ಹೇರಿರುವುದು ಖಂಡನೀಯ’ ಎಂದು ಹೇಳಿದರು.

‘ಭ್ರಷ್ಟಾಚಾರದಲ್ಲಿ ತೊಡಗಿರುವ ಕಾರಣದಿಂದ ಸರ್ಕಾರಿ ನೌಕರರು ತಮ್ಮ ಆಸ್ತಿ ವಿವರಗಳನ್ನು ಹಂಚಿಕೊಳ್ಳಲು ಹಿಂದೇಟು ಹಾಕುತ್ತಿದ್ದಾರೆ. ಅಕ್ರಮ ಆಸ್ತಿ ಗಳಿಕೆಗೆ ಕಡಿವಾಣ ಹಾಕಲು ಎಲ್ಲಾ ಜನಪ್ರತಿನಿಧಿಗಳು ತಮ್ಮ ಆಸ್ತಿ ವಿವರವನ್ನು ಲೋಕಾಯುಕ್ತಕ್ಕೆ ಸಲ್ಲಿಸಬೇಕೆಂಬ ನಿಯಮವಿದೆ. ಈ ನಿಯಮವು ಸರ್ಕಾರಿ ಅಧಿಕಾರಿಗಳು ಸೇರಿದಂತೆ ಲೋಕಾಯುಕ್ತ ಹಾಗೂ ಉಪ ಲೋಕಾಯುಕ್ತರಿಗೂ ಅನ್ವಯ ಆಗುವಂತೆ ಕಾನೂನು ರೂಪಿಸಬೇಕು’ ಎಂದು ಒತ್ತಾಯಿಸಿದರು.

ಕೆಆರ್‌ಎಸ್ ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿಗಳಾದ ಕೃಷ್ಣ ವಿ.ಬಿ., ರಘು ನಂದನ ಸುದ್ದಿಗೋಷ್ಠಿಯಲ್ಲಿದ್ದರು.

ವೈಕುಂಠ ಸಮಾರಾಧನೆ

ಶ್ರೀಮತಿ ಟಿ.ಎಸ್. ಉಷಾದೇವಿ

(ನಿವೃತ್ತ ಡಿವೈಎಸ್ಪಿ ಶ್ರೀ ಸಿದ್ದಪ್ಪ ಇವರ ಧರ್ಮಪತ್ನಿ)

ನಮ್ಮ ಸಹೋದರಿ ಶ್ರೀಮತಿ ಟಿ.ಎಸ್. ಉಷಾದೇವಿ ಇವರು ದಿ: 08-01-2025ನೇ ಬುಧವಾರ ಬೆಳಿಗ್ಗೆ 9-30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಆತ್ಮಶಾಂತಿಗಾಗಿ ವೈಕುಂಠ ಸಮಾರಾಧನೆಯನ್ನು ದಿ: 18-01-2025 ನೇ ಶನಿವಾರ ಮಧ್ಯಾಹ್ನ 12-00 ಗಂಟೆಗೆ ಬೆಂಗಳೂರು ಬನಶಂಕರಿ (3ನೇ ಹಂತ) ಯಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲಾಗುವುದು. ಕಾರಣ ಬಂಧುಗಳು, ಹಿತೈಷಿಗಳು, ಸ್ನೇಹಿತರು ಆಗಮಿಸಿ, ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು

ಪತಿ : ಶ್ರೀ ಟಿ. ಸಿದ್ದಪ್ಪ, ನಿವೃತ್ತ ಡಿವೈಎಸ್ಪಿ, ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬ ವರ್ಗದವರು, ಬೆಂಗಳೂರು

ಸಹೋದರ : ಶ್ರೀ ಎನ್.ಎಸ್. ಜಗದೀಶಗೌಡ, ಮತ್ತು ಮಕ್ಕಳು ಕುಟುಂಬ ವರ್ಗದವರು, ಹೂವಿನಹಡಗಲಿ.

ಶ್ರೀ ಕಾಳಿದಾಸ ಸಹಕಾರ ಬ್ಯಾಂಕ್ ನಿಯಮಿತ

ಕರ್ನಾಟಕ ಪ್ರದೇಶ ಕುರುಬರ ಸಂಘದ ಕಟ್ಟಡ, 2ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಗಾಂಧಿನಗರ, ಬೆಂಗಳೂರು–560 009. ದೂರವಾಣಿ ಸಂಖ್ಯೆ; 080 22263868/41662039

ಚುನಾವಣಾ ನೋಟಿಸ್

ಶ್ರೀ ಕಾಳಿದಾಸ ಸಹಕಾರ ಬ್ಯಾಂಕ್ ನಿಯಮಿತ, ಗಾಂಧಿನಗರ, ಬೆಂಗಳೂರು, ಇದರ ಮುಂದಿನ ಐದು ವರ್ಷದ ಅವಧಿಯ 2025–2030ನೇ ಸಾಲಿನ ಆಡಳಿತ ಮಂಡಳಿ ಚುನಾವಣೆಯನ್ನು **ದಿ. 02.02.2025ರ ಭಾನುವಾರ ಬೆಳಿಗ್ಗೆ 10.00 ರಿಂದ ಸಂಜೆ 4.00 ಗಂಟೆವರೆಗೆ ಶ್ರೀ ವೈಷ್ಣವ ಸಮಾಜ ಚಾರಿಟಬಲ್ ಟ್ರಸ್ಟ್, ಒಂದನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು–560 009,** ಇದರ ಆವರಣದಲ್ಲಿ ನಡೆಸಲು ನಿಗದಿಪಡಿಸಲಾಗಿದೆ.

ಆಕಾಂಕ್ಷೆಯುಳ್ಳ ಅಭ್ಯರ್ಥಿಗಳು ದಿ. 19.01.2025 ರಿಂದ ದಿ. 25.01.2025 ರವರೆಗೆ ನಾಮಪತ್ರ ಸಲ್ಲಿಸಬಹುದಾಗಿದೆ. ದಿ. 26.01.2025ರ ಭಾನುವಾರ ನಾಮಪತ್ರ ಪರಿಶೀಲನೆ. ದಿ. 27.01.2025ರ ಸೋಮವಾರ ನಾಮಪತ್ರ ವಾಪಸ್ಸು ಪಡೆಯಲು ಕೊನೆಯ ದಿನವಾಗಿರುತ್ತದೆ. ದಿ. 02.02.2025 ರಂದು ಮತದಾನ ನಡೆಯಲಿದ್ದು, ಚುನಾವಣಾ ಪ್ರಕ್ರಿಯೆ ಮುಗಿದ ನಂತರ ಮತ ಎಣಿಕೆ ನಡೆದು ಫಲಿತಾಂಶ ಘೋಷಣೆಯಾಗಲಿದೆ. ಸಾಮಾನ್ಯ ಸ್ಥಾನ, ಮಹಿಳಾ ಮೀಸಲು ಸ್ಥಾನ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಸ್ಥಾನಗಳಿಗೆ ಚುನಾವಣೆಯನ್ನು ನಿಗದಿಪಡಿಸಲಾಗಿದೆ.

ಮಾನ್ಯ ಸದಸ್ಯರು ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಿ ಮುಂದಿನ ಐದು ವರ್ಷಗಳ ಅವಧಿಗೆ ಆಡಳಿತ ಮಂಡಳಿ ಸದಸ್ಯರನ್ನು ಚುನಾಯಿಸಬೇಕಾಗಿ ವಿನಂತಿಸಲಾಗಿದೆ.

ವಿ.ಸೂ.:– ಮತದಾನ ಮಾಡಲು ಸದಸ್ಯರು ಬ್ಯಾಂಕಿನಿಂದ ನೀಡಿರುವ ಗುರುತಿನ ಚೀಟಿಯನ್ನು ಕಡ್ಡಾಯ–ವಾಗಿ ಹಾಜರುಪಡಿಸಬೇಕು. ನೋಟಿಸು ತಲುಪದೇ ಇದ್ದಲ್ಲಿ ಇದನ್ನೆ ನೋಟಿಸೆಂದು ಪರಿಗಣಿಸಲು ಕೋರಲಾಗಿದೆ.

ಸ್ಥಳ: ಬೆಂಗಳೂರು
ದಿನಾಂಕ: 10.01.2025

ಸಹಿ/– **ಹರೀಶ್‌ಕುಮಾರ್.ಬಿ.ವಿ.,** ರಿಟರ್ನಿಂಗ್ ಅಧಿಕಾರಿ,
ಶ್ರೀ ಕಾಳಿದಾಸ ಸಹಕಾರ ಬ್ಯಾಂಕ್ ನಿ., ಗಾಂಧಿನಗರ,
ಬೆಂಗಳೂರು–09. ಹಾಗೂ ಸಹಕಾರ ಸಂಘಗಳ ಸಹಾಯಕ
ನಿಬಂಧಕರು, 3ನೇ ವಲಯ, ಬೆಂಗಳೂರು ನಗರ ಜಿಲ್ಲೆ.

ಟೆಂಡರ್ ಹಾಗೂ ಬಹಿರಂಗ ಹರಾಜು

ವಲಯ, ಕೃಷಿ ಸಂಶೋಧನಾ ಕೇಂದ್ರ, ಕೃ.ವಿ.ವಿ., ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು–65 ಇಲ್ಲಿ ದಿನಾಂಕ: **16–1–2025 ರಂದು ಗುರುವಾರ ಬೆಳಿಗ್ಗೆ 10–30 ಗಂಟೆಗೆ 2024–25ನೇ** ಸಾಲಿನ ಮಾವಿನ ಫಸಲನ್ನು ನಿರ್ದಿಷ್ಟ ಅವಧಿಗೆ ಟೆಂಡರ್ ಮತ್ತು ಬಹಿರಂಗ ಹರಾಜು ಮೂಲಕ ಮಾರಾಟ ಮಾಡಲಾಗುವುದು. ಹೆಚ್ಚಿನ ಮಾಹಿತಿಗೆ ಹಿರಿಯ ಕ್ಷೇತ್ರ, ಅಧೀಕ್ಷಕರ ಕಚೇರಿ, ವ.ಕೃ.ಸಂ.ಕೇ.. ಜಿ.ಕೆ.ವಿ.ಕೆ ಅಥವಾ **ದೂರವಾಣಿ ಸಂಖ್ಯೆ: 080–23330153/ ವಿಸ್ತರಣೆ 315** ಇಲ್ಲಿ ಸಂಪರ್ಕಿಸಿ.

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ,
ಎಲೆಕ್ಟ್ರೋ–ಆಪ್ಟಿಕ್ಸ್ ಸಿಸ್ಟಮ್‌ಗಳಿಗಾಗಿ ಪ್ರಯೋಗಾಲಯ (ಎಲ್‌ಇಒಎಸ್)
ಪೀಣ್ಯ, ಬೆಂಗಳೂರು–560058, ಎಲ್‌ಇಒಎಸ್ ನಿರ್ಮಾಣ ಮತ್ತು ನಿರ್ವಹಣಾ ಸಮೂಹ (ಎಲ್‌ಸಿಎಂಜಿ)
(ದೂರವಾಣಿ: (080)–22685088, 5193, 5093, 5086, ಫ್ಯಾಕ್ಸ್: (080)–28392310]

ಇಸರೋ | isro

ಸಂಕ್ಷಿಪ್ತ ಇ–ಟೆಂಡರ್ (ಎನ್‌ಐಇಟಿ) ಆಹ್ವಾನಿಸುವ ಪ್ರಕಟಣೆ

ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗಿನ ಕೆಲಸಕ್ಕಾಗಿ ಐಟಂ ದರದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕೆಲಸದ ಹೆಸರು; ಎನ್‌ಐಟಿ ನಂ. & ದಿನಾಂಕ: ನೆಲಮಹಡಿ ಅಡ್ಮಿನ್ ಬ್ಲಾಕ್, ಎಲ್‌ಇಒಎಸ್ ಕ್ಯಾಂಪಸ್, ಪೀಣ್ಯ, ಬೆಂಗಳೂರು–58ನಲ್ಲಿ ಪ್ರಸ್ತಾವಿತ ಸಮ್ಮೇಳನ ಸಭಾಂಗಣ ವಿಸ್ತರಣೆ ಎಹೆಚ್‌ಯು ಕೊಠಡಿ ನಿರ್ಮಾಣ (ನಾಗರೀಕ ಕೆಲಸಗಳು), ಎನ್‌ಐಇಟಿ: LEOS/CMG/CW-01/2024-25/R1, ದಿನಾಂಕ: 08.01.2025; **ಟೆಂಡರ್ ಮತ್ತು ಇಎಂಡಿಗೆ ಇಡಲಾದ ಅಂದಾಜು ವೆಚ್ಚ:** ರೂ. 57.77 ಲಕ್ಷಗಳು, **ಇಎಂಡಿ:** ರೂ. 1,15,538/–; **ತಿಂಗಳುಗಳಲ್ಲಿ ಪೂರ್ಣಗೊಳಿಸುವ ಅವದಿ:** 05 ತಿಂಗಳು, ಟೆಂಡರ್ ಡಾಕ್ಯುಮೆಂಟ್‌ಅನ್ನು ಡೌನ್‌ಲೋಡ್ ಮಾಡಬಹುದಾದ ಅವಧಿ: **ತೆರೆಯುವ ದಿನಾಂಕ:** 10.01.2025; **ಮುಕ್ತಾಯವಾಗುವ ದಿನಾಂಕ:** 28.01.2025

ಆಸಕ್ತ ಟೆಂಡರುದಾರರು ಇ–ಟೆಂಡರ್ (ಎನ್‌ಐಇಟಿ) ಆಹ್ವಾನದ ಪ್ರಕಟಣೆಯ ಅರ್ಹತಾ ಮಾನದಂಡ ಮತ್ತು ಇತರೆ ವಿವರವನ್ನು **www.isro.gov.in** ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದು ಮತ್ತು ಟೆಂಡರ್ ದಾಖಲೆಗಳನ್ನು **www.tenderwizard.com/ISRO** ನಿಂದ ಡೌನ್‌ಲೋಡ್ ಮಾಡಬಹುದು.

ಸಹಿ/– ಸಮೂಹ ನಿರ್ದೇಶಕ
(ನಿರ್ಮಾಣ ಮತ್ತು ನಿರ್ವಹಣಾ ಸಮೂಹ) (ಸಿ&ಎಂಜಿ)
ಯುಆರ್‌ಎಸ್‌ಸಿ, ಬೆಂಗಳೂರು.

ಅವಿರೋಧ ಆಯ್ಕೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬೆಂಗಳೂರು ನಗರ ಜಿಲ್ಲಾ ಕೃಷಿಕ ಸಮಾಜದ ನೂತನ ಅಧ್ಯಕ್ಷರಾಗಿ ಬಿ.ಕೆ. ಮಂಜುನಾಥಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ಆರ್.ರಘು, ಪ್ರಧಾನ ಕಾರ್ಯದರ್ಶಿ-ಸಿ.ದೇವರಾಜು, ಖಜಾಂಚಿ-ಸುರೇಶ್.ಕೆ ಮತ್ತು ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಬಿ.ಕೆ. ರವೀಂದ್ರನಾಥಗೌಡ, ರಾಮೇಗೌಡ, ಭಾಸ್ಕರ್‌ಬಾಬು, ನಾರಾಯಣಗೌಡ, ವಿ.ನಾಗರಾಜ್ ಹಾಗೂ ರಾಜ್ಯ ಪ್ರತಿನಿಧಿಯಾಗಿ ಕೆ.ರವಿ ಆಯ್ಕೆಯಾಗಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಕೃಷಿಕ ಸಮಾಜದ ನೂತನ ಅಧ್ಯಕ್ಷರಾಗಿ ಆರ್. ರವಿಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ಎನ್.ಆರ್. ಹೊನ್ನಸಿದ್ದಯ್ಯ, ಪ್ರಧಾನಕಾರ್ಯದರ್ಶಿ-ಕೆ.ಶ್ರೀನಿವಾಸಗೌಡ, ಖಜಾಂಚಿ- ಟಿ.ಎಂ. ಅಶೋಕ್ ಮತ್ತು ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಮುರಳೀಧರ್. ಆರ್, ಹರೀಶ್‌ಕುಮಾರ್.ವಿ, ಚನ್ನೇಗೌಡ ಹಾಗೂ ರಾಜ್ಯ ಪ್ರತಿನಿಧಿಯಾಗಿ ಕೃಷ್ಣಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕೆಪಿಸಿಸಿ ಸದಸ್ಯ ಚಿನ್ನಪ್ಪ, ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ರಮೇಶ್, ಕೃಷಿಕ ಸಮಾಜದ ನಿರ್ದೇಶಕರಾದ ಮಲ್ಲಿಕಾರ್ಜುನಯ್ಯ, ಜಗದೀಶ್, ವಸಂತ ಕುಮಾರ್, ಮುನಿರಾಜು.ಡಿ.ಎಸ್, ಪ್ರಧಾನ ಕಾರ್ಯದರ್ಶಿ ಜಿ.ಆರ್. ಶಿವಕುಮಾರ್, ಗ್ರಾ.ಪಂ. ಮಾಜಿ ಅಧ್ಯಕ್ಷ ಬಿ.ಎಂ.ನಾಗೇಶ್, ಮುಖಂಡರಾದ ಬಿ.ಎನ್. ಶ್ರೀನಿವಾಸ್, ಬಿ.ಎಸ್. ನಾರಾಯಣಗೌಡ, ಬಿ.ಎನ್.ಮಂಜುನಾಥ್, ಬಿ. ದೇವನಾಥಗೌಡ, ಬಿ.ಆರ್. ಪ್ರವೀಣ್ ಉಪಸ್ಥಿತರಿದ್ದರು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ:ಅಇಂ.(ವಿ)/ಪ್ರ(ನಿ)/ಬೆಂ.ಗ್ರಾ.ಕ್ಷೇ.ವ/ಕಾ.ಇ/ಸ.ಕಾ.ಇಂ–1/ಕ–ಟಿ6/24–25/4690 ದಿನಾಂಕ: 10.01.2025

ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು ಈ ಕೆಳಕಂಡ ಕಾಮಗಾರಿಗಾಗಿ ದ್ವಿ–ಲಕೋಟೆ ಪದ್ಧತಿಯನ್ವಯ ಸಂಪೂರ್ಣ ಟರ್ನ್ ಕೀ ಹಾಗೂ ಶೇಕಡವಾರು ಆಧಾರದ ಮೇಲೆ ಬಿಡ್‌ಗಳನ್ನು ಆಹ್ವಾನಿಸಿದೆ:

ಬಿಡ್ ವಿಚಾರಣೆ ಸಂಖ್ಯೆ: **ಕವಿಪ್ರನಿನಿ/ಅಇಂವಿ/ಪ್ರ(ನಿ)/ಬೆಂಗ್ರಾಕ್ಷೇವ/ಕಾನಿಇಂ(ಕ)/ ಸಕಾಇಂ–1/ಅರ್ಥ್‌ಮ್ಯಾಟ್–66ಕೆವಿ ದೇವನಹಳ್ಳಿ/ಇಪಿಆರ್–961 ದಿನಾಂಕ: 26.12.2024** ರ ಅನ್ವಯ ಬೆಂಗಳೂರು ಗ್ರಾಮಾಂತರ ಪ್ರದೇಶ ವಲಯ (BRAZ) ವೃತ್ತದ ಚಿಂತಾಮಣಿ ವಿಭಾಗದ ವ್ಯಾಪ್ತಿಗೆ ಸೇರಿದ 66/11ಕೆವಿ ಚೀಮಂಗಲ ಉಪ ಕೇಂದ್ರದ 1x12.5 ಎಂವಿಎ ವಿದ್ಯುತ್ ಪರಿವರ್ತಕವನ್ನು 1x20 ಎಂವಿಎ ವಿದ್ಯುತ್ ಪರಿವರ್ತಕವನ್ನಾಗಿ ವರ್ಧಿಸಲು ಹೆಚ್ಚುವರಿ ಅರ್ಥ್‌ಮ್ಯಾಟ್‌ನ್ನು ಒದಗಿಸುವ ಕಾಮಗಾರಿ.

ಟೆಂಡರ್‌ಗಳ ವಿಷಯದ ಬಗ್ಗೆ ವಿವರವಾದ ಪ್ರಕಟಣೆಯನ್ನು ಕವಿಪ್ರನಿನಿಯ ವೆಬ್‌ಸೈಟ್ **https://kptcl.karnataka.gov.in** ಹೈಪರ್‌ಲಿಂಕ್ **“E Procurement KPTCL”** ಅಥವಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ ದಿನಾಂಕ **16.01.2025** ರಂದು ಅಥವಾ ತದನಂತರ ಲಾಗಿನ್ ಮಾಡಿ ಪಡೆಯಬಹುದು.

ಸಹಿ/– ಅಧೀಕ್ಷಕ ಇಂಜಿನಿಯರ್(ವಿದ್ಯುತ್)
ಪ್ರಸರಣ (ನಿರ್ವಹಣೆ), ಬೆಂಗ್ರಾಕ್ಷೇವ, ಕವಿಪ್ರನಿನಿ., ಯು.ಎ.ಎಸ್. ಕ್ಯಾಂಪಸ್,
ಹೆಬ್ಬಾಳ, ಬೆಂಗಳೂರು–560 24, ಟೆಲಿ–ಫ್ಯಾಕ್ಸ್: 080–23415347

E-TENDER NOTICE
The Indian Hotels Company Limited Karnataka Region

Invite quotations from established suppliers for the supply of the following items on Annual Rate Contract basis from 1st April, 2025 to 31st March, 2026 for **Taj West End Bengaluru, Taj MG Road Bengaluru, Taj Yeshwantpur Bengaluru, Taj Bangalore Airport, Vivanta Bengaluru Residency Road, Vivanta Bengaluru Whitefield and Taj SATS Air Catering Limited Bengaluru** of Karnataka for the below mentioned categories.

A) Indian Fruits, Indian Vegetables, Exotic Vegetables, Imported Vegetables & Fruits, Provisions, Atta-Maida, Dry Fruits, Grated Coconut, Peeled Items, Green Peas & Corn, Fresh or Chilled Mutton, Fresh or Chilled Fish, Fish Fillet Frozen & Flowers.

Vendors can registered through accessing the below link in order to obtain the registration forms/ Tender forms. Quotes to be submitted online only, Print out or physical copies should not be submitted. E-Tender online portal will be available from **15th January, 2025 till 5th February 2025** on the below mentioned credentials. For tender form allocation to those who aspire to apply should remit online Rs. 1000.00 (non refundable) for obtaining the tender forms in each Category. Tender forms duly filled along with Quotations should be submitted online on or before **5th Feb, 2025.** All Tenderers proposing to apply should HAVE ALL THE MANDATORY LICENSES REQUIRED TO CONDUCT BUSINESS AND SHOULD be complaint to FSSAI Act/ Rules and Regulations as on date and APPLICABLE FROM TIME TO TIME.

Certification / labelling for all products & category for chilled and frozen items as per FSSAI standards is mandatory. HACCP / ISO certified vendors would be preferred.

Window for submitting the initial rates will be open till **12 am on 5th Feb 2025.** WE THE MANAGEMENT OF **"The Indian Hotels Company Limited – Karnataka Region"** RESERVE THE RIGHT TO ACCEPT / REJECT THE QUOTATIONS.

Contact: **Mr. Mohan Papanna**
Email: mohan.papanna@tajhotels.com
Contact: 08066605627 / 08066604367 / 08066900233
Link for downloading Tender Documents & for participating E- Tender
https://etendering.tajhotels.com/bengaluru

ಭಾರತ ಸರ್ಕಾರ
ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯ
ಪಂಡಿತ್ ದೀನದಯಾಳ್ ಅಂತ್ಯೋದಯ ಭವನ
ಸಿಜಿಒ ಕಾಂಪ್ಲೆಕ್ಸ್, ಲೋಧಿ ರಸ್ತೆ, ನವದಹೆಲಿ–110003

ದಿನಾಂಕ: 7ನೇ ಜನವರಿ 2025

ಪ್ರಕಟಣೆ

ಗಮನಿಸಿ: ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯದ ಸೀಖೊ ಔರ್ ಕಮಾವೊ/ಉಸ್ತಾದ್/ನಯೀ ಮಂಜಿಲ್/ನಯೀ ರೋಷಣಿ ಯೋಜನೆಗಳ ಅಡಿಯಲ್ಲಿನ ಎಲ್ಲಾ ಯೋಜನಾ ಅನುಷ್ಠಾನ ಸಂಸ್ಥೆಗಳು ಗಮನಿಸುವುದು.

ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯದ ಸೀಖೊ ಔರ್ ಕಮಾವೊ/ಉಸ್ತಾದ್/ನಯೀ ಮಂಜಿಲ್/ನಯೀ ರೋಷಣಿ ಯೋಜನೆಗಳ ಅಡಿಯಲ್ಲಿ ಯಾವುದೇ ಉದ್ದೇಶಿತ ವರ್ಷಕ್ಕೆ ಯೋಜನಾ ಹಂಚಿಕೆಯನ್ನು ಪಡೆದಿರುವ ಎಲ್ಲಾ ಯೋಜನಾ ಅನುಷ್ಠಾನ ಸಂಸ್ಥೆಗಳಿಗೆ (ಪಿಐಎ) ಈ ಮೂಲಕ ತಿಳಿಸುವುದು ಏನೆಂದರೆ, ಮೇಲ್ಕಂಡ ಯೋಜನೆಗಳ ಅಡಿಯಲ್ಲಿನ ಬಾಕಿ ಉಳಿದಿರುವ ಅನುದಾನವನ್ನು ಸಂಸ್ಕರಣೆಗೊಳಿಸಲು (ಇನ್ನುಳಿದ ಎಲ್ಲಾ ಕಂತುಗಳನ್ನು) ಅಗತ್ಯ ದಾಖಲಾತಿಗಳನ್ನು ಒದಗಿಸಲು ನಿಮಗೆ ಕೊನೆಯ ಅವಕಾಶ ನೀಡಲಾಗುತ್ತಿದೆ.

2. ಯೋಜನಾ ಅನುಷ್ಠಾನ ಸಂಸ್ಥೆಗಳು ಎಲ್ಲಾ ಅಗತ್ಯ ಅಧಿಕೃತ ದಾಖಲಾತಿಗಳನ್ನು **31ನೇ ಜನವರಿ 2025 ರಂದು ಸಂಜೆ 5:00 ಗಂಟೆಯೊಳಗೆ** ಸಲ್ಲಿಸುವುದನ್ನು ಖಚಿತಪಡಿಸಬೇಕು. ಹೀಗೆ ಸಲ್ಲಿಸಲಾಗುವ ದಾಖಲಾತಿಗಳನ್ನು, ಬಾಕಿ ಅನುದಾನವನ್ನು ಸಂಸ್ಕರಣೆಗೊಳಿಸಲು (ಇನ್ನುಳಿದ ಎಲ್ಲಾ ಕಂತುಗಳನ್ನು) ಅಂತಿಮ ದಾಖಲಾತಿಗಳೆಂದು ಪರಿಗಣಿಸಲಾಗುತ್ತದೆ. ಹೆಚ್ಚುವರಿಯಾಗಿ, ಸಂಬಂಧಿತ ಯೋಜನೆಯ ಪೋರ್ಟಲ್‌ಗಳಲ್ಲಿ ದಾಖಲಾತಿಗಳನ್ನು ಸಲ್ಲಿಸುವ ಸೌಕರ್ಯವನ್ನು ನಂತರದಲ್ಲಿ ಹಿಂಪಡೆಯಲಾಗುತ್ತದೆ.

3. 31ನೇ ಜನವರಿ 2025 ರಂದು ಸಂಜೆ 5:00 ಗಂಟೆಯ ಬಳಿಕ ಸಲ್ಲಿಕೆಯಾಗುವ ಯಾವುದೇ ದಾಖಲಾತಿಯನ್ನು, ಕಾಲಾವಧಿ ಮೀರಿರುವ ಕಾರಣದಿಂದಾಗಿ ಅಲ್ಪಸಂಖ್ಯಾತ ಸಚಿವಾಲಯದಿಂದ ಬಾಕಿ ಅನುದಾನ (ಇನ್ನುಳಿದ ಎಲ್ಲಾ ಕಂತುಗಳನ್ನು) ಸಂಸ್ಕರಣೆಗೊಳಿಸಲು ಪರಿಗಣಿಸಲಾಗುವುದಿಲ್ಲ.

ಫೈಲ್ ನಂ.: ಎಸ್‌ಎಕೆ–17011/1/2024–ಎಸ್‌ಎಕೆ–ಎಂಒಎಂಎ

ಸಹಿ/–
(ನಿವೇದಿತಾ ರಾಯ್ ಚೌಧರಿ)
ಭಾರತ ಸರ್ಕಾರದ ಅಧೀನ ಕಾರ್ಯದರ್ಶಿ

CBC 27101-11-0004-2425

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

NIRMAN INTERNATIONAL PUBLIC SCHOOL (CBSE), Near Automated RTO,7th Block, Vishweshwaraiah Layout, Bangalore-91 Requires Qualified, Experienced TEACHERS for All Subjects, from Nursery to X. Contact: 8123030731/ 9986055970. Email: nirmaninfo24@gmail.com Walk-in Interview on all working days between 9:30am to 2:00pm

Deccan International School
#11, 18th Main Rd, Brindavan Layout, Padmanabhanagar, Bengaluru, Karnataka 560061

JOB OPPORTUNITY
Positions open

- **ICSE & Cambridge** Masters with B.Ed
  - Hindi Teacher — Grades High School
  - Business Studies — Grades AS & A level and ICSE
  - Biology Teacher — Grades High School
  - Economics Teacher — Grades AS & A level and ICSE
  - Art Teacher — Bachelors with relevant certification, Grades Primary & Middle School
- **Cambridge** Masters with B.Ed
  - HOD Mathematics — Grades AS & A level
  - Computer Science Teacher — Grades AS & A level
  - Homeroom Teacher — Bachelors with B.Ed. Grades Primary School
- **ICSE** Masters with B.Ed
  - English Teacher — Grades High School
  - Computer Science Teacher — Grades Senior School
  - Kannada Teacher — Bachelors with B.Ed. Grades Primary school
- **Dance Teacher** — Relevant certification to teach
- **Basketball Coach** — M.PEd
- **French Teacher** — Bachelors with Relevant certification to teach, Grades Middle School

Minimum 3 to 5 years of relevant experience is mandatory.

LOCATION: PADMANABHANAGAR, SOUTH BANGALORE

- Attractive compensation package commensurate with qualification & experience.
- We are equal opportunity employer.

Candidates are required to email their CV with photograph

work@deccan.edu.in

M P Birla Institute of Management
(Associate Bharatiya Vidya Bhavan) 43, Race Course Road, Bengaluru – 560001 Phone : 080-42772000 / www.mpbim.com
MBA DEGREE APPROVED BY AICTE & AFFILIATED TO BENGALURU CITY UNIVERSITY

APPLICATIONS ARE INVITED FOR THE FOLLOWING POSITIONS

NON-TEACHING STAFF

PLACEMENT OFFICER
Responsibilities include assisting and contributing to the placement activities to learn and gain experience, networking with companies and to explore career opportunities.

ADMISSION EXECUTIVE
- Graduate with good communication skills.
- 2 years work experience in relevant field.

ACCOUNTS EXECUTIVE
- B.Com Graduate with good knowledge of Tally, ESI, TDS and PF.
- 2 years work experience in relevant field.

SECRETARY TO PRINCIPAL
- Graduate with proficiency in shorthand and computer skills.
- One year of relevant work experience.

FULL TIME FACULTY FOR DEPT OF MBA

ASSISTANT PROFESSOR
- BUSINESS ANALYTICS
- OPERATIONS RESEARCH/STATISTICS
- GENERAL MANAGEMENT

Qualification: MBA / MCA / M.Phil / SLET / UGC-NET (Fresher's can also apply)

Send us your CV with a passport size photo mentioning for the post applied. Email: principal@mpbim.com / geethap@mpbim.com

YOUR APPLICATIONS SHOULD REACH US ON OR BEFORE 22.01.2025

ARVIND Residential School & PU College, Kunigal
Ph: 08132-210000/ 01. Mob: 9945210041/ 9483683002. Website: www.arvindinternationalschool.com, www.arvindpucollege.com

REQUIRES DEDICATED & PASSIONATE PROFESSIONALS WITH GOOD COMMUNICATION SKILLS

- **PUC LECTURERS** (Science & Commerce Stream) — Well Experienced NEET & JEE faculties
- **CO-ORDINATOR** (ICSE/ CBSE)
- **Nursery/ Primary/ Middle School/ High school Teachers** (ICSE/ CBSE)
- **Warden (M/F), Nurse (F), Cooks, PE Teachers** — Experienced in all streams with desired qualification

Send your resume with recent passport size photo to airsjobs@gmail.com within 7 days

WANTED B.ED & D.Ed Trained Graduates with Teaching experience in SOCIAL STUDIES for High School Classes. Salary negotiable. Apply/Contact in person immediately. PRINCIPAL- HOLY CHILD CONVENT, 1133/44, 9th Cross, Ashoknagar, Near VidyaPeeta Circle, Bangalore- 560050. Ph: 26608485. Drop your resume or mail to: hcchs1371@yahoo.com

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd. Bengaluru

BHARATIYA SIKSHANA SAMITHI
(STATE'S SYLLABUS)
REQUIRES
Trained Graduate / Post Graduate Teachers
T.C.H / D.Ed / B.Ed / Arts / Science and Maths / Hindi / English, N.T.T. with Montessori for Nursery
GANDHINAGAR HIGHER SECONDARY SCHOOL & VISHWAKALAANIKETHAN MODEL ENGLISH PRIMARY SCHOOL
Kumara Park West Subramanya Swamy Temple Street Bangalore-560 020
Enquiry to: 9980566880
Or email your CV to: hmghss1942@gmail.com

ST. CHARLES HIGH SCHOOL
(Affiliated to CISCE), Kammanahalli, Bengaluru
Invites application from Experienced, Qualified & Innovative Educators for the following posts:
PGT / TGT - Mathematics, Chemistry & Computer Applications
PRT / TGT - English, Hindi, Kannada & Computer Science
Art & Craft Teacher
Dance Teacher
Graphic Designer
Apply with detailed resume and latest photograph to Email ID : stcharleskammanahalli@yahoo.co.in
Contact No.: 7259867189

MOUNT CARMEL ENGLISH SCHOOL
REQUIRED
EXPERIENCED TEACHERS for N.T.T (Montessori training), Primary, Middle and High school for all the subjects including Art & Craft, Physical Education and Computer Science. Candidates should have Masters/Bachelor's Degree with B.Ed/D.Ed/ B.PEd/ M.PEd Training.
Walk-in interview from 16-01-2025 to 01-02-2025 Timings: 10.00am to 3.00pm
Venue: Mount Carmel English School Campus, No.3, 12th Cross, Ideal Homes, Rajarajeshwari Nagar, Bangalore-560 098. Contact: 080-28602294/95, 7899070902
Email: mountcarmel.rrnagar@gmail.com

MOUNT CARMEL PU COLLEGE Palace Road Bengaluru-01 mountcarmelpucollege@yahoo.co.in Phone-22370404 requires Post Graduates with B.Ed in ENGLISH, HINDI, FRENCH, ECONOMICS, BASIC MATH, ACCOUNTANCY, BUSINESS STUDIES, CHEMISTRY, MATHEMATICS, ELECTRONICS, COMPUTER SCIENCE, PHYSICAL EDUCATION(M.P.Ed). Apply before 28.01.2025

General

WANTED FACTORY HELPERS for a Laundry in Bannergatta Road, Bangalore Salary 15,000 + Food + accommodation Timings 7am to 7pm Contact: 8050666007

Marketing & Sales

MBI POWDER COATINGS COMPANY
Yeswanthpur, Bangalore-22
REQUIRED Sales Executive
Qualification: Any Degree with Two Wheeler licence. Age below 45 years, Male only
Contact : 99722 47643 94440 77643

CONNECT

Part-Time Jobs

RETIRED/VRS PERSONS, Age Above 45 Years Earn 2nd Income 35K To 40K PM. 9886641282/ 6362220162

RENTAL PROPERTIES

Accommodation Available

Commercial

13900 SQ.FT basement plus 3 commercial building suitable for office diagnostic center or tutorials available for rent 7th block Jayanagar contact 9845010485

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wall crack, Skylight, Terrace Waterproofing done by New Technology- 9880916988

PERSONAL

Change of Name

I, ROSHAN ARA TARANNUM also known as ROSHAN ARA W/o Late. Syed Mubasheer Ahmed R/o: Jayanagar, Bangalore. I have sworn with an Affidavit that both the names mentioned above (Roshan Ara tarannum & Roshan Ara) belong to Me, and I submit that my Name in my 2 daughters ie. MARIA SANA & MARIAM ZAINA educational and all other documents has been mentioned as ROSHAN ARA

TOURS & TRAVEL

Travel

VISIT BHUTAN, the most Wonderful Country with Expert Guide and Best Arrangements. GANESH SHENOY 8310028157

DH Classifieds — More value, more impact | ಪ್ರಜಾವಾಣಿ

REAL ESTATE

BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY

@ 2481/-* FOR 15 WORDS

www.dhclassifieds.com
BOOK NOW

Book your ad with us now! For more details contact:
+91 9845114560 | +91 9901641752
+91 9886213331
+91 9731810277 | +91 9900428036
080-45557163/164

*Conditions apply

ಪ್ರಸ್ತಾವ ಸಲ್ಲಿಸಿರುವ ಸಾರಿಗೆ ಇಲಾಖೆ • ಆಟೊ ಚಾಲಕರಿಂದ ನಿರಾಸಕ್ತಿ • ಎಲೆಕ್ಟ್ರಿಕ್ ಆಟೊದಿಂದ ಭಾರಿ ಉಳಿತಾಯ

ಆಟೊ: ಇವಿಗೆ ಬದಲಾದರೆ ಪ್ರೋತ್ಸಾಹಧನ

• ಬಾಲಕೃಷ್ಣ ಪಿ.ಎಚ್.

ಹೊಗೆ ಉಗುಳುತ್ತಿರುವ ಆಟೊ (ಸಾಂದರ್ಭಿಕ ಚಿತ್ರ)

ಬೆಂಗಳೂರು: ಹಳೇ ಆಟೊ ರಿಕ್ಷಾಗಳನ್ನು ಗುಜರಿಗೆ ಹಾಕಿ ಹೊಸ ವಿದ್ಯುತ್‌ಚಾಲಿತ (ಇವಿ) ಆಟೊ ತೆಗೆದುಕೊಳ್ಳುವವರಿಗೆ ಮತ್ತು ಆಟೊಗಳ ಎಂಜಿನ್‌ಗಳನ್ನು ಇವಿಗೆ ಬದಲಾಯಿಸುವವರಿಗೆ ₹60 ಸಾವಿರ ಪ್ರೋತ್ಸಾಹಧನ ನೀಡಲು ಸಾರಿಗೆ ಇಲಾಖೆ ಚಿಂತನೆ ನಡೆಸಿದೆ.

ವಾಯುಮಾಲಿನ್ಯ ಕಡಿಮೆ ಮಾಡಲು ಕ್ರಿಯಾಯೋಜನೆ ತಯಾರಿಸಲು ಹಣಕಾಸು ಇಲಾಖೆಯಿಂದ ಅನುಮೋದನೆ ದೊರೆತಿದೆ. ಆಟೊ ಚಾಲಕ–ಮಾಲೀಕರ ಕುರಿತು ಅಧ್ಯಯನ ನಡೆಸಿ ಅದರ ವರದಿಯೊಂದಿಗೆ, ಇವಿ ಆಟೊ ಖರೀದಿಗೆ ಪ್ರೋತ್ಸಾಹಧನ ನೀಡುವ ಪ್ರಸ್ತಾವವನ್ನು ರಾಜ್ಯ ಸರ್ಕಾರದ ಅನುಮೋದನೆಗೆ ಸಲ್ಲಿಸಲು ಇಲಾಖೆ ಮುಂದಾಗಿದೆ.

2 ಸ್ಟ್ರೋಕ್ ವಾಹನಗಳಿಗೆ: ‘2 ಸ್ಟ್ರೋಕ್ ಆಟೊಗಳ ನೋಂದಣಿ ನಿಂತು ಎರಡು ದಶಕ ಕಳೆದಿದ್ದರೂ ಈಗಲೂ ಅಂಥ ಆಟೊಗಳನ್ನು ಓಡಿಸುತ್ತಿದ್ದಾರೆ. ಗುಜರಿಗೆ ಹಾಕಿ ಅಂದರೂ ಕೇಳುತ್ತಿಲ್ಲ. ಒಳ ರಸ್ತೆಗಳಲ್ಲಿ ಸಂಚರಿಸುತ್ತಿರುತ್ತವೆ. ಅಂಥ ಆಟೊಗಳು ಬೆಂಗಳೂರು ನಗರದಲ್ಲಿ ಸುಮಾರು 10 ಸಾವಿರ ಇವೆ. ವಾಹನ ಹಳತಾದಾಗ ಹೊಗೆಯೊಂದಿಗೆ ಆಯಿಲ್ ಸೇರಿಕೊಂಡು ಹೊರ ಬರುವುದರಿಂದ ಮಾಲಿನ್ಯ ಹೆಚ್ಚಾಗುತ್ತದೆ. ಇದನ್ನು ತಡೆಯುವುದಕ್ಕಾಗಿ, ಆಟೊ ಮಾಲೀಕರನ್ನು ಪ್ರೋತ್ಸಾಹಿಸುವುದಕ್ಕಾಗಿ ಈ ಯೋಜನೆ ರೂಪಿಸಲಾಗುತ್ತಿದೆ’ ಎಂದು ಸಾರಿಗೆ ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿದರು.

‘ಪೆಟ್ರೋಲ್ ಆಧಾರಿತ ಎಂಜಿನ್ ಹೊಂದಿರುವ ಆಟೊಗೆ ಇಂಧನಕ್ಕೆ ಆಗುವ ವೆಚ್ಚಕ್ಕೆ ಹೋಲಿಸಿದರೆ ಎಲೆಕ್ಟ್ರಿಕ್ ಆಟೊಗಳಲ್ಲಿ ಶೇ 20ರಷ್ಟು ವೆಚ್ಚದಲ್ಲಿ ಅಷ್ಟೇ ಕಿಲೋಮೀಟರ್ ಓಡಿಸಲು ಸಾಧ್ಯವಾಗುತ್ತದೆ. ಉದಾಹರಣೆಗೆ ₹200ರ ಪೆಟ್ರೋಲ್ ಹಾಕಿದರೆ ಆಟೊ ಎಷ್ಟು ಸಂಚರಿಸುತ್ತದೋ ಅಷ್ಟು ದೂರವನ್ನು ಎಲೆಕ್ಟ್ರಿಕ್ ಆಟೊ ₹30– ₹40 ವೆಚ್ಚದಲ್ಲಿ ಕ್ರಮಿಸುತ್ತದೆ. ಇದರಿಂದ ಆಟೊವನ್ನು ನಂಬಿ ಜೀವಿಸುವವರಿಗೆ ಎಲೆಕ್ಟ್ರಿಕ್ ಆಟೊಗಳಿಂದ ಭಾರಿ ಉಳಿತಾಯವಾಗಲಿದೆ’ ಎಂಬುದು ಅವರ ವಿವರವಾಗಿದೆ.

‘ಸದ್ಯ ಬೆಂಗಳೂರು ನಗರವನ್ನು ಕೇಂದ್ರೀಕರಿಸಿಕೊಂಡು ಯೋಜನೆ ರೂಪಿಸಲಾಗಿದೆ. ಎರಡು ಸ್ಟ್ರೋಕ್ ಎಂಜಿನ್ ಆಟೊಗಳ ಸಂಚಾರ ಪೂರ್ಣವಾಗಿ ನಿಲ್ಲುವಂತಾಗಬೇಕು. ವಾಯುಮಾಲಿನ್ಯ ಕಡಿಮೆ ಮಾಡಬೇಕು’ ಎಂದು ಸಾರಿಗೆ ಇಲಾಖೆಯ ಹೆಚ್ಚುವರಿ ಆಯುಕ್ತ ಜ್ಞಾನೇಂದ್ರ ಕುಮಾರ್ ಮಾಹಿತಿ ನೀಡಿದರು.

ಆಟೊಗಳನ್ನು ಗುಜರಿಗೆ ಹಾಕಲು ಮನಸ್ಸು ಇಲ್ಲದೇ ಇದ್ದರೆ ರಿಟ್ರೊ ಫಿಟ್‌ಮೆಂಟ್ ಮೂಲಕ ಎಂಜಿನ್ ಬದಲಾಯಿಸಿಕೊಂಡರೂ ಅವರಿಗೆ ಪ್ರೋತ್ಸಾಹಧನ ನೀಡುವ ಯೋಜನೆ ಇದಾಗಿದೆ. ಹೊಸ ಆಟೊ ಖರೀದಿಸುವಾಗ ಪೆಟ್ರೋಲ್ ಎಂಜಿನ್ ಆಟೊಗಳಿಗಿಂತ ಇವಿ ಆಟೊಗಳ ಬೆಲೆ ಸುಮಾರು ₹1 ಲಕ್ಷ ಹೆಚ್ಚಿರುತ್ತದೆ. ಇವಿ ಆಟೊಗಳಿಗೆ ₹3.50 ಲಕ್ಷದಿಂದ ₹3.80 ಲಕ್ಷದವರೆಗೆ ನೀಡಬೇಕಾಗುತ್ತದೆ ಎಂಬುದು ಆಟೊ ಮಾಲೀಕರ ದೂರು. ₹1 ಲಕ್ಷದಲ್ಲಿ ₹60 ಸಾವಿರ ಪ್ರೋತ್ಸಾಹಧನದ ಮೂಲಕ ಬರುತ್ತದೆ. ಇವಿ ಆಟೊ ನಿರ್ವಹಣೆ ವೆಚ್ಚ ಬಹಳ ಕಡಿಮೆ ಆಗಿರುವುದರಿಂದ ಉಳಿದ ₹40 ಸಾವಿರ ಕೆಲವೇ ತಿಂಗಳಲ್ಲಿ ಸರಿದೂಗುತ್ತದೆ. ಆನಂತರ ಲಾಭದಾಯಕವಾಗಿರುತ್ತದೆ ಎಂದು ಹೇಳಿದರು.

ಆಟೊಗಳ ಸಂಖ್ಯೆ

2.55 ಲಕ್ಷ
ಸದ್ಯ ಇರುವ ಆಟೊಗಳ ಸಂಖ್ಯೆ

25 ಸಾವಿರ
ಪ್ರತಿವರ್ಷ ಹೆಚ್ಚಲಿರುವ ಆಟೊಗಳ ಸಂಖ್ಯೆ

10 ಸಾವಿರ
2 ಸ್ಟ್ರೋಕ್ ಆಟೊಗಳ ಸಂಖ್ಯೆ

₹1.5 ಕೋಟಿ ಮೀಸಲು

‘ಗ್ರೀನ್ ಟ್ಯಾಕ್ಸ್ ಯೋಜನೆಯಡಿ ಬೇರೆ ಬೇರೆ ಯೋಜನೆಗಳನ್ನು ರೂಪಿಸಲಾಗಿದೆ. ಅದರಲ್ಲಿ ಇವಿ ಆಟೊ ಖರೀದಿಸುವ ಆಟೊ ಮಾಲೀಕರಿಗೆ ಪ್ರೋತ್ಸಾಹಧನ ನೀಡುವುದೂ ಸೇರಿದೆ. ಈ ವರ್ಷ ₹ 1.5 ಕೋಟಿ ಮೀಸಲಿರಿಸಲಾಗಿದೆ. ಆಟೊ ಚಾಲಕರು ಇವಿಗೆ ಎಂಜಿನ್ ಬದಲಾಯಿಸಲು ಇಲ್ಲವೇ ಇವಿ ಆಟೊ ಖರೀದಿಸಲು ತಯಾರಿದ್ದರೆ ನಾವು ಸರ್ಕಾರದಿಂದ ಅನುಮತಿ ಪಡೆದು ಯೋಜನೆ ಜಾರಿ ಮಾಡುತ್ತೇವೆ. ಆದರೆ, ಆಟೊ ಚಾಲಕ, ಮಾಲೀಕರಿಗೆ ಮಾಹಿತಿ ನೀಡಿದ್ದರೂ ಸ್ಪಂದನೆ ನೀರಸವಾಗಿದೆ. ಎರಡು ಸ್ಟ್ರೋಕ್ ಆಟೊ ಓಡಿಸುವುದು ಅವರ ಆರೋಗ್ಯಕ್ಕೂ, ಸಾರ್ವಜನಿಕರ ಆರೋಗ್ಯಕ್ಕೂ ಒಳ್ಳೆಯದಲ್ಲ. ಈ ಸೌಲಭ್ಯವನ್ನು ಅವರು ಸದುಪಯೋಗ ಪಡಿಸಿಕೊಳ್ಳಬೇಕು’ ಎಂದು ಸಾರಿಗೆ ಆಯುಕ್ತ ಎ.ಎಂ. ಯೋಗೀಶ್ ತಿಳಿಸಿದರು.

ವಾರದಲ್ಲಿ 90 ಗಂಟೆಗಳ ಕೆಲಸದ ಅವಧಿಯ ಬಗ್ಗೆ ವಿವಾದ!

‘ಮೆಡಿಕಲ್ ಸ್ಕೂಲ್’ ಪ್ರಾರಂಭಕ್ಕೆ ಒಪ್ಪಂದ

ಬೆಂಗಳೂರು: ಟಾಟಾ ಸಮೂಹವು ನಗರದಲ್ಲಿ ‘ಮೆಡಿಕಲ್ ಸ್ಕೂಲ್’ ಪ್ರಾರಂಭಿಸಲು ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಜತೆಗೆ ಒಪ್ಪಂದ ಮಾಡಿಕೊಂಡಿದೆ.

ನಗರದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಉಭಯ ಸಂಸ್ಥೆಗಳ ಮುಖ್ಯಸ್ಥರು ಈ ಒಪ್ಪಂದದ ಬಗ್ಗೆ ಘೋಷಿಸಿದರು. ಇಲ್ಲಿನ ಐಐಎಸ್‌ಸಿ ಕ್ಯಾಂಪಸ್‌ನಲ್ಲಿ ಈ ಮೆಡಿಕಲ್ ಸ್ಕೂಲ್ ನಿರ್ಮಾಣವಾಗಲಿದೆ. ಟಾಟಾ ಸಮೂಹವು ಈ ಸಂಸ್ಥೆಯ ನಿರ್ಮಾಣಕ್ಕೆ ₹ 500 ಕೋಟಿ ನೀಡುವುದಾಗಿ ಘೋಷಿಸಿದೆ.

‘ಈ ಮೆಡಿಕಲ್ ಸ್ಕೂಲ್ ವೈದ್ಯಕೀಯ ಶಿಕ್ಷಣದ ಜತೆಗೆ ಕ್ಲಿನಿಕಲ್ ಸಂಶೋಧನೆಗೆ ಆದ್ಯತೆ ನೀಡಲಿದೆ. ಹೃದಯ ವಿಜ್ಞಾನ, ನರ ವಿಜ್ಞಾನ ಸೇರಿ ವಿವಿಧ ವೈದ್ಯಕೀಯ ವಿಜ್ಞಾನಗಳನ್ನು ಕೇಂದ್ರೀಕರಿಸಲಿದ್ದು, ಪದವಿ ಕೋರ್ಸ್‌ಗಳು ಇರಲಿವೆ’ ಎಂದು ಟಾಟಾ ಸನ್ಸ್ ಅಧ್ಯಕ್ಷ ಎನ್.ಸಿ. ಚಂದ್ರಶೇಖರನ್ ತಿಳಿಸಿದರು.

‘ಮನುಷ್ಯನಿಗೆ ಜ್ಞಾನ, ಧ್ಯಾನ ಬಹಳ ಮುಖ್ಯ’

ಪ್ರಜಾವಾಣಿ ವಾರ್ತೆ

ಕಾರ್ಯಕ್ರಮದಲ್ಲಿ ಸಂಸದ ಬಸವರಾಜ ಬೊಮ್ಮಾಯಿ ಮಾತನಾಡಿದರು. ಸ್ನೇಹದೀಪ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಧರ್ಮದರ್ಶಿ ಪಾಲ್ ಮುದ್ದಾ, ಕನ್ನಡ ಪದ ಪತ್ರಿಕೆ ಸಂಪಾದಕ ಬಿ.ವಿ. ಮಲ್ಲಿಕಾರ್ಜುನಯ್ಯ, ಹಿನ್ನೆಲೆ ಗಾಯಕಿ ಪ್ರಿಯದರ್ಶಿನಿ, ಸ್ನೇಹದೀಪ ಸಂಸ್ಥೆಯ ಧರ್ಮದರ್ಶಿ ಕೆ.ಜಿ. ಮೋಹನ್ ಉಪಸ್ಥಿತರಿದ್ದರು

ಬೆಂಗಳೂರು: ‘ಮನುಷ್ಯನಿಗೆ ಜೀವನದಲ್ಲಿ ಜ್ಞಾನ ಮತ್ತು ಧ್ಯಾನ ಬಹಳ ಮುಖ್ಯ’ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಸ್ನೇಹದೀಪ ಅಂಗವಿಕಲರ ಸಂಸ್ಥೆ ಈಚೆಗೆ ಆಯೋಜಿಸಿದ್ದ ರಾಜ್ಯಮಟ್ಟದ ಪ್ರತಿಭಾನ್ವೇಷಣೆಯ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಬಹುಮಾನ ವಿತರಿಸಿ ಅವರು ಮಾತನಾಡಿದರು.

‘ನೀವೆಲ್ಲ ದೇವರ ಮಕ್ಕಳು, ದೇವರೇ ನಿಮ್ಮನ್ನು ಈ ಭೂಮಿಗೆ ಕಳುಹಿಸಿದ್ದಾನೆ. ಸ್ನೇಹದೀಪ ಸಂಸ್ಥೆ 24 ವರ್ಷಗಳಿಂದ ಅಂಧ ಮಕ್ಕಳಿಗೆ ಪ್ರೇರಣೆ, ವಿಶ್ವಾಸ, ಸ್ವಾಭಿಮಾನ ತುಂಬುವ ಕೆಲಸವನ್ನು ಮಾಡುತ್ತಿದೆ. ಒಂದು ಕಾಲದಲ್ಲಿ ಯಾರ ಬಳಿ ಜಮೀನು ಇತ್ತೊ ಅವರು ಜಗತ್ತನ್ನು ಆಳುತ್ತಿದ್ದರು. ನಂತರ ಯಾರ ಬಳಿ ಹಣ ಇತ್ತೊ ಅವರು ಜಗತ್ತನ್ನು ಆಳುತ್ತಿದ್ದರು. ಆದರೆ, 21 ನೇ ಶತಮಾನ ಜ್ಞಾನದ ಶತಮಾನ. ಈಗ ಯಾರಲ್ಲಿ ಜ್ಞಾನ ಇದೆಯೋ ಅವರು ಜಗತ್ತನ್ನು ಆಳುತ್ತಾರೆ’ ಎಂದರು.

‘ನಾನು ಮುಖ್ಯಮಂತ್ರಿಯಾಗಿದ್ದಾಗ ಅಂಧರಿಗೆ ಉಚಿತ ಚಿಕಿತ್ಸೆ ನೀಡುವ ಯೋಜನೆ ಜಾರಿ ಮಾಡಿದ್ದೆ. ನಮ್ಮ ಕಣ್ಣಿಗೆ ಪೊರೆ ಬಂದರೆ ಸಮಸ್ಯೆಯಾಗುತ್ತದೆ. ಆದರೆ, ನೀವು ನಿಮ್ಮ ಒಳಗಣ್ಣಿನಿಂದ ಎಲ್ಲವನ್ನೂ ಮುಕ್ತವಾಗಿ ನೋಡುತ್ತೀರಿ. ಈ ಮಕ್ಕಳ ಸೇವೆ ಮಾಡುತ್ತಿರುವ ಸ್ನೇಹದೀಪ ಸಂಸ್ಥೆಗೆ ನಾನು ನನ್ನ ಸಂಸದರ ನಿಧಿಯಿಂದ ₹15 ಲಕ್ಷ ಅನುದಾನ ನೀಡುತ್ತೇನೆ’ ಎಂದು ಹೇಳಿದರು.

ನಿಧಾನಗತಿಯ ಸಂಚಾರ: ಬೆಂಗಳೂರು ನಗರಕ್ಕೆ ಮೂರನೇ ಸ್ಥಾನ

ವಿಶ್ವಮಟ್ಟದಲ್ಲಿ ಸದ್ದು ಮಾಡಿದ ದಟ್ಟಣೆ ಸಮಸ್ಯೆ

ಪ್ರಜಾವಾಣಿ ವಾರ್ತೆ

ಹೆಬ್ಬಾಳ ರಸ್ತೆಯಲ್ಲಿ ವಾಹನ ದಟ್ಟಣೆ

ಬೆಂಗಳೂರು: ನಿಧಾನಗತಿಯ ಸಂಚಾರ ಹೊಂದಿರುವ ನಗರಗಳ ಪಟ್ಟಿಯಲ್ಲಿ ವಿಶ್ವದಲ್ಲೇ ಬೆಂಗಳೂರು ಮೂರನೇ ಸ್ಥಾನದಲ್ಲಿದೆ.

ನೆದರ್ಲೆಂಡ್‌ನ ಲೋಕೇಷನ್ ಟೆಕ್ನಾಲಜಿಯ ಟಾಮ್ ಟಾಮ್ ಸಂಸ್ಥೆ ಬಿಡುಗಡೆ ಮಾಡಿರುವ ಪಟ್ಟಿಯಲ್ಲಿ ಬೆಂಗಳೂರಿಗೆ ಈ ಸ್ಥಾನ ಸಿಕ್ಕಿದೆ.

ನಗರದ ಹಲವು ಪ್ರದೇಶಗಳಲ್ಲಿ ಸದಾ ಗಿಜಿಗುಡುವ ವಾಹನ ದಟ್ಟಣೆಯಿಂದ ಜನರು ಹೈರಾಣಾಗುತ್ತಿದ್ದಾರೆ. ಅದರಲ್ಲೂ ಕೇಂದ್ರ ಭಾಗದಲ್ಲಿ ವಾಹನಗಳ ಸಂಚಾರ ಆಮೆಗತಿಯಲ್ಲಿ ಸಾಗುವುದು ಸಾಮಾನ್ಯವಾಗಿದೆ. ಬೆಂಗಳೂರು ನಗರದ ಒಳಗೆ 10 ಕಿ.ಮೀ ದೂರ ಕ್ರಮಿಸಲು 34 ನಿಮಿಷ 10 ಸೆಕೆಂಡ್ ಬೇಕೆಂದು ಟಾಮ್ ಟಾಮ್ ಸಂಸ್ಥೆ ವರದಿ ಮಾಡಿದೆ.

ವಿಶ್ವದ ಪ್ರಮುಖ ಮಹಾನಗರಗಳಲ್ಲಿನ ಸಂಚಾರ ದಟ್ಟಣೆ ಸಂಬಂಧ ವೈಜ್ಞಾನಿಕ ಅಧ್ಯಯನ ನಡೆಸಿರುವ ಟಾಮ್ ಟಾಮ್ ಸಂಸ್ಥೆ ತನ್ನ ವರದಿಯಲ್ಲಿ ಬೆಂಗಳೂರಿನ ಸಂಚಾರ ದಟ್ಟಣೆ ಕುರಿತು ಹಲವು ಅಂಶಗಳನ್ನು ಉಲ್ಲೇಖಿಸಿದೆ. ಬೆಂಗಳೂರಿನ ವಾಹನ ದಟ್ಟಣೆ ಸಮಸ್ಯೆ ವಿಶ್ವಮಟ್ಟದಲ್ಲಿ ಅನಾವರಣವಾಗಿದೆ.

ನಗರದ ಜನರು ವರ್ಷದಲ್ಲಿ ಐದು ದಿನಗಳಷ್ಟು ಸಮಯವನ್ನು ಸಂಚಾರ ದಟ್ಟಣೆಯಲ್ಲೇ ಕಳೆಯುತ್ತಿದ್ದಾರೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಬೆಂಗಳೂರಿನಂತೆಯೇ ಕೋಲ್ಕತ್ತ ಹಾಗೂ ಪುಣೆ ನಗರಗಳಲ್ಲೂ ಹೆಚ್ಚು ವಾಹನ ದಟ್ಟಣೆಯಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ವಿಶ್ವದಲ್ಲಿಯೇ ಅತಿಹೆಚ್ಚು ಸಂಚಾರ ದಟ್ಟಣೆ ಉಂಟಾಗುವ ನಗರಗಳ ಪೈಕಿ ಬೆಂಗಳೂರು 2022ರಲ್ಲಿ ಎರಡನೇ ಸ್ಥಾನದಲ್ಲಿತ್ತು. ಆಗ ಪ್ರತಿ ಕಿ.ಮೀ ಪ್ರಯಾಣಕ್ಕೆ 29 ನಿಮಿಷ 10 ಸೆಕೆಂಡ್ ಬೇಕೆಂದು ವರದಿ ಹೇಳಿತ್ತು.

‘ದಟ್ಟಣೆ ನಿಯಂತ್ರಿಸುವಲ್ಲಿ ಸರ್ಕಾರ ವಿಫಲ’

ಟಾಮ್ ಟಾಮ್ ಸಂಸ್ಥೆಯ ವರದಿ ಬಹಿರಂಗವಾದ ಮೇಲೆ ರಾಜಧಾನಿಯಲ್ಲಿ ವಾಹನ ದಟ್ಟಣೆ ನಿಯಂತ್ರಣ ಮಾಡುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ ಎಂದು ಬಿಜೆಪಿ ಟೀಕಿಸಿದೆ.

‘ಬೆಂಗಳೂರು ಅಂದರೆ ಉದ್ಯಾನ ನಗರಿ ಎನ್ನುವ ಘನತೆ ಇತ್ತು. ಈಗ ವಾಹನ ದಟ್ಟಣೆಗೆ ಸಿಲುಕಿ ನರಳುವ ನಗರವಾಗಿದೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಸಾಮಾಜಿಕ ಮಾಧ್ಯಮ ‘ಎಕ್ಸ್’ ಖಾತೆಯಲ್ಲಿ ಟೀಕಿಸಿದ್ದಾರೆ.

‘ಬ್ರ್ಯಾಂಡ್ ಬ್ರ್ಯಾಂಡ್ ಎನ್ನುತ್ತಲೇ ರಾಜಧಾನಿಯನ್ನ ಬ್ಯಾಡ್ ಮಾಡಿದ್ದು ಈ ಸರ್ಕಾರದ ಸಾಧನೆ’ ಎಂದೂ ಬಿಜೆಪಿ ಟೀಕಿಸಿದೆ.

ಆಸ್ತಿಗಳ ಗುತ್ತಿಗೆ, ಮಾರಾಟಕ್ಕೆ ಹೊಸ ನಿಯಮ

‘ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಸ್ತಿ ನಿರ್ವಹಣೆ ನಿಯಮ– 2024’ಕ್ಕೆ ತಿದ್ದುಪಡಿ

ಪ್ರಜಾವಾಣಿ ವಾರ್ತೆ

ಬಿಬಿಎಂಪಿ ಸುದ್ದಿ

ಬೆಂಗಳೂರು: ಬಿಬಿಎಂಪಿ ಆಸ್ತಿಗಳನ್ನು 30 ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಗುತ್ತಿಗೆ ನೀಡುವುದನ್ನು ನಿರ್ಬಂಧಿಸುವುದು ಹಾಗೂ ಸರ್ಕಾರಿ ಇಲಾಖೆಗಳಿಗೆ ಬಿಬಿಎಂಪಿ ಆಸ್ತಿಗಳನ್ನು ಮಾರಾಟ ಮಾಡಲು ಅವಕಾಶವಿರುವ ನಿಯಮಗಳು ಜಾರಿಯಾಗಿವೆ.

‘ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಸ್ತಿ ನಿರ್ವಹಣೆ ನಿಯಮ– 2024’ಕ್ಕೆ ತಿದ್ದುಪಡಿ ತಂದು, ‘ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಯ್ದೆ– 2020’ರ 11ನೇ ಅಧ್ಯಾಯದಲ್ಲಿ ಬದಲಾವಣೆ ಮಾಡಿ ನಗರಾಭಿವೃದ್ಧಿ ಇಲಾಖೆ ಅಧಿಸೂಚನೆ ಹೊರಡಿಸಿದೆ. 2024ರ ಜುಲೈ 20ರಂದು ಕರಡು ಅಧಿಸೂಚನೆ ಹೊರಡಿಸಿ, ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗಿತ್ತು.

ಎಲ್ಲ ಆಸ್ತಿಗಳ ಪಟ್ಟಿ ಆಸ್ತಿಗಳ ವಿಭಾಗದಲ್ಲಿ ನಿರ್ವಹಣೆಯಾಗುವಂತೆ ಮುಖ್ಯ ಆಯುಕ್ತರು ನೋಡಿಕೊಳ್ಳಬೇಕು. ವಲಯಗಳಲ್ಲೂ ವಲಯ ಆಯುಕ್ತರು ಇದೇ ರೀತಿಯ ಪಟ್ಟಿ ಹೊಂದಿರಬೇಕು. ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳು, ಸರ್ಕಾರಿ ಸ್ವಾಮ್ಯದ ಸಾರ್ವಜನಿಕ ಉದ್ದಿಮೆಗಳು ಹಾಗೂ ಸಂಸ್ಥೆಗಳಿಗೆ ಮಾತ್ರ ಸ್ಥಿರಾಸ್ತಿಗಳನ್ನು ಮಾರಾಟ ಮಾಡಲು ಅವಕಾಶವಿರುತ್ತದೆ. ಹೀಗೆ ಮಾರುವುದಕ್ಕೂ ಮುನ್ನ ರಾಜ್ಯ ಸರ್ಕಾರದ ಅನುಮತಿ ಕಡ್ಡಾಯ. ಬಿಬಿಎಂಪಿಯ ಆಸ್ತಿಗಳನ್ನು ಮಾರಾಟ ಮಾಡುವಾಗ ನೋಂದಣಿ ಮತ್ತು ಮುದ್ರಾಂಕ ಕಾಯ್ದೆಯಂತೆ (45–ಬಿ) ನಿಗದಿಪಡಿಸಲಾಗಿರುವ ಮಾರ್ಗಸೂಚಿ ದರದಲ್ಲೇ ಮಾರಾಟ ಮಾಡಬೇಕು ಎಂದು ನಿಯಮದಲ್ಲಿ ತಿಳಿಸಲಾಗಿದೆ.

ಸ್ಥಾಯಿ ಸಮಿತಿಯಿಂದ ಅನುಮತಿ ಪಡೆದು ಸ್ಥಿರಾಸ್ತಿಗಳ ಗುತ್ತಿಗೆಯನ್ನು ಐದು ವರ್ಷದ ಅವಧಿಗೆ ನೀಡಬಹುದು. ಐದು ವರ್ಷಕ್ಕಿಂತ ಹೆಚ್ಚು ಹಾಗೂ 15 ವರ್ಷಕ್ಕಿಂತ ಕಡಿಮೆ ಅವಧಿಗೆ ಗುತ್ತಿಗೆ ನೀಡಬೇಕಾದರೆ ಪಾಲಿಕೆಯ ಕೌನ್ಸಿಲ್‌ನಲ್ಲಿ ಅನುಮತಿ ಪಡೆಯಬೇಕು. 15 ವರ್ಷದಿಂದ ಗರಿಷ್ಠ 30 ವರ್ಷಗಳವರೆಗೆ ಗುತ್ತಿಗೆ ನೀಡಲು ರಾಜ್ಯ ಸರ್ಕಾರದ ಪೂರ್ವಾನುಮತಿಯನ್ನು ಪಡೆದುಕೊಳ್ಳಬೇಕು. 30 ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಯಾವುದೇ ಸ್ಥಿರಾಸ್ತಿಯನ್ನು ಪಾಲಿಕೆಯು ಗುತ್ತಿಗೆಗೆ ನೀಡುವಂತಿಲ್ಲ ಎಂದು ನಿಯಮಗಳಲ್ಲಿ ವಿವರಿಸಲಾಗಿದೆ.

ಪಾಲಿಕೆ ಈಗಾಗಲೇ 30 ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಗುತ್ತಿಗೆ ನೀಡಿದ್ದರೆ, ಅದರ ನವೀಕರಣ ಸಂದರ್ಭದಲ್ಲಿ 30 ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಗುತ್ತಿಗೆ ನೀಡುವಂತಿಲ್ಲ. ಇದಲ್ಲದೆ, ಠೇವಣಿ, ಬಾಡಿಗೆಯನ್ನೂ ಮಾರ್ಗಸೂಚಿ ದರದಂತೆ ನಿಗದಿಪಡಿಸುವ ಲೆಕ್ಕಾಚಾರವನ್ನು ಹೊಸ ನಿಯಮಗಳಲ್ಲಿ ಸೇರಿಸಲಾಗಿದೆ.

ಸಮಸ್ಯೆ ನಿವಾರಣೆಗೆ ಕಾಲಮಿತಿ: ವಿಶೇಷ ಆಯುಕ್ತ

ಬೆಂಗಳೂರು: ಸಮುದಾಯದ ಪ್ರಾಣಿಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಕಾಲಮಿತಿಯಲ್ಲಿ ಬಗೆಹರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಬಿಬಿಎಂಪಿ ಪಶುಸಂಗೋಪನಾ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ತಿಳಿಸಿದರು.

ವಾಟ್ಸ್ ಆ್ಯಪ್, ಫೇಸ್‌ಬುಕ್ ಹಾಗೂ ಸಹಾಯಕ ನಿರ್ದೇಶಕರ ಮೊಬೈಲ್‌ಗೆ ಕರೆ ಮಾಡಿ ಸಮುದಾಯದ ಪ್ರಾಣಿಗಳ ಸಮಸ್ಯೆಯ ದೂರುಗಳನ್ನು ಸಾರ್ವಜನಿಕರು ದಾಖಲಿಸುತ್ತಿದ್ದಾರೆ. ಇದರಿಂದ ಕೂಡಲೇ ಗೊಂದಲಗಳಿಗೆ ಪರಿಹಾರ ಸಿಗುತ್ತಿಲ್ಲ. ಆಫ್‌ಲೈನ್‌ನಲ್ಲಿ ದೂರು ದಾಖಲಿಸುವುದರಿಂದ ನಿರ್ವಹಣೆಯಲ್ಲಿ ಸಮಸ್ಯೆ ಉಂಟಾಗಿದೆ. ಆದ್ದರಿಂದ, ತ್ವರಿತವಾಗಿ ದೂರುಗಳನ್ನು ಪರಿಹರಿಸಲು, ಸಹಾಯವಾಣಿ 1533 ಹಾಗೂ ‘ನಮ್ಮ ಬೆಂಗಳೂರು’ ಆ್ಯಪ್ ಮೂಲಕ ದೂರು ಸಲ್ಲಿಸಲು ಅವಕಾಶ ಮಾಡಿಕೊಡಲಾಗಿದೆ ಎಂದು ಹೇಳಿದರು.

ಸಹಾಯವಾಣಿಯಲ್ಲಿ ಇದೀಗ ಅಧಿಕ ವಿವರವಾದ ಮಾಹಿತಿ, ವರ್ಗಗಳನ್ನು ಸೇರಿಸಲಾಗಿದೆ. ಪ್ರಾಣಿಗಳ ಜನನ ನಿಯಂತ್ರಣ, ರೇಬೀಸ್ ನಿರೋಧಕ ಲಸಿಕೆಗೆ ವಿನಂತಿ, ನಾಯಿ ಕಡಿತ ನಿರ್ವಹಣೆಯಂತಹ ಸಾಮಾನ್ಯ ದೂರುಗಳ ಹೊರತು, ಪ್ರಾಣಿಗಳಿಗೆ ಆಹಾರ ನೀಡುವವರಿಗೆ ಕಿರುಕುಳ, ಪ್ರಾಣಿಗಳ ಮೇಲಿನ ಕ್ರೌರ್ಯ, ಪ್ರಾಣಿಗಳ ಸಂತಾನೋತ್ಪತ್ತಿಯನ್ನು ನಿಯಂತ್ರಿಸುವ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಮನವಿ ಸಲ್ಲಿಸಬಹುದು.

ನಾಗರಿಕರು ಮನವಿ ಸಲ್ಲಿಸಿದ ನಂತರ ಅದಕ್ಕೆ ಪ್ರತಿಕ್ರಿಯೆ ಅಥವಾ ಪರಿಹರಿಸುವ ಅವಧಿ ನಿಗದಿ ಮಾಡಲಾಗಿದೆ. ಪ್ರಾಣಿಗಳ ಜನನ ನಿಯಂತ್ರಣ ಮತ್ತು ರೇಬೀಸ್ ನಿರೋಧಕ ಲಸಿಕೆ ವಿನಂತಿಗಳಿಗೆ ಐದು ದಿನಗಳೊಳಗೆ ಸ್ಪಂದಿಸಲಾಗುವುದು. ನಾಯಿ ಕಡಿತ / ಜಾನುವಾರು ದಾಳಿಗೆ ಸಂಬಂಧಿಸಿದ ಮನವಿ ಪರಿಹಾರಕ್ಕೆ ಎರಡು ದಿನ, ವಸತಿ ಸಂಘಗಳು ಅಥವಾ ವ್ಯಕ್ತಿಗಳಿಂದ ಆಹಾರ ನೀಡುವವರಿಗೆ ಕಿರುಕುಳ ಸಮಸ್ಯೆಗೆ ಎರಡು ದಿನ, ಬ್ರೀಡರ್, ಪೆಟ್ ಶಾಪ್, ಮಾಂಸದ ಅಂಗಡಿ ಪರವಾನಗಿಯನ್ನು ಏಳು ದಿನಗಳಲ್ಲಿ, ಪ್ರಾಣಿ ಹಿಂಸೆ ದೂರನ್ನು 2 ದಿನದಲ್ಲಿ ಪರಿಹರಿಸಲಾಗುತ್ತದೆ ಎಂದು ಸುರಳ್ಕರ್ ಮಾಹಿತಿ ನೀಡಿದರು.

ಶ್ರೀರಾಮಲಕ್ಷ್ಮಣರ ಸಮೇತ ಹನುಮನ ಏಕಶಿಲಾ ವಿಗ್ರಹ

ಅತಿ ಎತ್ತರದ ಏಕಶಿಲಾ ಮೂರ್ತಿ ಇಂದು ಪ್ರತಿಷ್ಠಾಪನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಅತಿ ಎತ್ತರದ (72 ಅಡಿ) ಸುಮಾರು 480 ಟನ್ ತೂಕದ ರಾಮ-ಲಕ್ಷ್ಮಣರ ಸಮೇತ ಬೃಹತ್ ಹನುಮನ ಏಕಶಿಲಾ ಮೂರ್ತಿಯನ್ನು ಕಾಚರಕನಹಳ್ಳಿಯ ಕೋದಂಡ ರಾಮಸ್ವಾಮಿ ದೇವಾಲಯದ ಆವರಣ ದಲ್ಲಿ ಬುಧವಾರ ಪ್ರತಿಷ್ಠಾಪನೆಯಾಗಲಿದೆ.

‘ಈ ವಿಗ್ರಹ ಏಷ್ಯಾದಲ್ಲಿಯೇ ಅತಿ ಎತ್ತರದ್ದಾಗಿದ್ದು, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ’ ಎಂದು ಶ್ರೀರಾಮ ಚೈತನ್ಯ ವರ್ಧಿನಿ ಸಭಾ ಟ್ರಸ್ಟ್‌ನ ಅಧ್ಯಕ್ಷ ಎಂ.ಎನ್. ರೆಡ್ಡಿ ತಿಳಿಸಿದರು.

‘ಐಪಿಸಿ ಪ್ರಕರಣಗಳ ವಿಚಾರಣೆ ಅಧಿಕಾರವಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯವು, ಭಾರತೀಯ ದಂಡ ಸಂಹಿತೆಯ (ಐಪಿಸಿ) ಅಡಿಯಲ್ಲಿನ ಅಪರಾಧಗಳ ವಿಚಾರಣೆ ಮಾಡುವ ಯಾವುದೇ ಅಧಿಕಾರ ಹೊಂದಿಲ್ಲ’ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಈ ಸಂಬಂಧ ಭೂಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ 2024ರ ಜನವರಿ 12ರಂದು ನೀಡಿದ್ದ ಆದೇಶ ಪ್ರಶ್ನಿಸಿ ಬೆಂಗಳೂರು ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿಯ ಆಶಾ ಲೇ ಔಟ್‌ನ ಚನ್ನಕೇಶವ ಸಲ್ಲಿಸಿದ್ದ ಕ್ರಿಮಿನಲ್ ಪರಿಷ್ಕರಣಾ ಅರ್ಜಿಯನ್ನು ನ್ಯಾಯಮೂರ್ತಿ ಎಚ್. ಪಿ.ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಭಾಗಶಃ ಪುರಸ್ಕರಿಸಿದೆ.

‘ವಿಶೇಷ ನ್ಯಾಯಾಲಯವು ಕರ್ನಾಟಕ ಭೂ ಕಂದಾಯ ಕಾಯ್ದೆ–1964ರ ಕಲಂ 192 ಎ ಅಡಿಯಲ್ಲಿ ಅಪರಾಧಗಳನ್ನು ವ್ಯವಹರಿಸಬಹುದು. ಐಪಿಸಿಯ ಕಲಂ 420ರ ಅಡಿಯಲ್ಲಿನ ಅಪರಾಧಗಳ ವಿಚಾರಣೆ ನಡೆಸಲು ಭೂ ಕಬಳಿಕೆ ನಿಷೇಧ ನ್ಯಾಯಾಲಯಕ್ಕೆ ಅಧಿಕಾರವಿಲ್ಲ’ ಎಂದು ಹೇಳಿದೆ.

ವಿಶೇಷ ನ್ಯಾಯಾಲಯದ ಆದೇಶವನ್ನು ರದ್ದುಗೊಳಿಸಿರುವ ನ್ಯಾಯಪೀಠ, ‘ಪ್ರಕರಣಕ್ಕೆ ಸಂಬಂಧಿಸಿದಂತೆ ಅಪರಾಧಿಕ ಕಲಂಗಳಡಿಯ ಆರೋಪಗಳನ್ನು ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ವಿಭಜಿಸಿ ಕಳುಹಿಸಬೇಕು’ ಎಂದು ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯಕ್ಕೆ ನಿರ್ದೇಶಿಸಿದೆ.

ಅಪಘಾತ: ಮೂವರು ಸಾವು

ಪ್ರಜಾವಾಣಿ ವಾರ್ತೆ

ಆನವಟ್ಟಿ (ಶಿವಮೊಗ್ಗ): ಸೊರಬ ತಾಲ್ಲೂಕು ನೆಗವಾಡಿ ಗ್ರಾಮ ಸಮೀಪದ ಹಿರೇಮಾಗಡಿ ಕ್ರಾಸ್‌ನ ರಾಜ್ಯ ಹೆದ್ದಾರಿಯಲ್ಲಿ ಚಾಲಕನ ನಿಯಂತ್ರಣ ಕಳೆದುಕೊಂಡ ಜೀಪ್, ಕಂಬಗಳಿಗೆ ಡಿಕ್ಕಿ ಹೊಡೆದಿದ್ದರಿಂದ ಮೂವರು ಮೃತಪಟ್ಟು, ನಾಲ್ವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಸೋಮವಾರ ರಾತ್ರಿ ಈ ಘಟನೆ ನಡೆದಿದೆ.

ಕಣಸೋಗಿಯಿಂದ ಎಸ್.ಎನ್.ಕೊಪ್ಪ ಕಡೆಗೆ ಹೋಗುತ್ತಿದ್ದ ಜೀಪ್‌ನಲ್ಲಿ ಕಬ್ಬೂರು, ಎಸ್.ಎನ್. ಕೊಪ್ಪ, ಕಣಸೋಗಿ ಗ್ರಾಮದ 8 ಜನ ಪ್ರಯಾಣಿಸುತ್ತಿದ್ದರು. ಹೆದ್ದಾರಿ ಅಂಚಿನಲ್ಲಿದ್ದ ಸಿಮೆಂಟ್ ಕಂಬಗಳಿಗೆ ಜೀಪ್ ಡಿಕ್ಕಿ ಹೊಡೆದು ಗದ್ದೆಗೆ ಉರುಳಿದೆ.

ಚಿಕ್ಕಕಬ್ಬೂರು ಗ್ರಾಮದ ಹನುಮಂತಪ್ಪ (50) ಸ್ಥಳದಲ್ಲೇ ಮೃತಪಟ್ಟಿದ್ದಾರೆ. ತಲ್ಲೂರು ವಡ್ಡಿಗೇರಿ ಗ್ರಾಮದ ಲಕ್ಷ್ಮವ್ವ (46) ಮತ್ತು ಕಣಸೋಗಿ ಗ್ರಾಮದ ರೇಣುಕಮ್ಮ (65) ಶಿಕಾರಿಪುರದ ಆಸ್ಪತ್ರೆಯಲ್ಲಿ ಮೃತಪಟ್ಟರು.

ಮುಖ್ಯಮಂತ್ರಿಗೆ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಮನವಿ

ಗಣಿಗಾರಿಕೆ: ಕಾನೂನು ಸಡಿಲಿಸಿ

ಪ್ರಜಾವಾಣಿ ವಾರ್ತೆ

ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಪತ್ರ ಸಲ್ಲಿಸಿದರು. ಸಮಾಜದ ಮುಖಂಡರು ಉಪಸ್ಥಿತರಿದ್ದರು

ಬೆಂಗಳೂರು: ಭೋವಿ ಸಮುದಾಯವರು ಪಾರಂಪರಿಕ ಕುಲಕಸುಬಾದ ಕಲ್ಲು ಗಣಿಗಾರಿಕೆ ಮಾಡಲು ಅನುವಾಗುವಂತೆ ಕಾನೂನು ಸಡಿಲಿಸಬೇಕು ಎಂದು ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದ್ದಾರೆ.

ಮುಖ್ಯಮಂತ್ರಿಯವರನ್ನು ಮಂಗಳವಾರ ಭೇಟಿ ಮಾಡಿದ ಸ್ವಾಮೀಜಿ ಈ ಕುರಿತ ಪತ್ರ ಸಲ್ಲಿಸಿದ್ದಾರೆ.

‘ಹಣವಂತರು ಕಲ್ಲು ಗಣಿಗಾರಿಕೆಗೆ ದೊಡ್ಡ ಯಂತ್ರಗಳನ್ನು ಬಳಸುತ್ತಿದ್ದಾರೆ. ಇದರಿಂದ ನಮ್ಮ ಸಮುದಾಯದ ಕುಲಕಸುಬಿಗೇ ಸಂಚಕಾರ ಬಂದಿದೆ. ಬಡ ಕೂಲಿ ಕಾರ್ಮಿಕರಿಗೆ ಪಾರಂಪರಿಕ ಕೆಲಸ ಮಾಡಲು ಅವಕಾಶ ಮಾಡಿಕೊಡಲು ಆಯಾ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ಮೂಲಕ ಭೋವಿ (ವಡ್ಡ) ಸಮಾಜದವರಿಗೆ ಸ್ಫೋಟಕರಹಿತ ಗಣಿ ಕೆಲಸ ಮಾಡಲು ಗುರುತಿನ ಚೀಟಿ ನೀಡಲು ಕಾನೂನು ರೂಪಿಸಬೇಕು’ ಎಂದು ಆಗ್ರಹಿಸಿದ್ದಾರೆ.

‘31– ಝಡ್‌ಸಿ ಅಡಿ ಎಂ ಸ್ಯಾಂಡ್ ಉತ್ಪಾದನೆಗಾಗಿ ಇದೇ ಜನವರಿ 2ರಂದು ಆದೇಶ ಹೊರಡಿಸಿ ನಮ್ಮ ಕುಲಕಸುಬು ಮುಂದುವರಿಸಲು ಅವಕಾಶ ಮಾಡಿಕೊಡಲಾಗಿದೆ. ಇದರಲ್ಲಿ ಕಾನೂನು ಸಡಿಲಿಕೆ ಮಾಡಿಕೊಡಬೇಕು. ಅಲ್ಲದೇ, ನಮ್ಮ ಸಮುದಾಯದವರು ಕೆಲಸ ಮಾಡುತ್ತಿರುವ ಜಾಗಗಳಲ್ಲಿ 31–ಝಡ್‌ಸಿ ಅಡಿ ದೊಡ್ಡ ಕ್ರಷರ್‌ಗಳ ಮಾಲೀಕರು ಅರ್ಜಿ ಸಲ್ಲಿಸಿದ್ದಾರೆ. ಇದರಿಂದ ನಮ್ಮ ಸಮುದಾಯದವರಿಗೆ ಅರ್ಜಿ ಸಲ್ಲಿಸಲು ಜಾಗಗಳೇ ಇಲ್ಲದಂತಾಗಿದೆ. ಆದ್ದರಿಂದ ನಮ್ಮ ಜನಾಂಗದ ಪರವಾಗಿ ಆಗಿರುವ ಆದೇಶದ ದಿನಾಂಕದಿಂದ (ಜ.2) ಒಂದು ವರ್ಷದವರೆಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಬೇಕು. ದೊಡ್ಡ ಕ್ರಷರ್‌ಗಳಿಗೆ 50 ಎಕರೆ ಬದಲಿಗೆ 10 ಎಕರೆ ಕೊಟ್ಟರೆ, ನಮ್ಮ ಜನಾಂಗದವರಿಗೂ ಅವಕಾಶ ಸಿಗುತ್ತದೆ’ ಎಂದು ಮನವಿಯಲ್ಲಿ ತಿಳಿಸಿದ್ದಾರೆ.

‘ಕಲ್ಲು ಗಣಿಗಾರಿಕೆ ಮಾಡುತ್ತಿದ್ದ ಸಂದರ್ಭದಲ್ಲಿ ನಮ್ಮ ಸಮುದಾಯದವರ ಮೇಲೆ ಗಣಿ ಇಲಾಖೆ ಮತ್ತು ಪೊಲೀಸ್ ಇಲಾಖೆಯವರು ಟ್ರ್ಯಾಕ್ಟರ್ ಮತ್ತು ಇತರ ವಾಹನಗಳ ಮೇಲೆ ಹಾಕಿರುವ ಕೇಸುಗಳಲ್ಲಿ ಸಣ್ಣ ಪ್ರಮಾಣದಲ್ಲಿ ದಂಡ ವಿಧಿಸಿ ಅಥವಾ ಉಚಿತವಾಗಿಯೇ ದೂರುಗಳನ್ನು ರದ್ದುಪಡಿಸಬೇಕು’ ಎಂದು ಸ್ವಾಮೀಜಿ ಒತ್ತಾಯಿಸಿದ್ದಾರೆ.

ನಗರದಲ್ಲಿ ಇಂದು

ಗುರು ಸಿದ್ಧರಾಮೇಶ್ವರರ ಜಯಂತಿ ಮಹೋತ್ಸವದ ಸಮಾರೋಪ
ಸಮಾರಂಭ: ಬೆಳಿಗ್ಗೆ 7.30ಕ್ಕೆ ಇಷ್ಟಲಿಂಗ ಪೂಜಾ ವಿಧಾನ ಮತ್ತು ಲಿಂಗಧಾರಾಣಾ ಕಾರ್ಯಕ್ರಮ, ಬೆಳಿಗ್ಗೆ 10.30ಕ್ಕೆ ಮಹಿಳಾ ಮತ್ತು ಕೃಷಿ ಗೋಷ್ಠಿ: ಮಾತೆ ಬಸವಾಂಜಲಿ, ಜಯಚಂದ್ರಶೇಖರ್ ಸ್ವಾಮೀಜಿ, ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ, ವಿಭವ ವಿದ್ಯಾಶಂಕರ ದೇಶಿಕೇಂದ್ರ ಸ್ವಾಮೀಜಿ, ಮಧ್ಯಾಹ್ನ 3ಕ್ಕೆ ಸಮಾರೋಪ ಸಮಾರಂಭ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಇಮ್ಮಡಿ ಕರಿಬಸವ ದೇಶಿಕೇಂದ್ರ ಸ್ವಾಮೀಜಿ, ಚಂದ್ರಶೇಖರ ಸ್ವಾಮೀಜಿ, ಸಮಾರೋಪ ನುಡಿ: ಸಿದ್ದರಾಮಯ್ಯ, ಅಧ್ಯಕ್ಷತೆ: ಕೆ. ಷಡಾಕ್ಷರಿ, ‘12ನೇ ಶತಮಾನದ ಶಿವಶರಣರು’ ಉಪನ್ಯಾಸ: ಬಿ.ಎಲ್. ಶಂಕರ್, ಕತ್ತಿಗೆಚೆನ್ನಪ್ಪ ಅವರ ‘ಹಂಚೇರು’ ಗ್ರಂಥ ಬಿಡುಗಡೆ: ಎಂ.ಬಿ. ಪಾಟೀಲ, ಅತಿಥಿಗಳು: ಶಾಮನೂರು ಶಿವಶಂಕರಪ್ಪ, ಬಿ.ಎಸ್. ಸುರೇಶ್, ಸ್ಥಳ: ತ್ರಿಪುರವಾಸಿನಿ, ಅರಮನೆ ಮೈದಾನ

ಕುವೆಂಪು ಜಯಂತಿ, ಪ್ರಶಸ್ತಿ ಪ್ರದಾನ: ಶೀಲಾದೇವಿ ಮಳೀಮಠ, ಅತಿಥಿಗಳು: ನಂದಾ, ಜಾಕಿರ್ ಹುಸೇನ್ ಎಚ್. ತಾಳಿಕೋಟೆ, ಆರ್. ಪ್ರಕಾಶ್, ಕಾಕೋಳು ಶೈಲೇಶ್, ಪೂರ್ಣಚಂದ್ರ, ಪ್ರಾಸ್ತಾವಿಕ ನುಡಿ: ಎಂ. ಪುಟ್ಟರಾಜು, ಆಯೋಜನೆ: ವಿಶ್ವಮಾನವ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

REGIONAL INSTITUTE OF COOPERATIVE MANAGEMENT, BENGALURU
(An Institution of National Council for Cooperative Training, New Delhi, an Autonomous Society Promoted by Ministry of Cooperation, Govt. of India)
No. 67, Padmanabhanagar, Banashankari II Stage, Bangalore - 70

WANTED LECTURERS (ON CONTRACT)

RICM, Bengaluru is a unit of National Council for Cooperative Training, New Delhi, invites applications from eligible candidates for the post of Lecturers to be appointed purely on contract basis. The candidate with a postgraduate degree with a minimum of 55% marks in the discipline of Cooperation/Economics/Commerce/Business Administration/ Law/Information Technology from a recognised University along with NET/SLET/SET/Ph.D., qualification and with 2 years teaching experience. For further details please visit our institute website **www.ricmb.ac.in**

Sd/-
Director, RICM, Bengaluru



ಆವಿಯಾಗದ ಸ್ಮರಣೆ!

ಕೊಳ್ಳೇಗಾಲ ಶರ್ಮ

ನೆನಪುಗಳೇ ಹಾಗೆ, ಮರೆಯಾಗಿ ಬಿಡಬಲ್ಲುವು. ಎಲೆಕ್ಟ್ರಾನಿಕ್ ನೆನಪುಗಳೂ ಅಷ್ಟೆ. ಶಾಶ್ವತವಲ್ಲ. ನಾವು ನಿತ್ಯವೂ ನಮ್ಮ ಕೆಲಸ ಸರಾಗವಾಗಿ ಆಗಲೆಂದು ಎಲೆಕ್ಟ್ರಾನಿಕ್ ನೆನಪಿನ ಸಾಧನಗಳನ್ನು ಅವಲಂಬಿಸಿರುತ್ತೇವೆ. ಸ್ಮಾರ್ಟ್‌ಫೋನ್, ಗಣಕಯಂತ್ರ, ಫೋನಿನ ಸಿಮ್ ಕಾರ್ಡ್ ಮೊದಲಾದವೆಲ್ಲವೂ ಸ್ಮರಣಸಾಧನಗಳು. ಇವು ಎಲೆಕ್ಟ್ರಾನಿಕ್ ಸರ್ಕೀಟಿನ ರೂಪದಲ್ಲಿ ನಾವು ಬರೆದ, ಕೊಟ್ಟ ಮಾಹಿತಿಯನ್ನು ನೆನಪಿನಲ್ಲಿಟ್ಟುಕೊಂಡಿರುತ್ತವೆ, ಅರ್ಥಾತ್, ಶೇಖರಿಸಿಟ್ಟಿರುತ್ತವೆ. ಸ್ಮರಣಸಾಧನಗಳು ಅಥವಾ 'ಮೆಮೊರಿ' ಸಾಧನಗಳಲ್ಲಿ ಇರುವ ನೆನಪನ್ನು ಬೇಕೆಂದಾಗ ಹೆಕ್ಕಿ ನಮ್ಮ ಕೆಲಸವನ್ನು ಸರಾಗಗೊಳಿಸಿಕೊಳ್ಳುತ್ತೇವೆ.

> ಆರುನೂರು ಡಿಗ್ರಿ ಉಷ್ಣತೆಯಲ್ಲಿಯೂ ಕಾರ್ಯನಿರ್ವಹಿಸುವ ಸ್ಮರಣಸಾಧನ ಸಿದ್ಧವಾಗುತ್ತಿದೆ.

ಈ ಎಲೆಕ್ಟ್ರಾನಿಕ್ ನೆನಪುಗಳೇನೂ ಶಾಶ್ವತವಲ್ಲ. ಎಲ್ಲ ನೆನಪುಗಳಂತೆಯೇ ಇವು ಕೂಡ ಮರೆಯಾಗಿಬಿಡಬಲ್ಲವು. ನೀರಿನಲ್ಲಿ ಬಿದ್ದಾಗಲೋ, ಬಹಳ ಬಿಸಿಯಾದಾಗಲೋ ಸ್ಮರಣಸಾಧನಗಳಲ್ಲಿ ಇರುವ ಮೆಮೊರಿಯನ್ನು ಹೆಕ್ಕುವುದು ಕಷ್ಟವಾಗುತ್ತದೆ. ಸಾಧನ ಕೆಟ್ಟಿದೆ ಎನ್ನುತ್ತೇವೆ. ನಿಮ್ಮ ಸುಮಧುರ ಗಳಿಗೆಗಳ ಫೋಟೊಗಳನ್ನು ದಾಖಲಿಸಿಟ್ಟ ಫ್ಲಾಶ್ ಕಾರ್ಡ್ ಖಾಲಿಯಾಗಿ ಕಾಣುವುದು ಹೀಗೆ. ಅದರಲ್ಲಿ ಸಂಗ್ರಹಿಸಿದ ಮೆಮೊರಿ ಆವಿಯಾಗಿಬಿಟ್ಟಿರುತ್ತದೆ.

ಅತ್ಯಂತ ಕ್ಲಿಷ್ಟ ಪರಿಸ್ಥಿತಿಯಲ್ಲಿಯೂ ನೆನಪುಗಳನ್ನು ಉಳಿಸಿಕೊಳ್ಳುವಂಥ ಸಾಧನ ಸಾಧ್ಯವಿಲ್ಲವೇ? ಸಾಧ್ಯವಿದೆ – ಎನ್ನುತ್ತದೆ 'ಡಿವೈಸಸ್' ಪತ್ರಿಕೆಯಲ್ಲಿ ಮೊನ್ನೆ ಪ್ರಕಟವಾಗಿರುವ ಪ್ರಬಂಧ. ಅಮೆರಿಕದ ಮಿಷಿಗನ್ ವಿಶ್ವವಿದ್ಯಾಲಯದ ವಸ್ತುವಿಜ್ಞಾನ ಮತ್ತು ಎಂಜಿನಿಯರಿಂಗ್ ವಿಭಾಗದ ಪ್ರೊ. ಯಿಯಾಂಗ್ ಲೀ ಮತ್ತು ಸಂಗಡಿಗರು 600 ಡಿಗ್ರಿ ಸೆಲ್ಸಿಯಸ್ ಉಷ್ಣತೆಗೆ ಕಾಯಿಸಿದರೂ ಆವಿಯಾಗದೆ ಉಳಿಯುವ ನೆನಪಿನ ಸಾಧನವನ್ನು ರೂಪಿಸಿದ್ದಾರಂತೆ. ಇದನ್ನು ಇಷ್ಟು ಬಿಸಿ ಮಾಡಿದಾಗಲೂ ಅದರಲ್ಲಿ ಅಚ್ಚೊತ್ತಿದ ಮಾಹಿತಿಗಳು ಹಾಗೆಯೇ ಉಳಿದಿದ್ದುವು ಎಂದು ಲೀ ಹೇಳಿದ್ದಾರೆ.

'ಎಲೆಕ್ಟ್ರಾನಿಕ್ ಮೆಮೊರಿ' ಎಂದರೆ ನಾವು ಸಂಗ್ರಹಿಸಬೇಕಾದ ಮಾಹಿತಿಯನ್ನು ಸರ್ಕೀಟಿನಲ್ಲಿ ವಿದ್ಯುತ್ ಹರಿಸಿ ಇಲ್ಲವೇ ನಿಲ್ಲಿಸಿ ಕೂಡಿಡುತ್ತೇವೆ. ಇದಕ್ಕಾಗಿ ಸಿಲಿಕಾನ್ ಪೊರೆಗಳಲ್ಲಿ ಅತಿ ಸೂಕ್ಷ್ಮವಾಗಿ ದಾಖಲಿಸಿದ ವಿದ್ಯುತ್ ಮಂಡಲಗಳನ್ನು ಅಥವಾ ಸರ್ಕೀಟನ್ನು ಬಳಸುತ್ತೇವೆ. ಈ ಸರ್ಕೀಟುಗಳಲ್ಲಿ ಮಾಹಿತಿ ಇದ್ದರೆ ಆಗ ವಿದ್ಯುತ್ ಹರಿಯುವುದಿಲ್ಲ. ಮಾಹಿತಿ ಇಲ್ಲದಾಗ ವಿದ್ಯುತ್ ಹರಿಯುತ್ತದೆ. ಹೀಗೆ ಎಲ್ಲಿ ಮಾಹಿತಿ ಇದೆ ಎಂದು ಗುರುತಿಸಬಹುದು. ಯಾವುದೇ ಮಾಹಿತಿಯನ್ನು ಹೀಗೆ ಇದೆ, ಇಲ್ಲ ಎನ್ನುವಂತೆ ಸಂಕೇತಿಸಿ ಬಿಟ್ಟರೆ, ಅವುಗಳನ್ನು ಸರ್ಕೀಟುಗಳಲ್ಲಿ ಬಂಧಿಸಿ ಇಡಬಹುದು. ಬೇಕೆಂದಾಗ ಯಾವ್ಯಾವ ಸರ್ಕೀಟುಗಳಲ್ಲಿ ವಿದ್ಯುತ್ ಹರಿಯಬಲ್ಲುದು, ಯಾವುದರಲ್ಲಿ ಇಲ್ಲ ಎಂದು ಗುರುತಿಸಿ, ನೆನಪನ್ನು ಮರುಕಳಿಸಿಕೊಳ್ಳಬಹುದು.

ಹೀಗೆ ಎರಡು ಸ್ಥಿತಿಗಳ ನಡುವೆ ಓಲಾಡುವ ಯಾವುದೇ ವಸ್ತುವನ್ನೂ ಮಾಹಿತಿ ಕೂಡಿಡಲು ಬಳಸಬಹುದು. ಎಲೆಕ್ಟ್ರಾನಿಕ್ ಸರ್ಕೀಟುಗಳಲ್ಲಿ ಬಳಸುವ ಅರೆವಾಹಕ ವಸ್ತುಗಳು ಅತಿ ಹೆಚ್ಚು ಎಂದರೆ ಇನ್ನೂರು ಡಿಗ್ರಿವರೆಗೆ ತಮ್ಮಲ್ಲಿ ಮಾಹಿತಿಯನ್ನು ಕೂಡಿಟ್ಟುಕೊಳ್ಳುತ್ತವೆ. ಇದಕ್ಕಿಂತಲೂ ಬಿಸಿಯಾದಾಗ ಸರ್ಕೀಟುಗಳಲ್ಲಿ ನಿಲ್ಲಬೇಕಾದ ಎಲೆಕ್ಟ್ರಾನುಗಳು ಅಲ್ಲಿ ಉಳಿಯದೆ ಹರಿದು ಹೋಗುತ್ತವೆ. ನೆನಪು ಅಳಿಸಿಹೋಯಿತು ಎನ್ನುತ್ತೇವೆ. ಮೆಮೊರಿ ಫೇಲ್ ಆಗುವುದು ಹೀಗೆ. ಬೇಕಾದ ನೆನಪನ್ನು ಹೆಕ್ಕುವುದು ಕಷ್ಟವಾದಾಗ ಸಾಧನ ಹ್ಯಾಂಗ್ ಆಗುತ್ತದೆ. ಫೋನು ಅತಿ ಬಿಸಿಯಾದಾಗ ಸರಿಯಾಗಿ ಕೆಲಸ ನಿರ್ವಹಿಸದೇ ಇರುವುದು ಇದೇ ಕಾರಣಕ್ಕೆ. ಅತಿ ಬಿಸಿಯಾದಾಗಲೂ ನೆನಪುಗಳು ಕೆಡದಂತೆ ಉಳಿಸುವ ಸಾಧನ ಸಾಧ್ಯವಿಲ್ಲವೇ? ಇದು ಲೀ ಅವರ ಉದ್ದೇಶ. ಇದಕ್ಕಾಗಿ ಇವರು ಹೊಸ ಬಗೆಯ ಸ್ಮರಣಸಾಧನಗಳನ್ನು ರೂಪಿಸಿದ್ದಾರೆ. ಇವು ಕೇವಲ ಎಲೆಕ್ಟ್ರಾನಿಕ್ ಸರ್ಕೀಟುಗಳನ್ನು ಬಳಸುವುದಿಲ್ಲ. ಬದಲಿಗೆ ರಾಸಾಯನಿಕ ಕ್ರಿಯೆಗಳನ್ನು ಬಳಸುತ್ತವೆ. ಇಂಥ ಸ್ಮರಣ ತಂತ್ರಗಳನ್ನು 'ಎಲೆಕ್ಟ್ರೋಕೆಮಿಕಲ್ ರೇಂಡಮ್ ಅಸೆಸ್‌ಮೆಮೊರಿ' ಅಥವಾ 'ಇಸಿರೇಮ್' ಎನ್ನುತ್ತಾರೆ.



'ಇಸಿರೇಮ್' ಅನ್ನು ತಯಾರಿಸಲು ಈ ಹಿಂದೆಯೂ ಹಲವು ಪ್ರಯತ್ನಗಳು ನಡೆದಿದ್ದುವು. ಆದರೆ ಅವು ಎಲ್ಲವೂ ಕೇವಲ ಇನ್ನೂರು ಅಥವಾ ಇನ್ನೂರೈವತ್ತು ಡಿಗ್ರಿ ಸೆಲ್ಸಿಯಸ್ ಉಷ್ಣತೆಯವರೆಗೆ ಮಾತ್ರ ಕಾರ್ಯ ನಿರ್ವಹಿಸುತ್ತಿದ್ದುವು. ಇನ್ನೂ ಬಿಸಿಯಾದಾಗ ಅವು ಕೂಡ ಎಲೆಕ್ಟ್ರಾನಿಕ್ ಸಾಧನಗಳಂತೆಯೇ ನೆನಪನ್ನು ಕಳೆದುಕೊಳ್ಳುತ್ತಿದ್ದುವು. ಲೀ ತಂಡ ಇದೀಗ ಮುನ್ನೂರು ಡಿಗ್ರಿಯಿಂದ ನಾಲ್ಕುನೂರ ಐವತ್ತು ಡಿಗ್ರಿವರೆಗೂ ಸಮರ್ಥವಾಗಿ ಮಾಹಿತಿಯನ್ನು ಕೂಡಿಟ್ಟುಕೊಳ್ಳಬಲ್ಲ ಇಸಿರೇಮ್ ತಯಾರಿಸಿದ್ದಾರೆ. ಇದು ಒಂದು ಬ್ಯಾಟರಿಯಂತೆ. 'ಟಾಂಟಾಲಮ್' ಎನ್ನುವ ಲೋಹ ಮತ್ತು ಅದರ ಆಕ್ಸೈಡ್‌ಗಳ ಪೊರೆಗಳು ಇದರಲ್ಲಿ ಆನ್–ಆಫ್‌ಗಳಂತೆ ಕೆಲಸ ಮಾಡುತ್ತವೆ. ಇವೆರಡೂ ವಸ್ತುಗಳ ಪೊರೆಗಳ ನಡುವೆ 'ಯಿಟ್ರಿಯಂ' ಹಾಗೂ 'ಜಿರ್ಕೋನಿಯಂ' ಆಕ್ಸೈಡ್‌ಗಳ ಸಂಯುಕ್ತವಿರುತ್ತದೆ. ಟಾಂಟಾಲಮ್ ಆಕ್ಸೈಡ್ ಇರುವ ಬದಿಗೆ ವಿದ್ಯುತ್ತು ಪೂರೈಸಿದಾಗ, ಆಕ್ಸೈಡಿನಲ್ಲಿರುವ ಆಕ್ಸಿಜನ್ ಅಣುಗಳು ಅಲ್ಲಿಂದ ದೂರ ಸರಿಯುತ್ತವೆ. ಇದೇ ನೆನಪನ್ನು ಸಂಗ್ರಹಿಸುವ ವಿಧಾನ.

ಆಕ್ಸಿಜನ್ ಸರಿಯುವುದರಿಂದ, ಆ ಜಾಗದಲ್ಲಿ ವಿದ್ಯುತ್ತಿನ ಹರಿವು ಸರಾಗವಾಗಿ ಆಗುವುದಿಲ್ಲ. ವಿದ್ಯುತ್ ಹರಿವಿನ ವೇಗಕ್ಕೂ ಪೂರೈಸಿದ ವಿದ್ಯುತ್ತಿನ ಪ್ರಮಾಣಕ್ಕೂ ಸಂಬಂಧವಿರುವುದರಿಂದ, ಎಲ್ಲೆಲ್ಲಿ ಈ ನೆನಪು ಇದೆ ಎಂಬುದನ್ನು ವೋಲ್ಟೇಜನ್ನು ಪತ್ತೆ ಮಾಡುವುದರ ಮೂಲಕ ತಿಳಿಯಬಹುದು. ಈ ರೀತಿಯಲ್ಲಿ ರೂಪಿಸಿದ ಇಸಿರೇಮ್ ಪೊರೆಯನ್ನು ಲೀ ತಂಡ ಪರಿಶೀಲಿಸಿತು. ವಿವಿಧ ತಾಪಮಾನದಲ್ಲಿ ಅದರಲ್ಲಿ ಎಷ್ಟು ನೆನಪು ಉಳಿಯುತ್ತದೆ ಎಂದು ಗಮನಿಸಿತು. ನೆನಪನ್ನು ವಿದ್ಯುತ್ ಹರಿಸುವ ಮೂಲಕ ಪತ್ತೆ ಮಾಡಬಹುದು. ಆರುನೂರು ಡಿಗ್ರಿ ಉಷ್ಣಾಂಶದವರೆಗೂ ಈ ಇಸರೇಮ್‌ನಲ್ಲಿ ವಿದ್ಯುತ್ ಹರಿವಿಗೆ ಅಡ್ಡಿ ಇದ್ದೇ ಇತ್ತು. ಅಂದರೆ ಅಲ್ಲಿಯವರೆವಿಗೂ ಇದು ನೆನಪನ್ನು ಕೂಡಿಟ್ಟುಕೊಂಡಿತ್ತು ಎಂದರ್ಥ.

ಈ ಸಾಧನವನ್ನು ತಯಾರಿಸುವುದಕ್ಕೂ ಸಾಧಾರಣ ಎಲೆಕ್ಟ್ರಾನಿಕ್ಸ್ ಚಿಪ್‌ಗಳನ್ನು ತಯಾರಿಸುವ ವಿಧಾನವೇ ಸಾಕು. ಆದರೆ ನೆನಪನ್ನು ಬರೆಯುವ ಹಾಗೂ ಅದನ್ನು ಓದುವ ಸಾಧನಗಳನ್ನು ರೂಪಿಸಬೇಕು ಎನ್ನುತ್ತಾರೆ ಲೀ. ಅದು ಆದ ಮೇಲೆ ಈ ಬಗೆಯ ಮೆಮೊರಿ ಸಾಧನಗಳನ್ನು ಅತಿ ಉಷ್ಣವಿರುವ ಪರಿಸರದಲ್ಲಿ ಬಳಸಬೇಕಾದ ಯಂತ್ರಗಳಲ್ಲಿ ಬಳಸಬಹುದು ಎನ್ನುವುದು ಇವರ ತರ್ಕ.

ಅಗ್ನಿಯ ನಂದಿಸಲು ತಂತ್ರಜ್ಞಾನದ ನೀರು

ಕೃಷ್ಣ ಭಟ್

ಲಾಸ್ ಏಂಜಲೀಸ್‌ನಲ್ಲಿ ಸಾವಿರಗಟ್ಟಲೆ ಎಕರೆ ಪ್ರದೇಶ ಬೆಂಕಿಗಾಹುತಿಯಾಗಿದೆ. ಅಲ್ಲಿ ಇನ್ನೂ ಬೆಂಕಿ ಹರಡುತ್ತಲೇ ಇದೆ. ಜೊತೆಗೆ, ಬೆಂಕಿಯನ್ನು ನಂದಿಸಲು ಹರಸಾಹಸ ನಡೆಯುತ್ತಲೇ ಇದೆ. ಈ ಎಲ್ಲ ಪ್ರಯತ್ನಗಳಿಗೂ ತಂತ್ರಜ್ಞಾನದ ನೆರವು ಇಲ್ಲದಿದ್ದರೆ, ಬೆಂಕಿ ನಂದಿಸುವುದಕ್ಕೆ ಇಷ್ಟೂ ಯಶಸ್ಸು ಸಿಗುತ್ತಿರಲಿಲ್ಲ.

ಈ ಒಟ್ಟು ಪ್ರಯತ್ನದಲ್ಲಿ ಹಲವು ಸಲಕರಣೆಗಳು ಸಹಾಯ ಮಾಡುತ್ತಿವೆ. ಡ್ರೋನ್‌ಗಳು, ಸೂಪರ್ ಸ್ಕೂಪರ್ ವಿಮಾನಗಳು, ಸೆನ್ಸರ್‌ಗಳು ಅತ್ಯಂತ ಮಹತ್ವದ ಸಾಧನಗಳ ರೀತಿ ಕೆಲಸ ಮಾಡುತ್ತಿದ್ದರೆ, ಇವುಗಳ ಡೇಟಾಗಳನ್ನು ಬಳಸಿಕೊಂಡ ಆರ್ಟಿಫಿಶಿಯಲ್ ಇಂಟಲಿಜೆನ್ಸ್ ತುಂಬಾ ಬೇಗ ಎಲ್ಲೆಲ್ಲಿ ಮುಂದೆ ಬೆಂಕಿ ಹರಡಬಹುದು ಎಂಬುದನ್ನು ಪತ್ತೆ ಮಾಡಲು ಸಹಾಯ ಮಾಡುತ್ತಿದೆ. ಸೆನ್ಸರ್‌ಗಳಂತೂ ಎಲ್ಲಿ ಬಿಸಿ ಹೆಚ್ಚಾಗುತ್ತಿವೆ, ಎಲ್ಲಿ ಹೊಗೆ ಏಳುತ್ತಿದೆ ಎಂಬುದನ್ನು ಕಿಲೋಮೀಟರುಗಳಷ್ಟು ದೂರದಿಂದಲೇ ಪತ್ತೆ ಮಾಡಬಲ್ಲವು. ಇಂಥ ಹಲವು ಸೆನ್ಸರ್‌ಗಳನ್ನು ಅಲ್ಲಲ್ಲಿ ಅಳವಡಿಸಿರುವ ಖಾಸಗಿ ಕಂಪೆನಿಗಳು, ಇದರ ಡೇಟಾವನ್ನು ಅಲ್ಲಿನ ಅಗ್ನಿಶಾಮಕ ಇಲಾಖೆಗೆ ಕಳುಹಿಸುತ್ತಿವೆ.

ಕಳೆದ ವರ್ಷವಷ್ಟೇ ಕ್ಯಾಲಿಫೋರ್ನಿಯಾದಲ್ಲಿ ಸಾವಿರಗಟ್ಟಲೆ ಕ್ಯಾಮೆರಾಗಳನ್ನು ಅಳವಡಿಸಿ ಅವುಗಳೆಲ್ಲದರ ಡೇಟಾವನ್ನು ಒಂದೇ ಕಡೆ ಸಿಗುವಂಥ 'ಅಲರ್ಟ್‌ಕ್ಯಾಲಿಫೋರ್ನಿಯಾ' ಎಂಬ ಪ್ರಾಜೆಕ್ಟ್ ಒಂದನ್ನು ಜಾರಿಗೊಳಿಸಲಾಗಿತ್ತು. ಇದರ ಮೂಲ ಉದ್ದೇಶವೇ ಬೆಂಕಿ ಹರಡುವುದನ್ನು ತಡೆಯುವುದಕ್ಕೆ ಸಹಾಯ ಮಾಡುವುದಾಗಿದೆ. ಈ ವ್ಯವಸ್ಥೆಯಲ್ಲಿ 1080 ಕ್ಯಾಮೆರಾಗಳು ಹಾಗೂ ಸೆನ್ಸರ್‌ಗಳಿವೆ. ಈ ಕ್ಯಾಮೆರಾಗಳು ಎಷ್ಟು ಅತ್ಯಾಧುನಿಕವೆಂದರೆ, ಇವು 360 ಡಿಗ್ರಿ ತಿರುಗುತ್ತವೆ. ಪ್ರತಿ ಎರಡು ನಿಮಿಷಕ್ಕೆ ಒಮ್ಮೆ 360 ಡಿಗ್ರಿ ತಿರುಗಿ ಅದರ ಚಿತ್ರಣವನ್ನು ಸೆರೆಹಿಡಿಯುತ್ತವೆ. ಅಲ್ಲದೆ, ಇದರ ಹೈ ಡೆಫಿನಿಶನ್ ಎಷ್ಟು ನಿಖರವಾಗಿದೆ ಎಂದರೆ, ಒಂದು ಕ್ಯಾಮೆರಾ ತನ್ನಿಂದ 60 ಮೈಲುಗಳ ದೂರದವರೆಗಿನ ಹವಾಮಾನವನ್ನು ಗ್ರಹಿಸಬಲ್ಲದು. ಇನ್‌ಫ್ರಾರೆಡ್ ಕೂಡ ಇರುವುದರಿಂದ ರಾತ್ರಿ ಕೂಡ ಇಷ್ಟೇ ನಿಖರವಾದ ದೃಶ್ಯ ಹಾಗೂ ಮಾಹಿತಿಯನ್ನು ಈ ಕ್ಯಾಮೆರಾಗಳನ್ನು ಬಳಸಿ ಪಡೆಯಬಹುದು. ಇದು ಹಾರ್ಡ್‌ವೇರ್ ಆದರೆ, ಇದನ್ನು ದಕ್ಷವಾಗಿ ನಿರ್ವಹಣೆ ಮಾಡುತ್ತಿರುವುದು ಆರ್ಟಿಫಿಶಿಯಲ್ ಇಂಟಲಿಜೆನ್ಸ್. ಈ ಕ್ಯಾಮೆರಾಗಳು ಒದಗಿಸುವ ಡೇಟಾವನ್ನು ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಬಳಸಿಕೊಂಡು ವಿಶ್ಲೇಷಣೆ ಮಾಡಲಾಗುತ್ತದೆ. ಆಗ ನಿಖರವಾಗಿ ಅಗ್ನಿ ಅನಾಹುತ ಮತ್ತು ಅದು ಯಾವ ಕಡೆಗೆ ಹರಡಬಹುದು ಎಂಬುದನ್ನು ಸುಲಭವಾಗಿ ಪತ್ತೆ ಮಾಡಬಹುದು. ಇದನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ ಕೇವಲ ಎರಡೇ ತಿಂಗಳುಗಳಲ್ಲಿ 77 ಅಗ್ನಿ ಅನಾಹುತ ಸಾಧ್ಯತೆಯನ್ನು ನಿಖರವಾಗಿ ಇದು ಪತ್ತೆ ಮಾಡಿದೆ.

ಲಾಸ್ ಏಂಜಲೀಸ್‌ನಲ್ಲಿ ಬೆಂಕಿ ಹೊತ್ತಿಕೊಂಡು ಉರಿಯಲು ಶುರುವಾದಾಗಿನಿಂದಲೂ ಸೂಪರ್ ಸ್ಕೂಪರ್‌ಗಳು ಭಾರಿ ಸುದ್ದಿ ಮಾಡುತ್ತಿವೆ. ಈ ಅತ್ಯಾಧುನಿಕ ಹೆಲಿಕಾಪ್ಟರ್‌ಗಳು ಹೊಸದೇನೂ ಅಲ್ಲದಿದ್ದರೂ, ಇವುಗಳ ಬಳಕೆಯೇ ಅತ್ಯಂತ ಅಪರೂಪ ಹಾಗೂ ಇವುಗಳ ಸಂಖ್ಯೆಯೂ ಕಡಿಮೆಯೇ. ಈ ಹೆಲಿಕಾಪ್ಟರುಗಳನ್ನು ಕೆನಡಾದ ಒಂದು ಕಂಪೆನಿ ಮಾತ್ರ ಉತ್ಪಾದನೆ ಮಾಡುತ್ತದೆ. ಇಡೀ ವಿಶ್ವದಲ್ಲಿ ಲಭ್ಯವಿರುವ ಸೂಪರ್ ಸ್ಕೂಪರ್‌ಗಳೇ ಐದೋ ಆರೋ. ಲಾಸ್ ಏಂಜಲೀಸ್‌ನಲ್ಲಿ ಎರಡು ಸೂಪರ್ ಸ್ಕೂಪರ್‌ಗಳು ಕೆಲಸ ಮಾಡುತ್ತಿವೆ. ಇನ್ನು ಕೆಲವು ದಿನಗಳಲ್ಲಿ ಇನ್ನೂ ಎರಡು ಹೆಲಿಕಾಪ್ಟರುಗಳನ್ನು ಬಾಡಿಗೆಗೆ ತರುತ್ತೇವೆ ಎಂದು ಇಲ್ಲಿನ ಆಡಳಿತ ಹೇಳಿಕೊಂಡಿದೆ.

ಸೂಪರ್ ಸ್ಕೂಪರ್‌ಗಳು ಅಗ್ನಿಯನ್ನು ನಂದಿಸುವಲ್ಲಿ ಎಷ್ಟು ಪರಿಣಾಮಕಾರಿ ಎಂದರೆ, ಒಂದೇ ಬಾರಿಗೆ 3-4 ಸಾವಿರ ಗ್ಯಾಲನ್ ನೀರನ್ನು ಆಕಾಶದಿಂದ ಸುರಿಸಬಲ್ಲವು. ಈ ಹೆಲಿಕಾಪ್ಟರ್ ಒಮ್ಮೆ ನೀರು ಸುರಿದು ಹಾರಿಹೋದರೆ ಒಂದು ದೊಡ್ಡ ಮಳೆ ಬಂದ ಹಾಗೆ ಭಾಸವಾಗುತ್ತದೆ. ಸೂಪರ್ ಸ್ಕೂಪರ್‌ನಲ್ಲಿ ನಾಲ್ಕು ಕಡೆಗಳಿಂದ ನೀರನ್ನು ಹೊರಹಾಕಲು ಅವಕಾಶ ಇವೆ. ಇವು ಒಂದೇ ಬಾರಿಗೆ 16 ಸಾವಿರ ಗ್ಯಾಲನ್‌ನಷ್ಟು ನೀರನ್ನು ಹೊತ್ತೊಯ್ದು ಬೆಂಕಿ ಇದ್ದಲ್ಲಿ ಸುರಿದು ಬರಬಲ್ಲವು. ಇಷ್ಟು ದೊಡ್ಡ ಮಟ್ಟದಲ್ಲಿ ಇದಕ್ಕೆ ನೀರನ್ನು ತುಂಬಿಸಲು ಗಂಟೆಗಟ್ಟಲೆ ಸಮಯವನ್ನು ಕಳೆಯುವ ಅಗತ್ಯವೂ ಇಲ್ಲ. ನೂರಕ್ಕೂ ಹೆಚ್ಚು ಕಿ.ಮೀ ವೇಗದಲ್ಲಿ ಕೆರೆಯ ಮೇಲೆ ಹಾರಿ ಹೋಗುತ್ತಲೇ ನೀರನ್ನು ಹೀರಿಕೊಂಡು ಟ್ಯಾಂಕಿಗೆ ಹಾಕಿಕೊಳ್ಳುವ ಅತ್ಯಾಧುನಿಕ ಸೌಲಭ್ಯವೂ ಇದರಲ್ಲಿದೆ. ಒಂದು ಮನೆಯೋ ಅಥವಾ ಕಟ್ಟಡವೋ ಹೊತ್ತಿ ಉರಿಯುತ್ತಿದೆ ಎಂದಾದರೆ, ಹಾರುತ್ತಲೇ ಕೇವಲ ನಾಲ್ಕು ಸೆಕೆಂಡಿಗೆ ಮೂರು ಸಾವಿರ ಗ್ಯಾಲನ್ ನೀರನ್ನು ಇದು ಸುರಿಯಬಲ್ಲದು. ಅಷ್ಟೇ ಅಲ್ಲ, ನೀರಿನ ಜೊತೆಗೆ ಫೋಮ್ ಅನ್ನು ಕೂಡ ಸೇರಿಸಿ ಇದು ಹೊರಬಿಡಬಹುದು. ಇಷ್ಟು ನೀರು ಹಾಗೂ ಫೋಮ್ ಒಂದೇ ಸಮನೆ ಎತ್ತರದಿಂದ ಸುರಿದರೆ ಎಂಥ ಬೆಂಕಿಯಾದರೂ ನಂದಿಹೋಗುತ್ತದೆ. ಈ ಸೂಪರ್ ಸ್ಕೂಪರ್‌ಗಳು ನೀರನ್ನು ತುಂಬಿಸಿಕೊಂಡು, ಸುರಿಸುವುದನ್ನು ನೋಡುವುದೇ ಈ ಕಾಲದ ಒಂದು ಅಚ್ಚರಿಯೂ ಹೌದು.

ಇನ್ನು ಇಡೀ ಲಾಸ್ ಏಂಜಲೀಸ್ ಅಗ್ನಿ ಅನಾಹುತದಲ್ಲಿ ಡ್ರೋನ್‌ಗಳ ನೆರವೇನೂ ಕಡಿಮೆಯದ್ದಲ್ಲ. ಮನುಷ್ಯರೇ ಬೆಂಕಿಯ ಬಳಿ ಹೋಗಿ ಸನ್ನಿವೇಶವನ್ನು ಅಳೆಯಲು ಸಾಧ್ಯವಿಲ್ಲದ ಸಮಯದಲ್ಲಿ ಈ ಡ್ರೋನ್‌ಗಳು ತುಂಬಾ ನೆರವಾಗುತ್ತಿವೆ. ಜಿಲ್ಲಾಡಳಿತಗಳು ಡ್ರೋನ್‌ಗಳನ್ನು ಬಳಸಿ ಪರಿಸ್ಥಿತಿಯನ್ನು ಅವಲೋಕಿಸುವುದರ ಜೊತೆಗೆ ಖಾಸಗಿ ವ್ಯಕ್ತಿಗಳು ಹಾಗೂ ಸಂಘ ಸಂಸ್ಥೆಗಳೂ ಕೂಡ ಡ್ರೋನ್‌ಗಳನ್ನು ಹಾರಿಸಿ ಪರಿಸ್ಥಿತಿಯ ಬಗ್ಗೆ ವರದಿ ಮಾಡುತ್ತಿವೆ.

ಡ್ರೋನ್‌ಗಳಲ್ಲಿ ಹಲವು ವಿಧಗಳಿವೆ. ಬಹುತೇಕ ಡ್ರೋನ್‌ಗಳು ಕ್ಯಾಮೆರಾ ಬಳಸಿದರೆ, ಕೆಲವು ಡ್ರೋನ್‌ಗಳು ಸಾಮಾನ್ಯ ಥರ್ಮಲ್ ಕ್ಯಾಮೆರಾಗಳನ್ನು ಬಳಸುತ್ತಿವೆ. ಈ ಥರ್ಮಲ್ ಕ್ಯಾಮೆರಾಗಳು ಉಷ್ಣತೆ ಹಾಗೂ ತಾಪಮಾನವನ್ನು ವರದಿ ಮಾಡುತ್ತವೆ. ಇನ್ನು ಕೆಮಿಕಲ್ ಸೆನ್ಸರ್‌ಗಳನ್ನು ಹೊಂದಿರುವ ಡ್ರೋನ್‌ಗಳೂ ಕಾರ್ಯಾಚರಣೆ ಮಾಡುತ್ತಿವೆ. ಈ ಕೆಮಿಕಲ್ ಸೆನ್ಸರ್ ಇರುವ ಕ್ಯಾಮೆರಾಗಳು ಸುಟ್ಟ ವಾಸನೆಯನ್ನು ಗ್ರಹಿಸುವ ರೀತಿಯಲ್ಲೇ ಕೆಲಸ ಮಾಡುತ್ತವೆ.

ಆದರೆ, ಡ್ರೋನ್‌ಗಳ ಅನುಕೂಲದ ಜೊತೆಗೆ ಅನನುಕೂಲವೂ ಆಗುತ್ತಿದೆ. ಖಾಸಗಿ ವ್ಯಕ್ತಿಗಳೂ ಕೂಡ ಡ್ರೋನ್‌ಗಳನ್ನು ಹಾರಿಸುತ್ತಿರುವುದರಿಂದ, ಅವುಗಳ ಸಂಖ್ಯೆಯನ್ನು ನಿಯಂತ್ರಿಸಲಾಗುತ್ತಿಲ್ಲ. ಅಷ್ಟೇ ಅಲ್ಲ, ಯಾವುದೋ ಒಬ್ಬ ವ್ಯಕ್ತಿ ಹಾರಿಸಿದ ಡ್ರೋನ್ ಒಂದು ಸೂಪರ್ ಸ್ಕೂಪರ್‌ಗೆ ಡಿಕ್ಕಿ ಹೊಡೆದು ಬೆಂಕಿ ನಂದಿಸುವ ಕಾರ್ಯಕ್ಕೂ ಅಡ್ಡಿಯಾಗಿದೆ. ಹೀಗಾಗಿ, ಅಲ್ಲಿ ಅನಧಿಕೃತವಾಗಿ ಡ್ರೋನ್ ಹಾರಿಸುವವರನ್ನು ನಿಯಂತ್ರಿಸುವ ಕೆಲಸವನ್ನೂ ಮಾಡಲಾಗುತ್ತಿದೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ–

12) ಕೋಶೀಯ ರಚನೆಗಳ ಮೇಲಿನ ಡಿಎನ್‌ಎಗಳ ನಿಯಂತ್ರಣ ಅಸ್ತವ್ಯಸ್ಥಗೊಳಿಸುವ ಸಂಭವವು ಯಾವುದರಿಂದ ಆಗಬಹುದಾಗಿದೆ?

ಉತ್ತರ:– ಪ್ರತಿ ಹೊಸ ಪೀಳಿಗೆಯು ಈ ಮೊದಲೇ ಅಸ್ತಿತ್ವದಲ್ಲಿರುವ ಜೀವಿಗಳ ಡಿಎನ್‌ಎ ಪ್ರತಿಗಳ ಸಂಯೋಜನೆಯಿಂದ ಉಂಟಾದ ಪಕ್ಷದಲ್ಲಿ ಪ್ರತಿ ಹೊಸ ಪೀಳಿಗೆಯು ಹಿಂದಿನ ಪೀಳಿಗೆ ಹೊಂದಿರುವುದಕ್ಕಿಂತ ಎರಡು ಪಟ್ಟು ಹೆಚ್ಚು ಪ್ರಮಾಣದ ಡಿಎನ್‌ಎಯನ್ನು ಹೊಂದಿರಬೇಕಾಗುತ್ತದೆ. ಇದರಿಂದ ಕೋಶೀಯ ರಚನೆಗಳ ಮೇಲಿನ ಡಿಎನ್‌ಎಗಳ ನಿಯಂತ್ರಣ ಅಸ್ತವ್ಯಸ್ಥಗೊಳಿಸುವ ಸಂಭವವಿರುತ್ತದೆ

13) ಕೆಳಗಿನ ವಿದ್ಯುತ್ ಮಂಡಳವನ್ನು ಗಮನಿಸಿ



'R' Ω ರೋಧವಿರುವ ತಂತಿಯನ್ನು 'X' ಮತ್ತು 'Y' ಗಳ ನಡುವೆ ಸಂಪರ್ಕಿಸಿದಾಗ ಅಮ್ಮೀಟರ್‌ನ ಸೂಚ್ಯಂಕ 3A ಆಗಿದೆ. ಇದೇ ಮಂಡಲದಲ್ಲಿ 'R' Ω ರೋಧವಿರುವ ತಂತಿಯನ್ನು '2R' Ω ರೋಧವಿರುವ ತಂತಿಯಿಂದ ಬದಲಾಯಿಸಿದಾಗ, ಅಮ್ಮೀಟರ್‌ನ ಸೂಚ್ಯಂಕವನ್ನು ಊಹಿಸಿ. ನಿಮ್ಮ ಉತ್ತರಕ್ಕೆ ವೈಜ್ಞಾನಿಕ ಕಾರಣ ನೀಡಿ.

ಉತ್ತರ

$R = R\Omega$

$I = 3A$ ಆದರೆ,

$\therefore V = IR$

$V = (3A)R$

$= 3R$

$R\Omega$ ಅನ್ನು $2R\Omega$ ನಿಂದ ಬದಲಾಯಿಸಿದಾಗ,

$R = 2R\Omega$

$I = ?$

$V = 3R$

$V = IR$

$I = \frac{V}{R} = \frac{3R}{2R} =$

$= \frac{3}{2}$

$= 1.5A$

ಅಮ್ಮೀಟರ್‌ನ ಸೂಚ್ಯಂಕವು 1·5 A

ಕಾರಣ : ರೋಧವನ್ನು ದ್ವಿಗುಣಗೊಳಿಸಿದರೆ ವಿದ್ಯುತ್‌ಪ್ರವಾಹ ಅರ್ಧದಷ್ಟಾಗುತ್ತದೆ.

14) ಯಾವುದಕ್ಕೆ ಉಭಯಧರ್ಮಿ (amphoteric) ಆಕ್ಸೈಡ್‌ಗಳು ಎನ್ನುವರು?

ಉತ್ತರ:– ಅಲ್ಯುಮಿನಿಯಂ ಆಕ್ಸೈಡ್, ಸತುವಿನ ಆಕ್ಸೈಡ್‌ಗಳಂಥ ಕೆಲವು ಲೋಹದ ಆಕ್ಸೈಡ್‌ಗಳು ಆಮ್ಲೀಯ ಹಾಗೂ ಪ್ರತ್ಯಾಮ್ಲೀಯ ಗುಣಗಳೆರಡನ್ನೂ ಪ್ರದರ್ಶಿಸುತ್ತವೆ. ಇಂತಹ ಲೋಹದ ಆಕ್ಸೈಡ್‌ಗಳು ಆಮ್ಲ ಮತ್ತು ಪ್ರತ್ಯಾಮ್ಲಗಳೆರಡರ ಜೊತೆಗೂ ಪ್ರತಿವರ್ತಿಸಿದಾಗ ಲವಣ ಮತ್ತು ನೀರನ್ನು ಉತ್ಪತ್ತಿ ಮಾಡುತ್ತವೆ. ಇವುಗಳಿಗೆ ಉಭಯಧರ್ಮಿ (amphoteric) ಆಕ್ಸೈಡ್‌ಗಳು ಎನ್ನುವರು.

19) ಅಯಾನಿಕ ಸಂಯುಕ್ತಗಳ ಗುಣಲಕ್ಷಣಗಳನ್ನು ಬರೆಯಿರಿ

ಉತ್ತರ:– ಅಯಾನಿಕ ಸಂಯುಕ್ತಗಳ ಸಾಮಾನ್ಯ ಗುಣಲಕ್ಷಣಗಳು ಹೀಗಿವೆ

(i) **ಭೌತ ಸ್ಥಿತಿ** : ಅಯಾನಿಕ ಸಂಯುಕ್ತಗಳು ಘನವಸ್ತುಗಳಾಗಿದ್ದು, ಧನ ಮತ್ತು ಋಣ ಅಯಾನುಗಳ ನಡುವೆ ಇರುವ ಪ್ರಬಲ ಆಕರ್ಷಣ ಬಲದಿಂದಾಗಿ ಸ್ವಲ್ಪ ಮಟ್ಟಿಗೆ ಕಠಿಣವಾಗಿರುತ್ತವೆ. ಈ ಸಂಯುಕ್ತಗಳು ಸಾಮಾನ್ಯವಾಗಿ ಬಿಧುರವಾಗಿದ್ದು ಒತ್ತಡವನ್ನು ಹಾಕಿದಾಗ ಪುಡಿಯಾಗುತ್ತವೆ.

(ii) **ಕರಗುವ ಮತ್ತು ಕುದಿಬಿಂದುಗಳು** : ಅಯಾನಿಕ ಸಂಯುಕ್ತಗಳು ಹೆಚ್ಚಿನ ಕರಗುವ ಬಿಂದು ಮತ್ತು ಕುದಿಬಿಂದುಗಳನ್ನು ಹೊಂದಿವೆ. ಏಕೆಂದರೆ ಅಣುಗಳ ನಡುವಿನ ಪ್ರಬಲ ಅಯಾನಿಕ್ ಬಂಧವನ್ನು ಒಡೆಯಲು ಹೆಚ್ಚಿನ ಶಕ್ತಿ ಬೇಕಾಗುತ್ತದೆ.

(iii) **ವಿಲೀನತೆ** : ಅಯಾನಿಕ ಸಂಯುಕ್ತಗಳು ಸಾಮಾನ್ಯವಾಗಿ ನೀರಿನಲ್ಲಿ ವಿಲೀನವಾಗುತ್ತವೆ. ಮತ್ತು ಸಾವಯವ ದ್ರಾವಕಗಳಾದ ಸೀಮೆಎಣ್ಣೆ, ಪೆಟ್ರೋಲ್ ಇತ್ಯಾದಿಗಳಲ್ಲಿ ವಿಲೀನಗೊಳ್ಳುವುದಿಲ್ಲ.

(iv) **ವಿದ್ಯುದ್ವಾಹಕತೆ** : ಒಂದು ದ್ರಾವಣದ ಮೂಲಕ ವಿದ್ಯುತ್ತಿನ ಹರಿಯುವಿಕೆಯು ವಿದ್ಯುದಂಶಪೂರಿತ ಕಣಗಳ ಚಲನೆಯನ್ನು ಒಳಗೊಂಡಿದೆ. ಅಯಾನಿಕ ಸಂಯುಕ್ತದ ಜಲೀಯ ದ್ರಾವಣವು ಅಯಾನುಗಳನ್ನು ಹೊಂದಿದ್ದು ದ್ರಾವಣದ ಮೂಲಕ ವಿದ್ಯುತ್ ಹಾಯಿಸಿದಾಗ ಅವು, ವಿರುದ್ಧ ವಿದ್ಯುದ್ವಾರಗಳ ಕಡೆ ಚಲಿಸುತ್ತವೆ. ಘನಸ್ಥಿತಿಯಲ್ಲಿ ಅಯಾನಿಕ ಸಂಯುಕ್ತಗಳು ತಮ್ಮ ಮೂಲಕ ವಿದ್ಯುತ್ ಹರಿಯಲು ಬಿಡುವುದಿಲ್ಲ ಏಕೆಂದರೆ, ಘನವಸ್ತುಗಳ ಕಠಿಣ ರಚನೆಯಿಂದಾಗಿ ಅಯಾನುಗಳ ಚಲನೆ ಸಾಧ್ಯವಿಲ್ಲ. ಆದರೆ ದ್ರವಿಸಿದ ಸ್ಥಿತಿಯಲ್ಲಿ ಅಯಾನಿಕ ಸಂಯುಕ್ತಗಳು ತಮ್ಮ ಮೂಲಕ ವಿದ್ಯುತ್ ಹರಿಯಲು ಬಿಡುತ್ತವೆ. ಇದು ದ್ರವಿಸಿದ ಸ್ಥಿತಿಯಲ್ಲಿ ಸಾಧ್ಯವಾಗಲು ಕಾರಣವೇನೆಂದರೆ ವಿದ್ಯುದಂಶಪೂರಿತ, ವಿರುದ್ಧ ಅಯಾನುಗಳ ನಡುವಣ ವಿದ್ಯುದಾಕರ್ಷಣ ಬಲಗಳು ಉಷ್ಣತೆಗೆ ಒಡೆಯುತ್ತವೆ. ಹಾಗಾಗಿ ಅಯಾನುಗಳು ಸ್ವತಂತ್ರವಾಗಿ ಚಲಿಸುತ್ತವೆ ಮತ್ತು ವಿದ್ಯುತ್‌ಅನ್ನು ಹರಿಯಲು ಬಿಡುತ್ತವೆ.

15) ಅಮೀಬಾದ ಕೋಶವಿಭಜನೆಯ ಚಿತ್ರ ಬರೆಯಿರಿ

ಉತ್ತರ:–

16) ಲೈಂಗಿಕತೆಯ ಹಿನ್ನೆಲೆಯಲ್ಲಿ ಉಂಟಾಗುವ ರೋಗಗಳು ಯಾವುವು?

ಉತ್ತರ:– ಗೊನೋರಿಯಾ, ಸಿಫಿಲಿಸ್ ಮತ್ತು ಏಡ್ಸ್

18) ಪ್ಲನೇರಿಯ ಎಂಬ ಸರಳ ಜೀವಿಯ ಪುನರುತ್ಪಾದನೆಯ ಚಿತ್ರ ಬರೆಯಿರಿ

ಉತ್ತರ:–



(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

II PUC BIOLOGY

REVISION : MODEL QUESTIONS

32. Fill in the blanks by choosing the appropriate word/Words from those given below: (Competent cells, Bacteria, non-living molecule, vectors, Competent cells, Recombinant cells)

1. The interstitial space in seminiferous tubules consists of immunologically -------------

Ans:- Competent cells

2. The version of biogenesis is accepted by majority, as the first form of life arose slowly through evolutionary forces from ----------.

Ans:- non-living molecule

3. Filariasis pathogens are transmitted to a healthy person through -----------

Ans:- vectors,

4. Swiss cheese with large holes is produced from ------------

Ans:- Bacteria,

5. The host cells which have the ability to incorporate foreign DNA within them are called -----------

Ans:- Competent cells

33) Draw a neat and labelled diagram of the Graafian follicle.

Ans:- Graafian follicle



34. Name the technique involved in separation and isolation of DNA fragment. Which dye is used tostain get totheDNA visible under UV light?

Ans:- (a) GelElectrophoresis

(b) Ethidium bromide

35. Plant cells are totipotent. Why?

Ans:- The capacity of a cell explant to grow into a whole plant is called totipotency.

36. Define polymerase chain reaction.

Ans:- Polymerase chain reaction is a technique of amplifying a DNA fragment into 1000s of copies within a short time in vitro.

37.. What is test cross? Mention its significance.

Ans:- Test cross is a cross between an individual of unknown dominant genotype is crossed with the recessive parent to find out the homozygosity or heterozygosity. It is also used to test whether segregation of alleles takes place or not.

38. What is an allergy?

Ans:- The hypersensitive reaction of the immune system to certain antigens present in the environment is called allergy

39. Write a note on selection of plants among the progeny of the hybrids with desired recombination of characters.

Ans:- a) It involves the selection of plants among the progeny of the hybrids with desired recombination of characters.

b) The hybrid are superior to both the parents. This is called hybrid Vigour/heterosis.

c) They are self-pollinated for several generation till they reach a state of uniformity or homozygosity in order to avoid the segregation of characters in the future progency.

40. Draw a neat labelled diagram of stirred tank bioreactor .

Ans:-



41. One of the applications of biotechnology is the production of insect resistant crop plants, Justify the statement with reference to Bt. Cotton.

Ans:- Crops are made which are more tolerant to environmental stresses like cold, heat drought,salt etc.

Bt. Cotton -

a) Bacillus thuringensis produce crystal proteins called cry proteins which are toxic to larvae of insects like tobacco, budworm, army worm, beetles and mosquitoes.

b) Cry protein exist as inactive prototoxin and gets converted into active toxin when ingested by the insects, as the alkaline PH of the gut solubilises the crystals

c) The activated toxin binds to the surface of epithelial cells of midgut and creates pores.

(Contd…..)

‘ವಚನ’ ವಿಶ್ವವಿದ್ಯಾಲಯ ಸ್ಥಾಪಿಸಿ

ಸಾಣೇಹಳ್ಳಿ ಸ್ವಾಮೀಜಿಗೆ ಕಾಯಕಯೋಗಿ ಶ್ರೀ ಸಿದ್ದರಾಮೇಶ್ವರ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ಸರ್ಕಾರ ಘೋಷಣೆ ಮಾಡಿರುವುದು ಒಳ್ಳೆಯದು. ಬಸವಣ್ಣ ಅವರ ವಚನಗಳನ್ನು ಪ್ರಚಾರ ಪಡಿಸಲು ಸರ್ಕಾರ ‘ವಚನ’ ವಿಶ್ವವಿದ್ಯಾಲಯ ಸ್ಥಾಪಿಸಬೇಕು ಎಂದು ಸಾಣೇಹಳ್ಳಿ ಡಾ.ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ರವೀಂದ್ರ ಕಲಾಕ್ಷೇತ್ರದಲ್ಲಿ ಮಂಗಳವಾರ ಸಂಜೆ ಆಯೋಜಿಸಿದ್ದ ಸಿದ್ದರಾಮೇಶ್ವರ ಜಯಂತಿಯಲ್ಲಿ ‘ಕಾಯಕಯೋಗಿ ಶ್ರೀ ಸಿದ್ದರಾಮೇಶ್ವರ’ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು.

ಅಕಾಡೆಮಿಗಳು ಹಾಗೂ ಸಂಘ–ಸಂಸ್ಥೆಗಳಿಗೆ ಸರ್ಕಾರ ನೀಡುತ್ತಿರುವ ಅನುದಾನ ಕಡಿಮೆಯಾಗಿದೆ. ಸಾಂಸ್ಕೃತಿಕ ಕ್ಷೇತ್ರ ಹೆಚ್ಚು ಬೆಳೆದಷ್ಟೂ ಸಮಾಜ ಆರೋಗ್ಯವಾಗಿರುತ್ತದೆ. ಹಾಗಾಗಿ ಸಂಘ–ಸಂಸ್ಥೆ ಹಾಗೂ ಅಕಾಡೆಮಿಗಳಿಗೆ ಅನುದಾನ ಕಡಿಮೆ ಮಾಡಬಾರದು ಎಂದರು.

ಕನ್ನಡ ಸಂಸ್ಕೃತಿ ಉಳಿಯಬೇಕಾದರೆ ರಂಗಭೂಮಿ ಬೆಳೆಯಬೇಕು. ಕಲೆಯನ್ನು ಉಳಿಸುವ ಸಂಘ–ಸಂಸ್ಥೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸವಾಗಬೇಕು ಎಂದು ಶ್ರೀಗಳು ಸಲಹೆ ನೀಡಿದರು.

ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಾಣೇಹಳ್ಳಿ ಡಾ.ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ಎಸ್‌.ತಂಗಡಗಿ ‘ಕಾಯಕಯೋಗಿ ಶ್ರೀ ಸಿದ್ದರಾಮೇಶ್ವರ’ ಪ್ರಶಸ್ತಿ ನೀಡಿ ಗೌರವಿಸಿದರು. (ನಿಂತವರು ಎಡದಿಂದ) ಡಾ.ಎನ್‌.ಮಂಜುಳಾ, ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ರವಿಕುಮಾರ್, ದೇವಪ್ಪ ಮತ್ತು ರವಿ ಮಾಕಳಿ ಇದ್ದಾರೆ ಪ್ರಜಾವಾಣಿ ಚಿತ್ರ

ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ಎಸ್.ತಂಗಡಗಿ ಮಾತನಾಡಿ, ‘ಅಕಾಡೆಮಿ ಹಾಗೂ ಪ್ರಾಧಿಕಾರಿಗಳಿಗೆ ಅನುದಾನ ನೀಡಿಕೆ ವಿಚಾರದಲ್ಲಿ ಯಾವುದೇ ತಡವಾಗುವ ಪ್ರಶ್ನೆಯೇ ಇಲ್ಲ. ಅಕಾಡೆಮಿಗಳಿಗೆ ಹಿಂದಿನ ಸರ್ಕಾರಕ್ಕಿಂತ ಹೆಚ್ಚು ಅನುದಾನ ನೀಡಲಾಗುತ್ತಿದೆ’ ಎಂದರು.

ಅನುದಾನ ನೀಡಿಕೆ ವಿಚಾರದಲ್ಲಿ ತಡವಾಗುತ್ತಿದೆ ಎಂಬ ಸಾಣೇಹಳ್ಳಿ ಶ್ರೀಗಳ ಹೇಳಿಕೆಗೆ ಪ್ರತಿಕ್ರಿಯಿಸಿ, ‘ಈ ಹಿಂದೆ ಅಕಾಡೆಮಿಗಳಿಗೆ ನೇಮಕಾತಿಯನ್ನೇ ಮಾಡುತ್ತಿರಲಿಲ್ಲ. ನಾವು ಎಲ್ಲದ್ದಕ್ಕೂ ವೇಗ ನೀಡುವ ಕೆಲಸ ಮಾಡಿದ್ದೇವೆ. ಅನುದಾನ ನೀಡಿಕೆ ವಿಚಾರದಲ್ಲಿ ತಾಂತ್ರಿಕ ಸಮಸ್ಯೆಗಳಾಗಿದ್ದರೆ ಅದನ್ನು ಬಗೆಹರಿಸಲಾಗುವುದು’ ಎಂದು ಹೇಳಿದರು.

ಭೋವಿ ಸಮುದಾಯದಲ್ಲಿ ಹೋರಾಟದ ಶಕ್ತಿ ಇದ್ದು, ಎಲ್ಲರೂ ಒಗ್ಗಟ್ಟಾಗಿ ಸಮಾಜದ ಏಳ್ಗೆಗೆ ಹೋರಾಟ ನಡೆಸುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

12ನೇ ಶತಮಾನದಲ್ಲಿ ಸಿದ್ದರಾಮೇಶ್ವರರು ಸಭಾಪತಿಯಾಗಿ ಕಾರ್ಯ ಮಾಡಿದವರು. ಸಿದ್ದರಾಮೇಶ್ವರರು, ಬಸವಣ್ಣ, ಡಾ.ಬಿ.ಆರ್.ಅಂಬೇಡ್ಕರ್, ಕನಕದಾಸರಂತಹ ಮಹನೀಯರು ಯಾವುದೇ ಒಂದು ಸಮಾಜಕ್ಕೆ ಸೀಮಿತ ವಾದವರಲ್ಲ. ಇಡೀ ಸಮಾಜಕ್ಕೆ ಸೇರಿದವರು. ಇವರ ತತ್ವ ಸಿದ್ಧಾಂತ, ಆದರ್ಶಗಳು ಇಡೀ ಸಮಾಜಕ್ಕೆ ಆದರ್ಶವಾಗಿದೆ ಎಂದರು.

ಸಾಣೇಹಳ್ಳಿ ಶ್ರೀಗಳಿಗೆ ಪ್ರಶಸ್ತಿ ಕೊಟ್ಟಿದ್ದಕ್ಕೆ ಪ್ರಶಸ್ತಿಯ ಗೌರವ ಹೆಚ್ಚಾಗಿದೆ. ಪ್ರಶಸ್ತಿ ಆಯ್ಕೆ ವಿಚಾರದಲ್ಕಿ ಯಾವುದೇ ಪ್ರಭಾವ ಇರುವುದಿಲ್ಲ. ಸಮಾಜಕ್ಕೆ ನೇರವಾಗಿ ವಿಷಯವನ್ನು ತಿಳಿಸುವ ವ್ಯಕ್ತಿತ್ವ ಸಾಣೇಹಳ್ಳಿ ಶ್ರೀಗಳದ್ದಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಭೋವಿ ನಿಗಮದ ಅಧ್ಯಕ್ಷ ರವಿಕುಮಾರ್, ಸಾಹಿತಿ ಪ್ರೊ.ಎಸ್.ಜಿ. ಸಿದ್ದರಾಮಯ್ಯ, ಇಲಾಖೆ ಕಾರ್ಯದರ್ಶಿ ಡಾ.ಎನ್.ಮಂಜುಳಾ, ನಿರ್ದೇಶಕಿ ಡಾ.ಧರಣಿದೇವಿ ಮಾಲಗತ್ತಿ, ಕೆಪಿಎಸ್‌ಸಿ ಸದಸ್ಯ ದೇವಪ್ಪ ಹಾಗೂ ರವಿ ಮಾಕಳಿ, ಡಾ.ಚಂದ್ರಶೇಖರ್, ರವಿಪೂಜಾರ್ ಹಾಜರಿದ್ದರು.

ಧರ್ಮಸ್ಥಳ: ಉಚಿತ ಸಾಮೂಹಿಕ ವಿವಾಹ ಮೇ 3ರಂದು

ಪ್ರಜಾವಾಣಿ ವಾರ್ತೆ

ಧರ್ಮಸ್ಥಳ (ದಕ್ಷಿಣ ಕನ್ನಡ): ಧರ್ಮಸ್ಥಳ ಕ್ಷೇತ್ರದಲ್ಲಿ ಮೇ 3ರಂದು ಉಚಿತ ಸಾಮೂಹಿಕ ವಿವಾಹ ನಡೆಯಲಿದೆ.

ವರನಿಗೆ ಧೋತಿ, ಶಾಲು ಮತ್ತು ವಧುವಿಗೆ ಸೀರೆ, ರವಿಕೆ ಕಣ, ಮಂಗಳಸೂತ್ರ ಹಾಗೂ ಹೂವಿನಹಾರ ನೀಡಲಾಗುವುದು. ಮದುವೆಯ ಎಲ್ಲ ವೆಚ್ಚವನ್ನು ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್ ವತಿಯಿಂದ ಭರಿಸಲಾಗುವುದು.

ಸಾಮೂಹಿಕ ವಿವಾಹದಲ್ಲಿ ಮದುವೆ ಆಗಲಿಚ್ಛಿಸುವವರು 2025ರ ಏ.25ರೊಳಗೆ ಸವಿವರ ಮಾಹಿತಿ ಹಾಗೂ ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ ದೂ: 08256-266644, ವಾಟ್ಸ್‌ಆ್ಯಪ್ ನಂ.9663464648, 8147263422 ಸಂಪರ್ಕಿಸಬಹುದು.

ವರದಕ್ಷಿಣೆ ಹಾಗೂ ಮದುವೆಯ ದುಂದುವೆಚ್ಚ ತಡೆಯಲು ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರು 1972ರಲ್ಲಿ ಉಚಿತ ಸಾಮೂಹಿಕ ವಿವಾಹ ಆರಂಭಿಸಿದ್ದರು. ಈವರೆಗೆ 12,900 ಜೋಡಿಗಳು ಇಲ್ಲಿ ಮದುವೆಯಾಗಿದ್ದಾರೆ ಎಂದು ಕ್ಷೇತ್ರದ ಪ್ರಕಟಣೆ ತಿಳಿಸಿದೆ.

‘ಕಾಯಕ ಜೀವಿಗೆ ಬಡತನವಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುರು ಸಿದ್ದರಾಮೇಶ್ವರರು ಕಾಯಕದ ಮೂಲಕ ಪವಾಡ ಸೃಷ್ಟಿಸಿದವರು. ಕಾಯಕ ಮಾಡುವವರಿಗೆ ಯಾವತ್ತೂ ಬಡತನ ಬರುವುದಿಲ್ಲ ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದ ಅರಮನೆ ಮೈದಾನದಲ್ಲಿ ‘ನೊಳಂಬ ಲಿಂಗಾಯತ ಸಂಘ’ ಏರ್ಪಡಿಸಿದ್ದ ಗುರು ಸಿದ್ದರಾಮೇಶ್ವರರ 852ನೇ ಜಯಂತಿ ಕಾರ್ಯಕ್ರಮದಲ್ಲಿ ಸಾಹಿತ್ಯಗೋಷ್ಠಿ ಉದ್ಘಾಟಿಸಿ ಮಾತನಾಡಿದರು.

12ನೇ ಶತಮಾನದಲ್ಲಿ ಹಲವಾರು ಶರಣರನ್ನು ಸೃಷ್ಟಿಸಿದ ಸಿದ್ದರಾಮೇಶ್ವರರು, ಬಸವಣ್ಣನ ಕಾಯಕ ತತ್ವವನ್ನು ಪಾಲಿಸಿದ್ದರು ಎಂದು ಹೇಳಿದರು.

ಕೇಂದ್ರದ ಬೃಹತ್ ಕೈಗಾರಿಕೆ ಸಚಿವ ಎಚ್.ಡಿ.ಕುಮಾರಸ್ವಾಮಿ ಮಾತನಾಡಿ, ‘ಪ್ರತಿದಿನವೂ ಕೆಟ್ಟ ಸುದ್ದಿಗಳು, ಅಪರಾಧಗಳು ವಿಜೃಂಭಿಸುತ್ತಿವೆ. ಅವೆಲ್ಲವನ್ನೂ ಮಾಧ್ಯಮಗಳಲ್ಲಿ ಕಂಡರೆ ಕಳವಳವಾಗುತ್ತಿದೆ. ಸಮಾಜದ ಸ್ವಾಸ್ಥ್ಯ ಕಾಪಾಡಲು ಸಂತರು, ಶರಣರೇ ದಾರಿ ತೋರಬೇಕು’ ಎಂದರು.

ಕಾರ್ಯಕ್ರಮದಲ್ಲಿ ತುಮಕೂರಿನ ಸಿದ್ದಗಂಗಾ ಮಠದ ಪೀಠಾಧ್ಯಕ್ಷ ಸಿದ್ದಲಿಂಗ ಸ್ವಾಮೀಜಿ, ಸಾಣೇಹಳ್ಳಿಯ ತರಳಬಾಳು ಶಾಖಾಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಕೆರಗೋಡು-ರಂಗಾಪುರ ಕ್ಷೇತ್ರದ ಗುರುಪರದೇಶಿಕೇಂದ್ರ ಸ್ವಾಮೀಜಿ, ಕುಪ್ಪೂರು - ತಮ್ಮಡಿಹಳ್ಳಿಯ ವಿರಕ್ತಮಠದ ಅಧ್ಯಕ್ಷ ಅಭಿನವ ಮಲ್ಲಿಕಾರ್ಜುನ ದೇಶಿಕೇಂದ್ರ ಸ್ವಾಮೀಜಿ, ಅರಸೀಕರೆಯ ಜ್ಞಾನಪ್ರಭು ಸ್ವಾಮೀಜಿ, ಶಿವಶಂಕರ ಶಿವಯೋಗಿ ಸ್ವಾಮೀಜಿ, ಮಾಜಿ ಸಚಿವರಾದ ಜೆ.ಸಿ. ಮಾಧುಸ್ವಾಮಿ, ಡಾ. ಸಿ.ಎನ್. ಅಶ್ವತ್ಥ್ ನಾರಾಯಣ, ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ, ವೀರಶೈವ-ಲಿಂಗಾಯತ ಮಹಾಸಭಾದ ಅಧ್ಯಕ್ಷ ಶಂಕರ ಬಿದರಿ ಹಾಜರಿದ್ದರು.

ಬೆಂಗಳೂರಿನ ಅರಮನೆ ಮೈದಾನದಲ್ಲಿ ಏರ್ಪಡಿಸಿದ್ದ ಗುರು ಸಿದ್ದರಾಮೇಶ್ವರರ 852ನೇ ಜಯಂತಿ ಕಾರ್ಯಕ್ರಮದಲ್ಲಿ ಗೋವಿಂದ ಕಾರಜೋಳ, ಬಿ.ವೈ. ವಿಜಯೇಂದ್ರ, ಎಚ್‌.ಡಿ.ಕುಮಾರಸ್ವಾಮಿ, ಬಿ.ಎಸ್‌.ಯಡಿಯೂರಪ್ಪ, ಈಶ್ವರ್ ಖಂಡ್ರೆ ಭಾಗವಹಿಸಿದ್ದರು

‘ರಾಜಕೀಯ ಬದಿಗಿಟ್ಟು, ನಾಡಿಗೆ ಒಂದಾಗಿ’

‘ನಮ್ಮ ಸಮುದಾಯ ಕವಲುದಾರಿಯಲ್ಲಿ ಇರುವ ಸಂದರ್ಭದಲ್ಲಿ ಸಮುದಾಯಗಳ ನಡುವೆ ವಿಷ ಬೀಜ ಬಿತ್ತುವ ಕೆಲಸ ಆಗುತ್ತಿದೆ. ತಮ್ಮ ರಾಜಕೀಯ ಬೇಳೆ ಬೇಯಿಸೋ ಕೆಲಸ ಸಮುದಾಯದಲ್ಲಿ ನಡೆಯುತ್ತಿದೆ. ನಾವು ತಕ್ಷಣವೇ ಎಚ್ಚೆತ್ತುಕೊಳ್ಳಬೇಕು’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು. ವೀರಶೈವ ಲಿಂಗಾಯತ ಸಮುದಾಯಗಳು ಸಮಸ್ಯೆಗಳನ್ನು ಬದಿಗಿಟ್ಟು ರಾಜಕೀಯ ಕಾರಣಕ್ಕೆ ಮಾತ್ರವಲ್ಲ ನಾಡಿನ ಹಿತಕ್ಕಾಗಿ ಒಗ್ಗಟ್ಟಾಗಬೇಕು ಎಂದರು.

ಆರೋಪಿಯನ್ನು ಪೊಲೀಸರಿಗೆ ಒಪ್ಪಿಸಿದ ಸ್ಥಳೀಯರು

ಮಗು ಮೇಲೆ ಅತ್ಯಾಚಾರ, ಕೊಲೆ

ಪ್ರಜಾವಾಣಿ ವಾರ್ತೆ

ಅಭಿಷೇಕ್

ಬೆಂಗಳೂರು: ರಾಮಮೂರ್ತಿ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಬಡಾವಣೆಯೊಂದರಲ್ಲಿ ನಿರ್ಮಾಣ ಹಂತದ ಕಟ್ಟಡದಲ್ಲಿ ಆರು ವರ್ಷದ ಹೆಣ್ಣು ಮಗುವಿನ ಮೇಲೆ ಅತ್ಯಾಚಾರ ಎಸಗಿ, ಕೊಲೆ ಮಾಡಲಾಗಿದೆ.

ಕೃತ್ಯ ಎಸಗಿದ ಆರೋಪಿ, ಬಿಹಾರದ ಅಭಿಷೇಕ್ ಕುಮಾರ್(25)ನನ್ನು ರಾಮಮೂರ್ತಿ ನಗರ ಠಾಣೆಯ ಪೊಲೀಸರು ಸೋಮವಾರ ರಾತ್ರಿ ಬಂಧಿಸಿದ್ದಾರೆ .

ನೇಪಾಳದ ದಂಪತಿ ಕೆಲವು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದರು. ಮೃತ ಬಾಲಕಿಯ ತಾಯಿ ಮನೆಗೆಲಸ ಮಾಡುತ್ತಿದ್ದರೆ, ತಂದೆ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದರು.

‘ಸೋಮವಾರ ಸಂಜೆ ಕೆಲಸದ ನಿಮಿತ್ತ ದಂಪತಿ ಮನೆಯಿಂದ ಹೊರಕ್ಕೆ ಹೋಗಿದ್ದರು. ಹೆಣ್ಣು ಮಗು ಮನೆಯಲ್ಲೇ ಆಟವಾಡುತ್ತಿತ್ತು. ಮನೆಯ ಪಕ್ಕದಲ್ಲೇ ನಿರ್ಮಾಣ ಹಂತದ ಕಟ್ಟಡದಲ್ಲಿ ಆರೋಪಿ ಕೆಲಸ ಮಾಡುತ್ತಿದ್ದ. ಮನೆಯಲ್ಲಿ ಹೆಣ್ಣು ಮಗುವೊಂದೇ ಇರುವುದನ್ನು ಗಮನಿಸಿ, ಪುಸಲಾಯಿಸಿ ನಿರ್ಮಾಣ ಹಂತದ ಕಟ್ಟಡಕ್ಕೆ ಕರೆದೊಯ್ದಿದ್ದ. ಬಳಿಕ ಅತ್ಯಾಚಾರ ಎಸಗಿ ಕೊಲೆ ಮಾಡಿದ್ದಾನೆ’ ಎಂದು ಮೂಲಗಳು ತಿಳಿಸಿವೆ.

ಪೋಷಕರು ಹುಡುಕಾಟ ನಡೆಸಿದಾಗ ಕೊನೆಗೆ ನಿರ್ಮಾಣ ಹಂತದ ಕಟ್ಟಡದಲ್ಲಿ ನೋಡಿದಾಗ ಮಗುವಿನ ಶವ ಪತ್ತೆಯಾಗಿತ್ತು. ಸ್ಥಳೀಯರು ಆರೋಪಿಯನ್ನು ಥಳಿಸಿ ರಾಮಮೂರ್ತಿ ನಗರ ಠಾಣೆಯ ಪೊಲೀಸರಿಗೆ ಒಪ್ಪಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

‘ಬಿಹಾರದಿಂದ ಐದು ವರ್ಷದ ಹಿಂದೆ ಆರೋಪಿ ನಗರಕ್ಕೆ ಬಂದಿದ್ದ. ಗಾರೆ ಕೆಲಸ ಮಾಡುತ್ತಿದ್ದ. ಮೂರು ದಿನಗಳ ಹಿಂದಷ್ಟೇ ರಾಮಮೂರ್ತಿನಗರ ಠಾಣಾ ವ್ಯಾಪ್ತಿಯ ನಿರ್ಮಾಣ ಹಂತದ ಕಟ್ಟಡಕ್ಕೆ ಕೆಲಸಕ್ಕೆ ಬಂದಿದ್ದ. ಆರೋಪಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿತ್ತು. ನ್ಯಾಯಾಲಯವು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು, ಪರಪ್ಪನ ಅಗ್ರಹಾರ ಜೈಲಿಗೆ ಕಳುಹಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಸ್ಥಳೀಯರ ಪ್ರತಿಭಟನೆ: ‘ಆರೋಪಿಯನ್ನು ಎನ್‌ಕೌಂಟರ್ ಮಾಡಬೇಕು. ನಮ್ಮ ಕುಟುಂಬಕ್ಕೆ ನ್ಯಾಯ ಕಲ್ಪಿಸಿ’ ಎಂದು ಮಗುವಿನ ತಾಯಿ ಆಗ್ರಹಿಸಿದ್ದಾರೆ. ಆರೋಪಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಆಗ್ರಹಿಸಿ ಮಂಗಳವಾರ ಸಂಜೆಯೂ ಸ್ಥಳೀಯರು ಪ್ರತಿಭಟನೆ ನಡೆಸಿದರು. ಸೂಕ್ತ ತನಿಖೆ ನಡೆಸಿ ಆರೋಪಿಗೆ ಶಿಕ್ಷೆ ಆಗುವಂತೆ ಮಾಡಲಾಗುವುದು. ಎಂದು ಪೊಲೀಸರು ಭರವಸೆ ನೀಡಿದ ಮೇರೆಗೆ ಪ್ರತಿಭಟನೆ ಸ್ಥಗಿತಗೊಳಿಸಿದರು.

5 ವರ್ಷದ ಬಾಲಕಿ ಮೇಲೆ ಅತ್ಯಾಚಾರ

ತೋರಣಗಲ್ಲು(ಬಳ್ಳಾರಿ): ಸಂಡೂರು ತಾಲ್ಲೂಕಿನ ತೋರಣಗಲ್‌ನಲ್ಲಿ 5 ವರ್ಷದ ಬಾಲಕಿ ಮೇಲೆ ಸೋಮವಾರ ವ್ಯಕ್ತಿಯೊಬ್ಬ ಅತ್ಯಾಚಾರ ಎಸಗಿದ್ದಾನೆ.

ಆರೋಪಿ ಪತ್ತೆಗೆ ಶೋಧ ನಡೆದಿದೆ. ಆತನವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಕಾರ್ಖಾನೆ ಕೆಲಸಕ್ಕೆಂದು 10 ವರ್ಷದ ಹಿಂದೆ ತೋರಣಗಲ್ಲಿಗೆ ಉತ್ತರ ಭಾರತ ದಂಪತಿ ಬಂದಿದ್ದರು. ಇವರ ಪುತ್ರಿ, ಬಾಲಕಿ ಸೋಮವಾರ ಮನೆ ಬಳಿ ಆಟವಾಡುತ್ತಿದ್ದಾಗ ಪುಸಲಾಯಿಸಿ ಬೇರೆಡೆ ಕರೆದೊಯ್ದು ಕೃತ್ಯ ಎಸಗಿದ್ದಾನೆ’ എಂದು ಪೊಲೀಸರು ತಿಳಿಸಿದ್ದಾರೆ.

‘ಯುಜಿಸಿ ಕರಡು ನಿಯಮ ಹಿಂಪಡೆಯಿರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವವಿದ್ಯಾಲಯಗಳಲ್ಲಿ ಕುಲಪತಿಗಳ ನೇಮಕಾತಿಗೆ ಸಂಬಂಧಿಸಿದಂತೆ ಯುಜಿಸಿ ಹೊರಡಿಸಿರುವ ಹೊಸ ಕರಡು ನಿಯಮಗಳು ಅವೈಜ್ಞಾನಿಕ. ಆದ್ದರಿಂದ, ಈ ಕರಡು ನಿಯಮಾವಳಿಗಳನ್ನು ಹಿಂದಕ್ಕೆ ಪಡೆಯಬೇಕು ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ಅವರು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರಿಗೆ ಪತ್ರ ಬರೆದು ಒತ್ತಾಯಿಸಿದ್ದಾರೆ.

ಕರಡು ನಿಯಮಗಳ ಪ್ರಕಾರ ಕುಲಪತಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ರಾಜ್ಯಗಳಿಗೆ ಯಾವುದೇ ಪಾತ್ರವಿಲ್ಲ. ಕುಲಾಧಿಪತಿ ನೇಮಿಸುವ ಶೋಧನಾ ಸಮಿತಿಯಲ್ಲಿ ರಾಜ್ಯ ಸರ್ಕಾರದ ಯಾವುದೇ ಪ್ರತಿನಿಧಿಗೆ ಅವಕಾಶವಿಲ್ಲ. ಶೈಕ್ಷಣಿಕ ಹಿನ್ನೆಲೆ ಇಲ್ಲದವರನ್ನು ಕುಲಪತಿಯಾಗಿ ನೇಮಿಸುವ ವಿಚಾರವಾಗಿ ದೇಶವ್ಯಾಪಿ ಚರ್ಚೆ ಆಗಬೇಕು ಎಂದು ಅವರು ಪ್ರತಿಪಾದಿಸಿದ್ದಾರೆ.

ಪ್ರಸ್ತುತ ವಿದ್ಯಾರ್ಥಿಗಳಿಗೆ ಸಂಬಂಧಿಸಿ ವಿಶ್ವವಿದ್ಯಾಲಯಗಳು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಯುಜಿಸಿ ರಾಜ್ಯ ಸರ್ಕಾರಗಳ ಜತೆ ಚರ್ಚೆ ನಡೆಸಬೇಕು. ಹಾಲಿ ಮಾರ್ಗಸೂಚಿಗಳನ್ನು ಬದಲಿಸಿ ಕ್ರಾಂತಿಕಾರಿ ಬದಲಾವಣೆಗಳನ್ನು ತರಬೇಕಾಗಿದೆ ಎಂದು ಆಗ್ರಹಿಸಿದ್ದಾರೆ.

ಸಚಿನ್ ಪಾಂಚಾಳ್ ಆತ್ಮಹತ್ಯೆ ಪ್ರಕರಣ

ಆರೋಪಿಗಳ ಮನೆಗಳಲ್ಲಿ ಸಿಐಡಿ ಶೋಧ

ಪ್ರಜಾವಾಣಿ ವಾರ್ತೆ

ಕಲಬುರಗಿ: ಬೀದರ್‌ನ ಗುತ್ತಿಗೆದಾರ ಸಚಿನ್ ಪಾಂಚಾಳ್ ಆತ್ಮಹತ್ಯೆ ಪ್ರಕರಣದ ಆರೋಪಿ ಮಾಜಿ ಕಾರ್ಪೊರೇಟರ್ ರಾಜು ಕಪನೂರ ಸೇರಿ ನಾಲ್ವರು ಆರೋಪಿಗಳ ಮನೆಗಳ ಮೇಲೆ ಮಂಗಳವಾರ ಸಿಐಡಿ ಅಧಿಕಾರಿಗಳು ದಾಳಿ ಮಾಡಿ, ಶೋಧ ಕಾರ್ಯಾಚರಣೆ ನಡೆಸಿದರು.

ಸಿಐಡಿ ಡಿಐಜಿಪಿ ಶಾಂತನು ಸಿನ್ಹಾ ನೇತೃತ್ವದಲ್ಲಿ ನಾಲ್ಕು ಕಡೆ ಡಿವೈಎಸ್‌ಪಿಗಳಾದ ಅಸ್ಲಾಂ ಭಾಷಾ, ಯೋಗನಗೌಡ, ನಾಲ್ವರು ಇನ್‌ಸ್ಪೆಕ್ಟರ್‌ಗಳು ಸೇರಿ 40ಕ್ಕೂ ಹೆಚ್ಚು ಸಿಬ್ಬಂದಿ ದಾಳಿ ಮಾಡಿದರು. ಮಧ್ಯಾಹ್ನ 3 ಗಂಟೆಯವರೆಗೆ ಶೋಧ ನಡೆಸಿದರು.

ಸಚಿವ ಪ್ರಿಯಾಂಕ್ ಖರ್ಗೆ ಆಪ್ತ, ರಾಜು ಕಪನೂರ ಅವರಿಗೆ ಸೇರಿದ ಹುಮನಾಬಾದ್ ರಸ್ತೆಯ ಕಪನೂರ ಕೈಗಾರಿಕಾ ಪ್ರದೇಶದಲ್ಲಿನ ಮನೆ, ಘಾಟಗೆ ಲೇಔಟ್‌ನಲ್ಲಿನ ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಗೋರಖನಾಥ ಸಜ್ಜನ್, ಪ್ರಥಮ ದರ್ಜೆ ಗುತ್ತಿಗೆದಾರ ರಾಮನಗೌಡ ಪಾಟೀಲ ಹಾಗೂ ಗಂಜ್ ಪ್ರದೇಶದಲ್ಲಿನ ಬ್ಲಾಕ್ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ನಂದಕುಮಾರ ನಾಗಭುಜಂಗೆ ಅವರ ಮನೆಗಳಲ್ಲಿ ಶೋಧ ನಡೆಯಿತು.

ನಾಲ್ಕು ಕಡೆ ಏಕಕಾಲದಲ್ಲಿ ದಾಳಿ ನಡೆಸಿ, ಸಚಿನ್ ಮತ್ತು ಆರೋಪಿಗಳಿಗೆ ಸಂಬಂಧಿಸಿದ ದಾಖಲೆಗಳು, ಎಲೆಕ್ಟ್ರಾನಿಕ್ ಗ್ಯಾಜೆಟ್‌ಗಳಿಗಾಗಿ ಪರಿಶೀಲಿಸಿದರು ಎಂದು. ಮಧ್ಯಾಹ್ನದ 3ರ ಬಳಿಕ ಬೀದರ್‌ಗೆ ಮರಳಿದರು ಎಂದು ಮೂಲಗಳು ತಿಳಿಸಿವೆ.

ಹುಮನಾಬಾದ್ ರಸ್ತೆಯ ಕಪನೂರ ಕೈಗಾರಿಕಾ ಪ್ರದೇಶದ ಗೋಲ ಲೇಔಟ್‌ನ ಬಾಡಿಗೆ ಮನೆಯಲ್ಲಿ ವಾಸವಿದ್ದ ಸಚಿನ್ ಪಾಂಚಾಳ್ ಮನೆಗೆ ಜನವರಿ 4ರಂದು ಕಲಬುರಗಿ ಸಿಐಡಿ ಅಧಿಕಾರಿಗಳ ತಂಡ ಭೇಟಿ ನೀಡಿತ್ತು. ಯಾವುದೇ ದಾಖಲೆಗಳು ಸಿಗದೆ ವಾಪಸ್ ಆಗಿತ್ತು.

ರಾಜು ಕಪನೂರ, ಗೋರಖನಾಥ ಸಜ್ಜನ್, ನಂದಕುಮಾರ, ರಾಮನಗೌಡ ಹಾಗೂ ಸತೀಶ ರತ್ನಾಕರ ದುಬಲಗುಂಡಿ ಅವರು ಸದ್ಯ ಸಿಐಡಿ ಕಸ್ಟಡಿಯಲ್ಲಿದ್ದಾರೆ. ಸಚಿನ್ ಅವರು ಡೆತ್‌ನೋಟ್ ಬರೆದಿಟ್ಟು, ಡಿ.26ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು. ಒಂಬತ್ತು ಆರೋಪಿಗಳ ವಿರುದ್ಧ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಕಲಬುರಗಿಯಲ್ಲಿ ಮಂಗಳವಾರ ರಾಜು ಕಪನೂರ ಮನೆಯಲ್ಲಿ ಪರಿಶೀಲಿಸಿ ಹೊರಬಂದ ಸಿಐಡಿ ಡಿವೈಎಸ್‌ಪಿ ಅಸ್ಲಾಂ ಭಾಷಾ ಹಾಗೂ ಸಿಬ್ಬಂದಿ

ದಯಾಮರಣ ಕೋರಿದ ವೆಂಡರ್ಸ್

ಕಿಯೋನಿಕ್ಸ್: ರಾಜ್ಯ ಸರ್ಕಾರದಿಂದ ಬಿಲ್ ಪಾವತಿಸದೇ ಕಿರುಕುಳದ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ (ಕಿಯೋನಿಕ್ಸ್) 20 ತಿಂಗಳಿನಿಂದಲೂ ಬಿಲ್ ಪಾವತಿಸದೇ ಕಿರುಕುಳ ನೀಡುತ್ತಿದ್ದು, ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ನಮಗೆ ದಯಾಮರಣಕ್ಕೆ ಅವಕಾಶ ನೀಡಬೇಕು' ಎಂದು ಕಿಯೋನಿಕ್ಸ್ ನೋಂದಾಯಿತ ವೆಂಡರ್‌ದಾರರ ವೆಲ್‌ಫೇರ್ ಅಸೋಸಿಯೇಷನ್ ರಾಷ್ಟ್ರಪತಿ, ಪ್ರಧಾನಿ ಮತ್ತು ರಾಜ್ಯಪಾಲರಿಗೆ ಪತ್ರ ಬರೆದಿದೆ.

ಸೋಮವಾರ ಮೂರು ಪುಟಗಳ ಪತ್ರವನ್ನು ಅಂಚೆ ಮೂಲಕ ರವಾನಿಸಿರುವ ಅಸೋಸಿಯೇಷನ್ ಅಧ್ಯಕ್ಷ ವಸಂತ್ ಕೆ. ಬಂಗೇರ ಮತ್ತು ಇತರರು, '2023ರಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಕಿಯೋನಿಕ್ಸ್‌ನ 450ರಿಂದ 500 ವೆಂಡರ್‌ಗಳ ಬಾಕಿ ಬಿಲ್ ತಡೆ ಹಿಡಿಯಲಾಗಿದೆ. ತನಿಖೆಯ ನೆಪದಲ್ಲಿ ನಿರಂತರವಾಗಿ ಕಿರುಕುಳ ನೀಡಲಾಗುತ್ತಿದೆ. ಇದರಿಂದ ಆರು ಸಾವಿರಕ್ಕೂ ಹೆಚ್ಚು ಕುಟುಂಬಗಳು ಬೀದಿಗೆ ಬರುವಂತಾಗಿದೆ. ಆರ್ಥಿಕ ನಷ್ಟ ತಾಳಲಾರದೆ ವೆಂಡರ್‌ಗಳು ಆತ್ಮಹತ್ಯೆ ಮಾಡಿಕೊಳ್ಳಬೇಕಾದ ಸ್ಥಿತಿ ನಿರ್ಮಾಣವಾಗಿದೆ' ಎಂದು ದೂರಿದ್ದಾರೆ.

'ನಿಗಮದ ಹಿಂದಿನ ವ್ಯವಸ್ಥಾಪಕ ನಿರ್ದೇಶಕರು ಬಿಲ್ ಪಾವತಿಗೆ ಶೇಕಡ 12ರಷ್ಟು ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಅದರ ವಿರುದ್ಧ ವೆಂಡರ್‌ಗಳು ಪ್ರತಿಭಟನೆ ನಡೆಸಿದ್ದೆವು. ಇದರಿಂದ ಕೆರಳಿದ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ನಿಗಮದ ಅಧಿಕಾರಿಗಳು ಬಿಲ್ ಪಾವತಿಗೆ ತಡೆಯೊಡ್ಡಿದ್ದಾರೆ. ಸಚಿವರು, ಮುಖ್ಯಮಂತ್ರಿ, ರಾಜ್ಯಪಾಲರು ಎಲ್ಲರಿಗೂ ಮನವಿ ಸಲ್ಲಿಸಲಾಗಿತ್ತು. ಆದರೆ, ಯಾರಿಂದಲೂ ನಮ್ಮ ಸಮಸ್ಯೆಗೆ ಪರಿಹಾರ ಲಭಿಸಿಲ್ಲ' ಎಂದಿದ್ದಾರೆ.

'ಪ್ರಿಯಾಂಕ್ ಖರ್ಗೆ, ಕಿಯೋನಿಕ್ಸ್ ಅಧ್ಯಕ್ಷ ಶರತ್ ಬಚ್ಚೇಗೌಡ, ವ್ಯವಸ್ಥಾಪಕ ನಿರ್ದೇಶಕ ಪವನ್ ಕುಮಾರ್ ಮಾಲಪಾಟಿ ಮತ್ತು ಹಣಕಾಸು ವಿಭಾಗದ ನಿರ್ದೇಶಕ ನಿಶ್ಚಿತ್ ಅವರೇ ವೆಂಡರ್‌ಗಳು ಈಗ ಎದುರಿಸುತ್ತಿರುವ ಸಮಸ್ಯೆಗೆ ಕಾರಣ. ನಮ್ಮಲ್ಲಿ ಯಾರಾದರೂ ಪ್ರಾಣ ಕಳೆದುಕೊಂಡರೆ ಈ ನಾಲ್ವರೇ ಹೊಣೆಗಾರರು' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಬಾಕಿ ಇರುವ ಬಿಲ್ ಮೊತ್ತವನ್ನು ಒಂದು ವಾರದೊಳಗೆ ಪಾವತಿಸಬೇಕು. ಇಲ್ಲವಾದರೆ 450ರಿಂದ 500 ಮಂದಿ ವೆಂಡರ್‌ಗಳು ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಳ್ಳಲು ಸಿದ್ಧರಿದ್ದೇವೆ' ಎಂದು ಪತ್ರದಲ್ಲಿ ಹೇಳಿದ್ದಾರೆ. ಪ್ರತಿಯನ್ನು ಕೇಂದ್ರ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಅವರಿಗೂ ಕಳುಹಿಸಿದ್ದಾರೆ.

'ದೊಡ್ಡವರಿಗೆ ಅನುಕೂಲ': 'ಕಿಯೋನಿಕ್ಸ್ ವೆಂಡರ್‌ಗಳ ನೋಂದಣಿ ನಿಯಮಗಳಲ್ಲಿ ಬದಲಾವಣೆ ತರಲಾಗಿದೆ. ಇದರಿಂದಾಗಿ ಈ ಹಿಂದೆ ಇದ್ದ ಸುಮಾರು 500 ವೆಂಡರ್‌ಗಳಲ್ಲಿ ಬಹುತೇಕರು ನೋಂದಣಿ ನವೀಕರಿಸಲು ಸಾಧ್ಯವಾಗಿಲ್ಲ. ಸಚಿವರು ಮತ್ತು ಅಧಿಕಾರಿಗಳಿಗೆ ಬೇಕಾದ ಕೆಲವು ದೊಡ್ಡ ಕಂಪನಿಗಳಿಗೆ ಅನುಕೂಲ ಮಾಡಿಕೊಡಲು ಈ ರೀತಿಯ ಬದಲಾವಣೆ ತರಲಾಗಿದೆ' ಎಂದು ಅಸೋಸಿಯೇಷನ್ ಪತ್ರದಲ್ಲಿ ದೂರಿದೆ.

4 ವರ್ಷಗಳಲ್ಲಿ ₹500 ಕೋಟಿ ಅಕ್ರಮ: ಪ್ರಿಯಾಂಕ್

ಪ್ರಿಯಾಂಕ್ ಖರ್ಗೆ

ಕಿಯೋನಿಕ್ಸ್‌ನಲ್ಲಿ ₹300 ಕೋಟಿಯಷ್ಟು ಹಗರಣ ನಡೆದಿದೆ ಎಂದು ಮಹಾ ಲೇಖಪಾಲರೇ ವರದಿ ನೀಡಿದ್ದಾರೆ. ಈ ಬಗ್ಗೆ ತನಿಖೆಗೆ ಐಎಎಸ್ ಅಧಿಕಾರಿ ಮಹೇಶ್ವರ ರಾವ್ ನೇತೃತ್ವದಲ್ಲಿ ಸಮಿತಿ ರಚಿಸಿದ್ದೆವು. ಹೀಗಾಗಿ ಎಲ್ಲ ಬಿಲ್‌ಗಳನ್ನು ನಾವು ತಡೆಹಿಡಿದಿದ್ದೇವೆ' ಎಂದು ಐಟಿ ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ನಾಲ್ಕು ವರ್ಷಗಳಲ್ಲಿ ₹500 ಕೋಟಿಯಷ್ಟು ಅಕ್ರಮ ಆಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಸಮಿತಿಯ ವರದಿ ಬಂದ ಬಳಿಕ ಬಿಲ್ ಪಾವತಿಸುತ್ತೇವೆ' ಎಂದರು.

'ಈ ರೀತಿಯ ಬ್ಲಾಕ್‌ಮೇಲ್ ಮಾಡಿದರೆ ಹೇಗೆ? ಕಮಿಷನ್ ವಿಚಾರವನ್ನು ಗುತ್ತಿಗೆದಾರರು ಪತ್ರದಲ್ಲಿ ಉಲ್ಲೇಖಿಸಿದ್ದಾರೆಯೇ? ನಿಯಮ ಪಾಲನೆ ಮಾಡಬೇಡಿ ಎಂದರೆ ಹೇಗೆ? ಕಾನೂನು ಮೀರಿ ಬಿಲ್ ಪಾವತಿ ಮಾಡಲು ಆಗುತ್ತದೆಯೇ' ಎಂದೂ ಪ್ರಶ್ನಿಸಿದರು.

'ಕಿಯೋನಿಕ್ಸ್‌ನ 4ಜಿ ವಿನಾಯಿತಿಯನ್ನು ನಾನೇ ಹಿಂಪಡೆಯುವಂತೆ ಮಾಡಿದ್ದೇನೆ. ಇದರಿಂದ ಕೆಲವರಿಗೆ ತೊಂದರೆಯಾದರೆ ಏನೂ ಮಾಡಲು ಆಗುವುದಿಲ್ಲ. ಕಿಯೋನಿಕ್ಸ್‌ನಲ್ಲಿ ಯಾಕೆ ಹೀಗಾಗಿದೆ ಎಂದು ಈ ಹಿಂದಿನ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರ ಬಳಿ ಕೇಳಬೇಕು. ಅವರ ಅವಧಿಯಲ್ಲಿ ಆಗಿರುವ ಹಗರಣಕ್ಕೆ ನಾನು ಉತ್ತರ ಕೊಡಬೇಕಿದೆ' ಎಂದರು.

ಡಾ.ಕೇಶವಮೂರ್ತಿ ಯುರಾಲಜಿ ಸೊಸೈಟಿ ಆಫ್ ಇಂಡಿಯಾ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ನೆಫ್ರೋ ಯುರಾಲಜಿ ಸಂಸ್ಥೆಯ ನಿರ್ದೇಶಕ ಡಾ.ಕೇಶವಮೂರ್ತಿ ಆರ್. ಅವರು ಯುರಾಲಜಿ ಸೊಸೈಟಿ ಆಫ್ ಇಂಡಿಯಾದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಚೆನ್ನೈನಲ್ಲಿ ನಡೆದ ರಾಷ್ಟ್ರೀಯ ಸಮಾವೇಶದಲ್ಲಿ ಇವರನ್ನು ಆಯ್ಕೆ ಮಾಡಲಾಗಿದೆ. ಈ ಹಿಂದೆ ಯುರಾಲಜಿ ಸೊಸೈಟಿ ಆಫ್ ಇಂಡಿಯಾದ ಗೌರವ ಕಾರ್ಯದರ್ಶಿ ಮತ್ತು ಖಜಾಂಚಿಯಾಗಿ ಕಾರ್ಯ ನಿರ್ವಹಿಸಿದ್ದರು. 40 ವರ್ಷಗಳ ಬಳಿಕ ಈ ಉನ್ನತ ಹುದ್ದೆಗೇರುತ್ತಿರುವ ಎರಡನೇ ಕನ್ನಡಿಗ ಇವರು.

'ಕಾಂಗ್ರೆಸ್‌ನಲ್ಲಿ ಗೊಂದಲ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಬದಲಾವಣೆ, ಕೆಪಿಸಿಸಿಗೆ ನೂತನ ಅಧ್ಯಕ್ಷರ ನೇಮಕ, ಜಾತಿಗಣತಿ ವರದಿ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ಪಕ್ಷದಲ್ಲಿ ಯಾವ ಸಮಸ್ಯೆಗಳೂ ಇಲ್ಲ. ಈ ಎಲ್ಲ ವಿಷಯಗಳ ಬಗ್ಗೆ ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳಲಿದೆ' ಎಂದು ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ಮುಖ್ಯಮಂತ್ರಿ ಸ್ಥಾನದ ಬಗ್ಗೆ ಕಾಂಗ್ರೆಸ್‌ನಲ್ಲಿ ಯಾವ ಗೊಂದಲವೂ ಇಲ್ಲ. ನಾವೆಲ್ಲರೂ ಚೆನ್ನಾಗಿಯೇ ಇದ್ದೇವೆ. ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ' ಎಂದರು.

'ಸೋಮವಾರ ನಡೆದ ಪಕ್ಷದ ಶಾಸಕಾಂಗ ಸಭೆಯಲ್ಲಿ ಕೂಡ ಸುರ್ಜೇವಾಲಾ ಇದನ್ನೇ ಸ್ಪಷ್ಟವಾಗಿ ಹೇಳಿದ್ದಾರೆ. ಸಚಿವರಾದ ಜಿ. ಪರಮೇಶ್ವರ ಮತ್ತು ಕೆ.ಎನ್. ರಾಜಣ್ಣ ಅವರು ಕಾರಣಾಂತರಗಳಿಂದ ಕೆಪಿಸಿಸಿ ಸರ್ವ ಸದಸ್ಯರ ಸಭೆಗೆ ಬಂದಿರಲಿಲ್ಲ' ಎಂದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, 'ಬೆಳಗಾವಿ ಜಿಲ್ಲೆಯ ರಾಜಕಾರಣ ಕುರಿತು ಡಿ.ಕೆ. ಶಿವಕುಮಾರ್ ಮತ್ತು ಸತೀಶ ಜಾರಕಿಹೊಳಿ ಮಧ್ಯೆ ಯಾವ ಜಗಳವೂ ಆಗಿಲ್ಲ' ಎಂದರು.

'ಕೆಪಿಸಿಸಿ ಅಧ್ಯಕ್ಷ ಸ್ಥಾನದ ಮೇಲೆ ನಾನು ಕಣ್ಣಿಟ್ಟಿಲ್ಲ. ಕೈಗಾರಿಕಾ ಸಚಿವನಾಗಿ ನಾನು ನನ್ನ ಕೆಲಸವನ್ನು ಮುಂದುವರಿಸಿಕೊಂಡು ಹೋಗಬೇಕಾಗಿದೆ. ರಾಜಕೀಯದಲ್ಲಿ ನನಗೆ ಸಹಜವಾದ ಆಸೆ ಇದೆಯೇ ವಿನಾ ದುರಾಸೆಯಂತೂ ಇಲ್ಲ' ಎಂದರು.

'ಗುತ್ತಿಗೆದಾರರ ₹30 ಸಾವಿರ ಕೋಟಿ ಬಿಲ್ ಪಾವತಿ ನನೆಗುದಿಗೆ ಬೀಳಲು ಹಿಂದಿನ ಬಿಜೆಪಿ ಸರ್ಕಾರವೇ ಕಾರಣ. ಯಾವ ಅನುಮೋದನೆಯೂ ಇಲ್ಲದೆ ಬಿಜೆಪಿಯವರು ₹2 ಲಕ್ಷ ಕೋಟಿ ಮೊತ್ತದ ಗುತ್ತಿಗೆ ಕಾಮಗಾರಿ ನೀಡಿದ್ದರು. ಹೀಗಾಗಿ, ₹35 ಸಾವಿರ ಕೋಟಿ ಪಾವತಿಯೇ ಆಗಿರಲಿಲ್ಲ. ಆ ಹೊರೆ ನಮ್ಮ ಸರ್ಕಾರದ ಮೇಲೆ ಬಿದ್ದಿದೆ' ಎಂದು ವಿವರಿಸಿದರು.

'ವೀರಶೈವ ಮಹಾಸಭಾಕ್ಕೆ ವಿರೋಧಿಸುವ ಹಕ್ಕಿದೆ'

ಎಂ.ಬಿ. ಪಾಟೀಲ

'ಲಿಂಗಾಯತರಲ್ಲಿರುವ ಬೇರೆ ಬೇರೆ ಉಪಪಂಗಡಗಳು ಜಾತಿಗಣತಿಯ ವರದಿಯಲ್ಲಿ ಬೇರೆ ಬೇರೆ ರೀತಿ ನಮೂದಿಸಿವೆ. ಈ ವರದಿಯನ್ನು ವೀರಶೈವ ಮಹಾಸಭಾ ವಿರೋಧಿಸುತ್ತಿದ್ದರೆ ಅಂತಹ ಹಕ್ಕು ಅದಕ್ಕಿದೆ' ಎಂದು ಎಂ.ಬಿ. ಪಾಟೀಲ ಸಮರ್ಥನೆ ನೀಡಿದರು.

'ಜಾತಿಗಣತಿ ವರದಿಯನ್ನು ನಾನು ಯಾವತ್ತೂ ವಿರೋಧಿಸಿಲ್ಲ. ಆದರೆ, ಯಾವ ಸಮುದಾಯಕ್ಕೂ ಅನ್ಯಾಯ ಆಗದಂತೆ ನೋಡಿಕೊಳ್ಳಬೇಕೆಂದು ಹೇಳುತ್ತಾ ಬಂದಿದ್ದೇನೆ. ಇಷ್ಟಕ್ಕೂ ಜಾತಿಗಣತಿ ವರದಿಯಲ್ಲಿ ಏನಿದೆ ಎಂದು ಯಾರೂ ನೋಡಿಲ್ಲ. ಆದರೆ, ಸುರ್ಜೇವಾಲಾ ಕೂಡ ಯಾವೊಂದು ಸಮುದಾಯಕ್ಕೂ ನೋವು ಆಗದಂತೆ ನಾವು ನಡೆದುಕೊಳ್ಳಬೇಕು ಎಂದಿದ್ದಾರೆ' ಎಂದರು.

ಅರಣ್ಯ ಸಿಬ್ಬಂದಿಗೆ ಕ್ಯಾಂಟೀನ್ ಪ್ರಸ್ತಾವನೆ ಸಲ್ಲಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಣ್ಯ ಇಲಾಖೆಯ ಮುಂಚೂಣಿ ಸಿಬ್ಬಂದಿಗೆ ಪೊಲೀಸ್ ಕ್ಯಾಂಟೀನ್ ಮಾದರಿಯಲ್ಲಿ ಕ್ಯಾಂಟೀನ್ ಆರಂಭಿಸಲು ಪ್ರಸ್ತಾವನೆಯೊಂದನ್ನು ಸಲ್ಲಿಸುವಂತೆ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸೂಚನೆ ನೀಡಿದ್ದಾರೆ.

ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿತ್ತು. ಕಳೆದ ನವೆಂಬರ್‌ನಲ್ಲಿ ಈ ಕುರಿತು ಸಭೆ ನಡೆಸಿ ದಿನಸಿ ವಸ್ತುಗಳನ್ನು ರಿಯಾಯ್ತಿ ದರದಲ್ಲಿ ನೀಡುವ ಬಗ್ಗೆ ತಾತ್ವಿಕವಾಗಿ ಒಪ್ಪಿಗೆ ನೀಡಿ, ಪ್ರಸ್ತಾವನೆ ಸಲ್ಲಿಸುವಂತೆ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್ ಅವರು ಸೂಚಿಸಿದ್ದರು.

ಈ ವಿಷಯವಾಗಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಬ್ರಿಜೇಶ್ ಕುಮಾರ್ ದೀಕ್ಷಿತ್ ಅವರು ಪೊಲೀಸ್ ಹೆಚ್ಚುವರಿ ಮಹಾನಿರ್ದೇಶಕರಿಗೆ ಪತ್ರ ಬರೆದು ಪೊಲೀಸ್ ಕ್ಯಾಂಟೀನ್‌ನ ಕಾರ್ಯವೈಖರಿ ಮತ್ತು ಇದಕ್ಕೆ ಸಂಬಂಧಿಸಿದ ಸುತ್ತೋಲೆಗಳು, ನೀತಿ–ನಿಯಮಗಳು ಹಾಗೂ ಆದೇಶಗಳ ದಾಖಲೆಗಳ ಪ್ರತಿಗಳನ್ನು ನೀಡುವಂತೆ ಮನವಿ ಮಾಡಿದ್ದಾರೆ.

ಅರಣ್ಯ ಇಲಾಖೆ ಕೇಳಿರುವ ಮಾಹಿತಿ:

- ಪೊಲೀಸ್ ಕ್ಯಾಂಟೀನ್‌ನಲ್ಲಿ ಸಿಬ್ಬಂದಿಗೆ ಸಿಗುವ ಸೌಲಭ್ಯಗಳು, ದೊರೆಯುವ ವಸ್ತುಗಳ ಪಟ್ಟಿ
- ಕ್ಯಾಂಟೀನ್ ಸೌಲಭ್ಯದಿಂದ ಉಂಟಾಗುವ ಆರ್ಥಿಕ ಪರಿಣಾಮಗಳು, ಆರ್ಥಿಕ ಮೂಲ ಮತ್ತು ವೆಚ್ಚದ ವಿವರಗಳು. ಇದಕ್ಕಾಗಿ ಕೇಂದ್ರದ ಅರೆ ಸೇನಾಪಡೆ ಮತ್ತು ಕೇಂದ್ರ ಗೃಹ ಇಲಾಖೆ ಜತೆ ನಡೆಸಿರುವ ಪತ್ರ ವ್ಯವಹಾರಗಳ ಪ್ರತಿ
- ಜಿಲ್ಲಾವಾರು ಸಿಪಿಸಿ ಕ್ಯಾಂಟೀನ್‌ಗಳ ಪಟ್ಟಿ, ಕ್ಷೇಮಾಭಿವೃದ್ಧಿ ನಿಧಿಯನ್ನು ಮೂಲಧನವಾಗಿ ಬಳಸಲು ಇರುವ ಆದೇಶ ಅಥವಾ ಪತ್ರಗಳ ಪ್ರತಿಗಳು, ಪೊಲೀಸ್ ಇಲಾಖೆ ಮತ್ತು ಕೇಂದ್ರ ಸರ್ಕಾರದ ಮಧ್ಯೆ ಆಗಿರುವ ಒಪ್ಪಂದದ ಪ್ರತಿ
- ಪೊಲೀಸ್ ಇಲಾಖೆಯಲ್ಲಿ ಯಾವ ಯಾವ ಹುದ್ದೆಯ ಸಿಬ್ಬಂದಿಗೆ ಈ ಕ್ಯಾಂಟೀನ್ ಸೌಲಭ್ಯ ಒದಗಿಸಲಾಗುತ್ತಿದೆ ಎಂಬ ಬಗ್ಗೆ ಮಾಹಿತಿ.

ಮೈಸೂರಿನ ಶಾರದಾದೇವಿನಗರದಲ್ಲಿರುವ ಪಶುಸಂಗೋಪನ ಸಚಿವ ಕೆ.ವೆಂಕಟೇಶ್ ಅವರ ಮನೆಯ ಕಡೆಗೆ ನಗರ ಬಿಜೆಪಿಯ ಮುಖಂಡರು ಹಾಗೂ ಕಾರ್ಯಕರ್ತರು ಗೋಣಿಚೀಲದಲ್ಲಿ ಸಗಣಿ ತುಂಬಿಕೊಂಡು ತೆರಳಿದರು

ಸಚಿವರ ಮನೆಗೆ ಸಗಣಿ ಎರಚಲು ಯತ್ನ

ಪ್ರಜಾವಾಣಿ ವಾರ್ತೆ

ಮೈಸೂರು: ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ಅವರ ಇಲ್ಲಿನ ನಿವಾಸಕ್ಕೆ ಸಗಣಿ ಎರಚಿ ಪ್ರತಿಭಟಿಸಲು ಯತ್ನಿಸಿದ ಶಾಸಕ ಟಿ.ಎಸ್. ಶ್ರೀವತ್ಸ, ನಗರದ ಬಿಜೆಪಿ ಮುಖಂಡರು, ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು, ಬಳಿಕ ಬಿಡುಗಡೆ ಮಾಡಿದರು.

'ಬೆಂಗಳೂರಿನಲ್ಲಿ ಹಸುಗಳ ಕೆಚ್ಚಲು ಕೊಯ್ದಿದ್ದವರ ವಿರುದ್ಧ ಕ್ರಮವಹಿಸಿಲ್ಲ, ಕೃತ್ಯ ನಡೆದು ಎರಡು ದಿನವಾದರೂ ಸಚಿವರು ಕೆ.ವೆಂಕಟೇಶ್ ಪ್ರತಿಕ್ರಿಯಿಸಿಲ್ಲ' ಎಂದು ಆರೋಪಿಸಿ ಬಿಜೆಪಿ ಕಾರ್ಯಕರ್ತರು ಶಾಸಕರ ನೇತೃತ್ವದಲ್ಲಿ ಪ್ರತಿಭಟನೆಗೆ ಮುಂದಾಗಿದ್ದರು.

'ಲಜ್ಜೆಗೇಡಿ ಸರ್ಕಾರಕ್ಕೆ ಧಿಕ್ಕಾರ', 'ದೇಶದ್ರೋಹಿ ಸರ್ಕಾರಕ್ಕೆ ಧಿಕ್ಕಾರ', 'ಬೇಕೇ ಬೇಕು ನ್ಯಾಯ ಬೇಕು', 'ನೀತಿ ಗೆಟ್ಟ ಸಿದ್ದರಾಮಯ್ಯ, ಜಮೀರ್ ಅಹಮದ್ ಖಾನ್, ವೆಂಕಟೇಶ್‌ಗೆ ಧಿಕ್ಕಾರ' ಮೊದಲಾದ ಘೋಷಣೆ ಕೂಗಿದರು. 'ಗೋಮಾತೆಯ ಕೆಚ್ಚಲು ಕೊಯ್ದವರಿಗೆ ಕಠಿಣ ಶಿಕ್ಷೆ ಆಗುವಂತೆ ನೋಡಿಕೊಳ್ಳಬೇಕು' ಎಂದು ಆಗ್ರಹಿಸಿದರು.

ಗೋಣಿ ಚೀಲದಲ್ಲಿ ತಂದಿದ್ದ ಸಗಣಿಯೊಂದಿಗೆ ಸಚಿವರ ಮನೆಯತ್ತ ಸಾಗಿದ ಅವರನ್ನು ಪೊಲೀಸರು ರಸ್ತೆಯಲ್ಲೇ ತಡೆದರು. ಆಗ ಪ್ರತಿಭಟನಕಾರರು ಮತ್ತು ಪೊಲೀಸರ ನಡುವೆ ವಾಗ್ವಾದ ನಡೆಯಿತು. ಕಾರ್ಯಕರ್ತರು ಸಗಣಿಯನ್ನು ರಸ್ತೆಯಲ್ಲೇ ಚೆಲ್ಲಿ ಆಕ್ರೋಶ ವ್ಯಕ್ತಪಡಿಸಿದರು. ನಂತರ ಅವರನ್ನು ಪೊಲೀಸರು ವಾಹನಗಳಲ್ಲಿ ಸಿಎಆರ್ ಮೈದಾನಕ್ಕೆ ಕರೆದೊಯ್ದರು.

ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ಉದ್ಘಾಟಿಸಿದ ಅತುಲ್ ಕುಲಕರ್ಣಿ

'ಅಂಬೇಡ್ಕರ್ ತತ್ವದ ಬೀಜ ಬಿತ್ತಬೇಕಿದೆ'

ಪ್ರಜಾವಾಣಿ ವಾರ್ತೆ

ಮೈಸೂರು: 'ಸಾಮಾಜಿಕ ನ್ಯಾಯ ಈಗಿನ ದಿನಗಳಲ್ಲಿ ತಮಾಷೆಯ ವಿಷಯವಾಗಿದೆ. ನ್ಯಾಯವನ್ನು ನಮ್ಮಿಂದ ಕಿತ್ತುಕೊಂಡಾಗಲಷ್ಟೇ ಅದರ ಬೆಲೆ ಗೊತ್ತಾಗುತ್ತದೆ. ಹೀಗಾಗಿ, ಸಮಾಜದಲ್ಲಿ ಅಂಬೇಡ್ಕರ್ ತತ್ವದ ಬೀಜಗಳನ್ನು ಬಿತ್ತಬೇಕಿದೆ' ಎಂದು ರಂಗಕರ್ಮಿ, ಚಲನಚಿತ್ರನಟ ಅತುಲ್ ಕುಲಕರ್ಣಿ ಮಂಗಳವಾರ ಇಲ್ಲಿ ಪ್ರತಿಪಾದಿಸಿದರು.

ರಂಗಾಯಣದಲ್ಲಿ 'ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ'ವನ್ನು ಉದ್ಘಾಟಿಸಿದ ಅವರು, 'ಸಂವಿಧಾನದ ಪ್ರಸ್ತಾವನೆಯಲ್ಲಿರುವ ನ್ಯಾಯ, ಭ್ರಾತೃತ್ವ, ಸ್ವಾತಂತ್ರ್ಯ ಸೇರಿದಂತೆ ಎಲ್ಲ ತತ್ವಗಳನ್ನು ನೆಲದಲ್ಲಿ ಬೇರೂರಿಸುವ ಜವಾಬ್ದಾರಿ ರಂಗಭೂಮಿ ಮೇಲಿದೆ' ಎಂದರು.

'ಬಿಡುಗಡೆ (ಲಿಬರೇಶನ್) ಎಂಬ ಶಬ್ದ ಕೆಟ್ಟ ಪದದಂತೆ ಕೇಳಿಸುತ್ತಿದೆ. ದೇಶ ಹಾಗೂ ಸಂಸ್ಕೃತಿಗಿದು ದುರದೃಷ್ಟಕರ ಸಂದರ್ಭ. ಸಮಾಜದಲ್ಲಿ ಏನಾಗುತ್ತಿದೆ ಎಂಬುದು ಜನರಿಗೆ ಅರ್ಥವಾಗುವುದಿಲ್ಲ. ಕೆಟ್ಟದ್ದು ನಡೆಯುತ್ತಿದ್ದರೂ ಅದನ್ನು ಸ್ವೀಕರಿಸುತ್ತಿದ್ದಾರೆ. ಶೋಷಣೆ ವಿರುದ್ಧ ಮಾತನಾಡುವ, ಸತ್ಯ ಕಥೆಗಳನ್ನು ಜನರಿಗೆ ತಲುಪಿಸುವ ಕೆಲಸವನ್ನು ರಂಗಕರ್ಮಿಗಳು ಧೈರ್ಯದಿಂದ ಮಾಡಬೇಕಿದೆ' ಎಂದು ಹೇಳಿದರು.

'ಸಿನಿಮಾ ಅತ್ಯಂತ ದುಬಾರಿ ಕಲೆ. ಅದರ ತಲೆ ಮೇಲೆ ಹಣದ ಭಾರ ಹೆಚ್ಚಿರುತ್ತದೆ. ಹೀಗಾಗಿ ಜನರ ಜೊತೆಗಿರುವುದು ರಂಗಭೂಮಿ. ಭಾರತೀಯ ರಂಗಭೂಮಿಗೆ ಕರ್ನಾಟಕದ ಕೊಡುಗೆ ಹೆಚ್ಚಿದೆ' ಎಂದರು.

ನಟ ಪ್ರಕಾಶ್ ರಾಜ್ ಮಾತನಾಡಿ, 'ಇತಿಹಾಸ ತಿರುಚುವ ಕೆಲಸ ನಡೆಯುತ್ತಿದೆ. ತಮ್ಮದೇ ದೃಷ್ಟಿಕೋನಗಳನ್ನು ನೆಲೆಗೊಳಿಸಲಾಗುತ್ತಿದೆ. ಮುಂದಿನ ತಲೆಮಾರು ಇತಿಹಾಸ ಓದುವಾಗ ತಪ್ಪುಮಾಡಿದವರನ್ನು ಮರೆಯಬಹುದು. ಆದರೆ, ಮೌನವಾಗಿದ್ದವರನ್ನು ಕ್ಷಮಿಸುವುದಿಲ್ಲ' ಎಂದು ಹೇಳಿದರು.

'ದೇಶಕ್ಕೆ ಅರಣ್ಯ, ಗಿಡಗಳಂತೆಯೇ ರಂಗಭೂಮಿಯೂ ಅಷ್ಟೇ ಮುಖ್ಯ. ರಂಗಾಯಣಕ್ಕೆ ಹೆಚ್ಚು ಸ್ವಾಯತ್ತತೆಯನ್ನು ನೀಡಿ, ಉಳಿಸುವ ಕೆಲಸವನ್ನು ಸರ್ಕಾರ ಮಾಡಬೇಕು. ಅದಕ್ಕೆ ಅನುದಾನ ಬಂದರೂ ಕಟ್ಟಡ ನಿರ್ಮಿಸುವ ಸ್ವಾತಂತ್ರ್ಯವೂ ಇಲ್ಲ' ಎಂದು ಹೇಳಿದರು.

ಕಾರ್ಯಕ್ರಮದ ನಂತರ ದಫ್ ಕಲಾವಿದರಿಂದ 'ಸೂಫಿ ಕವ್ವಾಲಿ', 'ಕಾಣೆ ಆದವರು' ಹಾಗೂ 'ಪಾಕುದೊರಾಳ್ಳು' ನಾಟಕಗಳು ಪ್ರದರ್ಶನಗೊಂಡವು.

ಮೈಸೂರಿನ ರಂಗಾಯಣದಲ್ಲಿ ಮಂಗಳವಾರ 'ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ' ಉದ್ಘಾಟಿಸಿದ ಚಲನಚಿತ್ರ ನಟ ಅತುಲ್ ಕುಲಕರ್ಣಿ ಮಾತನಾಡಿದರು. ಭಾವನಾ ರಾಮಣ್ಣ, ಪ್ರಕಾಶ್ ರಾಜ್, ಸತೀಶ್ ತಿಪಟೂರು ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಸಂಕ್ರಾಂತಿ ಸಡಗರ

ಸುಗ್ಗಿಯ ಹಬ್ಬ ಮಕರ ಸಂಕ್ರಾಂತಿಯನ್ನು ನಾಡಿನಾದ್ಯಂತ ಜನರು ಸಡಗರ, ಸಂಭ್ರಮದಿಂದ ಆಚರಿಸಿದ್ದಾರೆ. ಕೆಲ ಜಿಲ್ಲೆಗಳಲ್ಲಿ ನಡೆದ ತಮ್ಮ ಆರಾಧ್ಯ ದೈವದ ರಥೋತ್ಸವದಲ್ಲಿ ಪಾಲ್ಗೊಂಡ ಭಕ್ತರು ಧನ್ಯತಾ ಭಾವ ಅನುಭವಿಸಿದ್ದರೆ, ಇನ್ನೂ ಕೆಲವೆಡೆ ನದಿಗಳಲ್ಲಿ ಜನರು ಶ್ರದ್ಧಾ-ಭಕ್ತಿಯಿಂದ ಪುಣ್ಯ ಸ್ನಾನ ಮಾಡಿದ್ದಾರೆ. ರೈತಾಪಿ ಸಮುದಾಯ ರಾಸುಗಳನ್ನು ಕಿಚ್ಚು ಹಾಯಿಸಿದ್ದು ನೋಡುಗರ ಮೈನವಿರೇಳಿಸಿತು

ಬೆಳಗಾವಿ ಜಿಲ್ಲೆಯ ಕಾಗವಾಡ ತಾಲ್ಲೂಕಿನ ಐನಾಪುರದ ಬಸವೇಶ್ವರ ವೃತ್ತದಲ್ಲಿ ಮಕರ ಸಂಕ್ರಾಂತಿ ಹಾಗೂ ಜಾತ್ರೆ ನಿಮಿತ್ತ ಮಂಗಳವಾರ 11 ಗ್ರಾಮಗಳ ದೇವರ ಪಲ್ಲಕ್ಕಿ ಉತ್ಸವದಲ್ಲಿ ಅಪಾರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು

ಉತ್ತರ ಕನ್ನಡ ಜಿಲ್ಲೆಯ ಶಿವತಾಣವಾದ ಶಿರಸಿ ತಾಲ್ಲೂಕಿನ ಸಹಸ್ರಲಿಂಗದಲ್ಲಿ ಭಕ್ತರು ಶಾಲ್ಮಲಾ ನದಿಯಲ್ಲಿ ಪುಣ್ಯ ಸ್ನಾನ ಮಾಡಿದರು ಚಿತ್ರ: ರಾಜೇಂದ್ರ ಹೆಗಡೆ

ಯಾದಗಿರಿ ತಾಲ್ಲೂಕಿನ ಐತಿಹಾಸಿಕ ಮೈಲಾಪುರದ ಮೈಲಾರಲಿಂಗೇಶ್ವರ ಜಾತ್ರೆಯ ಅಂಗವಾಗಿ ಮಂಗಳವಾರ ಪಲ್ಲಕ್ಕಿ ಉತ್ಸವ ಅದ್ದೂರಿಯಾಗಿ ನಡೆಯಿತು. ಹೊನ್ನಕೆರೆಗೆ ಪವಿತ್ರ ಸ್ನಾನಕ್ಕಾಗಿ ಮಲ್ಲಯ್ಯನ ಉತ್ಸವ ಮೂರ್ತಿಯನ್ನು ತೆಗೆದುಕೊಂಡು ಬಂದಾಗ ಸೇರಿದ್ದ ಅಪಾರ ಜನಸ್ತೋಮ ಚಿತ್ರ: ರಾಜಕುಮಾರ ನಳ್ಳಿಕರ್

ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕಿನ ಹುಲುಗನಮುರುಡಿಯ ವೆಂಕಟರಮಣಸ್ವಾಮಿ ಬೆಟ್ಟದಲ್ಲಿ ಮಂಗಳವಾರ ವೆಂಕಟರಮಣ ಸ್ವಾಮಿ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ನಡೆಯಿತು ಪ್ರಜಾವಾಣಿ ಚಿತ್ರ

ಶಿವಮೊಗ್ಗದ ತುಮರಿ ಸಮೀಪದ ಸಿಗಂದೂರು ಚೌಡೇಶ್ವರಿ ದೇವಸ್ಥಾನದಲ್ಲಿ ಸಂಕ್ರಾಂತಿ ಅಂಗವಾಗಿ ದೇವಿಯ ಜಾತ್ರೋತ್ಸವ ನಡೆಯುತ್ತಿದೆ. ಮಂಗಳವಾರ ದೇವಿಯ ಮೂಲ ಸ್ಥಾನ ಸೀಗೆ ಕಣಿವೆಯಿಂದ ಹೊರಟ ಜ್ಯೋತಿ ಮೆರವಣಿಗೆಯಲ್ಲಿ ನೂರಾರು ಮಹಿಳೆಯರು ಭಾಗವಹಿಸಿದ್ದರು ಚಿತ್ರ: ಸುಕುಮಾರ್.ಎಂ

ಬಾಗಲಕೋಟೆ ಜಿಲ್ಲೆಯ ಬಾದಾಮಿ ಸಮೀಪದ ಮಹಾಕೂಟೇಶ್ವರ ಪುಷ್ಕರಣಿಯಲ್ಲಿ ಮಂಗಳವಾರ ಭಕ್ತರು ಪುಣ್ಯಸ್ನಾನ ಮಾಡಿದರು ಚಿತ್ರ: ಎಸ್.ಎಂ.ಹಿರೇಮಠ

ಮೈಸೂರು ತಾಲ್ಲೂಕು ಸಿದ್ದಲಿಂಗಪುರದಲ್ಲಿ ರೈತರು ಮಂಗಳವಾರ ರಾಸುಗಳನ್ನು ಕಿಚ್ಚು ಹಾಯಿಸಿದರು ಚಿತ್ರ: ಅನೂಪ್ ರಾಘ.ಟಿ.

ಉಡುಪಿ ಶ್ರೀಕೃಷ್ಣ ಮಠದಲ್ಲಿ ಸಪ್ತೋತ್ಸವ ನಿಮಿತ್ತ ಮಂಗಳವಾರ ರಾತ್ರಿ ಮಳೆ ನಡುವೆಯೇ ಮೂರು ರಥಗಳ ಉತ್ಸವ ನೆರವೇರಿತು ಚಿತ್ರ: ಉಮೇಶ್ ಮಾರ್ಪಳ್ಳಿ

ವಿಶ್ವವಿದ್ಯಾಲಯ ಸ್ಥಾಪನೆಯಾಗಿ 20 ವರ್ಷ ಕಳೆದರೂ ಮೂಲಸೌಕರ್ಯಗಳ ಕೊರತೆ

ಪಶು ವಿ.ವಿಗೆ ಗ್ರಂಥಾಲಯ ಕಟ್ಟಡವೇ ಆಸರೆ

• ಶಶಿಕಾಂತ ಎಸ್. ಶೆಂಬೆಳ್ಳಿ

ಬೀದರ್: ಇಲ್ಲಿನ ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವ ವಿದ್ಯಾಲಯ ಸ್ಥಾಪನೆಗೊಂಡು 20 ವರ್ಷ ಕಳೆದಿವೆ. ಆದರೆ, ಈಗಲೂ ಇದು ಎಲ್ಲ ಚಟುವಟಿಕೆಗಳಿಗೂ ಗ್ರಂಥಾಲಯ ಕಟ್ಟಡವನ್ನೇ ಅವಲಂಬಿಸಿದೆ.

ಸರ್ಕಾರ ಈ ಭಾಗದಲ್ಲಿ 1984ರಲ್ಲಿ ಪಶು ವೈದ್ಯಕೀಯ ಕಾಲೇಜು ಆರಂಭಿಸಿತು. ನಂಜುಂಡಪ್ಪ ವರದಿ ಆಧರಿಸಿ 2005ರ ಜನವರಿ 17ರಂದು ವಿಶ್ವವಿದ್ಯಾಲಯವಾಗಿ ಮೇಲ್ದರ್ಜೆಗೇರಿಸಲಾಯಿತು. ಕಾಲೇಜು ಸಂದರ್ಭದಲ್ಲಿ ನಿರ್ಮಿಸಿದ ಗ್ರಂಥಾಲಯವನ್ನು ತಾತ್ಕಾಲಿಕವಾಗಿ ಆಡಳಿತ ಭವನವಾಗಿ ಬದಲಿಸಲಾಯಿತು. 20 ವರ್ಷ ಕಳೆಯುತ್ತ ಬಂದರೂ ಈಗಲೂ ಅದೇ ಕಟ್ಟಡದಲ್ಲಿ ವಿ.ವಿ. ಕುಲಪತಿ, ಕುಲಸಚಿವರು, ಹಣಕಾಸು ಅಧಿಕಾರಿಗಳು ಹಾಗೂ ಡೀನ್‌ಗಳ ಕಚೇರಿಗಳು ಕೆಲಸ ನಿರ್ವಹಿಸುತ್ತಿವೆ.

ಬೀದರ್‌ನಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಗ್ರಂಥಾಲಯ ಕಟ್ಟಡವನ್ನೇ ಆಡಳಿತ ಭವನವಾಗಿ ಬದಲಿಸಲಾಗಿದೆ

ರಾಜ್ಯದ 7 ಪಶು ವೈದ್ಯಕೀಯ ಕಾಲೇಜುಗಳು, 2 ಹೈನುಗಾರಿಕೆ ಕಾಲೇಜು, 1 ಮೀನುಗಾರಿಕೆ ಕಾಲೇಜು, 10 ಸಂಶೋಧನಾ ವಲಯಗಳು ಹಾಗೂ 5 ಡಿಪ್ಲೊಮಾ ಕಾಲೇಜುಗಳು ಈ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುತ್ತವೆ.

ಜಾನುವಾರು ತಳಿ ಅಭಿವೃದ್ಧಿ, ಲಸಿಕೆ ಸೇರಿ ಹೊಸ ಸಂಶೋಧನೆಗಳು ನಡೆಯುತ್ತಿರುತ್ತಿವೆ. ಕಾರ್ಯಭಾರ ಹೆಚ್ಚಾಗಿದೆ. ಹೀಗಿದ್ದರೂ ಕೆಲಸ ನಿರ್ವಹಿಸಲು ಕುಲಪತಿ ಸೇರಿದಂತೆ ಇತರೆ ಅಧಿಕಾರಿಗಳಿಗೆ ಉತ್ತಮ ಕಟ್ಟಡದ ವ್ಯವಸ್ಥೆಯಿಲ್ಲ.

180 ಎಕರೆ ಪ್ರದೇಶದಲ್ಲಿ ಹರಡಿರುವ ವಿಶ್ವವಿದ್ಯಾಲಯದ ಆವರಣದಲ್ಲಿ ಉತ್ತಮ ಅತಿಥಿ ಗೃಹ, ಸಿಬ್ಬಂದಿ ವಸತಿಗೃಹ, ಸಿ.ಸಿ ರಸ್ತೆಗಳಿಲ್ಲ. ಕ್ರೀಡಾಂಗಣವಿದೆ. ಅಲ್ಲಿ ಸೂಕ್ತ ವ್ಯವಸ್ಥೆ ಇಲ್ಲ. 'ಇಲ್ಲ'ಗಳ ನಡುವೆಯೇ ಕೆಲಸ ನಿರ್ವಹಿಸಬೇಕಾದ ಅನಿವಾರ್ಯ ಇದೆ.

ಶೇ 70ರಷ್ಟು ಹುದ್ದೆ ಖಾಲಿ: ಇದರ ಜೊತೆಗೆ ಸಿಬ್ಬಂದಿ ಕೊರತೆಯೂ ಪಶು ವೈದ್ಯಕೀಯ ವಿಶ್ವ ವಿದ್ಯಾಲಯವನ್ನು ಕಾಡುತ್ತಿದೆ. ವಿ.ವಿ. ವ್ಯಾಪ್ತಿಯ ಸಂಸ್ಥೆಗಳಿಗೆ ಒಟ್ಟು 794 ಬೋಧಕ ಹುದ್ದೆಗಳು ಮಂಜೂರಾಗಿವೆ. ಆದರೆ, 264 ಹುದ್ದೆಗಳಷ್ಟೇ ಭರ್ತಿ ಆಗಿವೆ. 1,577 ಬೋಧಕೇತರ ಹುದ್ದೆಗಳಲ್ಲಿ 225 ನೇಮಕಾತಿಯಾಗಿದ್ದು, 1,352 ಹುದ್ದೆ ಖಾಲಿ ಉಳಿದಿವೆ.

'ವಿ.ವಿ ಆಡಳಿತ ಮಂಡಳಿ ಅನುದಾನಕ್ಕೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸುತ್ತಲೇ ಇದೆ. ಆದರೆ, ಸರ್ಕಾರ ಕಿವಿಗೊಟ್ಟಿಲ್ಲ. ಗ್ಯಾರಂಟಿ ಯೋಜನೆಗಳ ಜಾರಿ ಬಳಿಕ ಅನುದಾನದ ಕಡತ ಮೂಲೆ ಸೇರಿದೆ' ಎಂದು ವಿ.ವಿ. ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಅನುದಾನ: ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಕೆ'

ಪ್ರೊ. ಕೆ.ಸಿ. ವೀರಣ್ಣ

'20 ವರ್ಷಗಳಿಂದ ಗ್ರಂಥಾಲಯ ಕಟ್ಟಡದಲ್ಲೇ ಆಡಳಿತಾತ್ಮಕ ಚಟುವಟಿಕೆ ನಡೆಸಿಕೊಂಡು ಬರುತ್ತಿದ್ದೇವೆ. ಪ್ರತ್ಯೇಕ ಆಡಳಿತಾತ್ಮಕ ಕಟ್ಟಡದ ಅಗತ್ಯವಿದೆ. ಸರ್ಕಾರ ಅಥವಾ ಕೆಕೆಆರ್‌ಡಿಬಿ ಮೂಲಕ ಅನುದಾನ ಒದಗಿಸಬೇಕು ಎಂದು ಪ್ರಸ್ತಾವ ಸಲ್ಲಿಸಿದ್ದೇವೆ. ಮೇಲಿಂದ ಮೇಲೆ ಅಂತರರಾಷ್ಟ್ರೀಯ ಸಮ್ಮೇಳನಗಳು ನಡೆಯುತ್ತಿರುತ್ತವೆ. ಅದಕ್ಕಾಗಿ ಅತಿಥಿಗೃಹ ಸೇರಿ ಮೂಲಸೌಕರ್ಯ ಹೆಚ್ಚಿಸಲು ಅನುದಾನದ ಅಗತ್ಯವಿದೆ' ಎಂದು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಕೆ.ಸಿ. ವೀರಣ್ಣ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ್ದಾರೆ.

ಡಿ. ಫಾರ್ಮ 'ಪರೀಕ್ಷಾ ಅಕ್ರಮ'ಕ್ಕೆ ದಾರಿ?

ಒಂದನೇ ಪುಟದಿಂದ...

ಈ ಸಂಬಂಧ ಎನ್. ಮಂಜುನಾಥ್ ಎಂಬುವವರು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಸರ್ಕಾರದ ಮುಖ್ಯ ಕಾರ್ಯದರ್ಶಿ, ಇಲಾಖೆಯ ಪ್ರಧಾನ ಕಾರ್ಯದರ್ಶಿ ಮತ್ತು ಔಷಧ ನಿಯಂತ್ರಣ ಇಲಾಖೆಯ ಆಯುಕ್ತರಿಗೆ ಮತ್ತು ಔಷಧ ನಿಯಂತ್ರಕರಿಗೆ ದೂರು ನೀಡಿದ್ದಾರೆ.

'ಪರೀಕ್ಷಾ ಕೇಂದ್ರಗಳನ್ನು ನಿರ್ಧರಿಸಿ, ಅವುಗಳಿಗೆ ಕಾಲೇಜು ಹಂಚಿಕೆ ಮಾಡುವುದೇ ದಂಧೆಯಾಗಿದೆ. ಪ್ರಾಧ್ಯಾಪಕರು ಹಾಗೂ ಯಾವುದೇ ಮೂಲಸೌಲಭ್ಯಗಳಿಲ್ಲದ ಕಾಲೇಜುಗಳಿಂದ ಹಣ ಪಡೆದು ಪರೀಕ್ಷಾ ಕೇಂದ್ರಗಳನ್ನು ನೀಡಲಾಗಿದೆ. ಒಂದೇ ದಿನಾಂಕ ನಮೂದಿಸಿ ಪ್ರಾಧಿಕಾರದ ಮಂಡಳಿಯು ಹೊರಡಿಸಿರುವ ಪ್ರತ್ಯೇಕ ಅಧಿಸೂಚನೆಗಳನ್ನು ನೋಡಿದರೆ ಫಾರ್ಮಸಿ ಕಾಲೇಜುಗಳ ಮರುಹಂಚಿಕೆಯಲ್ಲಿ ಭ್ರಷ್ಟಾಚಾರ ನಡೆದಿರುವ ಸಂಶಯ ಮೂಡಿದೆ. ಮಂಡಳಿಯ ಈ ನಡೆಯ ಬಗ್ಗೆ ತನಿಖೆ ನಡೆಸಬೇಕು' ಎಂದೂ ಅವರು ಆಗ್ರಹಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆಗಾಗಿ ಸಚಿವ ದಿನೇಶ್ ಗುಂಡೂರಾವ್ ಅವರಿಗೆ ಕರೆ ಮಾಡಿದರೂ ಅವರು ಕರೆ ಸ್ವೀಕರಿಸಲಿಲ್ಲ.

ಅಕ್ರಮ ನಡೆಸಿದ ಕಾಲೇಜಿಗೆ ಮತ್ತೆ ಕೇಂದ್ರ

ತುಮಕೂರು ಜಿಲ್ಲೆಯ ಕೊರಟಗೆರೆಯ ಪ್ರಿಯದರ್ಶಿನಿ ಕಾಲೇಜ್ ಆಫ್ ಫಾರ್ಮಸಿ ಪರೀಕ್ಷಾ ಕೇಂದ್ರದಲ್ಲಿ 2023ರ ಜನವರಿಯಲ್ಲಿ ನಡೆದ ಡಿ. ಫಾರ್ಮ ವಾರ್ಷಿಕ ಪರೀಕ್ಷೆಗೆ ಗೈರಾಗಿದ್ದ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳು ಮೌಲ್ಯಮಾಪನ ವೇಳೆಯಲ್ಲಿ ಪತ್ತೆಯಾಗಿತ್ತು. ಈ ಪ್ರಕರಣದ ತನಿಖೆ ನಡೆಸಿದ್ದ ಸಮಿತಿಯು, ಈ ಕಾಲೇಜ್ ಅನ್ನು ಪರೀಕ್ಷಾ ಕೇಂದ್ರವಾಗಿಸದಂತೆ ಸೂಚನೆ ನೀಡಿತ್ತು. ಆದರೆ, ಅದೇ ಕಾಲೇಜಿಗೆ ಈ ಬಾರಿಯೂ ಪರೀಕ್ಷಾ ಕೇಂದ್ರ ನೀಡಲಾಗಿದೆ. ಅಲ್ಲದೆ, ಯಾವುದೇ ಮೂಲಸೌಲಭ್ಯಗಳು ಇಲ್ಲದ ಕಾಲೇಜುಗಳಲ್ಲಿ ಪರೀಕ್ಷೆಗಳನ್ನು ನಡೆಸಬಾರದು ಎಂದು ಪರಿಶೀಲನಾ ಸಮಿತಿ ವರದಿ ನೀಡಿತ್ತು. ಆದರೂ ಬೀದರ್, ತಿಪಟೂರು, ಗದಗ, ಯಾದಗಿರಿ, ಕೂಡ್ಲಗಿ ಫಾರ್ಮಸಿ ಕಾಲೇಜುಗಳಲ್ಲಿ 2024ರ ಜನವರಿಯಲ್ಲಿ ಡಿ. ಫಾರ್ಮ ಪರೀಕ್ಷೆ ನಡೆದಿತ್ತು. ಇಂತಹ ಕಾಲೇಜುಗಳಲ್ಲಿ ಪರೀಕ್ಷೆ ನಡೆಸಿದ ಮಂಡಳಿ ಮಂಡಳಿಯ ನಡೆಗೂ ತೀವ್ರ ವಿರೋಧ ವ್ಯಕ್ತವಾಗಿತ್ತು.

'ನಾನು ಮಾತನಾಡಲ್ಲ, ನನಗೇನೂ ಗೊತ್ತಿಲ್ಲ'

ಒಂದೇ ದಿನಾಂಕ ನಮೂದಿಸಿ ಮೂರು ಅಧಿಸೂಚನೆಗಳನ್ನು ಹೊರಡಿಸಿರುವ ಕುರಿತು ಪ್ರತಿಕ್ರಿಯಿಸಲು ಪರೀಕ್ಷಾ ಪ್ರಾಧಿಕಾರದ ಮಂಡಳಿ (ಡಿ. ಫಾರ್ಮ) ಸದಸ್ಯ ಕಾರ್ಯದರ್ಶಿ ನಜೀರ್ ಅಹಮದ್ ನಿರಾಕರಿಸಿದರು. ಪರೀಕ್ಷಾ ಕೇಂದ್ರಗಳಿಗೆ ಕಾಲೇಜುಗಳ ಮರು ಹಂಚಿಕೆಯ ಕುರಿತು ಪ್ರಶ್ನಿಸುತ್ತಿದ್ದಂತೆ, ಉತ್ತರಿಸಲು ತಡವರಿಸಿ, ಈ ವಿಷಯಕ್ಕೂತಮಗೂ ಸಂಬಂಧ ಇಲ್ಲದಂತೆ ಪ್ರತಿಕ್ರಿಯಿಸಿದರು.

'ನಾನು ಮಾತನಾಡಲ್ಲ, ನನಗೇನೂ ಗೊತ್ತಿಲ್ಲ. ನಾನು ಪರೀಕ್ಷಾ ಕೆಲಸದಲ್ಲಿ ನಿರತನಾಗಿದ್ದೇನೆ. ಆಯುಕ್ತರ ಬಳಿ ಈ ಬಗ್ಗೆ ಮಾತನಾಡಿ' ಎನ್ನುತ್ತಲೇ ಕರೆ ಕಡಿತಗೊಳಿಸಿದರು. ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ ಆಯುಕ್ತ ಕೆ. ಶ್ರೀನಿವಾಸ್ ಅವರು ಸಂಪರ್ಕಕ್ಕೆ ಲಭ್ಯರಾಗಲಿಲ್ಲ.

'ಪ್ರಜಾವಾಣಿ'ಯ ಆರು ಮಂದಿಗೆ ಪತ್ರಕರ್ತರ ಸಂಘದಿಂದ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘವು ವಾರ್ಷಿಕ ಪ್ರಶಸ್ತಿ ಪ್ರಕಟಿಸಿದ್ದು, 'ಪ್ರಜಾವಾಣಿ'ಯ ಆರು ಪತ್ರಕರ್ತರು ಭಾಜನರಾಗಿದ್ದಾರೆ.

'ಪ್ರಜಾವಾಣಿ'ಯ ಬಿ.ಎಸ್. ಷಣ್ಮುಖಪ್ಪ ಅವರಿಗೆ ನ್ಯಾಯಾಲಯದ ಅತ್ಯುತ್ತಮ ವರದಿಗಾಗಿ, ಸಿದ್ದಯ್ಯ ಹಿರೇಮಠ ಅವರಿಗೆ ಅತ್ಯುತ್ತಮ ವಿಡಂಬನಾತ್ಮಕ ಲೇಖನಕ್ಕೆ (ನಾಡಿಗೇರ ಕೃಷ್ಣರಾಯರ ಪ್ರಶಸ್ತಿ), ಕೆ.ಓಂಕಾರಮೂರ್ತಿ, ಸಿದ್ದು ಆರ್.ಜಿ ಹಳ್ಳಿ ಅವರಿಗೆ ಅತ್ಯುತ್ತಮ ಸ್ಕೂಪ್ ವರದಿಗೆ (ಬಿ. ಎಸ್. ವೆಂಕಟರಾಂ ಪ್ರಶಸ್ತಿ), ಡಿ.ಜೆ. ಮಲ್ಲಿಕಾರ್ಜುನ ಅವರಿಗೆ ಛಾಯಾಚಿತ್ರ ಸಹಿತ ವರದಿಗೆ ಹಾಗೂ 'ಸುಧಾ' ವಾರಪತ್ರಿಕೆಯ ಕೋಡಿಬೆಟ್ಟು ರಾಜಲಕ್ಷ್ಮಿ ಅವರ ಚಿತ್ರಲೇಖನಕ್ಕೆ ಮಂಗಳ ಎಂ.ಸಿ. ವರ್ಗೀಸ್ ಪ್ರಶಸ್ತಿ ಲಭಿಸಿದೆ.

ಜನವರಿ 18 ಮತ್ತು 19ರಂದು ತುಮಕೂರಿನಲ್ಲಿ ನಡೆಯಲಿರುವ 39ನೇ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಶಿವಾನಂದ ತಗಡೂರು ತಿಳಿಸಿದ್ದಾರೆ.

ಪ್ರಶಸ್ತಿಗಳ ವಿವರ: ಜಿ. ನಾರಾಯಣ ಸ್ವಾಮಿ ಪ್ರಶಸ್ತಿ– ಚಂದ್ರಶೇಖರ ಮುಕ್ಕುಂದಿ, ದಿಗಂಬರ ಮುರುಳೀಧರ ಪೂಜಾರ್.

ಪಟೇಲ್ ಭೈರಹನುಮಯ್ಯ ಪ್ರಶಸ್ತಿ: ಪ್ರಸನ್ನ ಮನೋಹರ ಕುಲಕರ್ಣಿ (ಡೆಕ್ಕನ್ ಹೆರಾಲ್ಡ್, ಖಾನಾಪುರ), ರವಿರಾಜ್ ಆರ್. ಗಲಗಲಿ.

ಗಿರಿಧರ್ ಪ್ರಶಸ್ತಿ: ಮಂಜುನಾಥ್. ಕೆ., ಶಕೀಲ ಚೌಧರಿ.

ಕೆ.ಎ. ನೆಟ್ಟಕಲ್ಲಪ್ಪ ಪ್ರಶಸ್ತಿ: ಕಾಯಪಂಡ ಶಶಿ ಸೋಮಯ್ಯ, ಪುನೀತ್ ಸಿ.ಟಿ.

ಖಾದ್ರಿ ಶಾಮಣ್ಣ ಪ್ರಶಸ್ತಿ: ಅಪ್ಪಾರಾವ್ ಸೌದಿ, ರಮೇಶ ದೊಡ್ಡಪುರ

ಮಂಗಳ ಎಂ.ಸಿ. ವರ್ಗೀಸ್ ಪ್ರಶಸ್ತಿ: ನಾರಾಯಣ ರೈ ಕುಕ್ಕುವಳ್ಳಿ

ತಗಡೂರು ಕಮಲಮ್ಮ ವೀರೇಗೌಡ ಪ್ರಶಸ್ತಿ: ಪುಟ್ಟರಾಜು, ಮರಿದೇವರು ಹೂಗಾರ

ಆರ್. ಎಲ್. ವಾಸುದೇವರಾವ್ ಪ್ರಶಸ್ತಿ: ಗುರುಪ್ರಸಾದ್ ತುಂಬಸೋಗೆ, ಹರಿಪ್ರಸಾದ್ ನಂದಳಿಕೆ

ಆರ್.ಎಲ್. ವಾಸುದೇವರಾವ್ ಪ್ರಶಸ್ತಿ: ರೇಣುಕೇಶ್ ಎಂ., ಶಿವು ಹುಣಸೂರು

ಬಿ.ಜಿ.ತಿಮ್ಮಪ್ಪಯ್ಯ ಪ್ರಶಸ್ತಿ: ಡಿ.ಎನ್. ತಿಪ್ಪೇಸ್ವಾಮಿ, ನಜೀರ್ ಅಹಮದ್

ಮಂಡಿಬೆಲೆ ಶಾಮಣ್ಣ ಸ್ಮಾರಕ ಪ್ರಶಸ್ತಿ: ರವಿ ಬಿದನೂರು, ಸಿದ್ಧನಗೌಡ ಎಚ್. ಪಾಟೀಲ

ನಾಡಪ್ರಭು ಕೆಂಪೇಗೌಡ ಸ್ಮಾರಕ ಪ್ರಶಸ್ತಿ: ಡಿ.ಬಿ.ಬಸವರಾಜು, ಶಿವಾನಂದ, ಮುತ್ತುರಾಜ್, ಕೆ.ಎಸ್. ನಾಗರಾಜ್, ನಂದೀಶ್ ದುಗಡಿ

ಯಜಮಾನ್ ಟಿ. ನಾರಾಯಣಪ್ಪ ಸ್ಮಾರಕ ಪ್ರಶಸ್ತಿ: ಹುಡೇಂ ಕೃಷ್ಣಮೂರ್ತಿ, ವಿಜಯ ಭಾಸ್ಕರರೆಡ್ಡಿ, ಜಯಂತಿ ಯು.ಎಂ.

ಅತ್ಯುತ್ತಮ ಪುಟ ವಿನ್ಯಾಸ: ಜನಾರ್ದನ, ವಿಜಯಕುಮಾರ್

ಸುಣ್ಣುವಂಡ ಶ್ರೀನಿವಾಸ ಚಂಗಪ್ಪ ಪ್ರಶಸ್ತಿ: ವಿಶ್ವಕುಮಾರ್ ಇ.ಆರ್.

ಕೆ.ಎನ್. ಸುಬ್ರಮಣ್ಯ ಪ್ರಶಸ್ತಿ: ಪಿ.ಶಿಲ್ಪ (ಡೆಕ್ಕನ್ ಹೆರಾಲ್ಡ್), ಅಕ್ಷಯ ಪಿ.ವಿ.

ಮಲಗೊಂಡ ಪ್ರಶಸ್ತಿ: ಶರಣ ಬಸವ ನೀರಮಾನ್ವಿ, ಪಿ.ರಾಮಸ್ವಾಮಿ ಕಣ್ವ

ನಟ, ನಿರ್ದೇಶಕ ದ್ವಾರಕೀಶ್ ಸ್ಮಾರಕ ಪ್ರಶಸ್ತಿ– ಕೆ.ಎಸ್.ವಾಸು

ಅಭಿಮಾನಿ ಪ್ರಕಾಶನ ಪ್ರಶಸ್ತಿ: ರವಿರಾಜ ಗಲಗಲಿ, ಮಾಲತೇಶ ಅರಸು

ಸುದ್ದಿಚಿತ್ರ– ನಂದನ್ ಪುಟ್ಟಣ್ಣ

ಫೋಟೋಗ್ರಫಿ: ಅತೀಖುರ್ ರೆಹಮಾನ್, ಎಸ್.ಚರಣ್ ಬಿಳಿಗಿರಿ

ವಿದ್ಯುನ್ಮಾನ (ಟಿವಿ)ವಿಭಾಗ:

ಅತ್ಯುತ್ತಮ ರಾಜಕೀಯ ವಿಶ್ಲೇಷಣೆ– ಅಜಿತ್ ಹನುಮಕ್ಕನವರ್

ಸಾಮಾಜಿಕ, ಮಾನವೀಯ ವರದಿ– ಕೆ.ಪಿ.ನಾಗರಾಜ್

ವಿದ್ಯುನ್ಮಾನ ವಿಭಾಗ: ವಿಜಯ್ ಜೆ.ಆರ್, ಸತೀಶ್ ಕುಮಾರ್ ಎಂ, ಮಂಜುನಾಥ್ ಕೆ.ಬಿ, ರಶ್ಮಿ ಶ್ರೀನಿವಾಸ ಹಳಕಟ್ಟಿ.

ಕೆಯುಡಬ್ಲ್ಯುಜೆ ವಿಶೇಷ ಪ್ರಶಸ್ತಿ: ಮುರುಳೀಧರ್ ಡಿ.ಪಿ, ಪದ್ಮ ನಾಗರಾಜ್, ಮುಮ್ತಾಜ್ ಅಲೀಂ, ಕೆ.ಆರ್.ರೇಣು, ವೇಣುಗೋಪಾಲ್, ರೋನ್ಸ್ ಬಂಟ್ವಾಳ, ಶರಣಬಸಪ್ಪ ಜಿಡಗ, ಅಲ್ಲಮಪ್ರಭು ಮಲ್ಲಿಕಾರ್ಜುನ, ಮೊಹಮದ್ ಯೂನಸ್, ಎಸ್. ಕೆ.ಒಡೆಯರ್, ಗುರುರಾಜ ಹೂಗಾರ.

ಹೃದಯಾಘಾತ ವಿದ್ಯಾರ್ಥಿ ಸಾವು

ಪ್ರಜಾವಾಣಿ ವಾರ್ತೆ

ವಾಡಿ (ಕಲಬುರಗಿ ಜಿಲ್ಲೆ): ಎದೆ ನೋಯುತ್ತಿದೆ ಎಂಬ ಕಾರಣಕ್ಕೆ ಸ್ನೇಹಿತನ ಜತೆ ಬೈಕ್ ಮೇಲೆ ಆಸ್ಪತ್ರೆಗೆ ತೆರಳುತ್ತಿದ್ದ ವಿದ್ಯಾರ್ಥಿ ಮಂಗಳವಾರ ಮಾರ್ಗಮಧ್ಯೆ ಮೃತಪಟ್ಟಿದ್ದಾನೆ.

ಕೊರೇಶ

ಚಿತ್ತಾಪುರ ತಾಲ್ಲೂಕಿನ ನಾಲವಾರ ಗ್ರಾಮದ ನಿವಾಸಿ ಕೊರೇಶ ಸಿದ್ದಣ್ಣ ಮದ್ರಿ (17) ಮೃತ ವಿದ್ಯಾರ್ಥಿ.

ಕಲಬುರಗಿಯಲ್ಲಿ ಪ್ಯಾರಾ ಮೆಡಿಕಲ್ ವ್ಯಾಸಂಗ ಮಾಡುತ್ತಿದ್ದ ಕೊರೇಶಗೆ ಮಂಗಳವಾರ ಬೆಳಿಗ್ಗೆ 10 ಗಂಟೆ ಸುಮಾರಿಗೆ ಎದೆನೋವು ಕಾಣಿಸಿಕೊಂಡಿದೆ. ಸ್ನೇಹಿತರಾದ ಪ್ರಶಾಂತ ಹಾಗೂ ಕಿರಣ ಜೊತೆಗೆ ಬೈಕ್‌ನಲ್ಲಿ ನಾಲವಾರ ಸ್ಟೇಷನ್ ಖಾಸಗಿ ಆಸ್ಪತ್ರೆಗೆ ತೆರಳುವ ವೇಳೆ ದಾರಿ ಮಧ್ಯೆಯೇ ಹೃದಯ ಬಡಿತ ಸ್ಥಗಿತವಾಗಿದೆ. ಬೈಕ್ ನಿಲ್ಲಿಸಿ ಆಟೊ ಮೂಲಕ ಆಸ್ಪತ್ರೆಗೆ ತೆರಳುವಷ್ಟರಲ್ಲಿ ಕೊರೇಶ ಅವರ ಪ್ರಾಣ ಹೋಗಿದೆ.

ಒಬ್ಬನೇ ಮಗನನ್ನು ಕಳೆದುಕೊಂಡ ಪೋಷಕರ ಆಕ್ರಂದನ ಮುಗಿಲು ಮುಟ್ಟಿದೆ. ಸ್ಥಳೀಯವಾಗಿ ಚಿಕಿತ್ಸೆ ಲಭ್ಯವಿದ್ದರೆ ಅನಾಹುತ ಸಂಭವಿಸುತ್ತಿರಲಿಲ್ಲ ಎಂದು ಸ್ಥಳೀಯರು ಆಸ್ಪತ್ರೆಯ ಅವ್ಯವಸ್ಥೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಚಿವೆ ಲಕ್ಷ್ಮೀ ಹೆಬ್ಬಾಳಕರ ಬೆನ್ನುಮೂಳೆ ಮುರಿತ

ಒಂದನೇ ಪುಟದಿಂದ...

'ಏರ್‌ಬ್ಯಾಗ್‌ಗಳು ತೆರೆದುಕೊಂಡಿದ್ದರಿಂದ ಯಾರಿಗೂ ಹೆಚ್ಚಿನ ಅಪಾಯ ಸಂಭವಿಸಲಿಲ್ಲ. ಅಲ್ಲದೇ, ರಾಷ್ಟ್ರೀಯ ಹೆದ್ದಾರಿ ಹಾಗೂ ಸರ್ವಿಸ್ ರಸ್ತೆಯ ಎತ್ತರಗಳೂ ಸಮನಾಗಿದ್ದರಿಂದ ಕಾರ್ ಪಲ್ಟಿ ಆಗಲಿಲ್ಲ. ಕೂದಲೆಳೆಯ ಅಂತರದಲ್ಲೇ ಭಾರಿ ಅನಾಹುತ ತಪ್ಪಿದೆ. ಅಪಘಾತದ ಬಳಿಕ ಬೇರೊಂದು ಕಾರಿನಲ್ಲಿ ಎಲ್ಲರನ್ನೂ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಲಕ್ಷ್ಮೀ ಅವರು ಕಾರು ಚಾಲಕನ ಪಕ್ಕದ ಸೀಟಿನಲ್ಲೇ ಕೂತಿದ್ದರು. ಕಾರಿನ ಮುಂಭಾಗ ನಜ್ಜುಗುಜ್ಜಾಗಿದೆ. 'ಸಚಿವೆ ಸೀಟ್‌ಬೆಲ್ಟ್ ಹಾಕಿದ್ದರಿಂದ ಹೆಚ್ಚು ಪೆಟ್ಟು ಬಿದ್ದಿಲ್ಲ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹಸಚಿವ ಡಾ.ಜಿ.ಪರಮೇಶ್ವರ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿ ಹಲವರು ಫೋನ್ ಮೂಲಕ ಸಚಿವೆಯ ಆರೋಗ್ಯ ವಿಚಾರಿಸಿದರು. ಶಾಸಕಿ ಶಶಿಕಲಾ ಜೊಲ್ಲೆ, ಹಲವು ಕಾಂಗ್ರೆಸ್ ಮುಖಂಡರೂ ಆಸ್ಪತ್ರೆಗೆ ಭೇಟಿ ನೀಡಿದ್ದರು.

ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರು ಪ್ರಯಾಣಿಸುತ್ತಿದ್ದ ಕಾರು ಮಂಗಳವಾರ ನಸುಕಿನಲ್ಲಿ ಬೆಳಗಾವಿ ಜಿಲ್ಲೆಯ ಅಂಬಡಗಟ್ಟಿ ಬಳಿ ಮರಕ್ಕೆ ಡಿಕ್ಕಿ ಹೊಡೆದಿದೆ

ಚಾಲಕನ ವಿರುದ್ಧ ಗನ್‌ಮ್ಯಾನ್ ದೂರು

ಸಚಿವೆ ಲಕ್ಷ್ಮೀ ಅವರ ಸರ್ಕಾರಿ ಕಾರು ಅಪಘಾತಕ್ಕೆ ಸಂಬಂಧಿಸಿ ಅವರ ಅಂಗರಕ್ಷಕ ಈರಪ್ಪ ಹುಣಶಿಕಟ್ಟಿ ಅವರು ಚಾಲಕ ಜಿ.ಶಿವಪ್ರಸಾದ್ ವಿರುದ್ಧ ಕಿತ್ತೂರು ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ವೇಗ, ನಿಷ್ಕಾಳಜಿಯಿಂದ ಚಾಲನೆ (ಸೆಕ್ಷನ್ 281), ಅಜಾಗರೂಕತೆಯಿಂದ ಅಪಘಾತ (ಸೆಕ್ಷನ್ 125ಎ, 125ಬಿ) ಅಡಿ ಪ್ರಕರಣ ದಾಖಲಿಸಲಾಗಿದೆ.

ಕಾರು ಚಾಲಕ ಜಿ.ಶಿವಪ್ರಸಾದ್ ಕೂಡ ಎದುರಿಗೆ ಸಾಗುತ್ತಿದ್ದ ಕಂಟೇನರ್ ಚಾಲಕನ ವಿರುದ್ಧ ದೂರು ದಾಖಲಿಸಿದ್ದಾರೆ.

ಬೆಂಗಾವಲು ಪಡೆ ಕೇಳದ ಸಚಿವೆ

'ರಾತ್ರಿ 11ರ ನಂತರ ಬೆಂಗಳೂರು ಬಿಟ್ಟಿದ್ದರಿಂದ ಸಚಿವರಿಗೆ ಬೆಂಗಾವಲು ಪಡೆ ಬೇಕು ಎಂದು ಕೇಳಲಿಲ್ಲ. ಮಂಗಳವಾರ ಸಂಕ್ರಾಂತಿ ಹಬ್ಬವಾಗಿದ್ದರಿಂದ ಮನೆ ದೇವರ ಪೂಜೆಗೆ ಹೋಗಬೇಕಿದ್ದ ಕಾರಣ ರಾತ್ರಿಯೇ ಹೊರಟಿದ್ದೆವು' ಎಂದು ಚನ್ನರಾಜ ಹಟ್ಟಿಹೊಳಿ ತಿಳಿಸಿದರು.

'ದಾವಣಗೆರೆ ತಲುಪಿದ ಬಳಿಕ ಚಾಲಕನನ್ನು ಬದಲಾಯಿಬೇಕಿತ್ತು. ಅದರೆ, ಹಬ್ಬದ ವೇಳೆ ಅವರಿಗೆ ತುಸು ಬಿಡುವು ಸಿಗಲಿ ಎಂದು ಬದಲಿಸಲಿಲ್ಲ. ಇದು ನಾವು ಮಾಡಿದ ಸಣ್ಣ ಲೋಪ' ಎಂದೂ ಅವರು ಸುದ್ದಿಗಾರರಿಗೆ ತಿಳಿಸಿದರು.

'ಸಂಕ್ರಾಂತಿ ಕರಿ ಮುಗಿಯುವವರೆಗೆ ಇಂಥ ಘಟನೆಗಳು ಸಂಭವಿಸುತ್ತವೆ. ಎಲ್ಲಿಗೂ ಪ್ರಯಾಣಿಸಬೇಡಿ ಎಂದು ನಮ್ಮ ಹಿತೈಷಿ ಹೇಳಿದ್ದರು. ಅವರ ಮಾತು ಅಲಕ್ಷ್ಯ ಮಾಡಿದೆವು' ಎಂದು ತಿಳಿಸಿದರು.

ಬೇಗ ಗುಣಮುಖರಾಗಲಿ: ಟ್ವೀಟ್‌ನಲ್ಲಿ ಸಿ.ಟಿ.ರವಿ ಹಾರೈಕೆ

ಸಿ.ಟಿ.ರವಿ

'ಸಚಿವೆ ಲಕ್ಷ್ಮೀ ಹೆಬ್ಬಾಳಕರ ಮತ್ತು ಅವರ ಸಹೋದರ ಬೇಗ ಗುಣಮುಖರಾಗಲಿ ಎಂದು ದೇವರಲ್ಲಿ ಪ್ರಾರ್ಥನೆ ಮಾಡುತ್ತೇನೆ' ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ 'ಎಕ್ಸ್'ನಲ್ಲಿ ಹಾರೈಸಿದ್ದಾರೆ.

ಡಿಸೆಂಬರ್‌ನಲ್ಲಿ ನಡೆದ ಚಳಿಗಾಲದ ಅಧಿವೇಶನದಲ್ಲಿ ವಿಧಾನ ಪರಿಷತ್ ಕಲಾಪದಲ್ಲೇ ತಮಗೆ 'ಅವಾಚ್ಯ' ಪದ ಬಳಸಿ ನಿಂದಿಸಿದ್ದಾರೆ ಎಂದು ಲಕ್ಷ್ಮೀ ಅವರು ರವಿ ವಿರುದ್ಧ ದೂರು ದಾಖಲಿಸಿದ್ದಾರೆ.

ನಗರದೆಲ್ಲೆಡೆ ಸಂಭ್ರಮ ಸಡಗರದಿಂದ ಸಂಕ್ರಾಂತಿ ಆಚರಣೆ

ಎಳ್ಳು–ಬೆಲ್ಲ ಹಂಚಿ ಸಂಭ್ರಮಿಸಿದ ಜನರು

ಸುಧಾಮನಗರದ ಕೆ.ಎಸ್‌. ಗಾರ್ಡನ್‌ನಲ್ಲಿ ಪೊಂಗಲ್ ತಯಾರಿಕೆ ವೇಳೆ ಮಕ್ಕಳು ಕುಣಿದು ಸಂಭ್ರಮಿಸಿದರು ಚಿತ್ರ: ರಂಜು ಪಿ.

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ ನಗರದ ದೇವಾಲಯಗಳಲ್ಲಿ ವಿಶೇಷ ಪೂಜೆ, ಅಲ್ಲಲ್ಲಿ ಗೋಪೂಜೆ ಹಾಗೂ ಕಿಚ್ಚು ಹಾಯಿಸುವ ಕಾರ್ಯಕ್ರಮಗಳು ಮಂಗಳವಾರ ನಡೆದವು.

ಹಬ್ಬದ ಅಂಗವಾಗಿ ಮನೆಗಳು ತಳಿರು ತೋರಣಗಳಿಂದ ಸಿಂಗಾರಗೊಂಡಿದ್ದವು. ಚಿಣ್ಣರು, ಮಹಿಳೆಯರು ಹೊಸ ಬಟ್ಟೆ ತೊಟ್ಟು, ಎಳ್ಳು–ಬೆಲ್ಲ ಮತ್ತು ಕಬ್ಬಿನ ಜಲ್ಲೆಯನ್ನು ಹಂಚಿ ಸಂಭ್ರಮಿಸಿದರು. ಹಬ್ಬಕ್ಕೆ ರಜೆ ನೀಡಿದ್ದರಿಂದ ಬಹುತೇಕರು ಮನೆಯಲ್ಲಿಯೇ ಪೊಂಗಲ್ ತಯಾರಿಸಿ, ಕುಟುಂಬದ ಸದಸ್ಯರು ಒಟ್ಟಾಗಿ ಸವಿದರು. ನಗರದ ಮೈದಾನಗಳಲ್ಲಿ ನಡೆದ ರಾಸುಗಳಿಗೆ ಕಿಚ್ಚು ಹಾಯಿಸುವ ಸ್ಪರ್ಧೆ, ರಂಗೋಲಿ ಸ್ಪರ್ಧೆ, ಧಾನ್ಯಗಳ ರಾಶಿ ಪೂಜೆಗಳು ಹಬ್ಬದ ಸಂಭ್ರಮ ಹೆಚ್ಚಿಸಿದವು.

ಮೈಸೂರು ರಸ್ತೆಯ ಗಾಳಿ ಆಂಜನೇಯ ದೇವಸ್ಥಾನ, ಮಲ್ಲೇಶ್ವರದ ಲಕ್ಷ್ಮಿ ನರಸಿಂಹ ದೇವಸ್ಥಾನ, ಬಸವನಗುಡಿಯ ದೊಡ್ಡ ಬಸವಣ್ಣ ದೇವಸ್ಥಾನ, ಕೆ.ಆರ್. ಮಾರುಕಟ್ಟೆಯ ಕೋಟೆ ಪ್ರಸನ್ನ ವೆಂಕಟರಮಣ ದೇವಸ್ಥಾನ, ಹಲಸೂರಿನ ಸೋಮೇಶ್ವರ ದೇವಸ್ಥಾನ, ಯಶವಂತಪುರ ಸರ್ಕಲ್‌ನ ಗಾಯತ್ರಿ ದೇವಸ್ಥಾನ, ಜೆ.ಪಿ. ನಗರದ ರಾಗಿಗುಡ್ಡ ಆಂಜನೇಯ ದೇವಸ್ಥಾನ, ಬನಶಂಕರಿಯ ದೇವಗಿರಿ ವೆಂಕಟೇಶ್ವರ ದೇವಾಲಯ ಸೇರಿದಂತೆ ವಿವಿಧ ದೇವಸ್ಥಾನಗಳಲ್ಲಿ ವಿಶೇಷ ಪೂಜೆಗಳು ನಡೆದವು. ದೇವರ ದರ್ಶನಕ್ಕೆ ಸರದಿ ಸಾಲಿನಲ್ಲಿ ಜನರು ನಿಂತಿರುವ ದೃಶ್ಯ ಎಲ್ಲೆಡೆ ಸಾಮಾನ್ಯವಾಗಿತ್ತು. ಭಕ್ತರಿಗೆ ಪೊಂಗಲ್ ಮತ್ತು ಕೋಸಂಬರಿ ಪ್ರಸಾದ ನೀಡಲಾಯಿತು.

ಸಂಕ್ರಾಂತಿ ಸುಗ್ಗಿ: ರಾಜರಾಜೇಶ್ವರಿನಗರ, ಮಲ್ಲೇಶ್ವರ ಆಟದ ಮೈದಾನ, ಮತ್ತಿಕೆರೆ, ಯಶವಂತಪುರ, ಯಲಹಂಕ ಉಪನಗರ, ಪದ್ಮನಾಭ ನಗರದಲ್ಲಿ ವಿವಿಧ ಸಂಸ್ಥೆಗಳು ಬೆಂಕಿಯ ಕಿಚ್ಚಿನ ಮೇಲೆ ದನಗಳನ್ನು ಹಾಯಿಸುವ ಆಚರಣೆ ನಡೆಸಿದವು.

ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ಸಮಿತಿ ವತಿಯಿಂದ ಜಯನಗರದ ಕಿತ್ತೂರ ರಾಣಿ ಚೆನ್ನಮ್ಮ ಕ್ರೀಡಾಂಗಣದಲ್ಲಿ 'ಸುಗ್ಗಿ ಹುಗ್ಗಿ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಪೊಂಗಲ್ ತಯಾರಿಸಿ, ಪೌರಕಾರ್ಮಿಕರಿಗೆ ವಿಶೇಷ ಕ್ರೀಡೆಗಳನ್ನು ನಡೆಸಲಾಯಿತು. ಸಮಿತಿ ಅಧ್ಯಕ್ಷೆ ಸೌಮ್ಯಾ ರೆಡ್ಡಿ ಪಾಲ್ಗೊಂಡಿದ್ದರು.

ಉಲ್ಲಾಳು ವಾರ್ಡ್ ನಾಗರಿಕರ ವೇದಿಕೆಯು ನಗೆ ಮನೆಯಲ್ಲಿ ಸಂಕ್ರಾಂತಿ ಸುಗ್ಗಿ ಸಂಭ್ರಮಾಚರಣೆ ನಡೆಸಿತು. ಬೆಳಿಗ್ಗೆ ಅವರೆ ಮೇಳ ಮತ್ತು ಶಾಪಿಂಗ್ ಉತ್ಸವ ನಡೆಯಿತು. ಸಂಜೆ ಗೋಪೂಜೆ ಮಾಡಲಾಯಿತು. ಜಾನಪದ ಕಲಾ ತಂಡಗಳು ಮತ್ತು ಮಂಗಳವಾದ್ಯಗಳೊಂದಿಗೆ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಹಮ್ಮಿಕೊಳ್ಳಲಾಗಿತ್ತು. ಹಸುಗಳನ್ನು ಕಿಚ್ಚು ಹಾಯಿಸುವ ಆಚರಣೆಗಳೂ ನಡೆದವು. ಶಿರಡಿ ಸಾಯಿಬಾಬಾ ಅವರ ಜೀವನ ಚರಿತ್ರೆಯ ನೃತ್ಯ ರೂಪಕ 'ಸಬ್ ಕಾ ಮಾಲೀಕ್ ಏಕ್ ಹೈ' ನೃತ್ಯ ರೂಪಕ ನಾಟಕವು ರಾತ್ರಿ ಪ್ರದರ್ಶನ ಕಂಡಿತು.

ಜಯನಗರದ ಕನಕನಪಾಳ್ಯದಲ್ಲಿ ಗೋವುಗಳನ್ನು ಕಿಚ್ಚು ಹಾಯಿಸುವ ಮೂಲಕ ಸಂಕ್ರಾಂತಿ ಹಬ್ಬ ಆಚರಿಸಲಾಯಿತು ಚಿತ್ರ: ಎಂ.ಎಸ್‌.ಮಂಜುನಾಥ್

ಶಿವಗಂಗೆಯಲ್ಲಿ ಗಿರಿಜಾ ಕಲ್ಯಾಣ ಮಹೋತ್ಸವ

ದಾಬಸ್ ಪೇಟೆ: ಮಕರ ಸಂಕ್ರಮಣದಂದು ಶಿವಗಂಗೆಯಲ್ಲಿ 'ಗಿರಿಜಾ ಕಲ್ಯಾಣೋತ್ಸವ (ಗಂಗಪ್ಪನ ಧಾರೆ)' ಸಂಭ್ರಮದಿಂದ ನಡೆಯಿತು. ಮಧ್ಯಾಹ್ನ 2.39ಕ್ಕೆ ಬೆಟ್ಟದ ಕುಕದ್ಗಿರಿ ಶಿಖರದಲ್ಲಿ ತೀರ್ಥೋದ್ಭವವಾಯಿತು. ನಂತರ, ಗಂಗಾಧರೇಶ್ವರ ದೇವಾಲಯದಲ್ಲಿ ಗಂಗಾಧರೇಶ್ವರ– ಪಾರ್ವತಿಗೂ ವಿವಾಹ ಮಾಡಿ, 'ಗಿರಿಜಾ ಕಲ್ಯಾಣ ಮಹೋತ್ಸವ' ನೆರವೇರಿಸಲಾಯಿತು.

ಶಿವಗಂಗೆ ಬೆಟ್ಟದಲ್ಲಿ ಅತಿಹೆಚ್ಚು ಭಕ್ತರು ಸೇರಿದ್ದರು. ಭಕ್ತರು ಅರವಟ್ಟಿಗೆಗಳ ಮೂಲಕ ನೀರು, ಮಜ್ಜಿಗೆ, ಹೆಸರುಬೇಳೆ, ಪಾನಕ ವಿತರಿಸಿದರು. ಆಗಮಿಕ ಸೋಮಸುಂದರ್ ದೀಕ್ಷಿತ್ ಅವರ ತಂಡ ಪೂಜಾ ಕಾರ್ಯಕ್ರಮ ನಡೆಸಿಕೊಟ್ಟಿತು.

ಗೋಚರಿಸದ ಸೂರ್ಯ ರಶ್ಮಿ

ಗವಿಪುರದ ಗವಿಗಂಗಾಧರೇಶ್ವರ ದೇಗುಲದ ಶಿವಲಿಂಗಕ್ಕೆ ಸೂರ್ಯ ರಶ್ಮಿಯ ಸ್ಪರ್ಶವು ಈ ಬಾರಿ ಮೋಡದಿಂದಾಗಿ ಗೋಚರಿಸಿಲ್ಲ. ಸೂರ್ಯ ತನ್ನ ಪಥ ಬದಲಿಸುವ ಸಂದರ್ಭದಲ್ಲಿ, ಸಂಜೆ 5.14ರಿಂದ 5.17ರ ಅವಧಿಯಲ್ಲಿ ಸೂರ್ಯನ ಕಿರಣಗಳು ಶಿವಲಿಂಗ ಸ್ಪರ್ಶಿಸುವುದನ್ನು ಕಣ್ತುಂಬಿಕೊಳ್ಳಲು ಭಕ್ತರು ಕಾದು ಕುಳಿತಿದ್ದರು. ಆದರೆ, ಮೋಡ ಕವಿದ ವಾತಾವರಣದಿಂದ ನಿರಾಸೆಯಾಯಿತು.

ದೇಗುಲದ ಪ್ರಧಾನ ಅರ್ಚಕ ಸೋಮಸುಂದರ ದೀಕ್ಷಿತ್ ಪ್ರತಿಕ್ರಿಯಿಸಿ, 'ಈ ಬಾರಿ ಸೂರ್ಯನ ಕಿರಣಗಳು ಅಗೋಚರವಾಗಿತ್ತು. ಸೂರ್ಯ ಗವಿಗಂಗಾಧರ ಕ್ಷೇತ್ರವನ್ನು ಪ್ರವೇಶಿಸಿದ್ದು, ಪ್ರಕೃತಿ ವಿಕೋಪದಿಂದ ನೋಡಲು ಸಾಧ್ಯ ಆಗಿಲ್ಲ. ಭಕ್ತರು ಆತಂಕ ಪಡುವ ಅವಶ್ಯಕತೆ ಇಲ್ಲ. ಈ ವರ್ಷ ಮಳೆ, ಬೆಳೆ ಚೆನ್ನಾಗಿ ಆಗುತ್ತದೆ. ಯಾವುದೇ ಅನಾಹುತ ನಡೆಯುವುದಿಲ್ಲ. ಅಲ್ಲಲ್ಲಿ ಜಲ ಸಂಕಟಗಳು ನಡೆ ಯುವ ಸಾಧ್ಯತೆಯಿದೆ' ಎಂದರು.

ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ ತಿಲಕ್ ನಗರದ ಮನೆಯೊಂದರಲ್ಲಿ ಕುಟುಂಬ ಸಮೇತ ಪೊಂಗಲ್ ತಯಾರಿಸಿ ಸಂಭ್ರಮಿಸಿದರು ಚಿತ್ರ: ಎಸ್‌.ಕೆ. ದಿನೇಶ್

'ಸಂಕ್ರಾಂತಿ ಸುಗ್ಗಿ ಉತ್ಸವ 2025'ಕ್ಕೆ ಶಾಸಕ ಎಸ್‌.ಟಿ. ಸೋಮಶೇಖರ್ ಚಾಲನೆ ನೀಡಿದರು

ಸಂಭ್ರಮದ ಸುಗ್ಗಿ ಉತ್ಸವ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಬಿಇಎಲ್ ಬಡಾವಣೆಯಲ್ಲಿರುವ ಶಾಸಕರ ಕಚೇರಿ ಮುಂಭಾಗ ಗ್ರಾಮೀಣ ಸೊಗಡಿನ ಸಂಕ್ರಾಂತಿ ಹಬ್ಬದ ಅಂಗವಾಗಿ ಹಮ್ಮಿ ಕೊಂಡಿದ್ದ 'ಸಂಕ್ರಾಂತಿ ಸುಗ್ಗಿ ಉತ್ಸವ 2025'ಕ್ಕೆ ಎತ್ತಿನ ಬಂಡಿ ಮೂಲಕ ಶಾಸಕ ಎಸ್.ಟಿ.ಸೋಮಶೇಖರ್ ಚಾಲನೆ ನೀಡಿದರು.

ಜಾನಪದ ಕಲಾ ಬಂಡಿ ಮೂಲಕ ಅಂಜನಾನಗರದ ಆಂಜನೇಯಸ್ವಾಮಿ ದೇವಸ್ಥಾನದಿಂದ ನಾಡಪ್ರಭು ಕೆಂಪೇಗೌಡ ಸೌಧದವರೆಗೆ ಸಾಗಿ ಬಂದ ಶಾಸಕರು, ಗೋಪೂಜೆ ಸಲ್ಲಿಸಿ, ದವಸಧಾನ್ಯಗಳಿಗೆ ಪೂಜೆ ಸಲ್ಲಿಸಿದರು.

ಸುಗ್ಗಿ ಉತ್ಸವದಲ್ಲಿ ಜಾನಪದ ಗಾಯಕರಿಂದ ರಂಗ ಗೀತೆ, ರೈತ ಗೀತೆ, ಭಾವಗೀತೆ ಕಾರ್ಯಕ್ರಮ ನಡೆಯಿತು. ಮೆರವಣಿಗೆಯುದ್ದಕ್ಕೂ ಹೆಣ್ಣು-ಗಂಡು ಭೇದವಿಲ್ಲದೆ ನೃತ್ಯ ಮಾಡಿದರು. ರಂಗೋಲಿ, ವಿವಿಧ ಗ್ರಾಮೀಣ ಕ್ರೀಡೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಮುಖಂಡರಾದ ಶ್ರೀಧರ್.ಎಚ್, ಚಿಕ್ಕರಾಜು, ಚಿಕ್ಕೇಗೌಡನ ಪಾಳ್ಯ ಬಿ.ಆರ್.ಶಿವಮಾದಯ್ಯ, ಅಂಜನಾನಗರ ಗಂಗರಾಜು. ಜಿ.ಪಂ.ಮಾಜಿ ಸದಸ್ಯ ಡಿ.ಹನುಮಂತಯ್ಯ, ಚಿತ್ರ ನಿರ್ಮಾಪಕ ಇ.ದೊಡ್ಡನಾಗಯ್ಯ, ಎಸ್.ಟಿ.ಶ್ರೀನಿವಾಸ್, ವಿವಿಧ ಗ್ರಾ.ಪಂ.ಅಧ್ಯಕ್ಷರಾದ ಕೆ.ಎನ್.ಪಟೇಲ್‌ದೇವರಾಜು, ದೊಡ್ಡಬೆಲೆ ನಾಗೇಶ್. ಪಿ, ಡಿ.ಆನಂದಸ್ವಾಮಿ, ಜಬೀನಾತಾಜ್ ಪರ್ವೀಜ್, ಸೂಲಿಕೆರೆ ಎಸ್.ಆರ್.ಮೋಹನ್‌ಕುಮಾರ್, ಕೆಂಚನಪುರ ತಿಮ್ಮೇಗೌಡ, ಮಹಿಳಾ ನಾಯಕಿಯರಾದ ಅನುಪಮಾ ಪಂಚಾಕ್ಷರಿ, ಪಾರ್ವತಿ, ನಾಗವೇಣಿ, ಲಕ್ಷ್ಮಿ ಪ್ರಭುರಾಜ್, ರಾಮೋಹಳ್ಳಿ ಚೇತನ್‌ಗೌಡ, ವಿ.ವೇಣುಗೋಪಾಲ್, ನಾಗದೇವನಹಳ್ಳಿ ಲಕ್ಷ್ಮಿದೇವಿ ಉಪಸ್ಥಿತರಿದ್ದರು.

ಸಂಕ್ರಾಂತಿ ಹಬ್ಬದ ಅಂಗವಾಗಿ 'ನಮ್ಮ ಉತ್ತರ ಕರ್ನಾಟಕ ಕ್ಷೇಮಾಭಿವೃದ್ಧಿ ಸಂಘ' ಮಂಗಳವಾರ ಯಲಹಂಕ ಉಪನಗರದಲ್ಲಿ ಆಯೋಜಿಸಿದ್ದ ಸಂಕ್ರಾಂತಿ ಸುಗ್ಗಿ ಸಂಭ್ರಮ ಕಾರ್ಯಕ್ರಮದಲ್ಲಿ ಸಂಸದ ಬಸವರಾಜ ಬೊಮ್ಮಾಯಿ ಮಾತನಾಡಿದರು. ಯಲಹಂಕದ ರಾಮಕೃಷ್ಣ ವೇದಾಂತ ಆಶ್ರಮದ ಅಭಯಾನಂದ ಮಹಾರಾಜ್, ಯಲಹಂಕ ಶಾಸಕ ಎಸ್‌.ಆರ್‌. ವಿಶ್ವನಾಥ್, ಉತ್ತರ ಕರ್ನಾಟಕ ಸಂಘ ಸಂಸ್ಥೆಗಳ ಮಹಾಸಂಸ್ಥೆಯ ಅಧ್ಯಕ್ಷ ಶಿವಕುಮಾರ್ ಮೇಟಿ, ಯೋಗ ಗುರು ಭವನಲಾಲ್ ಆರ್ಯ, ನಮ್ಮ ಉತ್ತರ ಕರ್ನಾಟಕ ಕ್ಷೇಮಾಭಿವೃದ್ಧಿ ಸಂಘದ ಗೌರವ ಅಧ್ಯಕ್ಷ ವಿಶ್ವನಾಥ ಹಿರೇಮಠ, ಅಧ್ಯಕ್ಷ ಶಿವಶರಣಪ್ಪ, ಉದ್ಯಮಿ ಎಸ್‌.ಪಿ. ದಯಾನಂದ್ ಉಪಸ್ಥಿತರಿದ್ದರು

ಇವಾನ್ವೆಲಿಸ್ಟಿಕ್ ಕಂಪ್ಯಾನಿಯನ್ ಆಫ್ ಇಂಡಿಯಾ ಟ್ರಸ್ಟ್ ಮತ್ತು ಕೇರ್ ಮತ್ತು ಭಗವಾನ್ಸ್ ಕೇರ್ ಟ್ರಸ್ಟ್ ಅಧ್ಯಕ್ಷ ರೆವರೆಂಡ್ ಡಾ.ವಿಲಿಯಂ ಥಾಂಪ್ಸನ್ ಸ್ಮಿತ್ ಅವರು ಉಚಿತ ಊಟ ಯೋಜನೆಗೆ ಚಾಲನೆ ನೀಡಿದರು

ಹಿರಿಯ ನಾಗರಿಕರಿಗೆ ಉಚಿತ ಊಟ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಪ್ರತಿದಿನ 200 ಜನರಿಗೆ ಮಧ್ಯಾಹ್ನದ ಉಚಿತ ಊಟ ನೀಡುವ ಯೋಜನೆಗೆ ಕ್ರೈಸ್ತ ಸಮುದಾಯದವರು ಸಂಕ್ರಾಂತಿ ಹಬ್ಬದಂದು ಚಾಲನೆ ನೀಡಿದರು.

ಇವಾನ್ವೆಲಿಸ್ಟಿಕ್ ಕಂಪ್ಯಾನಿಯನ್ ಆಫ್ ಇಂಡಿಯಾ ಟ್ರಸ್ಟ್ ಮತ್ತು ಕೇರ್ ಮತ್ತು ಭಗವಾನ್ಸ್ ಕೇರ್ ಟ್ರಸ್ಟ್ ಅಧ್ಯಕ್ಷ ರೆವರೆಂಡ್ ಡಾ.ವಿಲಿಯಂ ಥಾಂಪ್ಸನ್ ಸ್ಮಿತ್ ಮಾತನಾಡಿ, 'ಸಂಕ್ರಾಂತಿ ಹಬ್ಬವೆಂದರೆ ಎಲ್ಲೆಡೆ ಸಂಭ್ರಮ-ಸಡಗರ. ಈ ವಿಶೇಷ ದಿನದಂದು ಒಂದು ಉತ್ತಮ ಕಾರ್ಯ ಮಾಡಬೇಕು ಎನ್ನುವ ಯೋಚನೆಯಿಂದ ಹಿರಿಯ ನಾಗರಿಕರಿಗಾಗಿ ಪ್ರತಿದಿನ 200 ಜನರಿಗೆ ಉಚಿತ ಊಟ ನೀಡುವ ಯೋಜನೆ ಹಾಕಿಕೊಂಡಿದ್ದೇವೆ' ಎಂದು ಹೇಳಿದರು.

ಚರ್ಚ್ ಪಾದ್ರಿಗಳಾದ ನವೀನ್ ಅಯ್ಯ, ಸಾಲೋಮನ್ ಅಯ್ಯ, ಜಾನ್ ಕಿರುಬಕಾರಾನ್ ಅಯ್ಯ, ಕಾಂಗ್ರೆಸ್ ಮುಖಂಡರಾದ ಆಗರ ಪ್ರಕಾಶ್, ಆನಂದ್ ಪ್ರಸಾದ್, ರೀಟಾ, ಸುಮೇಶ್, ಬಿಲ್ಲಿ ಗ್ರಹಾಮ್ ಇದ್ದರು.

'ಆರೋಪಿಗೆ ಕಠಿಣ ಶಿಕ್ಷೆ ವಿಧಿಸಿ'

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ಚಾಮರಾಜಪೇಟೆಯಲ್ಲಿ ಹಸುವಿನ ಕೆಚ್ಚಲು ಕತ್ತರಿಸಿ ಪಾಪದ ಕೃತ್ಯ ಎಸಗಿರುವ ಆರೋಪಿಯನ್ನು ಕಠಿಣ ಶಿಕ್ಷೆಗೆ ಗುರಿಪಡಿಸಬೇಕು' ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎನ್.ಎಸ್.ನಂದೀಶ್ ರೆಡ್ಡಿ ಒತ್ತಾಯಿಸಿದರು.

ಕೆ.ಆರ್.ಪುರ ಸಮೀಪದ ದೊಡ್ಡ ನೆಕ್ಕುಂದಿಯ ತಮ್ಮ ಸ್ವಗೃಹದಲ್ಲಿ ಮಕರ ಸಂಕ್ರಾಂತಿ ಹಬ್ಬದ ಅಂಗವಾಗಿ ಹಸುಗಳಿಗೆ ಪೂಜೆ ಸಲ್ಲಿಸಿ ಅವರು ಮಾತನಾಡಿದರು.

'ಸಂಕ್ರಾಂತಿ ಹಬ್ಬದ ಸಂಭ್ರಮದ ಹೊತ್ತಿನಲ್ಲಿ ಭಾರತದಲ್ಲಿ ತಾಯಿಯಂತೆ ಪೂಜಿಸುವ ಗೋಮಾತೆಯ ಕೆಚ್ಚಲು ಕತ್ತರಿಸಿರುವುದು ಅಮಾನವೀಯ. ಈ ಆರೋಪಿಗೆ ಕಠಿಣ ಶಿಕ್ಷೆ ನೀಡುವ ಬದಲು ಆರೋಪಿಯನ್ನು ಬುದ್ಧಿಮಾಂದ್ಯ ಎಂದು ಸರ್ಕಾರದ ಪ್ರತಿನಿಧಿಗಳು ಸಮರ್ಥನೆ ಮಾಡಿಕೊಳ್ಳುತ್ತಿರುವುದು ನಾಚಿಕೆಗೇಡು. ಇಂತಹ ಯಾವುದೇ ಘಟನೆಗಳು ಸಂಭವಿಸಿದಾಗ ಈ ರೀತಿಯ ಹೇಳಿಕೆ ನೀಡುವುದು ಕಾಂಗ್ರೆಸ್ ನೇತೃತ್ವದ ಸರ್ಕಾರದ ವಾಡಿಕೆಯಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಸುಗಳ ಕೆಚ್ಚಲು ಕೊಯ್ದ ಪ್ರಕರಣ: ಮಾಲೀಕನಿಗೆ ₹1 ಲಕ್ಷ ನೆರವು

ಸಂತ್ರಸ್ತನ ಮನೆಯಲ್ಲಿ ಬಿಜೆಪಿ ಸಂಕ್ರಾಂತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮರಾಜಪೇಟೆಯ ವಿನಾಯಕ ನಗರದಲ್ಲಿ ಹಸುಗಳ ಕೆಚ್ಚಲು ಕೊಯ್ದ ಪ್ರಕರಣದ ಸಂತ್ರಸ್ತನ ಮನೆಯಲ್ಲಿ ಬಿಜೆಪಿ ನಾಯಕರು ಮಂಗಳವಾರ ಗೋವುಗಳಿಗೆ ಪೂಜೆ ಮಾಡಿ ಸಂಕ್ರಾಂತಿ ಆಚರಿಸಿದರು.

ಹಳೇ ಪೆನ್ಷನ್ ಮೊಹಲ್ಲಾದ ಕಾಟನ್ ಪೇಟೆಯ ದುಂಡು ಮಾರಿಯಮ್ಮ ದೇವಸ್ಥಾನದ ಬಳಿಯ ಹಸುಗಳ ಮಾಲೀಕ ಕರ್ಣ ಅವರ ಮನೆಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದ ತಂಡವು ಬೆಳಿಗ್ಗೆ ಭೇಟಿ ನೀಡಿ ಧೈರ್ಯ ತುಂಬಿತು.

ಸಂಸದ ಪಿ.ಸಿ.ಮೋಹನ್ ಅವರು ಕರ್ಣ ಅವರಿಗೆ ನೀಡಿದ ಹಸುಗಳಿಗೆ ಪೂಜೆ ನೆರವೇರಿಸಿ, ಬಾಳೆಹಣ್ಣು, ಬೆಲ್ಲ ತಿನಿಸಿದರು. ನೆರೆದಿದ್ದವರಿಗೆ ಎಳ್ಳು, ಬೆಲ್ಲ ವಿತರಿಸಿ ಸಂಕ್ರಾಂತಿ ಆಚರಿಸಿದರು.

ಇದೇ ವೇಳೆ ಕರ್ಣ ಅವರಿಗೆ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಹಸುಗಳ ಆರೈಕೆಗಾಗಿ ₹1 ಲಕ್ಷ ನೆರವು ನೀಡಿದರು.

ಬಿಜೆಪಿ ನಾಯಕರು ಚಾಮರಾಜಪೇಟೆಯ ಕರ್ಣ ಅವರ ಮನೆಯ ಹಸುಗಳಿಗೆ ಪೂಜೆ ಸಲ್ಲಿಸಿ ಮಕರ ಸಂಕ್ರಾಂತಿ ಆಚರಿಸಿದರು. ಎನ್‌.ರವಿಕುಮಾರ್, ಆರ್‌.ಅಶೋಕ, ಪಿ.ಸಿ. ಮೋಹನ್, ಬಿ.ವೈ.ವಿಜಯೇಂದ್ರ, ಭಾಸ್ಕರ್ ರಾವ್ ಇದ್ದಾರೆ ಪ್ರಜಾವಾಣಿ ಚಿತ್ರ

ನಂತರ ಪಶು ಆಸ್ಪತ್ರೆಗೆ ತೆರಳಿದ ನಾಯಕರು, ಗಾಯಗೊಂಡ ಹಸುಗಳಿಗೆ ಪೂಜೆ ಸಲ್ಲಿಸಿದರು. ಈ ವೇಳೆ ಪಕ್ಷದ ಕಾರ್ಯಕರ್ತರು ಹಾಗೂ ಹೋರಾಟಗಾರರಿಗೆ ಪೂಜೆ ಸಲ್ಲಿಸಲು ಅವಕಾಶ ನೀಡಲಿಲ್ಲ.

ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ್, ಬಿಜೆಪಿ ಬೆಂಗಳೂರು ಕೇಂದ್ರ ಜಿಲ್ಲಾ ಘಟಕದ ಅಧ್ಯಕ್ಷ ಸಪ್ತಗಿರಿ ಗೌಡ, ಮುಖಂಡ ಭಾಸ್ಕರ್ ರಾವ್ ಹಾಗೂ ಸ್ಥಳೀಯ ಮುಖಂಡರು ಹಾಜರಿದ್ದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮಾತನಾಡಿ, 'ಹಸುವಿನ ಕೆಚ್ಚಲು ಕೊಯ್ದ ಘಟನೆ ನಡೆದಿದೆ. ಇದರಿಂದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರಕ್ಕೆ ಒಳ್ಳೆಯದು ಆಗುವುದಿಲ್ಲ. ಯಾರೋ ಬಡಪಾಯಿಯನ್ನು ತಂದು ಅವನೇ ಮಾಡಿದ್ದಾಗಿ ಬಿಂಬಿಸುವ ಪ್ರಯತ್ನ ಆಗುತ್ತಿದೆ' ಎಂದು ಆರೋಪಿಸಿದರು.

'ತನಿಖೆಗೆ ಆಗ್ರಹಿಸಿ ರಾಜ್ಯಾದ್ಯಂತ ಪ್ರತಿಭಟನೆ'

ಹಸುಗಳ ಕೆಚ್ಚಲು ಕೊಯ್ದ ಪ್ರಕರಣದ ಸೂಕ್ತ ತನಿಖೆಗಾಗಿ ಆಗ್ರಹಿಸಿ ಬಿಜೆಪಿ ರಾಜ್ಯದಾದ್ಯಂತ ಪ್ರತಿಭಟನೆ ಮಾಡಲಿದೆ. ಈ ಘಟನೆಯಿಂದ ಹಿಂದೂಗಳನ್ನು ಬೆದರಿಸಲು ಸಾಧ್ಯವಿಲ್ಲ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

ಸುದ್ದಿಗಾರರ ಜತೆ ಮಾಡಿದ ಅವರು, 'ಹಸುಗಳ ಕೆಚ್ಚಲು ಕತ್ತರಿಸಿರುವುದು ಒಬ್ಬರೇ ಮಾಡಿದ ಕೃತ್ಯವಲ್ಲ. ಪೊಲೀಸರು ಸರಿಯಾಗಿ ತನಿಖೆ ಮಾಡಬೇಕಿತ್ತು. ಈಗ ಸಂಕ್ರಾಂತಿ ಹಬ್ಬ ಹಾಗೂ ಪ್ರಯಾಗ್‌ರಾಜ್‌ನಲ್ಲಿ ಮಹಾ ಕುಂಭಮೇಳ ನಡೆಯುತ್ತಿದೆ. ಇಂತಹ ಸಮಯದಲ್ಲೇ ಈ ಕೃತ್ಯ ಮಾಡುವುದರ ಜೊತೆಗೆ ಹಸು ಮಾಲೀಕ ಕರ್ಣ ಅವರಿಗೆ ಕಾಂಗ್ರೆಸ್ ಕಾರ್ಯಕರ್ತರು ಹಸುವನ್ನು ಪಡೆಯುವಂತೆ ಒತ್ತಡ ಹೇರಿದ್ದಾರೆ' ಎಂದು ದೂರಿದರು.

'ಪೊಲೀಸರು ಹಾಗೂ ಸರ್ಕಾರದ ಮೇಲೆಯೇ ಅನುಮಾನ ಬಂದಿದೆ. ಆರೋಪಿ ಜೇಬಿನಲ್ಲಿ ಬ್ಲೇಡ್ ಇಟ್ಟುಕೊಂಡು ಓಡಾಡುತ್ತಿದ್ದ, ಆತನಿಗೆ ಮತಿಭ್ರಮಣೆಯಾಗಿದೆ ಎಂದು ಪೊಲೀಸರು ಹೇಳಿದ್ದಾರೆ. ಇಂತಹ ವ್ಯಕ್ತಿ 10 ವರ್ಷ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಹೇಗೆ ಸಾಧ್ಯ? ಮುಂಜಾನೆ 3 ರಿಂದ 4 ಗಂಟೆಗೆ ಆತ ಇಲ್ಲಿಗೆ ಬರಲು ಹೇಗೆ ಸಾಧ್ಯ? ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಕರ್ಣ ಅವರ ಹಸುವಿನ ಕೆಚ್ಚಲನ್ನೇ ಕೊಯ್ದಿದ್ದೇಕೆ' ಎಂದು ಪ್ರಶ್ನಿಸಿದರು.

ಸಂಭ್ರಮದೊಂದಿಗೆ ಮಹಾಶೂಲ ಅನಾವರಣ

ಈಶಾ ಯೋಗ ಕೇಂದ್ರದಲ್ಲಿನ ಜಾತ್ರೆ ಸಂಪನ್ನ • 2 ಲಕ್ಷಕ್ಕೂ ಹೆಚ್ಚು ಜನರು ಭಾಗಿ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ತಾಲ್ಲೂಕಿನ ಆವಲಗುರ್ಕಿ ಬಳಿಯ ಈಶಾ ಯೋಗ ಕೇಂದ್ರದಲ್ಲಿ ಮಕರ ಸಂಕ್ರಾಂತಿಯ ದಿನವಾದ ಮಂಗಳವಾರ 54 ಅಡಿ ಎತ್ತರದ ಮಹಾಶೂಲವನ್ನು (ತ್ರಿಶೂಲ) ಸದ್ಗುರು ಜಗ್ಗಿ ವಾಸುದೇವ್ ಅವರು ಅನಾವರಣಗೊಳಿಸಿದರು.

ಕಾರ್ಯಕ್ರಮದ ಅಂಗವಾಗಿ ಮಂಗಳವಾರ ಬೆಳಿಗ್ಗೆಯಿಂದಲೇ ಈಶಾ ಯೋಗ ಕೇಂದ್ರದ ಆವರಣದಲ್ಲಿ ಸಂಭ್ರಮ, ಸಡಗರ ಮನೆ ಮಾಡಿತ್ತು. ಭಕ್ತರು ಯೋಗೇಶ್ವರ ಲಿಂಗ, ನಾಗ-ನಂದಿ ಮತ್ತು ಮಹಾಶೂಲಕ್ಕೆ ವಿಶೇಷ ಅರ್ಪಣೆ ಸಲ್ಲಿಸಿದರು.

ಭಾನುವಾರದಿಂದ ಸದ್ಗುರು ಸನ್ನಿಧಿಯಲ್ಲಿ ನಡೆಯುತ್ತಿದ್ದ ಜಾತ್ರೆಯು ಸಹ ಸಂಪನ್ನವಾಯಿತು. ಸ್ಥಳೀಯ ರೈತರು, ಕುಶಲಕರ್ಮಿಗಳು ಮತ್ತು ಕಲಾವಿದರು ಜಾತ್ರಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಕೃಷಿ ಉತ್ಪನ್ನಗಳು ಮತ್ತು ಕರಕುಶಲ ವಸ್ತುಗಳ ಮಳಿಗೆಗಳು, ತಿಂಡಿ ತಿನಿಸುಗಳ ಮಳಿಗೆಗಳು ದೊಡ್ಡ ಪ್ರಮಾಣದಲ್ಲಿ ತಲೆಎತ್ತಿದ್ದವು.

ಸದ್ಗುರು ಗುರುಕುಲಂ ಸಂಸ್ಕೃತಿಯ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ಆದಿಯೋಗಿ ದಿವ್ಯ ದರ್ಶನ ಮತ್ತು ದೇಸಿ ಜಾನುವಾರುಗಳ ಪ್ರದರ್ಶನ ನಡೆಯಿತು.



ಚಿಕ್ಕಬಳ್ಳಾಪುರದ ಈಶಾ ಯೋಗ ಕೇಂದ್ರದಲ್ಲಿ ಮಕರ ಸಂಕ್ರಾಂತಿಯ ದಿನ ಅನಾವರಣಗೊಂಡ 54 ಅಡಿ ಎತ್ತರದ ಮಹಾಶೂಲ (ತ್ರಿಶೂಲ)

ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್ ಪಾಟೀಲ್, ಇಸ್ರೊ ಮಾಜಿ ಅಧ್ಯಕ್ಷ ಕಿರಣ್ ಕುಮಾರ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕಾರ್ಯದರ್ಶಿ ರಂದೀಪ್ ಡಿ ಪಾಲ್ಗೊಂಡಿದ್ದರು.

ಸ್ಥಳೀಯ ರೈತರಿಂದ ಸದ್ಗುರು ಜಗ್ಗಿ ವಾಸುದೇವ್ ಅವರು ಸಂಕ್ರಾಂತಿಯ ನೈವೇದ್ಯವನ್ನು ಸ್ವೀಕರಿಸಿದರು

ಯೋಗ ಕೇಂದ್ರಕ್ಕೆ ಜನಸಾಗರ

ಯೋಗ ಕೇಂದ್ರದಲ್ಲಿ ನಡೆಯುತ್ತಿದ್ದ ಜಾತ್ರೆ ಮತ್ತು ಮಹಾಶೂಲ ಅನಾವರಣ ಕಾರ್ಯಕ್ರಮಕ್ಕೆ ದೊಡ್ಡ ಸಂಖ್ಯೆಯಲ್ಲಿ ಭಕ್ತರು ಸೇರಿದ್ದರು. ಯೋಗ ಕೇಂದ್ರಕ್ಕೆ ಸಾಗುವ ಹಾದಿಯಲ್ಲಿ ಕಾರು, ಬೈಕ್‌ಗಳ ಸಂದಣಿ ದೊಡ್ಡದಾಗಿತ್ತು. ಸಂಜೆ 7ರ ಸುಮಾರಿನಲ್ಲಿಯೂ ಈಶಾ ಕೇಂದ್ರಕ್ಕೆ ಸಾಗುವವರು ಹೆಚ್ಚಿದ್ದ ಕಾರಣ ಚಿಕ್ಕಬಳ್ಳಾಪುರ ನಗರದ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಇತ್ತು.

ಯೋಗ ಕೇಂದ್ರದ ಪ್ರಕಾರ ಮಹಾಶೂಲ ಅನಾವರಣ ಕಾರ್ಯಕ್ರಮದಲ್ಲಿ 2 ಲಕ್ಷಕ್ಕೂ ಹೆಚ್ಚು ಜನರು ಭಾಗಿಯಾಗಿದ್ದರು.

ಮತ್ತೊಂದು ಮಗುವಿನ ಶವ ಪತ್ತೆ

ಆಲಮಟ್ಟಿ: ತಾಯಿ ತನ್ನ ನಾಲ್ಕು ಮಕ್ಕಳ ಜೊತೆ ಆಲಮಟ್ಟಿ ಎಡದಂಡೆ ಮುಖ್ಯ ಕಾಲುವೆಗೆ ಜಿಗಿದು ಆತ್ಮಹತ್ಯೆಗೆ ಯತ್ನಿಸಿದ್ದ ವೇಳೆ ನೀರು ಪಾಲಾಗಿದ್ದ ಅವಳಿ ಮಕ್ಕಳ ಪೈಕಿ ಮಂಗಳವಾರ ಹುಸೇನ್ ಶವ ಪತ್ತೆ ಆಗಿದೆ. ಇನ್ನೊಂದು ಮಗು ಪತ್ತೆಗೆ ಶೋಧ ನಡೆದಿದೆ.

ಸೋಮವಾರ ಭಾಗ್ಯ ನಿಂಗರಾಜ ಭಜಂತ್ರಿ ತನ್ನ ನಾಲ್ವರು ಮಕ್ಕಳ ಜತೆ ನೀರಿಗೆ ಹಾರಿದ್ದರು. ಭಾಗ್ಯರನ್ನು ಸ್ಥಳೀಯರು ರಕ್ಷಿಸಿದ್ದರು. ಇಬ್ಬರು ಮಕ್ಕಳ ಶವ ಸೋಮವಾರ ಪತ್ತೆಯಾಗಿತ್ತು.

'ಪತಿಯೇ ಎಲ್ಲರನ್ನೂ ನೂಕಿ ಕೊಲೆಗೆ ಯತ್ನಿಸಿದ್ದಾಗಿ ಭಾಗ್ಯ ಅವರ ಕುಟುಂಬದವರು ಆರೋಪಿಸಿದ್ದಾರೆ' ಎಂದು ಎಸ್‌ಪಿ ಲಕ್ಷ್ಮಣ ನಿಂಬರಗಿ ತಿಳಿಸಿದರು.

ಕಾಡಾನೆ ದಾಳಿ: ವ್ಯಕ್ತಿ ಸಾವು

ಸೋಮವಾರಪೇಟೆ (ಕೊಡಗು ಜಿಲ್ಲೆ): ತಾಲ್ಲೂಕಿನ ಯಡವನಾಡು ಮೀಸಲು ಅರಣ್ಯದ ಕುಪ್ಪಾಡಿ ಹಾಡಿಯಲ್ಲಿ ಗಿರಿಜನರ ತಮ್ಮು (62) ಎಂಬುವವರು ಭಾನುವಾರ ಕಾಡಾನೆ ದಾಳಿಗೆ ಸಿಲುಕಿ ಮೃತಪಟ್ಟಿದ್ದು, ಅವರ ಮೃತದೇಹ ಮಂಗಳವಾರ ಪತ್ತೆಯಾಗಿದೆ.

ಕುಪ್ಪಾಡಿ ಹಾಡಿಯಲ್ಲಿ ಸುಮಾರು 10 ಜೇನು ಕುರುಬ ಕುಟುಂಬಗಳು ವಾಸಿಸುತ್ತಿವೆ. ತಮ್ಮು ಎಂಬುವವರು ಕುರಿಗಳನ್ನು ಮೇಯಿಸಲು ಭಾನುವಾರ ತೆರಳಿದ್ದರು. ಆದರೆ, ಸಂಜೆಯಾದರೂ ವಾಪಸ್ ಬಂದಿರಲಿಲ್ಲ. ಅನುಮಾನಗೊಂಡ ಗ್ರಾಮಸ್ಥರು ಸೋಮವಾರ ಹುಡುಕಾಟ ನಡೆಸಿದ್ದರಾದರೂ ಸುಳಿವು ಪತ್ತೆಯಾಗಿರಲಿಲ್ಲ.

ಇಂದಿನ ಓದು ಮುಂದಿನ ಭವಿಷ್ಯವನ್ನು ರೂಪಿಸುತ್ತದೆ: ಟಿ.ಎಸ್‌. ನಾಗಾಭರಣ

'ಯೌವ್ವನ ಬೇಡದೆಡೆಗೆ ಚಲಿಸದಿರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂದಿನ ಓದು ಮುಂದಿನ ಭವಿಷ್ಯವನ್ನು ರೂಪಿಸುತ್ತದೆ. ಹಾಗಾಗಿ ಸುಂದರ ಯೌವ್ವನವು ಬೇಡದ ಕಡೆಗೆ ಚಲಿಸದಂತೆ ನೋಡಿಕೊಳ್ಳಬೇಕು ಎಂದು ಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣ ಅಭಿಪ್ರಾಯಪಟ್ಟರು.

ಶೇಷಾದ್ರಿಪುರಂ ಸ್ವತಂತ್ರ ಪದವಿಪೂರ್ವ ಕಾಲೇಜಿನ 53ನೇ ವಾರ್ಷಿಕೋತ್ಸವದಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿ ಕೇಂದ್ರಿತ ಶಿಕ್ಷಣವು ವಿದ್ಯಾರ್ಥಿಗಳ ಜವಾಬ್ದಾರಿ ಹೆಚ್ಚಿಸುತ್ತದೆ. ನಿನ್ನೆ ಮಾಡಿದ ತಪ್ಪುಗಳನ್ನು ಸರಿ ಮಾಡಿಕೊಂಡು ನಾಳೆಗಳನ್ನು ಕಟ್ಟಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ. ಕೃಷ್ಣ ಮಾತನಾಡಿ, 'ಯುವ ಮನಸ್ಸುಗಳಿಗೆ ದಾರಿ ತೋರುವ ಕೆಲಸದ ಜವಾಬ್ದಾರಿಯನ್ನು ವಿದ್ಯೆ ಕೊಡುವ ಗುರು, ಹೆತ್ತವರು ಹೊರಬೇಕು' ಎಂದು ಹೇಳಿದರು.

ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಎನ್.ಪಿ. ಕಾರ್ತಿಕ್ ಮಾತನಾಡಿ, 'ಪರೀಕ್ಷೆ ಬಂದಾಗಷ್ಟೇ ಓದುವ ಬದಲು ನಿರಂತರ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಜೊತೆಗೆ ನಾಟಕ, ಕಲೆ, ಸಾಹಿತ್ಯ, ಸಂಗೀತ ಸಹಿತ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು' ಎಂದರು.

ಸಂಸ್ಥೆಯ ಸಹಕಾರ್ಯದರ್ಶಿ ಎಂ.ಎಸ್. ನಟರಾಜ್, ಧರ್ಮದರ್ಶಿ ಕೆ.ಕೃಷ್ಣಸ್ವಾಮಿ, ಕಾಲೇಜಿನ ಪ್ರಾಂಶುಪಾಲ ಆರ್.ವಿ. ಮಂಜುನಾಥ್, ಸಾಂಸ್ಕೃತಿಕ ಸಮಿತಿಯ ಸಂಚಾಲಕ ಎಸ್. ರಾಮಲಿಂಗೇಶ್ವರ (ಸಿಸಿರಾ), ಉಪನ್ಯಾಸಕರು ಭಾಗವಹಿಸಿದ್ದರು.

ಶೇಷಾದ್ರಿಪುರಂ ಸ್ವತಂತ್ರ ಪದವಿಪೂರ್ವ ಕಾಲೇಜಿನ 53ನೇ ವಾರ್ಷಿಕೋತ್ಸವದಲ್ಲಿ ಚಿತ್ರ ನಿರ್ದೇಶಕ ಟಿ.ಎಸ್‌. ನಾಗಾಭರಣ ಅವರನ್ನು ಸನ್ಮಾನಿಸಲಾಯಿತು

ಮದ್ಯ ಸೇವಿಸಿ ವಾಹನ ಚಲಾಯಿಸುವವರ ವಿರುದ್ಧ ಕಾರ್ಯಾಚರಣೆ: 23 ಸಾವಿರಕ್ಕೂ ಅಧಿಕ ಪ್ರಕರಣ

1,268 ಚಾಲನಾ ಪರವಾನಗಿ ಅಮಾನತು

• ಕೆ.ಎಸ್.ಸುನಿಲ್

ಬೆಂಗಳೂರು: ನಗರದಲ್ಲಿ ಮದ್ಯ ಸೇವಿಸಿ ವಾಹನ ಚಲಾಯಿಸುವವರ ವಿರುದ್ಧ ಕಾರ್ಯಾಚರಣೆ ನಡೆಸುತ್ತಿರುವ ಸಂಚಾರ ವಿಭಾಗದ ಪೊಲೀಸರು, ಕಳೆದ ವರ್ಷ (2024) 23,574 ಪ್ರಕರಣಗಳನ್ನು ದಾಖಲಿಸಿ, ₹23 ಕೋಟಿ ದಂಡ ಸಂಗ್ರಹಿಸಿದ್ದಾರೆ.

ಪ್ರಕರಣ ಸಂಬಂಧ 3,670 ಚಾಲನಾ ಪರವಾನಗಿಗಳನ್ನು (ಡಿ.ಎಲ್) ಅಮಾನತುಗೊಳಿಸುವಂತೆ ಸಾರಿಗೆ ಇಲಾಖೆಗೆ ಶಿಫಾರಸು ಮಾಡಲಾಗಿತ್ತು. ಈ ಪೈಕಿ 1,268 ಡಿ.ಎಲ್.ಗಳನ್ನು ಅಮಾನತುಗೊಳಿಸಲಾಗಿದೆ.

ನಗರದ 50 ಸಂಚಾರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಅಪಘಾತಗಳನ್ನು ತಡೆಯುವ ನಿಟ್ಟನಲ್ಲಿ ಕಾರ್ಯಾಚರಣೆ ಕೈಗೊಂಡಿದ್ದು, 12 ಲಕ್ಷಕ್ಕೂ ಅಧಿಕ ವಾಹನಗಳನ್ನು ತಪಾಸಣೆ ಮಾಡಲಾಗಿದೆ. ಈ ಪೈಕಿ ಮದ್ಯ ಸೇವಿಸಿ ವಾಹನ ಚಲಾಯಿಸಿದ ಚಾಲಕರು/ಸವಾರರ ವಿರುದ್ಧ 23 ಸಾವಿರ ಪ್ರಕರಣ ದಾಖಲಿಸಲಾಗಿದೆ. ತಪಾಸಣೆಗೊಳಗಾದ ಒಟ್ಟು ಜನರಲ್ಲಿ ಶೇಕಡ 1.87ರಷ್ಟು ಮಂದಿ ಮದ್ಯ ಸೇವಿಸಿ ವಾಹನ ಚಾಲನೆ ಮಾಡುತ್ತಿರುವುದು ದೃಢಪಟ್ಟಿತ್ತು.

ಇದರಲ್ಲಿ ಶಾಲಾ ವಾಹನ ಚಾಲಕರ ವಿರುದ್ಧ 201, ಖಾಸಗಿ ಬಸ್ ಚಾಲಕರ ವಿರುದ್ಧ 83, ವಾಟರ್ ಟ್ಯಾಂಕರ್ ಚಾಲಕರ ವಿರುದ್ಧ 67 ಪ್ರಕರಣ ದಾಖಲಿಸಿ ನ್ಯಾಯಾಲಯದ ಮೂಲಕ ದಂಡ ವಸೂಲಿ ಮಾಡಲಾಗಿದೆ.


ಮದ್ಯ ಸೇವಿಸಿ ವಾಹನ ಚಾಲನೆ ಮಾಡುತ್ತಿದ್ದ ಸವಾರನನ್ನು ತಪಾಸಣೆಗೆ ಒಳಪಡಿಸಿದ ಸಂಚಾರ ಪೊಲೀಸರು

ಕೇವಲ ನಾಲ್ಕು ತಿಂಗಳಲ್ಲಿ 12 ಸಾವಿರ ಪ್ರಕರಣ ದಾಖಲಾಗಿದ್ದು, ಪಾನಮತ್ತ ಚಾಲಕರ ಸಂಖ್ಯೆ ಹೆಚ್ಚಾಗಿರುವುದು ಅಂಕಿ ಅಂಶದಿಂದ ಗೊತ್ತಾಗಿದೆ.

ಪಾನಮತ್ತ ಚಾಲಕರಿಗೆ ₹10 ಸಾವಿರ ದಂಡ ವಿಧಿಸಲಾಗುತ್ತದೆ. ಮೊದಲ ಬಾರಿಗೆ ಸಿಕ್ಕಿಬಿದ್ದಾಗ ಮೂರು ತಿಂಗಳವರೆಗೆ ಡಿ.ಎಲ್ ಅಮಾನತು ಮಾಡಲಾಗುತ್ತದೆ. ಎರಡನೇ ಬಾರಿಗೆ ಆರು ತಿಂಗಳವರೆಗೆ ಅಮಾನತು ಮಾಡಲಾಗುತ್ತದೆ. ಇದೇ ವೇಳೆ ಪೊಲೀಸರು ವಾಹನವನ್ನು ವಶಕ್ಕೆ ಪಡೆಯುತ್ತಾರೆ.

ಮದ್ಯ ಸೇವಿಸಿ ಚಾಲನೆ ಮಾಡುವುದರಿಂದ ಆಗುವ ಅನಾಹುತಗಳ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ. ವಾಹನ ಸವಾರರು ಸಂಚಾರ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು
ಎಂ.ಎನ್.ಅನುಚೇತ್, ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್

‘ಪಾನಮತ್ತರಾಗಿ ವಾಹನ ಚಲಾಯಿಸಿ ಪೊಲೀಸರಿಗೆ ಸಿಕ್ಕಿಬಿದ್ದಿರುವ ಹಲವರ ಬಳಿ ಚಾಲನಾ ಪರವಾನಗಿಯೇ ಇರುವುದಿಲ್ಲ. ಡಿ.ಎಲ್ ಅಮಾನತಿಗೆ ಹೆದರಿ ಚಾಲಕರು ತಮ್ಮ ಬಳಿ ಡಿ.ಎಲ್ ಇಲ್ಲ ಎಂದು ಸುಳ್ಳು ಹೇಳಿರುವ ಉದಾಹರಣೆಯೂ ಇದೆ. ಹೊರ ರಾಜ್ಯದ ವಾಹನಗಳ ಚಾಲಕರ ಡಿ.ಎಲ್‌ಗಳನ್ನು ಅಮಾನತುಗೊಳಿಸುವಂತೆ ಆಯಾ ರಾಜ್ಯಗಳಿಗೆ ಶಿಫಾರಸು ಕಳುಹಿಸುವ ಪ್ರಕ್ರಿಯೆ ಕಷ್ಟವಾಗಿದೆ’ ಎಂದು ಸಂಚಾರ ವಿಭಾಗದ ಅಧಿಕಾರಿಯೊಬ್ಬರು ತಿಳಿಸಿದರು.

ಡಿಸೆಂಬರ್ 31ರ ರಾತ್ರಿ ಹೊಸ ವರ್ಷದ ಸಂಭ್ರಮಾಚರಣೆಯಲ್ಲಿ ಮದ್ಯ ಸೇವಿಸಿ ವಾಹನ ಚಲಾಯಿಸಿದ 531 ಮಂದಿ ಚಾಲಕರು, ಸವಾರರು ಸಂಚಾರ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ. ತಪಾಸಣೆಗೆ ಒಳಪಡಿಸಿದ 28,127 ವಾಹನ ಚಾಲಕರ ಪೈಕಿ 531 ಮಂದಿ ಮದ್ಯ ಸೇವಿಸಿರುವುದು ದೃಢಪಟ್ಟಿದ್ದು, ಪ್ರಕರಣ ದಾಖಲಿಸಲಾಗಿದೆ. ತಪ್ಪಿತಸ್ಥರು ನ್ಯಾಯಾಲಯದಲ್ಲಿ ತಲಾ ₹ 10 ಸಾವಿರ ದಂಡ ಕಟ್ಟಬೇಕಿದೆ’ ಎಂದು ಪೊಲೀಸರು ಹೇಳಿದ್ದಾರೆ.

‘ಚಾಲನಾ ಪರವಾನಗಿ ಇಲ್ಲದಿರುವವರು ಮದ್ಯ ಸೇವಿಸಿ ವಾಹನ ಚಾಲನೆ ಮಾಡಿರುವುದು ಪತ್ತೆಯಾದರೆ ಅಂತಹವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುತ್ತಿದೆ. ಡಿ.ಎಲ್ ರಹಿತವಾಗಿ ವಾಹನ ಚಾಲನೆ ಮಾಡಿದ್ದ ಸವಾರರೊಬ್ಬರು ಮದ್ಯ ಸೇವಿಸಿದ್ದು ಪತ್ತೆಯಾಗಿದ್ದು, ಅವರ ವಿರುದ್ಧ ಕುಮಾರಸ್ವಾಮಿ ಲೇಔಟ್ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ’ ಎಂದು ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಎಂ.ಎನ್.ಅನುಚೇತ್ ಹೇಳಿದರು.

‘ಪಾನಮತ್ತರಾಗಿ ಶಾಲಾ ವಾಹನ ಚಾಲನೆ ಹಾಗೂ ವಾಹನಗಳಲ್ಲಿ ಹೆಚ್ಚಿನ ಮಕ್ಕಳನ್ನು ಕರೆದೊಯ್ಯುತ್ತಿರುವ ಕುರಿತು ಕಾರ್ಯಾಚರಣೆ ಕೈಗೊಳ್ಳಲಾಗುತ್ತಿದೆ. ಈ ಬಗ್ಗೆ ಸಂಬಂಧಪಟ್ಟ ಶಾಲಾ ಆಡಳಿತ ಮಂಡಳಿಗಳಿಗೂ ನೋಟಿಸ್ ನೀಡಲಾಗುತ್ತಿದೆ’ ಎಂದರು.

5.2 ಲಕ್ಷ ಜನರಿಗೆ ತರಬೇತಿ

ಸಂಚಾರ ನಿಯಮ ಉಲ್ಲಂಘನೆ ತಡೆಯುವ ಸಂಬಂಧ 5,20,482 ಜನರಿಗೆ ತರಬೇತಿ ನೀಡಲಾಗಿದೆ. ಅಲ್ಲದೆ ಸಂಚಾರ ನಿರ್ವಹಣಾ ಕೇಂದ್ರಕ್ಕೆ 3992 ಶಾಲೆಗಳ ಮಕ್ಕಳು ಭೇಟಿ ನೀಡಿದ್ದರು. ಕಳೆದ ವರ್ಷ ಸಂಚಾರ ನಿಯಮ ಉಲ್ಲಂಘನೆ ಸಂಬಂಧ ₹80.90 ಕೋಟಿ ದಂಡ ಸಂಗ್ರಹಿಸಲಾಗಿದೆ.

ಮದ್ಯ ಸೇವಿಸಿ ವಾಹನ ಚಲಾಯಿಸಿ ಸಿಕ್ಕಿಬಿದ್ದವರು

ವರ್ಷ	ಪ್ರಕರಣಗಳು
2022	26,371
2023	7053
2024	23,574

ಅಂಕಿ-ಅಂಶಗಳು

201 ಶಾಲಾ ಬಸ್ ಚಲಾಯಿಸಿ ಸಿಕ್ಕಿಬಿದ್ದವರು
83 ಖಾಸಗಿ ಬಸ್ ಚಾಲಕರು
67 ವಾಟರ್ ಟ್ಯಾಂಕರ್ ಚಾಲಕರು
12,54,418 ಪರಿಶೀಲಿಸಿದ ವಾಹನಗಳ ಸಂಖ್ಯೆ
23,574 ದಾಖಲಿಸಿದ ಒಟ್ಟು ಪ್ರಕರಣಗಳು
1.87 ಪಾಸಿಟಿವಿಟಿ ರೇಟ್

ನಟಿ ರಾಗಿಣಿ ವಿರುದ್ಧದ ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೋಜು ಮೇಜವಾನಿಗಳನ್ನು ಆಯೋಜಿಸಿ ಮಾದಕ ವಸ್ತುಗಳನ್ನು ಮಾರಾಟ ಮಾಡಿದ್ದರು’ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ನಟಿ ರಾಗಿಣಿ ದ್ವಿವೇದಿ ಮತ್ತು ಪ್ರಶಾಂತ್ ರಂಕಾ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಸಂಬಂಧ ರಾಗಿಣಿ ಮತ್ತು ಪ್ರಶಾಂತ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹೇಮಂತ ಚಂದನಗೌಡರ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಅರ್ಜಿದಾರರ ವಿರುದ್ಧದ ಆರೋಪ ಪುಷ್ಟೀಕರಿಸಲು ಪ್ರಾಸಿಕ್ಯೂಷನ್ ಸಹ ಆರೋಪಿಗಳ ಹೇಳಿಕೆ ಮತ್ತು ದೋಷಾರೋಪ ಪಟ್ಟಿಯಲ್ಲಿರುವ ಸಾಕ್ಷ್ಯಗಳನ್ನು ಹೊರತುಪಡಿಸಿ ಬೇರಾವುದೇ ದಾಖಲೆಗಳನ್ನು ಸಲ್ಲಿಸಿಲ್ಲ’ ಎಂದು ಹೇಳಿದೆ.

‘ಅರ್ಜಿದಾರರು ಮೋಜು ಮೇಜವಾನಿಗಳನ್ನು ಆಯೋಜಿಸಿದ್ದರು. ಅಲ್ಲಿ ಮಾದಕ ವಸ್ತುಗಳನ್ನು ಮಾರಾಟ ಮಾಡಿದ್ದರು ಎಂಬುದಕ್ಕೆ, ಸಹ ಆರೋಪಿಯ ಹೇಳಿಕೆ ಮತ್ತು ದೋಷಾರೋಪ ಪಟ್ಟಿಯಲ್ಲಿರುವ ಸಾಕ್ಷಿಯನ್ನು ಮಾತ್ರವೇ ಆಧರಿಸಲಾಗಿದೆ. ಹೀಗಾಗಿ, ಅರ್ಜಿದಾರರ ವಿರುದ್ಧ ಕ್ರಿಮಿನಲ್ ಪ್ರಕ್ರಿಯೆ ಮುಂದುವರಿಸುವುದು ಕಾನೂನಿನ ದುರ್ಬಳಕೆಯಾಗುತ್ತದೆ’ ಎಂದು ಹೇಳಿದೆ.

ಪ್ರಕರಣದಲ್ಲಿ ಎರಡನೇ ಆರೋಪಿ ಆಗಿದ್ದ ರಾಗಿಣಿ ದ್ವಿವೇದಿ ಅಲಿಯಾಸ್ ಗಿಣಿ ಅಲಿಯಾಸ್ ರಾಗ್ಸ್ ಹಾಗೂ ನಾಲ್ಕನೇ ಆರೋಪಿ ಪ್ರಶಾಂತ್ ರಂಕಾ ಸಲ್ಲಿಸಿದ್ದ ಅರ್ಜಿಗಳನ್ನು ನ್ಯಾಯಪೀಠ ಪುರಸ್ಕರಿಸಿದೆ. ವಿಶೇಷ ಪ್ರಾಸಿಕ್ಯೂಟರ್ ಆಗಿ ವೀರಣ್ಣ ಜಿ.ತಿಗಡಿ ಮತ್ತು ಅರ್ಜಿದಾರರ ಪರ ವಕೀಲ ಎ.ಮಹಮ್ಮದ್ ತಾಹಿರ್ ಮತ್ತು ವಿ.ಭರತ್ ಕುಮಾರ್ ವಾದ ಮಂಡಿಸಿದ್ದರು.

ಪ್ರಕರಣವೇನು?: ‘ರಾಗಿಣಿ ಮತ್ತು ಇತರರು ನಗರದ ವಿವಿಧ ಸ್ಥಳಗಳಲ್ಲಿ ಮೋಜು ಮೇಜವಾನಿಗಳನ್ನು ಆಯೋಜಿಸಿ, ಗ್ರಾಹಕರನ್ನು ಕರೆಸಿ ಡ್ರಗ್ಸ್ ಪೆಡ್ಲರ್‌ಗಳ ಮೂಲಕ ಉದ್ಯಮಿಗಳು, ಸೆಲೆಬ್ರಿಟಿಗಳು, ನಟ-ನಟಿಯರು, ಡಿ.ಜೆಗಳು (ಡಿಸ್ಕೊ ಜಾಕಿ), ಸಾಫ್ಟ್‌ವೇರ್ ಉದ್ಯೋಗಿಗಳು ಇತರರಿಗೆ ಮಾದಕ ವಸ್ತುಗಳನ್ನು ಪೂರೈಸಿ, ಅಕ್ರಮವಾಗಿ ಹಣ ಸಂಪಾದಿಸುತ್ತಿದ್ದಾರೆ’ ಎಂಬ ಆರೋಪದಡಿ ಸಿಸಿಬಿಯ ಎಸಿಪಿ ಕೆ.ಸಿ. ಗೌತಮ್ ಕಾಟನ್ ಪೇಟೆ ಪೊಲೀಸ್ ಠಾಣೆಯಲ್ಲಿ 2020ರ ಸೆ. 4ರಂದು ದೂರು ದಾಖಲಿಸಿದ್ದರು.

ಇದರನ್ವಯ, ಮಾದಕ ವಸ್ತುಗಳು ಮತ್ತು ಅಮಲು ಪದಾರ್ಥಗಳ ನಿಷೇಧ ಕಾಯ್ದೆಯಡಿ ವಿಚಾರಣೆ ನಡೆಸಿ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು.

ಸ್ವಾಮಿ ಜಪಾನಂದ ಮಹಾರಾಜ್ ಸಲಹೆ

‘ವಿವೇಕಾನಂದರ ಆದರ್ಶ ಪಾಲಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸ್ವಾಮಿ ವಿವೇಕಾನಂದರ ವಿಚಾರ ಮತ್ತು ಆದರ್ಶಗಳು ಭಾಷಣಕ್ಕೆ ಸೀಮಿತಗೊಳಿಸದೇ ಎಲ್ಲರೂ ಪಾಲಿಸಬೇಕು’ ಎಂದು ಪಾವಗಡದ ಶ್ರೀರಾಮಕೃಷ್ಣ ಸೇವಾಶ್ರಮದ ಅಧ್ಯಕ್ಷ ಸ್ವಾಮಿ ಜಪಾನಂದ ಮಹಾರಾಜ್ ಹೇಳಿದರು.

ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸೋಮವಾರ ಆಯೋಜಿಸಿದ್ದ ಸ್ವಾಮಿ ವಿವೇಕಾನಂದರ ಜನ್ಮದಿನಾಚರಣೆ, ಸಂಕ್ರಾಂತಿ ಸಂಭ್ರಮ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಮಕ್ಕಳು ಕ್ರಿಕೆಟ್ ಮತ್ತು ಸಿನಿಮಾ ತಾರೆಯರ ಬಗ್ಗೆ ತಿಳಿದುಕೊಳ್ಳುವ ಉತ್ಸಾಹ ದೇಶಕ್ಕಾಗಿ ಮಡಿದ ಹೋರಾಟಗಾರರು, ಸಮಾಜ ಸುಧಾರಕರ ಬಗ್ಗೆ ತಿಳಿದುಕೊಳ್ಳಲು ತೋರಿಸುತ್ತಿಲ್ಲ. ಮಂಗಳ ಗ್ರಹಕ್ಕೆ ಲಗ್ಗೆ ಇಟ್ಟ ನಾವು, ಮನದ ಅಂಗಳಕ್ಕೆ ಇಳಿಯಲು ಹಿಂದೇಟು ಹಾಕುತ್ತಿದ್ದೇವೆ’ ಎಂದರು.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮಾತನಾಡಿ,‘ಸ್ವಾಮಿ ವಿವೇಕಾನಂದರು ಎಲ್ಲ ರೀತಿಯಿಂದಲೂ ನಮಗೆ ಮಾದರಿ ಆಗಿದ್ದಾರೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಅವರನ್ನು ಅನುಸರಿಸಬೇಕು. ಅವರ ಮಾನವೀಯ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು’ ಎಂದು ಹೇಳಿದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸೋಮವಾರ ಆಯೋಜಿಸಿದ್ದ ಸ್ವಾಮಿ ವಿವೇಕಾನಂದರ ಜನ್ಮದಿನಾಚರಣೆ ಮತ್ತು ಸಂಕ್ರಾಂತಿ ಸಂಭ್ರಮ ಕಾರ್ಯಕ್ರಮದಲ್ಲಿ ಪದವಿಪೂರ್ವ ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕ ಗುಬ್ಬಿಗೂಡು ರಮೇಶ್, ಪಾವಗಡದ ರಾಮಕೃಷ್ಣ ಸೇವಾಶ್ರಮದ ಅಧ್ಯಕ್ಷ ಸ್ವಾಮಿ ಜಪಾನಂದ ಮಹಾರಾಜ್ ಮತ್ತು 'ಭಾರತ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್'ನ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್ ಸಿಂಧ್ಯ ಅವರು ಸ್ವಾಮಿ ವಿವೇಕಾನಂದರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

ಅಪಘಾತ: ಹೂವಿನ ವ್ಯಾಪಾರಿ ಸಾವು

ದ್ವಿಚಕ್ರ ವಾಹನಗಳು ಮುಖಾಮುಖಿ ಡಿಕ್ಕಿ : ಇನ್ನೊಬ್ಬ ಸವಾರ ವಾಹನ ಸಹಿತ ಪರಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಶವಂತಪುರದ ಮಾರಪ್ಪನಪಾಳ್ಯದ ಬಿಎಸ್‌ಎನ್‌ಎಲ್ ಕಚೇರಿ ಬಳಿ ಮಂಗಳವಾರ ಮುಂಜಾನೆ ಎರಡು ದ್ವಿಚಕ್ರ ವಾಹನಗಳ ಮಧ್ಯೆ ಸಂಭವಿಸಿದ ಅಪಘಾತದಲ್ಲಿ ಹೂವಿನ ವ್ಯಾಪಾರಿಯೊಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮತ್ತಿಕೆರೆ ನಿವಾಸಿ ಜಯರಾಮ್ (51) ಮೃತಪಟ್ಟವರು.

ಮಂಗಳವಾರ ಮುಂಜಾನೆ ಯಶವಂತಪುರ ಮಾರುಕಟ್ಟೆಯಲ್ಲಿ ಹೂವು ಖರೀದಿಸಿಕೊಂಡು ದ್ವಿಚಕ್ರ ವಾಹನದಲ್ಲಿ ಮನೆಗೆ ಹೋಗುತ್ತಿದ್ದಾಗ ಅಪಘಾತ ಸಂಭವಿಸಿದೆ. ಮಾರಪ್ಪನಪಾಳ್ಯದ ಬಿಎಸ್‌ಎನ್‌ಎಲ್ ಕಚೇರಿ ಸಮೀಪದ ಜಂಕ್ಷನ್ ಬಳಿಯ ಏಕಮುಖ ಸಂಚಾರದ ರಸ್ತೆಯಲ್ಲಿ ವಿರುದ್ಧ ದಿಕ್ಕಿನಲ್ಲಿ ದ್ವಿಚಕ್ರ ವಾಹನ ಚಾಲನೆ ಮಾಡಿಕೊಂಡು ಹೋಗುತ್ತಿದ್ದರು. ಅದೇ ವೇಳೆಗೆ ಎದುರುಗಡೆಯಿಂದ ವೇಗವಾಗಿ ಬಂದ ಪಲ್ಸರ್ ಬೈಕ್ ಜಯರಾಮ್ ಅವರ ವಾಹನಕ್ಕೆ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡ ಜಯರಾಮ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಸಂಚಾರ ವಿಭಾಗದ ಪೊಲೀಸರು ಮಾಹಿತಿ ನೀಡಿದರು.

ಘಟನೆ ನಂತರ ಪಲ್ಸರ್ ಬೈಕ್ ಸವಾರ ವಾಹನ ಸಮೇತ ಪರಾರಿ ಆಗಿದ್ದಾನೆ. ಹೀಗಾಗಿ, ಆತನ ಗುರುತು ಪತ್ತೆಯಾಗಿಲ್ಲ. ಘಟನಾ ಸ್ಥಳದ ಸುತ್ತಮುತ್ತಲಿನ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾಗಿರುವ ದೃಶ್ಯಾವಳಿ ಪರಿಶೀಲಿಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

ಯಶವಂತಪುರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅನಿಲ ಸ್ಫೋಟ: ಗಾಯಾಳು ಮಹಿಳೆ ಸಾವು

ಪೀಣ್ಯ ದಾಸರಹಳ್ಳಿ: ಚೊಕ್ಕಸಂದ್ರದ ಬಾಡಿಗೆ ಮನೆಯಲ್ಲಿ ಎಲ್‌ಪಿಜಿ ಸಿಲಿಂಡರ್‌ನಿಂದ ಅನಿಲ ಸೋರಿಕೆಯಾಗಿ ಸಂಭವಿಸಿದ ಸ್ಫೋಟದಿಂದ ಗಾಯಗೊಂಡಿದ್ದ ಐವರ ಪೈಕಿ, ಮಹಿಳೆಯೊಬ್ಬರು ಮಂಗಳವಾರ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅಸ್ಸಾಂನ ಅಂಜಲಿ ದಾಸ್(27) ಮೃತಪಟ್ಟವರು. ಅವರ ಪತಿ ಬಿಜುದಾಸ್(34) ಹಾಗೂ ಅವರ ಮೂರು ವರ್ಷದ ಹೆಣ್ಣು ಮಗುವಿನ ಸ್ಥಿತಿ ಗಂಭೀರವಾಗಿದ್ದು, ಚಿಕಿತ್ಸೆ ಮುಂದುವರೆದಿದೆ ಎಂದು ಮೂಲಗಳು ತಿಳಿಸಿವೆ.

ಇದೇ ಘಟನೆಯಲ್ಲಿ ಗಾಯಗೊಂಡಿದ್ದ ಮಂಜುನಾಥ್(25), ತಿಪ್ಪೇರುದ್ರಸ್ವಾಮಿ(50) ಹಾಗೂ ಶೋಭಾ(60) ಅವರು ಚೇತರಿಸಿಕೊಂಡಿದ್ದು, ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಇವರನ್ನು ಮಲ್ಲೇಶ್ವರದ ಕೆ.ಸಿ. ಜನರಲ್ ಆಸ್ಪತ್ರೆ ಹಾಗೂ ರಾಜಾಜಿನಗರದ ಇಎಸ್‌ಐ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲು ಮಾಡಲಾಗಿತ್ತು.

ಚೊಕ್ಕಸಂದ್ರದ ಮೂರು ಅಂತಸ್ತಿನ ಕಟ್ಟಡದ ನೆಲಮಹಡಿಯ ಬಾಡಿಗೆ ಮನೆಯಲ್ಲಿ ಬಿಜುದಾಸ್ ದಂಪತಿ ವಾಸವಿದ್ದರು. ಆ ಮನೆಯಲ್ಲಿ ಸೋಮವಾರ ಬೆಳಿಗ್ಗೆ ಸಂಭವಿಸಿದ ಅವಘಡದಿಂದ ಆರು ಮಂದಿ ಗಾಯಗೊಂಡಿದ್ದರು. ಎಲ್ಲರನ್ನೂ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ನಾಡಿನಾದ್ಯಂತ ‘ಗೃಹ ಆರೋಗ್ಯ’

ಒಂದನೇ ಪುಟದಿಂದ...

ಅಗತ್ಯವಿದ್ದಲ್ಲಿ ‘ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ’ಯಡಿ (ಎಬಿ-ಪಿಎಂಜೆಎವೈ) ತೃತೀಯ ಹಂತದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಒದಗಿಸಲಾಗುತ್ತದೆ.

‘ಯೋಜನೆಗೆ ಕೋಲಾರದಲ್ಲಿ ಉತ್ತಮ ಸ್ಪಂದನ ದೊರೆತಿದೆ. ಮಾತ್ರೆಗಳಿಗೆ ಪ್ರತಿ ತಿಂಗಳು ಸಾವಿರಾರು ರೂಪಾಯಿ ವೆಚ್ಚ ಮಾಡುವುದು ತಪ್ಪಿದೆ. ನಿಯಮಿತ ತಪಾಸಣೆ ಮತ್ತು ಮಾತ್ರೆಗಳ ವಿತರಣೆಯಿಂದ ಸಾಂಕ್ರಾಮಿಕವಲ್ಲದ ರೋಗಗಳ ನಿಯಂತ್ರಣ ಸಾಧ್ಯವಾಗಲಿದೆ. ಯೋಜನೆ ವಿಸ್ತರಣೆಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ನಾಲ್ಕು ತಿಂಗಳಿಗೆ ಸಾಕಾಗುವಷ್ಟು ಮಾತ್ರೆಗಳನ್ನು ದಾಸ್ತಾನು ಮಾಡಿಕೊಳ್ಳಲಾಗಿದೆ’ ಎಂದು ಇಲಾಖೆಯ ಸಾಂಕ್ರಾಮಿಕವಲ್ಲದ ರೋಗಗಳ ವಿಭಾಗದ ಉಪ ನಿರ್ದೇಶಕ ಡಾ.ಜಿ. ಶ್ರೀನಿವಾಸ್ ಅವರು ತಿಳಿಸಿದರು.

ಶ್ವಾಸಕೋಶ ಸಂಬಂಧಿ ಸಮಸ್ಯೆಯೂ ಪತ್ತೆ

ಪ್ರಾಯೋಗಿಕ,ವಾಗಿ ಜಾರಿಯಾದ ಈ ಯೋಜನೆಯಡಿ ಕೋಲಾರದಲ್ಲಿ ಮಧುಮೇಹ, ಅಧಿಕ ರಕ್ತದೊತ್ತಡ, ಕ್ಯಾನ್ಸರ್ ಹಾಗೂ ಮಾನಸಿಕ ಅನಾರೋಗ್ಯ ಸಮಸ್ಯೆಗಳನ್ನು ಪತ್ತೆ ಮಾಡಲಾಗುತ್ತಿದೆ. ಯೋಜನೆ ರಾಜ್ಯದಾದ್ಯಂತ ವಿಸ್ತರಣೆಯಾದ ಬಳಿಕ ಇವುಗಳ ಜತೆಗೆ ಅಸ್ತಮಾ ಸೇರಿ ಗಂಭೀರ ಶ್ವಾಸಕೋಶ ಕಾಯಿಲೆ ಪತ್ತೆಯನ್ನೂ ಸೇರ್ಪಡೆ ಮಾಡಲಾಗುತ್ತದೆ.

ಮೂತ್ರಪಿಂಡ ಸಮಸ್ಯೆಗೆ ಸಂಬಂಧಿಸಿದಂತೆ ನಿಯಮಿತವಾಗಿ ಡಯಾಲಿಸಿಸ್ ಮಾಡಿಸಿಕೊಳ್ಳಲಾಗುತ್ತಿದೆಯೇ ಎಂಬುದರ ಬಗ್ಗೆಯೂ ವೈದ್ಯಕೀಯ ತಂಡ ಮಾಹಿತಿ ಕಲೆಹಾಕಲಿದೆ. ಇತ್ತೀಚೆಗೆ ಪಾಶ್ಚಾತ್ಯ ಆಹಾರ ಪದ್ಧತಿ ಸೇರಿ ವಿವಿಧ ಕಾರಣಗಳಿಂದ ಹೆಚ್ಚುತ್ತಿರುವ ಫ್ಯಾಟಿ ಲಿವರ್ ಕಾಯಿಲೆಯನ್ನೂ (ಎನ್‌ಎಎಫ್‌ಎಲ್‌ಡಿ) ಯೋಜನೆಯಡಿ ಗುರುತಿಸಿ, ಸೂಕ್ತ ಮಾರ್ಗದರ್ಶನ ಮಾಡಲಾಗುತ್ತದೆ ಎಂದು ಇಲಾಖೆಯ ಮೂಲಗಳು ತಿಳಿಸಿವೆ.

ಆರ್‌.ರಾಹುಲ್ (ಎಡ) ಮತ್ತು ಸುರೇಶ್ (ಬಲ) ಚೆಂಡಿಗಾಗಿ ಸೆಣಸಾಟ ನಡೆಸಿದ ಕ್ಷಣ (ಚಿತ್ರ: ಎಸ್‌.ಕೆ.ದಿನೇಶ್)

ಕಿಕ್‌ಸ್ಟಾರ್ಟ್ ಎಫ್‌ಸಿ ತಂಡಕ್ಕೆ ಸುಲಭ ಜಯ

ಬೆಂಗಳೂರು: ಕಿಕ್‌ಸ್ಟಾರ್ಟ್ ಎಫ್‌ಸಿ ತಂಡ, ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಪಂದ್ಯದಲ್ಲಿ ಮಂಗಳವಾರ 5-1 ಗೋಲುಗಳಿಂದ ಬೆಂಗಳೂರು ಇಂಡಿಪೆಂಡೆಂಟ್ಸ್ ತಂಡವನ್ನು ಸೋಲಿಸಿತು.

ಅಶೋಕನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಲೀಗ್‌ನ ಇನ್ನೊಂದು ಪಂದ್ಯದಲ್ಲಿ ಬಿಎಫ್‌ಸಿ ತಂಡ 1-1 ಗೋಲಿನಿಂದ ಸೌತ್ ಯುನೈಟೆಡ್ ಎಫ್‌ಸಿ ತಂಡದ ಜೊತೆ ಡ್ರಾ ಮಾಡಿಕೊಂಡಿತು.

ಸಿಂಧು, ಸಾತ್ವಿಕ್–ಚಿರಾಗ್ ಮುನ್ನಡೆ

ನವದೆಹಲಿ (ಪಿಟಿಐ): ಅನುಭವಿ ಆಟಗಾರ್ತಿ ಪಿ.ವಿ.ಸಿಂಧು, ಇಂಡಿಯಾ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಎರಡನೇ ಸುತ್ತು ತಲುಪಲು ಸ್ವಲ್ಪ ಪ್ರಯಾಸಪಡಬೇಕಾಯಿತು. ಪುರುಷರ ಡಬಲ್ಸ್‌ನಲ್ಲಿ ಏಳನೇ ಶ್ರೇಯಾಂಕದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಜೋಡಿ ಸಹ ಮಂಗಳವಾರ ಮೊದಲ ಸುತ್ತಿನಲ್ಲಿ ಜಯಗಳಿಸಲು ಮೂರು ಗೇಮ್‌ಗಳನ್ನು ಆಡಬೇಕಾಯಿತು.

ವರ್ಷದ ಮೊದಲ ಟೂರ್ನಿಯಾದ ಮಲೇಷ್ಯಾ ಓಪನ್ ತಪ್ಪಿಸಿಕೊಂಡಿದ್ದ ಸಿಂಧು 21–14, 22–20 ರಿಂದ ವಿಶ್ವದ 24ನೇ ಕ್ರಮಾಂಕದ ಆಟಗಾರ್ತಿ, ಚೀನಾ ತೈಪೆಯ ಸುಂಗ್ ಶುವೊ ಯುನ್ ಮೇಲೆ ಜಯಗಳಿಸಿದರು.

ಪುರುಷರ ಡಬಲ್ಸ್‌ನಲ್ಲಿ ಪ್ರಶಸ್ತಿಗೆ ನೆಚ್ಚಿನ ಜೋಡಿಯಾಗಿರುವ ಸಾತ್ವಿಕ್–ಚಿರಾಗ್ ಕೆಲವು ಆತಂಕದ ಕ್ಷಣಗಳನ್ನು ಮೆಟ್ಟಿನಿಂತು 23–21, 19–21, 21–16 ರಿಂದ ಮಲೇಷ್ಯಾದ ಮನ್ ವೀ ಚೊಂಗ್– ಕೈ ವುನ್ ಟೀ ಅವರನ್ನು ಸೋಲಿಸಿದರು. ಮಲೇಷ್ಯಾದ ಆಟಗಾರರು ವಿಶ್ವ ರ‍್ಯಾಂಕಿಂಗ್‌ನಲ್ಲಿ ಏಳನೇ ಸ್ಥಾನದಲ್ಲಿದ್ದಾರೆ.

ಪ್ರತಿಭಾನ್ವಿತ ಆಟಗಾರ ಕಿರಣ್ ಜಾರ್ಜ್ ಪುರುಷರ ಸಿಂಗಲ್ಸ್‌ನಲ್ಲಿ 21–19, 14–21, 27–25 ರಿಂದ 25ನೇ ಕ್ರಮಾಂಕದ ಯುಶಿ ತನಾಕ (ಜಪಾನ್) ಅವರನ್ನು ಸೋಲಿಸಿದರು.

ಮಿಶ್ರ ಡಬಲ್ಸ್‌ನಲ್ಲಿ ತನಿಶಾ ಕ್ರಾಸ್ಟೊ–ಧ್ರುವ್ ಕಪಿಲಾ 8–21, 21–19, 21–17 ರಿಂದ ಚೀನಾ ತೈಪೆಯ ಚೆನ್ ಚೆಂಗ್ ಕುವಾನ್–ಸು ಯಿನ್ ಹಯಿ ಜೋಡಿಯನ್ನು ಮಣಿಸಿತು.

ಆದರೆ ಮಹಿಳಾ ಡಬಲ್ಸ್‌ನಲ್ಲಿ, ಐದನೇ ಶ್ರೇಯಾಂಕದ ಟ್ರೀಸಾ ಜೋಳಿ–ಗಾಯತ್ರಿ ಗೋಪಿಚಂದ್ ಜೋಡಿ ಹೊರಬಿತ್ತು. ಜಪಾನ್‌ನ ಅರಿಸಾ ಇಗರಾಶಿ– ಅಯಾಕೊ ಸಕುರಾಮೊಟೊ ಜೋಡಿ 23–21, 21–19ರಲ್ಲಿ ಭಾರತದ ಆಟಗಾರ್ತಿಯರನ್ನು ಮಣಿಸಿತು. ಅಮೃತಾ ಪ್ರಮುತೇಶ್– ಸೊನಾಲಿ ಸಿಂಗ್ ಜೋಡಿ ಕೂಡ ನಿರ್ಗಮಿಸಿತು.

ಮಿಶ್ರ ಡಬಲ್ಸ್‌ನಲ್ಲಿ ಸತೀಶ್ ಕರುಣಾಕರನ್– ಎ.ವರಿಯತ್ ಜೋಡಿ ಸೋಲನುಭವಿಸಿತು. ರೋಹನ್ ಕಪೂರ್– ರುತ್ವಿಕಾ ಗದ್ದೆ ಜೋಡಿ ಕೂಡ ಮೊದಲ ಸುತ್ತಿಲ್ಲಿ ಪರಾಜಯ ಕಂಡಿತು.

ಕೊನೆಗಳಿಗೆಯಲ್ಲಿ ಪ್ರವೇಶ ಅವಕಾಶ ಪಡೆದ ಕಿದಂಬಿ ಶ್ರೀಕಾಂತ್ ಟೂರ್ನಿಯಿಂದ ಹಿಂದೆಸರಿದ ಪರಿಣಾಮ ವೆಂಗ್ ಹಾಂಗ್ (ಚೀನಾ) ಅವರು ವಾಕ್ ಓವರ್ ಪಡೆದು ಎರಡನೇ ಸುತ್ತಿಗೆ ಮುನ್ನಡೆದರು.


ಪಿ.ವಿ.ಸಿಂಧು

ಊರ ಜಾತ್ರೆಗಾಗಿ ಉರುಸ್ ದಿನ ಬದಲು

ಪ್ರಜಾವಾಣಿ ವಾರ್ತೆ

ಉಳ್ಳಾಲ: ತಾಲ್ಲೂಕಿನ ಶ್ರೀ ಅರಸು ಪೈಂದೊಷ್ಣಾಯ ಪೊಸಭೂತ ಬಂಟ ದೈವಸ್ಥಾನದ ದೈವದ ನೇಮ (ಪೆಲತ್ತಡಿ ಜಾತ್ರೆ)ಕ್ಕಾಗಿ ಬೆಳ್ಮ ರೆಂಜಾಡಿಯ ಕೇಂದ್ರ ಜುಮಾ ಮಸೀದಿ ಆಡಳಿತ ಉರುಸ್ ದಿನಾಂಕ ಬದಲಾಯಿಸಿದೆ.

2 ವರ್ಷಕ್ಕೊಮ್ಮೆ ಬೆಳ್ಮ ರೆಂಜಾಡಿಯ ಕೇಂದ್ರ ಜುಮಾ ಮಸೀದಿಯಿಂದ ಆಚರಿಸುವ ಹಜರತ್ ಅಸಯ್ಯದ್ ಅಬೂ ಸ್ವಾಲಿಹ್ ವಲಿಯುಲ್ಲಾಹಿ ಉರುಸ್ ಜ.19ರಿಂದ ಜ.26 ರವರೆಗೆ ನಡೆಸಲು ನಿರ್ಧರಿಸಲಾಗಿತ್ತು. ಧಾರ್ಮಿಕ ಪ್ರವಚನವೂ ನಿಗದಿಯಾಗಿತ್ತು. ಆದರೆ, ಈ ಬಾರಿ ಪೆಲತ್ತಡಿ ಜಾತ್ರೆ ಜ.24 ರಿಂದ 27ರವರೆಗೆ ನಡೆಯಲಿದೆ. ಎರಡೂ ಕಾರ್ಯಕ್ರಮ ಒಂದೇ ವೇಳೆ ನಡೆದು ಜನದಟ್ಟಣೆ ಹೆಚ್ಚುವ ಸಾಧ್ಯತೆ ಇರುವುದರಿಂದ ಮಸೀದಿ ಸಮಿತಿ ಚರ್ಚೆ ನಡೆಸಿ ಜ.12ರಿಂದ ಉರುಸ್ ಆರಂಭಿಸಿದ್ದು, ಜ.19ರವರೆಗೆ ನಡೆಯಲಿದೆ.

‘ಊರಿನ ಸೌಹಾರ್ದ ವಾತಾವರಣ ಉಳಿಸುವ ಜವಾಬ್ದಾರಿ ಊರಿನವರದ್ದಾಗಿದೆ. ಇದಕ್ಕೆ ಪೂರಕವಾಗಿ ಮಸೀದಿ ಸಮಿತಿ ನಿರ್ಧಾರ ಕೈಗೊಂಡಿದೆ’ ಎಂದು ರೆಂಜಾಡಿ ಕೇಂದ್ರ ಜುಮಾ ಮಸೀದಿ ಅಧ್ಯಕ್ಷ ಬಿ.ಆರ್.ಮಹಮ್ಮದ್ ಹನೀಫ್ ಮಲಾರ್ ತಿಳಿಸಿದ್ದಾರೆ.

ಬಿಜೆಪಿ ಮುಖಂಡ ಎನ್‌.ಆರ್‌.ರಮೇಶ್ ಅವರ ಜನ್ಮದಿನ ಹಾಗೂ ಸಂಕ್ರಾಂತಿ ಹಬ್ಬದ ಅಂಗವಾಗಿ ಮಂಗಳವಾರ ಯಡಿಯೂರು ವಾರ್ಡ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅಂಧರಿಗೆ ದಿನಸಿ ಕಿಟ್‌ಗಳನ್ನು ವಿತರಿಸಲಾಯಿತು

ಮೈಸೂರು ರೇಸ್

ಸಿಲ್ವರ್ ಸ್ಪ್ರಿಂಗ್ ಗೆಲ್ಲುವ ನಿರೀಕ್ಷೆ

ಎಂ.ಗೋವಿಂದಪ್ಪ ಮೆಮೋರಿಯಲ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸಿಲ್ವರ್ ಸ್ಪ್ರಿಂಗ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ

1ನೇ ರೇಸ್: ಸ್ಕ್ವೇರ್ ಕಟ್ 1, ಇಗ್ನೊರೆನ್ಸ್ ಈಸ್ ಬ್ಲಿಸ್ 7, ನ್ಯಾಚುರಲ್ ಸ್ಪೀಡ್ 5
2ನೇ ರೇಸ್: ಸ್ಪಿರಿಚ್ಯುಯಲ್ ಫೋರ್ಸ್ 1, ರೆಡ್ ಹಿಲ್ಸ್ 2, ಪೆಟ್ಟೀಸ್ ಚಾಯ್ಸ್ 4
3ನೇ ರೇಸ್: ಇಕೊ ಸಿಸ್ಟಮ್ 6, ಫ್ರೀ ಸ್ಪಿರಿಟೆಡ್ 1, ಅಂಕುಶ್ 3
4ನೇ ರೇಸ್: ಸಿಲ್ವರ್ ಸ್ಪ್ರಿಂಗ್ 5, ಗೋಲ್ಡ್ ಕೈಟ್ 3, ರಿವರ್ ಆಫ್ ಗೋಲ್ಡ್ 8
5ನೇ ರೇಸ್: ವರ್ದಾನ್ 5, ನ್ಯಾಚುರಲ್ ಗೋಲ್ಡ್ 6, ಈಗಲ್ ಬ್ಲಫ್ 8
6ನೇ ರೇಸ್: ಟೈಗರ್‌ಕಿಂಗ್ 3, ಡಿ ಲಾರ್ಡ್ 2, ಡೆವಿಡ್ಸ್ ಡಿಲೈಟ್ 5

ಉತ್ತಮ ಬೆಟ್: ಸ್ಕ್ವೇರ್ ಕಟ್

ಜಾಕ್‌ಪಾಟ್‌ಗೆ	1ನೇ ಟ್ರಬಲ್	2ನೇ ಟ್ರಬಲ್
2,3,4,5,6	1,2,3	4,5,6

ಭಾರತ ತಂಡಕ್ಕೆ ಕ್ಲೀನ್‌ಸ್ವೀಪ್ ಗುರಿ

ರಾಜಕೋಟ್ (ಪಿಟಿಐ): ಹಿಂದಿನ ಎರಡು ಪಂದ್ಯಗಳಲ್ಲಿ ಅಧಿಕಾರಯುತ ಗೆಲುವು ಸಾಧಿಸಿರುವ ಭಾರತ ತಂಡವು ಬುಧವಾರ ಐರ್ಲೆಂಡ್ ವಿರುದ್ಧ ಇಲ್ಲಿ ನಡೆಯಲಿರುವ ಮಹಿಳೆಯರ ಏಕದಿನ ಕ್ರಿಕೆಟ್ ಸರಣಿಯ ಮೂರನೇ ಹಾಗೂ ಅಂತಿಮ ಪಂದ್ಯವನ್ನೂ ಗೆದ್ದು ಕ್ಲೀನ್‌ಸ್ವೀಪ್ ಸಾಧಿಸುವ ಗುರಿಯಲ್ಲಿದೆ.

ಇದೇ ತಾಣದಲ್ಲಿ ಮೊದಲ ಎರಡು ಪಂದ್ಯಗಳಲ್ಲಿ ಆತಿಥೇಯ ತಂಡದ ಬ್ಯಾಟರ್‌ಗಳು ಅಮೋಘವಾಗಿ ಆಡಿದ್ದು ಅದನ್ನು ಮುಂದುವರಿಸುವ ತವಕದಲ್ಲಿದ್ದಾರೆ. ನಾಲ್ಕು ಪಂದ್ಯಗಳಲ್ಲಿ ಮೂರು ಅರ್ಧ ಶತಕಗಳನ್ನು ಹೊಡೆದಿರುವ ಪ್ರತಿಕಾ ರಾವಲ್ ಅರ್ಧ ಶತಕವನ್ನು ಶತಕವಾಗಿ ಪರಿವರ್ತಿಸಲು ಕಾತರರಾಗಿದ್ದಾರೆ.

ಪ್ರತಿಕಾ, ಈ ಸರಣಿಯಲ್ಲಿ ನಾಯಕಿ ಸ್ಮೃತಿ ಮಂದಾನ ಜೊತೆ ತಂಡಕ್ಕೆ ಉತ್ತಮ ಆರಂಭ ನೀಡಿದ್ದಾರೆ. ಸರಣಿಯ ಎರಡನೇ ಪಂದ್ಯದಲ್ಲಿ ಇವರಿಬ್ಬರು 156 ರನ್‌ಗಳ ಜೊತೆಯಾಟವಾಡಿದ್ದರು. ಐದು ಇನಿಂಗ್ಸ್‌ಗಳಲ್ಲಿ ಇದು ಇವರಿಬ್ಬರ ನಡುವಣ ಮೂರನೇ ಶತಕ ಜೊತೆಯಾಟವೆನಿಸಿತ್ತು.

ಎಡಗೈ ಆಟಗಾರ್ತಿ ಮಂದಾನ ವೆಸ್ಟ್ ಇಂಡೀಸ್ ವಿರುದ್ಧದ ಸರಣಿಯಿಂದ ಉತ್ತಮ ಲಯದಲ್ಲಿದ್ದು, ಎಲ್ಲ ಮಾದರಿಗಳಲ್ಲಿ ಉತ್ತಮ ಪ್ರದರ್ಶನ ನೀಡಿದ್ದಾರೆ. ಆರಂಭದಲ್ಲಿ ಪರದಾಡಿದ್ದ ಹರ್ಲೀನ್ ಡಿಯೋಲ್ ನಂತರ ಲಯ ಕಂಡುಕೊಂಡಿದ್ದು, ಈ ಹಿಂದಿನ ಪಂದ್ಯದಲ್ಲಿ ಮಹತ್ವದ 89 ರನ್ ಗಳಿಸಿದ್ದರು.


ಸ್ಮೃತಿ ಮಂದಾನ

ಜೆಮಿಮಾ ರಾಡ್ರಿಗಸ್ ಸಹನೆಯ ಜೊತೆ ಏಕಾಗ್ರತೆಯನ್ನೂ ಮಿಳಿತಗೊಳಿಸಿ ಸರಣಿಯ ಎರಡನೇ ಪಂದ್ಯದಲ್ಲಿ ಶತಕ ಬಾರಿಸಿದ್ದರು. ಭಾರತ ಆ ಪಂದ್ಯದಲ್ಲಿ ಏಕದಿನ ಪಂದ್ಯಗಳಲ್ಲಿ ದಾಖಲೆಯ 5 ವಿಕೆಟ್‌ಗೆ 370 ರನ್ ಪೇರಿಸಿತ್ತು. ನಾಯಕಿಯಾಗಿದ್ದ ಹರ್ಮನ್‌ಪ್ರೀತ್ ಕೌರ್ ಅವರ ಗೈರಿನಲ್ಲಿ ನಾಲ್ಕನೇ ಕ್ರಮಾಂಕಕ್ಕೆ ಬಡ್ತಿ ಪಡೆದಿರುವ ಜೆಮಿಮಾ ಪ್ರಬುದ್ಧ ಆಟವಾಡಿದ್ದಾರೆ. ಒಂದು ಜೀವದಾನ ಪಡೆದಿದ್ದರೂ ಅವರ ಆಟ ಸೊಗಸಾಗಿತ್ತು.

‘ಇದು ಹೆಚ್ಚುವರಿಯಾಗಿ ಬಂದ ಹೊಣೆ. ಆರಂಭದಲ್ಲಿ ಸಾಕಷ್ಟು ಸಹನೆಯಿಂದ ಆಡಿದ್ದೆ. ಕುದುರಿಕೊಂಡು ಆಡಿದ್ದು ಆಡಿದ್ದು ಫಲ ನೀಡಿತು. ನಂತರ ರನ್‌ಗಳು ಹರಿದುಬಂದವು’ ಎಂದು ಜೆಮಿಮಾ ಹೇಳಿದರು.ಅನುಭವಿ ಬ್ಯಾಟರ್ ತೇಜಲ್ ಹಸಬ್ನಿಸ್ ಮೊದಲ ಪಂದ್ಯದಲ್ಲಿ ಅಜೇಯ ಅರ್ಧಶತಕ ದಾಖಲಿಸಿದ್ದರು. ಬೀಸು ಹೊಡೆತಗಳ ಆಟಗಾರ್ತಿ ಶಫಾಲಿ ಮತ್ತು ಕೌರ್ ಅಂಥ ಅನುಭವಿಗಳ ಅನುಪಸ್ಥಿತಿಯಲ್ಲಿ ಪ್ರತಿಕಾ ಮಿಂಚಿದ್ದಾರೆ.

ವಿಜಯ್ ಹಜಾರೆ ಸೆಮಿ ಇಂದು: ಕರ್ನಾಟಕಕ್ಕೆ ಹರಿಯಾಣ ಸವಾಲು

ವಡೋದರಾ (ಪಿಟಿಐ): ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ತಂಡವು ಬುಧವಾರ ನಡೆಯಲಿರುವ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಹಾಲಿ ಚಾಂಪಿಯನ್ ಹರಿಯಾಣದ ಸವಾಲು ಎದುರಿಸಲಿದೆ.

ನಾಲ್ಕು ಬಾರಿಯ ಚಾಂಪಿಯನ್ ಕರ್ನಾಟಕ ತಂಡದ ನಾಯಕ ಮಯಂಕ್, ದೇವದತ್ತ ಪಡಿಕ್ಕಲ್, ಕೆ.ಎಲ್. ಶ್ರೀಜಿತ್ ಮತ್ತು ಆಲ್‌ರೌಂಡರ್ ಶ್ರೇಯಸ್ ಗೋಪಾಲ್ ಅವರು ಉತ್ತಮ ಲಯದಲ್ಲಿದ್ದಾರೆ. ಬೌಲಿಂಗ್ ವಿಭಾಗದಲ್ಲಿ ಅನುಭವಿ ಪ್ರಸಿದ್ಧ ಕೃಷ್ಣ, ವಿ. ಕೌಶಿಕ್ ಅವರ ಮೇಲೆ ಹೆಚ್ಚಿನ ನಿರೀಕ್ಷೆ ಇದೆ. ಮಯಂಕ್ ಅವರು ಈ ಟೂರ್ನಿಯಲ್ಲಿ ನಾಲ್ಕು ಶತಕ ಗಳಿಸಿದ್ದಾರೆ. ಒಟ್ಟು 619 ರನ್ ಕಲೆಹಾಕಿದ್ದಾರೆ. ಕ್ವಾರ್ಟರ್‌ಫೈನಲ್‌ನಲ್ಲಿ ದೇವದತ್ತ ಕೂಡ ಶತಕ ದಾಖಲಿಸಿದ್ದರು.

ಆಸ್ಟ್ರೇಲಿಯಾ ಪ್ರವಾಸದಿಂದ ಮರಳಿದ ನಂತರ ಪ್ರಸಿದ್ಧ ಕೃಷ್ಣ ಅವರು ಕ್ವಾರ್ಟರ್‌ಫೈನಲ್‌ನಲ್ಲಿ ಆಡಿದ್ದರು. ಅವರಿಗೆ ಅಭಿಲಾಷ್ ಶೆಟ್ಟಿ ಮತ್ತು ಹಾರ್ದಿಕ್ ರಾಜ್ ಅವರು ಜೊತೆಯಿದ್ದಾರೆ.

ಕರ್ನಾಟಕ ತಂಡವು ಎಂಟರ ಘಟ್ಟದಲ್ಲಿ ಬರೋಡಾ ಎದುರು ರೋಚಕ ಜಯ ಸಾಧಿಸಿತ್ತು. ಹರಿಯಾಣ ತಂಡವು ಗುಜರಾತ್ ವಿರುದ್ಧ ಗೆದ್ದು ನಾಲ್ಕರ ಘಟ್ಟಕ್ಕೆ ಬಂದಿದೆ.

ಹರಿಯಾಣ ತಂಡದಲ್ಲಿ ನಿಶಾಂತ್ ಸಿಂಧು, ಅನ್ಶುಲ್ ಕಾಂಭೋಜ್ ಮತ್ತು ಅಂಕಿತ್ ಕುಮಾರ್ ಅವರು ಉತ್ತಮ ಲಯದಲ್ಲಿದ್ದಾರೆ. ಬೌಲರ್ ಅನುಜ್ ಟಕ್ರಾಲ್, ಪಾರ್ಥ್ ವತ್ಸ್, ಹಿಮಾಂಶು ರಾಣಾ ಅವರೂ ಇದುವರೆಗೆ ತಂಡದ ಜಯದಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ಇನ್ನೊಂದು ಸೆಮಿಫೈನಲ್ ಪಂದ್ಯವು ಜ. 16ರಂದು ನಡೆಯಲಿದೆ.

ಆರಂಭ: ಮಧ್ಯಾಹ್ನ 1.30
ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ ಆ್ಯಪ್

ಪ್ರಸಿದ್ಧ ಕೃಷ್ಣ

‘ವಿಕಸಿತ ಭಾರತದಲ್ಲಿ ಮಹಿಳೆಯರ ಪಾತ್ರ’ ವಿಚಾರಸಂಕಿರಣ

‘ಆರ್ಥಿಕತೆಗೆ ಮಹಿಳೆಯರ ಕೊಡುಗೆ ಅಪಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಕಸಿತ ಭಾರತದಲ್ಲಿ ಮಹಿಳೆಯರ ಪಾತ್ರ ಪ್ರಮುಖವಾಗಿದೆ. ಮಹಿಳೆಯರು ಇಂದು ಎಲ್ಲ ಕ್ಷೇತ್ರಗಳಲ್ಲಿ ಸಾಧನೆ ಮಾಡುವ ಮೂಲಕ ದೇಶದ ಆರ್ಥಿಕತೆಗೆ ಕೊಡುಗೆ ನೀಡುತ್ತಿದ್ದಾರೆ’ ಎಂದು ಅಂತರರಾಷ್ಟ್ರೀಯ ಪ್ಯಾರಾ ಅಥ್ಲೀಟ್ ಮಾಲತಿ ಹೊಳ್ಳ ತಿಳಿಸಿದರು.

ಅಲಯನ್ಸ್ ವಿಶ್ವವಿದ್ಯಾಲಯದ ಅಲಯನ್ಸ್ ಮಹಿಳಾ ಸಬಲೀಕರಣ ಕೇಂದ್ರ ಆಯೋಜಿಸಿದ್ದ ‘ವಿಕಸಿತ ಭಾರತದಲ್ಲಿ ಮಹಿಳೆಯರ ಪಾತ್ರ’ ವಿಚಾರಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ನಮ್ಮಲ್ಲಿರುವ ನ್ಯೂನತೆಗಳನ್ನು ಪರಿಹರಿಸಿಕೊಂಡಾಗ ಮಾತ್ರ ಯಶಸ್ಸು ಗಳಿಸಲು ಸಾಧ್ಯ. ನನಗೆ ದೇಹದಲ್ಲಿ ಅಂಗವಿಕಲತೆ ಇರಬಹುದು, ಆದರೆ ಆತ್ಮವಿಶ್ವಾಸ, ಗುರಿ ಸಾಧಿಸುವ ಛಲ ಹಾಗೂ ಕನಸುಗಳನ್ನು ನನಸು ಮಾಡಿಕೊಳ್ಳುವುದರಲ್ಲಿ ನ್ಯೂನತೆಗಳಿಲ್ಲ. ಆದ್ದರಿಂದ, ನಾನು ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಲು ಸಾಧ್ಯವಾಯಿತು. ಈ ಗಾಲಿಕುರ್ಚಿ ನನಗೆ ಸಿಂಹಾಸನದಂತೆ ಭಾಸವಾಗುತ್ತದೆ’ ಎಂದರು.

ನಟಿ ಮೇಘನಾ ಗಾಂವ್ಕರ್ ಮಾತನಾಡಿ, ‘ಮಹಿಳೆಯರು ಆತ್ಮವಿಶ್ವಾಸದಿಂದ ಜೀವನ ನಡೆಸಬೇಕು. ಮಹಿಳೆಯರು ಉತ್ತಮ ಶಿಕ್ಷಣವನ್ನು ಪಡೆಯುವುದರ ಜೊತೆಗೆ ತಮ್ಮ ಅಭಿರುಚಿಯನ್ನು ವೃತ್ತಿ ಜೀವನದಲ್ಲಿ ಅಳವಡಿಸಿಕೊಳ್ಳಬೇಕು’ ಎಂದು ಹೇಳಿದರು.

ಅಲಯನ್ಸ್ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಜನರಲ್ ಸುರೇಖಾ ಶೆಟ್ಟಿ ಮಾತನಾಡಿ, ‘ಇತ್ತೀಚೆಗೆ ಮಹಿಳೆಯರು ಹೆಚ್ಚು ಸಂಶೋಧನೆಗಳಲ್ಲಿ ತೊಡಗಿದ್ದಾರೆ. ಸಂಶೋಧನಾ ಅಧ್ಯಯನದಲ್ಲಿಯೂ (ಪಿಎಚ್. ಡಿ) ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ’ ಎಂದರು.

ಕಾರ್ಯಕ್ರಮದಲ್ಲಿ ಮಾಲತಿ ಹೊಳ್ಳ, ಮೇಘನಾ ಗಾಂವ್ಕರ್, ವಿಶ್ವವಿದ್ಯಾಲಯದ ಕುಲಪತಿ ಪ್ರಿಸ್ಲಿಶಾನ್, ರಿಜಿಸ್ಟ್ರರ್ ಕುಲಸಚಿವ ಮಠಂ ವಿಶ್ವನಾಥಯ್ಯ, ಸಹ ಕುಲಪತಿ ರೇ ಟೈಟಸ್, ಇಟಾಚಿ ಎನರ್ಜಿ ಸಂಸ್ಥೆಯ ನಂದಿನಿ ಸರಕಾರ್, ವೈದ್ಯೆ ಶೋಭಾ ವರ್ತಮಾನ್, ಕೊಡಗು ಅಗ್ರಿಟೆಕ್ ಲಿಮಿಟೆಡ್‌ನ ನಿರ್ದೇಶಕಿ ಚೈತ್ರಾ ನಾರಾಯಣ್, ಅಲಯನ್ಸ್ ಹಳೆಯ ವಿದ್ಯಾರ್ಥಿಗಳ ಸಂಘದ ನಿವೇದಿತಾ.ವಿ.ಸಿಂಗ್ ಉಪಸ್ಥಿತರಿದ್ದರು

ಸುಭಾಷಿತ

ಯಾರಿಗೇತರಲಿ ಇಷ್ಟವೋ ಅದುವೇ ಸುಖ.
-ದ.ರಾ.ಬೇಂದ್ರೆ

ಆರ್‌ಟಿಐ ಕಾಯ್ದೆಯ ಬಲವರ್ಧನೆ ತುರ್ತಾಗಿ ಆಗಬೇಕಾದ ಕೆಲಸ

ಕೇಂದ್ರ ಮತ್ತು ರಾಜ್ಯ ಮಾಹಿತಿ ಆಯೋಗಗಳಲ್ಲಿನ ಆಯುಕ್ತರ ಹುದ್ದೆಗಳನ್ನು ಸಕಾಲಕ್ಕೆ ಭರ್ತಿ ಮಾಡದೇ ಇರುವುದರಿಂದ ಮಾಹಿತಿ ಹಕ್ಕು ಕಾಯ್ದೆಯು ದೇಶದಲ್ಲಿ ಬಲ ಕಳೆದುಕೊಳ್ಳುತ್ತಿದೆ. ಈ ಸಂದರ್ಭದಲ್ಲಿ ಮಾಹಿತಿ ಆಯುಕ್ತರ ನೇಮಕಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಿರುವ ಕಠಿಣ ನಿರ್ದೇಶನವು ಒಂದಷ್ಟು ಆಶಾಭಾವ ಮೂಡಿಸಿದೆ. ಮಾಹಿತಿ ಆಯುಕ್ತರ ನೇಮಕಾತಿಯ ವಿಚಾರದಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿರುವ ಸುಪ್ರೀಂ ಕೋರ್ಟ್, 'ಇಂತಹ ಸಂಸ್ಥೆಗಳನ್ನು ಮುನ್ನಡೆಸಲು ಜನರೇ ಇಲ್ಲದೇ ಇದ್ದರೆ ಅವುಗಳನ್ನು ಸ್ಥಾಪಿಸುವುದರಿಂದ ಏನು ಪ್ರಯೋಜನವಾಗುತ್ತದೆ' ಎಂದು ಪ್ರಶ್ನಿಸಿದೆ. ಕೇಂದ್ರ ಮಾಹಿತಿ ಆಯೋಗದಲ್ಲಿ (ಸಿಐಸಿ) ಮಾಹಿತಿ ಆಯುಕ್ತರ ಎಂಟು ಹುದ್ದೆಗಳು ಖಾಲಿ ಇವೆ ಎಂಬುದನ್ನು ನ್ಯಾಯಾಲಯ ತನ್ನ ತೀರ್ಪಿನಲ್ಲಿ ಉಲ್ಲೇಖಿಸಿದೆ. ವಿವಿಧ ಇಲಾಖೆಗಳಿಂದ ಮಾಹಿತಿ ಕೋರಿರುವ ಅರ್ಜಿಗಳಿಗೆ ಸಂಬಂಧಿಸಿದ 23,000 ಮೇಲ್ಮನವಿಗಳು ಸಿಐಸಿಯಲ್ಲಿ ಬಾಕಿ ಇವೆ. ಕೆಲವು ರಾಜ್ಯಗಳಲ್ಲಿ ಮಾಹಿತಿ ಆಯೋಗಗಳು ನಿಷ್ಕ್ರಿಯವಾಗಿದ್ದರೆ, ಇನ್ನು ಕೆಲವು ರಾಜ್ಯಗಳಲ್ಲಿ ಆಯೋಗಗಳು ಮಾಹಿತಿ ಹಕ್ಕು ಕಾಯ್ದೆಯಡಿ ಮೇಲ್ಮನವಿಗಳನ್ನೇ ಸ್ವೀಕರಿಸುತ್ತಿಲ್ಲ. ಕರ್ನಾಟಕ ರಾಜ್ಯ ಮಾಹಿತಿ ಆಯೋಗದಲ್ಲಿ ಮುಖ್ಯ ಆಯುಕ್ತರು ಸೇರಿದಂತೆ ಮಾಹಿತಿ ಆಯುಕ್ತರ ಹತ್ತು ಹುದ್ದೆಗಳಿವೆ. ಇಲ್ಲಿ ಮುಖ್ಯ ಮಾಹಿತಿ ಆಯುಕ್ತರು ಇಲ್ಲ. ಅಲ್ಲದೆ, ಮಾಹಿತಿ ಆಯುಕ್ತರ ಆರು ಹುದ್ದೆಗಳು ದೀರ್ಘ ಕಾಲದಿಂದ ಖಾಲಿ ಉಳಿದಿವೆ. ಮಾಹಿತಿ ಆಯುಕ್ತರ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲು ಮತ್ತು ಆಯ್ಕೆ ಸಮಿತಿಯು ಪರಿಶೀಲನೆಯನ್ನು ಪೂರ್ಣಗೊಳಿಸಿ ಶಿಫಾರಸುಗಳನ್ನು ಸಲ್ಲಿಸಲು ವೇಳಾಪಟ್ಟಿಯನ್ನು ನಿಗದಿಪಡಿಸಿ ಎರಡು ವಾರಗಳೊಳಗೆ ಪ್ರಮಾಣಪತ್ರ ಸಲ್ಲಿಸುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ. ಕೇಂದ್ರ ಮಾಹಿತಿ ಆಯೋಗದಲ್ಲಿ ಖಾಲಿ ಇರುವ ಮಾಹಿತಿ ಆಯುಕ್ತರ ಹುದ್ದೆಗಳನ್ನು ತುರ್ತಾಗಿ ಭರ್ತಿ ಮಾಡುವಂತೆಯೂ ನ್ಯಾಯಾಲಯ ಸೂಚಿಸಿದೆ.

ನಾಗರಿಕರಿಗೆ ಇರುವ ಮಾಹಿತಿ ಪಡೆಯುವ ಹಕ್ಕನ್ನು ಕಾನೂನುಬದ್ಧವಾಗಿ ರಕ್ಷಿಸಿ, ಸರಿಯಾಗಿ ಅನುಷ್ಠಾನಕ್ಕೆ ತಂದರೆ ಮಾತ್ರ ಅದಕ್ಕೆ ಅರ್ಥ ಬರುತ್ತದೆ

ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳ ನಿರ್ಧಾರ ಹಾಗೂ ಕ್ರಿಯೆಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಬೇಡಿಕೆ ಸಲ್ಲಿಸಿ, ಪಡೆದುಕೊಳ್ಳಲು ಅವಕಾಶ ಕಲ್ಪಿಸುವ ಮೂಲಕ ಆಡಳಿತದಲ್ಲಿ ಪಾರದರ್ಶಕತೆ ತರುವ ಉದ್ದೇಶದಿಂದ ಮನಮೋಹನ ಸಿಂಗ್ ನೇತೃತ್ವದ ಕೇಂದ್ರ ಸರ್ಕಾರವು ಮಾಹಿತಿ ಹಕ್ಕು ಕಾಯ್ದೆಯನ್ನು ರೂಪಿಸಿ, ಜಾರಿಗೊಳಿಸಿತ್ತು. ಕಾಯ್ದೆಯು ಈಗ 20 ವರ್ಷಗಳನ್ನು ಪೂರೈಸುವ ಹಾದಿಯಲ್ಲಿದೆ. ದೇಶದ ನಾಗರಿಕರಿಗೆ ಶಕ್ತಿ ತುಂಬುವ ಮಹತ್ತರವಾದ ಉದ್ದೇಶದೊಂದಿಗೆ ಈ ಕಾಯ್ದೆಯನ್ನು ಜಾರಿಗೊಳಿಸಲಾಗಿತ್ತು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಿರಂತರವಾಗಿ ಈ ಕಾಯ್ದೆಯನ್ನು ದುರ್ಬಲಗೊಳಿಸುತ್ತಿವೆ ಹಾಗೂ ಮಾಹಿತಿ ಆಯೋಗಗಳ ಅಸ್ತಿತ್ವವನ್ನೇ ನಗಣ್ಯಗೊಳಿಸುತ್ತಿವೆ. ಇದರಿಂದಾಗಿ ಮಾಹಿತಿ ಹಕ್ಕು ಕಾಯ್ದೆಯು ಬಲ ಕಳೆದುಕೊಂಡಿದೆ. ಮಾಹಿತಿ ಆಯೋಗಗಳಲ್ಲಿ ತೆರವಾದ ಮಾಹಿತಿ ಆಯುಕ್ತರ ಹುದ್ದೆಗಳನ್ನು ಸಕಾಲಕ್ಕೆ ಭರ್ತಿ ಮಾಡುತ್ತಿಲ್ಲ. ಮಾಹಿತಿ ಕೋರಿರುವ ಅರ್ಜಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಸಂದರ್ಭಗಳಲ್ಲಿ ನಿಗದಿತ ಅವಧಿಯೊಳಗೆ ಪ್ರತಿಕ್ರಿಯಿಸುತ್ತಿಲ್ಲ, ಕೆಲವೊಮ್ಮೆ ಪ್ರತಿಕ್ರಿಯೆಯನ್ನೇ ನೀಡುವುದಿಲ್ಲ. ಕಾಲಮಿತಿಯೊಳಗೆ ಮಾಹಿತಿ ಒದಗಿಸದ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ದಂಡ ವಿಧಿಸುವ ಪ್ರಕ್ರಿಯೆ ಸಮರ್ಪಕವಾಗಿ ನಡೆಯುತ್ತಿಲ್ಲ. ಹಲವೆಡೆ ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿ ಕೋರಿ ಅರ್ಜಿ ಸಲ್ಲಿಸುವವರ ಮೇಲೆ ಹಲ್ಲೆ ನಡೆಸಿರುವ ಮತ್ತು ಅವರಿಗೆ ಅಪಾಯ ಉಂಟುಮಾಡಿರುವ ಪ್ರಕರಣಗಳೂ ನಡೆದಿವೆ. ಮಾಹಿತಿ ಹಕ್ಕು ಕಾಯ್ದೆಯನ್ನು ನಿರಂತರವಾಗಿ ಬಳಸಿಕೊಂಡು ಸಾರ್ವಜನಿಕ ವಿಷಯಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಬಹಿರಂಗಪಡಿಸುತ್ತಿದ್ದ ಕಾರ್ಯಕರ್ತರ ಕೊಲೆಗಳೂ ಆಗಿವೆ. ಸಾರ್ವಜನಿಕ ವಿಷಯಗಳಿಗೆ ಸಂಬಂಧಿಸಿದ ಮಾಹಿತಿಗಳು ಜನರಿಗೆ ಲಭ್ಯವಾಗುವುದನ್ನು ತಡೆಯಲು ರಾಜಕಾರಣಿಗಳು, ಅಧಿಕಾರಿಗಳು ಮತ್ತು ಇತರ ಪಟ್ಟಭದ್ರ ಹಿತಾಸಕ್ತಿಯುಳ್ಳ ವ್ಯಕ್ತಿಗಳ ಅಪವಿತ್ರ ಮೈತ್ರಿಯು ಕೆಲಸ ಮಾಡುತ್ತಲೇ ಇರುತ್ತದೆ. ಇಂತಹ ಪ್ರಯತ್ನಗಳಿಗೆ ತಡೆಯೊಡ್ಡುವ ಕೆಲಸವನ್ನು ಸರ್ಕಾರಗಳು ಪ್ರಾಮಾಣಿಕವಾಗಿ ಮಾಡುತ್ತಿಲ್ಲ. ಹೀಗೆ ಹಲವು ಆಯಾಮಗಳಲ್ಲಿ ಮಾಹಿತಿ ಹಕ್ಕು ಕಾಯ್ದೆಯ ಉದ್ದೇಶವನ್ನೇ ವಿಫಲಗೊಳಿಸಲಾಗುತ್ತಿದೆ.

ಮಾಹಿತಿ ಹಕ್ಕು ಕಾಯ್ದೆಯು ಜನರ ಕೈಗೆ ಲಭಿಸಿದ ಬಹುದೊಡ್ಡ ಅಸ್ತ್ರ ಎಂಬುದನ್ನು ಈ ಕಾಯ್ದೆ ಅನುಷ್ಠಾನಕ್ಕೆ ಬಂದ ಬಳಿಕ ಸರ್ಕಾರಗಳು ಅರ್ಥ ಮಾಡಿಕೊಂಡವು. ಜಾರಿಯಾದ ಕೆಲವೇ ವರ್ಷಗಳಲ್ಲಿ ಈ ಕಾಯ್ದೆಯಡಿ ಮಾಹಿತಿ ಪಡೆಯುವುದಕ್ಕೆ ಸಂಬಂಧಿಸಿದಂತೆ ಹೊಸ ನಿರ್ಬಂಧಗಳನ್ನು ವಿಧಿಸಿ ಮಾಹಿತಿ ಹಕ್ಕು ಕಾಯ್ದೆಯ ವ್ಯಾಪ್ತಿಯನ್ನೇ ಕುಗ್ಗಿಸುವ ಪ್ರಯತ್ನಗಳು ಆರಂಭವಾದವು. ಕೇಂದ್ರ ಮಾಹಿತಿ ಆಯುಕ್ತರ ಅಧಿಕಾರದ ಅವಧಿ ಮತ್ತು ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದಂತೆ ಬದಲಾವಣೆಗಳನ್ನು ತಂದು, ಆಯೋಗದ ಸ್ವಾಯತ್ತತೆಯನ್ನು ಕಿತ್ತುಕೊಳ್ಳಲಾಯಿತು. ಅದೇ ಹಾದಿಯಲ್ಲಿ ರಾಜ್ಯ ಮಾಹಿತಿ ಆಯೋಗಗಳ ಸ್ವಾಯತ್ತತೆಗೂ ಕಡಿವಾಣ ಹಾಕಲಾಯಿತು. ಸಮಾಜದ ಎಲ್ಲ ಕ್ಷೇತ್ರಗಳ ಪರಿಣತರನ್ನೂ ಮಾಹಿತಿ ಆಯುಕ್ತರನ್ನಾಗಿ ನೇಮಿಸಬೇಕು ಎಂಬ ಬೇಡಿಕೆ ಆರಂಭದಿಂದಲೂ ಇದೆ. ಸುಪ್ರೀಂ ಕೋರ್ಟ್ ಕೂಡ ಕೆಲವು ವರ್ಷಗಳ ಹಿಂದೆಯೇ ಈ ಮಾತನ್ನು ಹೇಳಿತ್ತು. ಆದರೆ, ಮಾಹಿತಿ ಆಯುಕ್ತರ ನೇಮಕಾತಿಯಲ್ಲಿ ಸರ್ಕಾರ ಯಾವಾಗಲೂ ಅಧಿಕಾರಿಶಾಹಿಗೇ ಮಣೆ ಹಾಕುತ್ತಿದೆ. ಮಾಹಿತಿ ಆಯೋಗ ಮತ್ತು ಮಾಹಿತಿ ಹಕ್ಕು ಕಾಯ್ದೆಯನ್ನು ದುರ್ಬಲಗೊಳಿಸುವ ಯಾವುದೇ ಬಗೆಯ ಪ್ರಯತ್ನವನ್ನು ಮುಂದುವರಿಸಲು ನ್ಯಾಯಾಲಯವು ಸರ್ಕಾರಗಳಿಗೆ ಅವಕಾಶ ನೀಡಬಾರದು. ಪಾರದರ್ಶಕತೆಯು ಪ್ರಜಾಪ್ರಭುತ್ವದಲ್ಲಿ ಆಡಳಿತ ವ್ಯವಸ್ಥೆಯ ಮೂಲಮಂತ್ರ ಆಗಬೇಕು. ನಾಗರಿಕರಿಗೆ ಇರುವ ಮಾಹಿತಿ ಪಡೆಯುವ ಹಕ್ಕನ್ನು ಕಾನೂನುಬದ್ಧವಾಗಿ ರಕ್ಷಿಸಿ, ಸರಿಯಾಗಿ ಅನುಷ್ಠಾನಕ್ಕೆ ತಂದರೆ ಮಾತ್ರ ಅದಕ್ಕೆ ಅರ್ಥ ಬರುತ್ತದೆ.

ದಿನದ ಟ್ವೀಟ್

ಚೀನಾದಿಂದ ರೈಲು: ಏಕೆ ಈ ಸ್ಥಿತಿ?

ನಾವು ಚೀನಾದಿಂದ ರೈಲುಗಳನ್ನು ಆಮದು ಮಾಡಿಕೊಳ್ಳಬೇಕಾಗಿರುವುದು ಯಾಕೆ ಎಂದು ನನಗೆ ಅಚ್ಚರಿಯಾಗುತ್ತದೆ.

(ಬೆಂಗಳೂರಿನ 'ನಮ್ಮ ಮೆಟ್ರೊ', ಚೀನಾ ನಿರ್ಮಿತ ರೈಲನ್ನು ಪಡೆದುಕೊಂಡಿರುವುದಕ್ಕೆ ಪ್ರತಿಕ್ರಿಯೆ)

ಸುನಿಲ್ ಕೆ.ಆರ್.

ಕಿಡಿನುಡಿ

ಕುಲಪತಿಗಳ ನೇಮಕಕ್ಕೆ ಸಂಬಂಧಿಸಿ ಯುಜಿಸಿ ರೂಪಿಸಿರುವ ಕರಡು ನಿಯಮಗಳಲ್ಲಿ ಪ್ರಸ್ತಾಪಿಸಿರುವ ಅಂಶಗಳು ಒಕ್ಕೂಟ ವ್ಯವಸ್ಥೆಗೆ ಮಾರಕವಾಗಿವೆ. ರಾಜ್ಯ ಸರ್ಕಾರಗಳ ಪಾತ್ರವನ್ನು ನಗಣ್ಯವಾಗಿಸಿವೆ. ಅಲ್ಲದೆ, ಉನ್ನತ ಶಿಕ್ಷಣದ ಆಡಳಿತ ಮತ್ತು ವಿಶ್ವವಿದ್ಯಾಲಯಗಳಲ್ಲಿ ರಾಜ್ಯಗಳ ಹಕ್ಕುಗಳನ್ನು ಕಸಿದುಕೊಳ್ಳುವ ಹುನ್ನಾರ ನಡೆದಿದೆ.

ಎಂ.ಸಿ. ಸುಧಾಕರ್, ರಾಜ್ಯ ಉನ್ನತ ಶಿಕ್ಷಣ ಸಚಿವ

25 ವರ್ಷಗಳ ಹಿಂದೆ

ಶನಿವಾರ, 15-1-2000

• ರೇಷ್ಮೆ ಮೇಲಿನ ವಾಣಿಜ್ಯ ತೆರಿಗೆ ವಾಪಸ್

ಬೆಂಗಳೂರು, ಜ. 14– ಕಚ್ಚಾ ರೇಷ್ಮೆ, ರೇಷ್ಮೆ ನೂಲು ಸೇರಿದಂತೆ ಐದು ವಸ್ತುಗಳ ಮೇಲೆ ಹೊಸದಾಗಿ ವಾಣಿಜ್ಯ ತೆರಿಗೆ ವಿಧಿಸಿ ಕೈಗೊಂಡಿದ್ದ ನಿರ್ಧಾರವನ್ನು ರಾಜ್ಯ ಸರ್ಕಾರ ಹಿಂತೆಗೆದುಕೊಂಡಿದೆ. ಅಲ್ಲದೆ ಕೆಲವು ವಸ್ತುಗಳ ಮೇಲೆ ವಿಧಿಸಿದ್ದ ತೆರಿಗೆಯನ್ನು ಕಡಿಮೆ ಮಾಡಿದೆ.

ರಾಜ್ಯದಲ್ಲಿ ಏಕರೂಪ ತೆರಿಗೆ ಪದ್ಧತಿಯನ್ನು ಜಾರಿಗೆ ತರಲು ಸರ್ಕಾರ ಇತ್ತೀಚೆಗೆ ನಿರ್ಧಾರ ಕೈಗೊಂಡ ನಂತರ ಕಚ್ಚಾ ರೇಷ್ಮೆ, ರೇಷ್ಮೆ ನೂಲು, ಸ್ಥಳೀಯವಾಗಿ ತಯಾರಿಸುವ ಇಟ್ಟಿಗೆ, ಹೆಂಚು, ಸಂಸ್ಕರಿಸಿದ ಉಪ್ಪು ಹಾಗೂ ಕೆಲ ಜೀವರಕ್ಷಕ ಔಷಧಗಳನ್ನು ವಾಣಿಜ್ಯ ತೆರಿಗೆ ವ್ಯಾಪ್ತಿಗೆ ತರಲಾಗಿತ್ತು.

ಆದರೆ ಸರ್ಕಾರದ ಈ ನಿರ್ಧಾರದ ಬಗ್ಗೆ ತೀವ್ರ ಪ್ರತಿಭಟನೆ ಹಾಗೂ ಸಾರ್ವತ್ರಿಕವಾಗಿ ಟೀಕೆಗಳು ಕೇಳಿಬಂದ ಹಿನ್ನೆಲೆಯಲ್ಲಿ ಈ ಐದೂ ವಸ್ತುಗಳನ್ನು ತೆರಿಗೆ ವ್ಯಾಪ್ತಿಯಿಂದ ಹೊರಗಿಡಲಾಗಿದೆ.

ಅಡಿಕೆ, ಗೋಡಂಬಿ ಮತ್ತು ಕಿರಾಣಿ ವಸ್ತುಗಳ ಮೇಲಿನ ತೆರಿಗೆಯನ್ನು ಶೇ 8ರಿಂದ 4ಕ್ಕೆ ಇಳಿಸಲಾಗಿದೆ; ಜತೆಗೆ ಹುರಿಗಡಲೆ ಮೇಲಿನ ತೆರಿಗೆಯನ್ನು ಶೇ 8ರಿಂದ 2ಕ್ಕೆ ಇಳಿಸಲಾಗಿದೆ.

ಆದರೆ, ಟ್ರ್ಯಾಕ್ಟರ್ ಸೇರಿದಂತೆ ವಿವಿಧ ಕೃಷಿ ಉಪಕರಣಗಳು, ಕಂಪ್ಯೂಟರ್ ಮತ್ತು ಕಂಪ್ಯೂಟರ್ ಉಪಕರಣಗಳ ಮೇಲೆ ವಿಧಿಸಲಾಗಿರುವ ತೆರಿಗೆಯನ್ನು ಹಿಂತೆಗೆದುಕೊಳ್ಳುವ ಬಗ್ಗೆ ಸರ್ಕಾರ ಇನ್ನೂ ಯಾವುದೇ ನಿರ್ಧಾರ ಕೈಗೊಂಡಿಲ್ಲ ಎಂದು ಈ ಮೂಲಗಳು ಹೇಳಿವೆ.

• ಸಣ್ಣ ಉಳಿತಾಯದ ಬಡ್ಡಿ ದರ ಶೇ 1ರಷ್ಟು ಇಳಿಕೆ

ನವದೆಹಲಿ, ಜ. 14 (ಯುಎನ್ಐ, ಪಿಟಿಐ)– ರಾಷ್ಟ್ರೀಯ ಸಣ್ಣ ಉಳಿತಾಯ ಯೋಜನೆ ಹಾಗೂ ಸಾರ್ವಜನಿಕ ಭವಿಷ್ಯನಿಧಿ (ಪಿಪಿಎಫ್) ಮೇಲಿನ ಬಡ್ಡಿ ದರವನ್ನು ಕೇಂದ್ರ ಸರ್ಕಾರ ಇಂದು ಶೇ 1ರಷ್ಟು ಕಡಿಮೆ ಮಾಡಿದೆ. ಹೊಸ ಬಡ್ಡಿ ದರ ನಾಳೆಯಿಂದ (ಶನಿವಾರ) ಜಾರಿಗೆ ಬರಲಿದೆ.

ಸಣ್ಣ ಉಳಿತಾಯ ಠೇವಣಿ ಹಾಗೂ ಸಾರ್ವಜನಿಕ ಭವಿಷ್ಯನಿಧಿ ಬಡ್ಡಿ ದರ ಇದುವರೆಗೆ ಶೇ 12ರಷ್ಟಿತ್ತು. ಬಡ್ಡಿ ದರ ಕಡಿತಕ್ಕೆ ಸಂಬಂಧಿಸಿದಂತೆ ಸರ್ಕಾರ ಇಂದು ರಾತ್ರಿ ಅಧಿಕೃತ ಪ್ರಕಟಣೆ ಹೊರಡಿಸಿದೆ.

ಬಡ್ಡಿ ದರ ಕಡಿತದ ಹಿನ್ನೆಲೆಯಲ್ಲಿ ಬ್ಯಾಂಕ್ ಹಾಗೂ ಅಂಚೆ ಕಚೇರಿಗಳು ಸಾರ್ವಜನಿಕರಿಂದ ಠೇವಣಿ ಸಂಗ್ರಹಿಸುವ ಕಾರ್ಯವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿವೆ.

ಗುಣಮಟ್ಟ ಸುಧಾರಣೆಯ ಸವಾಲುಗಳನ್ನು ಎದುರಿಸಲು ಬೇಕಿದೆ ಸೂಕ್ತ ಯೋಜನೆ

ಗುಣಾತ್ಮಕ ಶಿಕ್ಷಣ ಮತ್ತು ಸವಾಲು

ವಿಶ್ಲೇಷಣೆ

ನಿರಂಜನಾರಾಧ್ಯ ವಿ.ಪಿ.

ಗುಣಾತ್ಮಕ ಶಿಕ್ಷಣ ಎಂಬುದು ಹಳ್ಳಿಯಿಂದ ದಿಲ್ಲಿಯವರೆಗೆ ನಡೆಯುವ ಒಂದು ಸಾಮಾನ್ಯ ಚರ್ಚೆಯ ವಿಷಯ. ಎಲ್ಲರಿಗೂ ಗುಣಮಟ್ಟದ ಶಿಕ್ಷಣ ಬೇಕು ಎಂಬುದು ನಿರ್ವಿವಾದದ ಸಂಗತಿ. ಹೀಗಾಗಿ, ಶಿಕ್ಷಣದ ಗುಣಮಟ್ಟ ಸುಧಾರಿಸುವುದು ನಮ್ಮ ದೇಶ ಮತ್ತು ಎಲ್ಲಾ ರಾಜ್ಯಗಳ ಆದ್ಯತೆಯ ವಿಷಯವಾಗಿದೆ. ಕಾಲಕಾಲಕ್ಕೆ ರೂಪು ತಳೆಯುವ ರಾಷ್ಟ್ರೀಯ ಶಿಕ್ಷಣ ನೀತಿಗಳು ಇದನ್ನು ಪ್ರಸ್ತಾಪಿಸುತ್ತಲೇ ಬಂದಿವೆ.

ಗುಣಮಟ್ಟ ಸಾಧಿಸುವ ದಿಸೆಯಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಲು ಸಭೆ, ಸಮಾರಂಭ, ಸಮಾವೇಶ, ವಿಚಾರಸಂಕಿರಣ, ಕಮ್ಮಟದಂತಹವನ್ನು ಸರ್ಕಾರ ಮತ್ತು ಶಿಕ್ಷಣಾಸಕ್ತ ಸಂಘ-ಸಂಸ್ಥೆಗಳು ಆಯೋಜಿಸುತ್ತಲೇ ಬಂದಿವೆ. ಶಿಕ್ಷಕರಿಗೆ ಸೇವಾಪೂರ್ವ ಹಾಗೂ ಸೇವಾ ಅವಧಿಯ ತರಬೇತಿಗಳು ನಿರಂತರವಾಗಿ ನಡೆಯುತ್ತಿವೆ. ಜೊತೆಗೆ ಗುಣಮಟ್ಟ ಕಾಯ್ದುಕೊಳ್ಳುವಿಕೆಗೆ ಸಂಬಂಧಿಸಿದ ವಿಷಯದಲ್ಲಿ ಅಸಂಖ್ಯಾತ ಸಂಶೋಧನೆಗಳು ನಡೆದು, ಪುಸ್ತಕಗಳು ಪ್ರಕಟವಾಗಿವೆ. ಇಷ್ಟೆಲ್ಲ ನಿರಂತರ ಪ್ರಯತ್ನಗಳ ನಡುವೆಯೂ ನಿರೀಕ್ಷಿತ ಸುಧಾರಣೆ ಸಾಧ್ಯವಾಗಿಲ್ಲವೆಂಬ ಆತಂಕವೂ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ.

ಶಿಕ್ಷಣದ ಗುಣಮಟ್ಟ ಸುಧಾರಿಸಲು ಏನಾಗಬೇಕು ಎಂಬುದು ಸಾರ್ವತ್ರಿಕವಾದ ಯಕ್ಷಪ್ರಶ್ನೆಯಾಗಿಯೇ ಉಳಿದಿದೆ. ಈ ದಿಸೆಯಲ್ಲಿ ಅಳವಡಿಸಿಕೊಳ್ಳಬಹುದಾದ ಕಾರ್ಯತಂತ್ರಗಳ ಬಗ್ಗೆ ಚರ್ಚಿಸುವ ಮುನ್ನ, ಕೆಲವು ಸರಳ ವಿಚಾರಗಳನ್ನು ಅರಿಯಬೇಕಿದೆ. ಗುಣಮಟ್ಟ ಸುಧಾರಣೆಯ ಬಗ್ಗೆ ಚರ್ಚಿಸುವಾಗ, ಅದಕ್ಕೆ ಅಗತ್ಯವಾಗಿ ಇರಲೇಬೇಕಾದ ಕನಿಷ್ಠ ಅಗತ್ಯಗಳ ಲಭ್ಯತೆಯನ್ನು ನಿರ್ಲಕ್ಷಿಸುವುದು ಸಾಧ್ಯವಿಲ್ಲ. ಉದಾಹರಣೆಗೆ, ನಮ್ಮ ರಾಜ್ಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳು ಒಂದರಿಂದ ಐದನೇ ತರಗತಿಯವರೆಗೆ ಕಲಿಯುತ್ತಾರೆ. ಪ್ರತಿ ತರಗತಿಯಲ್ಲಿ ನಾಲ್ಕು ವಿಷಯಗಳನ್ನು, ಅಂದರೆ, ಕನ್ನಡ, ಇಂಗ್ಲಿಷ್, ಗಣಿತ ಮತ್ತು ಪರಿಸರ ಅಧ್ಯಯನವನ್ನು ಕಲಿಯಬೇಕು. ತರಗತಿಗೊಬ್ಬ ಶಿಕ್ಷಕರನ್ನು ನಿರೀಕ್ಷಿಸುವುದು ಅಸಾಧ್ಯ. ಆದರೆ, ಕಲಿಯಬೇಕಾದ ವಿಷಯವಾರು ಆಧಾರದಲ್ಲಿ ಕನಿಷ್ಠ ನಾಲ್ವರು ಶಿಕ್ಷಕರನ್ನು ಒದಗಿಸದೆ ಗುಣಾತ್ಮಕ ಶಿಕ್ಷಣದ ಕನಸು ನನಸಾಗಲು ಸಾಧ್ಯವಿಲ್ಲ.

ಇದೇ ರೀತಿ, ಹಿರಿಯ ಪ್ರಾಥಮಿಕ ಶಾಲೆಯು ಒಂದರಿಂದ ಐದನೇ ತರಗತಿಯ ಜೊತೆಗೆ ಆರರಿಂದ ಎಂಟನೇ ತರಗತಿಯವರೆಗೆ ತರಗತಿಗಳನ್ನು ಹೊಂದಿರುತ್ತದೆ. ಆರರಿಂದ ಎಂಟನೇ ತರಗತಿಯವರೆಗೆ ಮಕ್ಕಳು ಆರು ವಿಷಯಗಳನ್ನು, ಅಂದರೆ ಕನ್ನಡ, ಇಂಗ್ಲಿಷ್, ಹಿಂದಿ, ಗಣಿತ, ವಿಜ್ಞಾನ ಮತ್ತು ಸಮಾಜ ಅಧ್ಯಯನವನ್ನು ಕಲಿಯಬೇಕು. ಜೊತೆಗೆ ದೈಹಿಕ ಶಿಕ್ಷಣವೂ ಸೇರುತ್ತದೆ. ಒಂದರಿಂದ ಏಳು ಅಥವಾ ಎಂಟನೇ ತರಗತಿ ಹೊಂದಿರುವ ಹಿರಿಯ ಪ್ರಾಥಮಿಕ ಶಾಲೆಯಲ್ಲಿಯೂ ನಾವು ವಿಷಯವಾರು ಲೆಕ್ಕದಲ್ಲಿ ಶಿಕ್ಷಕರ ಅಗತ್ಯವನ್ನು ನೋಡಿದಾಗ, ದೈಹಿಕ ಶಿಕ್ಷಣ ಶಿಕ್ಷಕರನ್ನು ಹೊರತುಪಡಿಸಿ ಕನಿಷ್ಠ ಆರು ಜನ ಶಿಕ್ಷಕರ ಅಗತ್ಯವಿದೆ. ಆದರೆ, ವಾಸ್ತವದಲ್ಲಿ ಪರಿಸ್ಥಿತಿ ಬೇರೆ ಇದೆ.

2023-24ರ ಯುಡೈಸ್ ವರದಿಯ ಅನ್ವಯ, ದೇಶದಲ್ಲಿ 1,10,971 ಏಕೋಪಾಧ್ಯಾಯ ಶಾಲೆಗಳಿವೆ. ಕರ್ನಾಟಕದಲ್ಲಿ ಈ ಸಂಖ್ಯೆ 7,821. ದಕ್ಷಿಣದಲ್ಲಿ ಆಂಧ್ರಪ್ರದೇಶ ಅತಿ ಹೆಚ್ಚು (12,611) ಏಕೋಪಾಧ್ಯಾಯ ಶಾಲೆಗಳನ್ನು ಹೊಂದಿರುವ ರಾಜ್ಯವಾದರೆ, ಉತ್ತರದ ಮಧ್ಯಪ್ರದೇಶದಲ್ಲಿ ಇಂತಹ ಹೆಚ್ಚು ಶಾಲೆಗಳಿವೆ (13,198). ಇಷ್ಟು ದೊಡ್ಡ ಸಂಖ್ಯೆಯ ಏಕೋಪಾಧ್ಯಾಯ ಶಾಲೆಗಳನ್ನು ಇಟ್ಟುಕೊಂಡು ಗುಣಾತ್ಮಕ ಶಿಕ್ಷಣವನ್ನು ಹೇಗೆ ನಿರೀಕ್ಷಿಸಲು ಸಾಧ್ಯ ಎಂಬುದನ್ನು ನಮ್ಮ ನೀತಿ ನಿರೂಪಕರು ಅರ್ಥಮಾಡಿಕೊಳ್ಳಬೇಕಿದೆ.

ಇನ್ನು ಲಭ್ಯವಿರುವ ಶಿಕ್ಷಕರ ಪೈಕಿ, ಎಷ್ಟು ಮಂದಿ ಸರಿಯಾದ ಸಮಯಕ್ಕೆ ಶಾಲೆ ತಲುಪುತ್ತಾರೆ, ಶಾಲೆ ತಲುಪಿದವರಲ್ಲಿ ಎಷ್ಟು ಶಿಕ್ಷಕರು ತರಗತಿ ಕೋಣೆಗಳನ್ನು ತಲುಪುತ್ತಾರೆ, ತರಗತಿ ಕೋಣೆ ತಲುಪಿದ ಎಷ್ಟು ಶಿಕ್ಷಕರು ಮಾನಸಿಕವಾಗಿ ಕಲಿಸಲು ಸಿದ್ಧತೆ ಮಾಡಿಕೊಂಡಿರುತ್ತಾರೆ, ಅವರಲ್ಲಿ ಎಷ್ಟು ಜನ ಅರ್ಥಪೂರ್ಣವಾಗಿ ಕಲಿಸುತ್ತಾರೆ, ಕಲಿಸಿದ್ದನ್ನು ಮಕ್ಕಳು ಕಲಿತ ಬಗ್ಗೆ ದಿನನಿತ್ಯ ಹೇಗೆ ಖಚಿತಪಡಿಸಿಕೊಳ್ಳುತ್ತಾರೆ ಎಂಬಂತಹ ವಿಷಯಗಳು ಗುಣಮಟ್ಟವನ್ನು ಸಾಧಿಸುವಲ್ಲಿ ನಿರ್ಣಾಯಕ ಅಂಶಗಳಾಗುತ್ತವೆ. ಆದರೆ, ವಾಸ್ತವದಲ್ಲಿ ನಮ್ಮ ಶಿಕ್ಷಕರು ಕಲಿಸುವುದಕ್ಕಿಂತ ಕಲಿಕೇತರ ಕೆಲಸಗಳಲ್ಲಿ ತೊಡಗಿಸಿಕೊಂಡಿರುವುದೇ ಹೆಚ್ಚು. ಸಾಮಾನ್ಯವಾಗಿ ಸರ್ಕಾರಿ ಶಾಲಾ ಶಿಕ್ಷಕರ ಬಗ್ಗೆ ಇರುವ ಒಂದು ಮಾತೆಂದರೆ, ಅವರು ಕಲಿಸುವುದನ್ನು ಬಿಟ್ಟು ಉಳಿದದ್ದೆಲ್ಲವನ್ನೂ ಮಾಡುತ್ತಾರೆ ಎಂಬುದು. ಶಿಕ್ಷಕರನ್ನು ಪ್ರಧಾನವಾಗಿ ಕಲಿಕೆ ಹಾಗೂ ಕಲಿಕೆಗೆ ಪೂರಕವಾದ ಕೆಲಸಗಳನ್ನು ಹೊರತುಪಡಿಸಿ ಇತರ ಕೆಲಸಗಳಿಂದ ಮುಕ್ತಗೊಳಿಸದಿದ್ದರೆ ಗುಣಾತ್ಮಕ ಶಿಕ್ಷಣ ಎಂದಿಗೂ ಸಾಧ್ಯವಿಲ್ಲವೆಂಬ ಅಭಿಪ್ರಾಯ ಶಿಕ್ಷಕರ ವಲಯದಲ್ಲಿ ದಟ್ಟವಾಗಿದೆ. ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಆಡಳಿತಾತ್ಮಕ ಹಾಗೂ ಕಲಿಕೇತರ ಕೆಲಸಗಳನ್ನು ನಿರ್ವಹಿಸಲು ಯಾವುದೇ ಸಿಬ್ಬಂದಿ ಇರುವುದಿಲ್ಲ ಎಂಬುದು ಗಮನಾರ್ಹ ಸಂಗತಿ.

ಗುಣಾತ್ಮಕ ಶಿಕ್ಷಣವನ್ನು ಖಾತರಿಗೊಳಿಸುವುದರ ಭಾಗವಾಗಿ, ಕಲಿಕೆಗೆ ಪೂರಕವಾಗುವ ಮತ್ತು ಮಕ್ಕಳು ನೆಮ್ಮದಿಯಿಂದ ಕಲಿಯಲು ಅಗತ್ಯವಾದ ಕನಿಷ್ಠ ಮೂಲ ಸೌಕರ್ಯಗಳು ಎಲ್ಲಾ ಶಾಲೆಗಳಲ್ಲಿ ಇರಲೇಬೇಕಾಗುತ್ತದೆ. ಈ ಉದ್ದೇಶದಿಂದ ಶಿಕ್ಷಣ ಹಕ್ಕು ಕಾಯ್ದೆಯು ಒಂದು ಶಾಲೆಯಲ್ಲಿ ಇರಲೇಬೇಕಾದ ಕನಿಷ್ಠ ಒಂಬತ್ತು ಸೌಲಭ್ಯಗಳನ್ನು ನಿಗದಿಪಡಿಸಿ, 2013ರ ಒಳಗಾಗಿ ಎಲ್ಲ ಶಾಲೆಗಳೂ ಕಡ್ಡಾಯವಾಗಿ ಇವುಗಳನ್ನು ಹೊಂದಿರಲೇಬೇಕೆಂಬುದನ್ನು



ಕಾನೂನುಬದ್ಧಗೊಳಿಸಿತ್ತು. ಅದರಂತೆ, ಶಿಕ್ಷಕರ ಲಭ್ಯತೆ, ಪ್ರತಿ ಶಿಕ್ಷಕರಿಗೆ ತರಗತಿ ಕೊಠಡಿ, ಮುಖ್ಯೋಪಾಧ್ಯಾಯರ ಕಚೇರಿ, ಮಧ್ಯಾಹ್ನದ ಬಿಸಿಯೂಟಕ್ಕೆ ಸುರಕ್ಷಿತ ಅಡುಗೆ ಮನೆ, ಬಾಲಕರು ಹಾಗೂ ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯ, ಸುರಕ್ಷಿತ ಕುಡಿಯುವ ನೀರು, ಆಟದ ಮೈದಾನ, ಕಾಂಪೌಂಡ್ ಹಾಗೂ ವಿಶೇಷ ಅಗತ್ಯವಿರುವ ಮಕ್ಕಳಿಗೆ ತಡೆರಹಿತ ಪ್ರವೇಶದ ಅವಕಾಶ ಕಲ್ಪಿಸಲೇಬೇಕು.

ಇದಲ್ಲದೆ, ಶೈಕ್ಷಣಿಕ ಪ್ರಗತಿ ಸಾಧಿಸಲು ಅನುವಾಗುವಂತೆ ಗುಣಾತ್ಮಕ ಕಲಿಕಾ ಮಾನದಂಡಗಳನ್ನು ಸಹ ಗೊತ್ತುಪಡಿಸಲಾಗಿದೆ. ಅದರಂತೆ, ಶೈಕ್ಷಣಿಕ ವರ್ಷದಲ್ಲಿ ಒಂದರಿಂದ ಐದನೇ ತರಗತಿಯವರೆಗೆ 200 ಕಾರ್ಯನಿರ್ವಹಣಾ ದಿನಗಳು ಮತ್ತು 800 ಕಲಿಕಾ ಗಂಟೆಗಳು, ಆರರಿಂದ ಎಂಟನೇ ತರಗತಿಯವರೆಗೆ 220 ಕಾರ್ಯನಿರ್ವಹಣಾ ದಿನಗಳು ಮತ್ತು ಒಂದು ಸಾವಿರ ಬೋಧನಾ ಗಂಟೆಗಳು, ಶಿಕ್ಷಕರಿಗೆ ಪ್ರತಿವಾರ ಕನಿಷ್ಠ 45 ಬೋಧನಾ ಗಂಟೆಗಳು, ಪ್ರತಿ ತರಗತಿಗೆ ಅಗತ್ಯವಿರುವ ಬೋಧನಾ-ಕಲಿಕಾ ಉಪಕರಣ; ಪ್ರತಿ ಶಾಲೆಯಲ್ಲಿ ವೃತ್ತ ಪತ್ರಿಕೆ, ನಿಯತಕಾಲಿಕಗಳು, ಕಥೆ ಪುಸ್ತಕಗಳನ್ನು ಒಳಗೊಂಡಂತೆ ಎಲ್ಲ ವಿಷಯಗಳ ಕುರಿತಾದ ಪುಸ್ತಕಗಳಿರುವ ಗ್ರಂಥಾಲಯ ಮತ್ತು ಪ್ರತಿ ತರಗತಿಗೆ ಅಗತ್ಯವಿರುವಷ್ಟು ಆಟದ ಸಾಮಗ್ರಿ ಹಾಗೂ ಕ್ರೀಡೋಪಕರಣಗಳು ಇರಬೇಕೆಂದು ಗೊತ್ತುಪಡಿಸಲಾಗಿದೆ.

ಮೇಲಿನ ಭೌತಿಕ ಹಾಗೂ ಶೈಕ್ಷಣಿಕ ಮೂಲ ಸೌಕರ್ಯಗಳು ಗುಣಾತ್ಮಕ ಶಿಕ್ಷಣದ ಗುರಿಯನ್ನು ಸಾಧಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತವೆ. ಈ ಕನಿಷ್ಠ ಸೌಲಭ್ಯಗಳು ಗುಣಾತ್ಮಕ ಶಿಕ್ಷಣಕ್ಕೆ ಬುನಾದಿಯಾಗುತ್ತವೆ. ಆದರೆ, ಕರ್ನಾಟಕದಲ್ಲಿ ಶಿಕ್ಷಣ ಹಕ್ಕು ಕಾಯ್ದೆಯು ಕಾನೂನು ಬದ್ಧಗೊಳಿಸಿರುವ ಈ ಎಲ್ಲಾ ಸೌಲಭ್ಯಗಳ ಅನುಪಾಲನೆ ತೀರಾ ಕೆಳಗಿದೆ. 100 ಸರ್ಕಾರಿ ಶಾಲೆಗಳ ಪೈಕಿ 26 ಕಿರಿಯ ಪ್ರಾಥಮಿಕ ಮತ್ತು 30 ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮಾತ್ರ ಈ ಎಲ್ಲಾ ಸೌಲಭ್ಯಗಳಿವೆಯೆಂದು ಅಂಕಿಅಂಶ ಹೇಳುತ್ತದೆ. ಉಳಿದ ಶಾಲೆಗಳಲ್ಲಿ ಈ ಸೌಲಭ್ಯಗಳ ಲಭ್ಯತೆ ಶಾಲೆಯಿಂದ ಶಾಲೆಗೆ ಬದಲಾಗುತ್ತದೆ. ಕೆಲವು ಶಾಲೆಗಳಲ್ಲಂತೂ ತೀರಾ ಕಳಪೆಯಾಗಿದೆ. ಶಾಲೆಗಳಲ್ಲಿ ಕನಿಷ್ಠ ಮೂಲ ಸೌಕರ್ಯಗಳಿಲ್ಲದೆ ಗುಣಮಟ್ಟವನ್ನು ಸುಧಾರಿಸುವುದಾದರೂ ಹೇಗೆ ಎಂಬ ಮೂಲಭೂತ ಪ್ರಶ್ನೆ ಎದುರಾಗುತ್ತದೆ.

ಕನಿಷ್ಠ ಭೌತಿಕ ಹಾಗೂ ಶೈಕ್ಷಣಿಕ ಮೂಲ ಸೌಕರ್ಯಗಳ ಕೊರತೆ, ದಿನದಿಂದ ದಿನಕ್ಕೆ ಶಿಕ್ಷಕರಿಗೆ ಹೆಚ್ಚುತ್ತಿರುವ ಕಲಿಕೇತರ ಕಾರ್ಯಭಾರ, ಆಡಳಿತಾತ್ಮಕ ಕಾರ್ಯಗಳಿಗೆ ಅಗತ್ಯ ಸಿಬ್ಬಂದಿ ಕೊರತೆ, ಎರಡು-ಮೂರು ತರಗತಿಗಳನ್ನು ಜೊತೆಗೂಡಿಸಿ ಬಹುವರ್ಗ ಬೋಧನೆ, ಒಂದೇ ಶಾಲೆಯಲ್ಲಿ ಬುನಾದಿ ಶಿಕ್ಷಕರೆನ್ನುವ ಬದಲು ಪ್ರಾಥಮಿಕ ಶಿಕ್ಷಕ (ಪಿಎಸ್‌ಟಿ) ಹಾಗೂ ಪದವೀಧರರೆಂಬ (ಜಿಪಿಟಿ) ಎರಡು ವೃಂದಗಳ ವಿಭಜನೆ, ಹಾಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಲ್ಲಿ ಸಕಾರಾತ್ಮಕ ವೃತ್ತಿಪರ ಬೆಳವಣಿಗೆಗೆ ಪ್ರೋತ್ಸಾಹಕ ಯೋಜನೆಗಳ ಕೊರತೆ ಇದೆ. ಅಲ್ಲದೆ, ಶಿಕ್ಷಕರಲ್ಲಿ ಉತ್ಸಾಹ ಹೆಚ್ಚಿಸಲು, ಸೃಜನಶೀಲತೆಯನ್ನು ಉದ್ದೀಪಿಸಲು ಪೂರಕವಾದ ಮೇಲುಸ್ತುವಾರಿ ವ್ಯವಸ್ಥೆಯ ತೀವ್ರ ಕೊರತೆಯು ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಲು ಸವಾಲಾಗಿ ಪರಿಣಮಿಸಿದೆ. ಇಂತಹ ಸವಾಲುಗಳನ್ನು ಎದುರಿಸಲು ಸಮರ್ಥ ಯೋಜನೆ ರೂಪಿಸದಿದ್ದರೆ ಗುಣಮಟ್ಟದ ಶಿಕ್ಷಣ ಸದಾಕಾಲ ಸವಾಲಾಗಿಯೇ ಉಳಿದುಬಿಡುವ ಸಾಧ್ಯತೆ ದಟ್ಟವಾಗಿದೆ.

ಚುರುಮುರಿ



ಊಟಕೂಟ

• ಮಣ್ಣೆ ರಾಜು

'ಅನ್ನಭಾಗ್ಯ ಕೊಟ್ಟ ನಮಗೇ ಆ ದೇವರು ಊಟ್ಟೋ ಭಾಗ್ಯ ಕೊಡಲಿಲ್ಲ...' ನಾಯಕರು ಬೇಸರಗೊಂಡರು.

'ಗುಟ್ಟಾಗಿ ಉಣ್ಣಬೇಡಿ, ಒಟ್ಟಾಗಿ ಉಣ್ಣಿರಿ ಅಂತ ಹೈಕಮಾಂಡ್ ದೇವರು ಹೇಳಿದೆ ಕಣ್ರೀ' ಕಾಫಿ ತಂದುಕೊಟ್ಟರು ಪತ್ನಿ.

'ನಮ್ಮ ಗುಂಪು ಊಟಗಾರಿಕೆಯಿಂದ ಕೆಲವರಿಗೆ ಅಜೀರ್ಣ, ಅಲರ್ಜಿ, ಹೊಟ್ಟೆಯುರಿ ಉಂಟಾಗುವುದಂತೆ. ಇದರಿಂದ ಪಕ್ಷದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ ಅಂತ ಬ್ರೇಕ್‌ಫಾಸ್ಟ್‌ಗೆ ಹೈಕಮಾಂಡ್ ಬ್ರೇಕ್ ಹಾಕಿದೆ, ಡಿನ್ನರ್‌ಗೆ ಗೇಟ್ ಹಾಕಿದೆ'.

'ಹೆಂಡ್ತಿ, ಮಕ್ಕಳ ಜೊತೆ ಮನೆಯೂಟ ಮಾಡುವ ಫುಡ್ ಕಲ್ಚರ್ ರೂಢಿಸಿಕೊಳ್ಳುವುದು ಗುಡ್ ಕಲ್ಚರ್ ಅಂತ'.

'ಪಕ್ಷದ ಸಂಘಟನೆ, ಅಭಿವೃದ್ಧಿ ಕುರಿತು ಚಿಂತನೆ, ನಾಡಿನ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಲು ಊಟಕೂಟ ಆಯೋಜಿಸುವುದು ತಪ್ಪಾ?'

'ತಪ್ಪಂತೆ. ಸಚಿವ ಸಂಪುಟ ಸಭೆ, ಸಾಮಾನ್ಯ ಸಭೆಯಲ್ಲೂ ಅಭಿವೃದ್ಧಿ ಕುರಿತು ಚರ್ಚೆ ಮಾಡಬಹುದಲ್ವಾ ಎಂದು ವಿಪಕ್ಷದವರು ನಿಮ್ಮ ಊಟಕ್ಕೆ ಹುಳಿ ಹಿಂಡುತ್ತಿದ್ದಾರೆ. ಊಟದ ಮೆನು, ಊಟಗಾರರ ಪಟ್ಟಿ, ಬಾಳೆಲೆಯ ಊಟವೋ ಬೆಳ್ಳಿತಟ್ಟೆ ಊಟವೋ ಎನ್ನುವ ವಿವರವಾದ ವರದಿಯನ್ನು ಹೈಕಮಾಂಡ್‌ಗೆ ಒಪ್ಪಿಸಿ ಊಟಕ್ಕೆ ಅನುಮತಿ ಪಡೆಯಿರಿ'.

'ಮೆನು ಬಗ್ಗೆ ಹೈಕಮಾಂಡ್‌ಗೆ ಚಿಂತೆಯಿಲ್ಲ, ಊಟದ ಜೊತೆ ನೆಂಚಿಕೊಳ್ಳುವ ವಿಚಾರಗಳ ಬಗ್ಗೆ ತಕರಾರು!' ನಾಯಕರು ನಕ್ಕರು.

'ಹೋಗ್ಲಿಬಿಡಿ, ಇಂದಿರಾ ಕ್ಯಾಂಟೀನ್ ನಿರ್ವಹಣೆ ಹೊಣೆಯನ್ನು ಮಹಿಳೆಯರಿಗೆ ವಹಿಸಬೇಕು ಎಂದು ಅಂದುಕೊಂಡಿದ್ದೀರಂತೆ?'

'ಹೌದು, ಮಹಿಳೆಯರನ್ನು ಆರ್ಥಿಕವಾಗಿ ಸದೃಢರನ್ನಾಗಿಸಲು ಕ್ಯಾಂಟೀನ್ ಭಾಗ್ಯ ನೀಡುತ್ತೇವೆ'.

'ಹಾಗಲ್ಲಾರೀ, ಕ್ಯಾಂಟೀನ್‌ನಲ್ಲಿ ರೇಷನ್ ತಂದುಕೊಡುವಂತಹ, ತರಕಾರಿ ಹೆಚ್ಚಿಕೊಡುವಂತಹ ಸೇವಾ ಭಾಗ್ಯವನ್ನಾದರೂ ಬಡಪಾಯಿ ಪುರುಷರಿಗೆ ಕೊಡಿ, ಪಾಪ!' ಎಂದು ಕಾಫಿ ಗ್ಲಾಸ್ ತೆಗೆದುಕೊಂಡು ಹೋದರು.

ಸಂಗತ

ಅಂತರಂಗದ ಅರಿವಿಗೊಂದು ಚಳವಳಿ

ನಾವು ಬದುಕಿನಲ್ಲಿ ಕೆಲವು ತತ್ವಗಳನ್ನಾದರೂ ಅಳವಡಿಸಿಕೊಳ್ಳಲೇಬೇಕಾಗುತ್ತದೆ

• ಸತೀಶ್ ಜಿ.ಕೆ. ತೀರ್ಥಹಳ್ಳಿ

ಕಾಲ ಸರಿಯುವುದು, ಜೀವ ವಿಕಸಿಸುವುದು, ಯುಗ ಪಲ್ಲಟ ಜರುಗುವುದೆಲ್ಲವೂ ಸೃಷ್ಟಿಸಹಜ ವಿದ್ಯಮಾನಗಳೇ. ಪ್ರತಿ ಕಾಲಘಟ್ಟದಲ್ಲಿಯೂ ಯುಗಧರ್ಮವೊಂದು ರಾರಾಜಿಸುತ್ತದೆ. ಬದುಕು-ಬರಹ, ಆದ್ಯತೆ-ಮಾನ್ಯತೆಯೂ ಪೂರಕವಾಗಿ ಬದಲಾಗುತ್ತವೆ. ಅಂತೆಯೇ ಇಂದಿನದು ತಂತ್ರಜ್ಞಾನವನ್ನು ಆತುಕೊಂಡ ಆಧುನಿಕತೆ. ಸಹಜವಾಗಿ ಅದು ವಿಜ್ಞಾನದ ಮೂಲ ಗುಣವಾದ ಸತ್ಯ, ವಾಸ್ತವ, ಮುಕ್ತತೆ, ವಿವೇಚನೆಯ ಕಡೆಗೆ ವಾಲಬೇಕು. ಆದರೆ ಯಾಕೋ ಹಾಗಾಗುತ್ತಿಲ್ಲ.

ಮಾನವಜಗತ್ತು ಕೃತಕ, ಸುಳ್ಳು, ಅವಾಸ್ತವ, ಭ್ರಾಂತಿಗಳಲ್ಲಿ ಮುಳುಗೇಳುತ್ತಿದೆ. ಸರಳ ಜೀವನಶೈಲಿ, ಸಂಪನ್ಮೂಲಗಳ ಹಿತಮಿತ ಬಳಕೆಯ ವಿವೇಕಮಾರ್ಗ ಮರೆತಂತಿದೆ. ವ್ಯವಸ್ಥೆಯು ಪರಿಸರಪೂರಕ ನೀತಿ-ನಿರೂಪಣೆಗಳನ್ನು ಒಳಗೊಳ್ಳಬೇಕಾದ ಹೊತ್ತಿನಲ್ಲಿ ಅಭಿವೃದ್ಧಿಯ ಅಂಧ ಮಾರ್ಗವನ್ನು ಪಠಿಸುತ್ತಿದೆ. ಸಹಬಾಳ್ವೆಯ ಮೂಲತತ್ವ ಮಾಯವಾಗಿ ದ್ವೇಷ, ಹಿಂಸೆ, ಕ್ರೌರ್ಯ, ಯುದ್ಧಗಳನ್ನು ಆರಾಧಿಸುತ್ತಿದೆ. ಪರಿಸರ ವ್ಯವಸ್ಥೆಯಲ್ಲಿ ಬರೀ ಸಣ್ಣ ಭಾಗವಾಗಿರುವ ನಾವು ಅಲ್ಪಾಯುಷಿಗಳೆಂಬ ಪ್ರಾಥಮಿಕ ತಿಳಿವು ಮಾತ್ರವೇ ನಮ್ಮ ನಾಗರಿಕತೆಯ ಪಥವನ್ನು ಸರಿಯಾದ ದಿಕ್ಕಿಗೆ ತಿರುಗಿಸಲು ಸಹಕರಿಸಬಹುದೇನೊ.

ಹೌದು, ಸಾಮಾಜಿಕ ಬದುಕಿನಲ್ಲಿ ನೈತಿಕತೆ ಎಂಬುದೀಗ ಸವಕಲು ನಾಣ್ಯ. ಭೋಗ ಜೀವನವೇ ಎಲ್ಲರ ಧ್ಯಾನ, ಸ್ವಾರ್ಥಚಿಂತನೆಯೇ ಆರಾಧನೆ, ವೈಯಕ್ತಿಕ ಸಂಪತ್ತಿನ ವೃದ್ಧಿಯೇ ನಿತ್ಯದ ಬಯಕೆ, ಕನವರಿಕೆ. ಮುಂದಿನ ದಿನಗಳು ಸಹ್ಯವಾಗಬೇಕೆಂದರೆ ಇಂತಹ ಸಂಕೀರ್ಣ ಮನಃಸ್ಥಿತಿಯುಳ್ಳ ಇಂದಿನ ಜಮಾನಾದ ಪಯಣದ ದಿಕ್ಕು ಬದಲಾಗಲೇಬೇಕು. ಹಾಗಾಗಲು, ಮೊದಲಿಗೆ ನಮ್ಮ ಅಭಿವೃದ್ಧಿಯ ಪರಿಭಾಷೆ ಬದಲಾಗಬೇಕು, ಪ್ರಜಾಪ್ರಭುತ್ವ ವ್ಯವಸ್ಥೆಯಡಿಯೇ ರಾಜಕೀಯ ವ್ಯವಸ್ಥೆಗಳ ಪುನರ್‌ರಚನೆ ಸಾಧ್ಯವಾಗಬೇಕು. ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ನಿಲುವುಗಳೂ ಬದಲಾಗಬೇಕು. ಇಂದಿನ ಜಾಗತೀಕೃತ ಜೀವನಶೈಲಿಯ ಆಧಾರದಲ್ಲಿ ಅವು ಒಂದಕ್ಕೊಂದು ಪೂರಕವಾಗಿರಬೇಕು.

ಅತಿಯಾದ ಉತ್ಪಾದನೆ, ಬೇಕಾಬಿಟ್ಟಿ ಕೊಳ್ಳುವಿಕೆ, ಅರೆಬರೆ ಬಳಸುವಿಕೆ, ಎಸೆಯುವಿಕೆಗಳ ಮೇಲೆ ಕೊಳ್ಳುಬಾಕ ಸಂಸ್ಕೃತಿ ನಿಂತಿದೆ. ಕೃಷಿ, ಕೈಗಾರಿಕಾ ಉತ್ಪನ್ನಗಳು, ಮನರಂಜನೆಯ ಉಪಕರಣಗಳು, ಐಷಾರಾಮಿ ವಾಹನಗಳು, ಅಗಲವಾದ ರಸ್ತೆಗಳು, ಆಧುನಿಕ ರೈಲು, ವಿಮಾನಯಾನ, ಸುರಂಗಮಾರ್ಗ, ಫ್ಲೈಓವರ್, ಬಹುಮಹಡಿ ಕಟ್ಟಡ, ಉದ್ದಿಮೆಗಳು ಎಲ್ಲವೂ ಇದರಲ್ಲಿ ಒಳಗೊಳ್ಳುತ್ತವೆ.

ಆರ್ಥಿಕ ಪ್ರಗತಿಯನ್ನು ಅಳೆಯುವ ಇಂದಿನ ಮಾಪಕ, ಸೂಚಿಗಳು ಬರೀ ಹಣದ ಮೂಲ ಮತ್ತು ಹರಿವಿನ ಕುರಿತಾಗಿವೆ. ನೈಸರ್ಗಿಕ ಸಂಪನ್ಮೂಲಗಳನ್ನು ರೂಪಾಂತರಿಸಿ ತಯಾರಿಸುವ ಸರಕುಗಳೇ ಎಲ್ಲದಕ್ಕೂ ಮೂಲವಾಗಿವೆ. ಆದರೆ ಹಕ್ಕು ಹೊಂದಿರುವ ಸರ್ಕಾರಕ್ಕಾಗಲಿ, ಖಾಸಗಿ ಸಂಸ್ಥೆಗಳಿಗಾಗಲಿ ನೈಸರ್ಗಿಕ ಸಂಪತ್ತುಗಳನ್ನು ಹಣವನ್ನಾಗಿ ಪರಿವರ್ತಿಸುವ ಕಡೆಗೆ ಆಸಕ್ತಿಯೇ ವಿನಾ ಕಳೆದುಕೊಳ್ಳುತ್ತಿರುವ ನೈಸರ್ಗಿಕ ಸಂಪತ್ತು, ಅದರ ಮೌಲ್ಯದ ಕುರಿತು ಇಲ್ಲ. ಹಾಗಾಗಿ, ಜನಮಾನಸಕ್ಕೆ ಪರಿಸರ ನಾಶವೂ ಅಭಿವೃದ್ಧಿಯಂತೆಯೇ ತೋರುತ್ತಿದೆ.

'ಮಾರುಕಟ್ಟೆ ಆಧಾರಿತ' ಮಾದರಿಗಳ ರೂಪದಲ್ಲಿ ದೊರೆತ ಪೆಟ್ರೋರಾಸಾಯನಿಕಗಳು, ಪ್ಲಾಸ್ಟಿಕ್ ಎಂಬ ರಾಕ್ಷಸ ಅವತಾರಗಳನ್ನು ತಾಳಿಕೊಳ್ಳುವುದು ಪರಿಸರಕ್ಕೆ ಕಷ್ಟ. ತಂತ್ರಜ್ಞಾನವನ್ನು ಬಲ್ಲವರಲ್ಲಿ ಇರುವ ಇತರ ಕ್ಷೇತ್ರಗಳ ಬಗೆಗಿನ ಅಜ್ಞಾನ, ಮಾಹಿತಿ ಕೊರತೆ ಮತ್ತು ಎಲ್ಲವನ್ನೂ ಹಣದ ಲೆಕ್ಕಾಚಾರದಲ್ಲಿ ನೋಡುವ ಮನೋಭಾವದಲ್ಲಿ ಇಡಿಯ ನಾಗರಿಕತೆಯೇ ಸ್ವಾರ್ಥ, ಸಂಕುಚಿತ ಮತ್ತು ಸ್ವಕೇಂದ್ರಿತವಾಗಿ ರೂಪುಗೊಂಡಿದೆ. ನಾಲ್ಕು ತಲೆಮಾರುಗಳಿಗೆ ಆಗುವಷ್ಟು ಸ್ಥಿರಾಸ್ತಿ, ಧನಕನಕಗಳನ್ನು ಕಾಪಿಡುವ ಮಂದಿ, ಮುಂದೆ ಆ ಸಂಪತ್ತಿನ ಬಳಕೆಗಾದರೂ ಆರೋಗ್ಯಕರ ಪರಿಸರವನ್ನು ಉಳಿಸಿ ಹೋಗುವುದನ್ನು ಮರೆತಿರುತ್ತಾರೆ.

ಇಂತಹ ಮನಃಸ್ಥಿತಿಯಿಂದ ನಾಗರಿಕ ಸಮಾಜ ಬಿಡುಗಡೆಗೊಳ್ಳಬೇಕು. ಅದಕ್ಕೊಂದು ಅಂತರಂಗದ ಚಳವಳಿ ಬೇಕು. ಶ್ರಮಸಂಸ್ಕೃತಿ, ಸರಳ ವ್ಯಕ್ತಿತ್ವಗಳನ್ನು ಗೌರವಿಸುವ ಸಮಾಜ ಮತ್ತು ಸಾರ್ವಕಾಲಿಕ ಜೀವನಮೌಲ್ಯ, ವೃತ್ತಿಕೌಶಲಗಳನ್ನು ಬೆಳೆಸುವಂತಹ ಶಿಕ್ಷಣವಷ್ಟೇ ನಮ್ಮ ಆಯ್ಕೆಯಾಗಬೇಕು. ಅದೊಂದೇ ಮುಂಬರುವ ನೈತಿಕ ಅಧಃಪತನ, ಪರಿಸರ ಪ್ರಕೋಪ, ಶಕ್ತಿ ಮುಗ್ಗಟ್ಟಿನ ದುರಿತ ಕಾಲದಲ್ಲಿ ನಮ್ಮನ್ನು ಉಳಿಸೀತು..

ದುಂದುವೆಚ್ಚ, ಐಷಾರಾಮಿ ಬದುಕನ್ನು ನಿರಾಕರಿಸಿ, ಬಾಹ್ಯಾಡಂಬರ ಮತ್ತು ಸಂಪತ್ತಿನ ಅಸಹ್ಯಕರ ಪ್ರದರ್ಶನಕ್ಕೆ ಹಂಬಲಿಸದೆ ಪರಿಸರಕ್ಕೆ ಪೂರಕವಾದ ಸರಳ ಮಾದರಿಯನ್ನು ಒಪ್ಪಿಕೊಳ್ಳುವುದು, ಅಪ್ಪಿಕೊಳ್ಳುವುದು, ನೈತಿಕ ಔನ್ನತ್ಯದೆಡೆಗೆ ನಮ್ಮ ವ್ಯಕ್ತಿತ್ವವನ್ನು ತಿರುಗಿಸುವುದು, ಮಕ್ಕಳೆದುರು ಸ್ವತಃ ಮಾದರಿಯಾಗಿ ಉಳಿಯುವುದು, ಯಂತ್ರದಲ್ಲಿ ತಯಾರಾದ ಉತ್ಪನ್ನಗಳು ಮತ್ತು ಸಿದ್ಧಪಡಿಸಿದ ಆಹಾರ ಪದಾರ್ಥಗಳ ಬಳಕೆಯನ್ನು ನಿಯಂತ್ರಿಸಿಕೊಳ್ಳುವುದು, ನಮ್ಮ ಹಳ್ಳಿಗಳಿಗೆ, ಸಂಸ್ಕೃತಿಯ ಬೇರುಗಳಿಗೇ ಹಿಂದಿರುಗುವುದು, ಸ್ವಾವಲಂಬನೆಯ ಕೃಷಿ, ಕೈಮಗ್ಗ, ಗೃಹೋಪಯೋಗಿ ವಸ್ತುಗಳ ತಯಾರಿಕೆಯಲ್ಲಿ ತೊಡಗಿಕೊಳ್ಳುವುದು, ಶರಣರು ಪ್ರತಿಪಾದಿಸಿದ ಕಾಯಕ ಧರ್ಮದ ಪಾಲನೆ, ಅಸಂಗ್ರಹ ಮಾದರಿ, ದಾಸೋಹ, ಸಮಸಮಾಜ ತತ್ವಗಳನ್ನು ಅಳವಡಿಸಿಕೊಳ್ಳುವುದು, ಪರಿಸರದ ಘಟಕಗಳಾದ ಮಣ್ಣು, ನೀರು, ಗಾಳಿಯ ಮೂಲಗುಣ ಮುಕ್ಕಾಗದಂತೆ ಕಾಳಜಿಯ ಜೀವನಕ್ರಮದೆಡೆಗೆ ಹೆಜ್ಜೆ ಹಾಕುವುದು... ಹೀಗೆ.

ಎಲ್ಲ ನಾಗರಿಕತೆಗಳೂ ನಾಶ ಹೊಂದುವಂತೆ ಇಂದಿನ ಕಾಲಘಟ್ಟವೂ ನಾಳೆಗೆ ಸ್ಥಿತ್ಯಂತರ ಕಾಣಬಹುದು. ಅದು ಅಪಾಯಕಾರಿಯಾಗಿ, ಭವಿಷ್ಯದಲ್ಲಿ ಬದುಕುವವರ ನಿದ್ದೆ, ನೆಮ್ಮದಿ ಕಸಿದುಕೊಳ್ಳಬಾರದೆಂದರೆ ನಾವೀಗ ವಿವೇಕದ ಹಾದಿ ತುಳಿಯಬೇಕು. ಸಮಗ್ರ ಶಿಕ್ಷಣ ಮತ್ತು ಮೌಲ್ಯಯುತ ಸಮಾಜಗಳು ಮಾತ್ರ ಆ ದಿಕ್ಕಿನಲ್ಲಿ ತಲೆಮಾರುಗಳನ್ನು ಕೈಹಿಡಿದು ನಡೆಸಬಲ್ಲವು.

ವಾಚಕರ ವಾಣಿ

ಬಸ್ ಪ್ರಯಾಣ ದರ: ಇರಲಿ ಕಡಿವಾಣ

ವಾರಾಂತ್ಯದಲ್ಲಿ ಮತ್ತು ಹಬ್ಬ- ಹರಿದಿನಗಳ ಸಮಯದಲ್ಲಿ ತಮ್ಮ ತಮ್ಮ ಊರುಗಳಿಗೆ ತೆರಳುವ ಪ್ರಯಾಣಿಕರ ಸಂಖ್ಯೆ ಸಹಜವಾಗಿಯೇ ಹೆಚ್ಚಾಗಿರುತ್ತದೆ. ಈ ಪರಿಸ್ಥಿತಿಯ ಲಾಭ ಪಡೆಯಲು ಖಾಸಗಿ ಬಸ್ ಮಾಲೀಕರು ಬಸ್ ಪ್ರಯಾಣ ದರವನ್ನು ಎಂದಿನ ದರಕ್ಕಿಂತಲೂ ಎರಡು- ಮೂರು ಪಟ್ಟು ಹೆಚ್ಚಿಸುವುದು ಹಲವಾರು ವರ್ಷಗಳಿಂದ ನಡೆದುಕೊಂಡು ಬಂದಿದೆ. ದರ ಈ ರೀತಿ ಯರ್‍ರಾಬಿರ್‍ರಿ ಏರಿಸಬಾರದು ಎಂದು ಖಾಸಗಿ ಬಸ್ ಮಾಲೀಕರಿಗೆ ಸಾರಿಗೆ ಇಲಾಖೆ ಹಲವು ವರ್ಷಗಳಿಂದಲೂ ಸೂಚನೆ ನೀಡುತ್ತಾ ಬಂದಿದೆ. ಆದರೂ ಯಾವುದೇ ಪ್ರಯೋಜನವಾದಂತೆ ಕಾಣುವುದಿಲ್ಲ.

ಮನಸೋಇಚ್ಛೆ ಪ್ರಯಾಣ ದರ ಏರಿಕೆ ಮಾಡುವವರ ವಿರುದ್ಧ ಎಚ್ಚರಿಕೆ ನೀಡುವುದು ಮತ್ತು ಒಂದೆರಡು ಪ್ರಕರಣಗಳಲ್ಲಿ ಕ್ರಮ ಕೈಗೊಳ್ಳುವುದರಿಂದ ಪ್ರಯೋಜನವಿಲ್ಲ. ಇಂತಹ ಪರಿಪಾಟಕ್ಕೆ ಸಂಪೂರ್ಣ ತಡೆಯೊಡ್ಡುವ ಇಚ್ಛಾಶಕ್ತಿಯನ್ನು ಸರ್ಕಾರ ತೋರಬೇಕು. ಹಬ್ಬಗಳ ಸಂದರ್ಭದಲ್ಲಿ ಜನರಿಗೆ ಪ್ರಯಾಣ ಹೊರೆಯಾಗದಂತೆ ನೋಡಿಕೊಳ್ಳಬೇಕು.

ಜಿ.ನಾಗೇಂದ್ರ ಕಾವೂರು, ಸಂಡೂರು

ಬಿಡಿಎ ಕೆಲಕಾಲ ಸ್ಥಗಿತಗೊಳ್ಳಲಿ!

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಹೊಸದಾಗಿ ನಿರ್ಮಿಸಲು ಉದ್ದೇಶಿಸಿರುವ ಆರು ಬಡಾವಣೆಗಳಿಗೆ 5,000 ಎಕರೆ ಜಮೀನನ್ನು ಗುರುತಿಸಿರುವುದಾಗಿ ವರದಿಯಾಗಿದೆ (ಪ್ರ.ವಾ., ಜ. 14). ಈ ಬೆಳವಣಿಗೆಯನ್ನು ನೋಡಿದರೆ, ಬಿಡಿಎಯನ್ನು 15- 20 ವರ್ಷ ಮುಚ್ಚುವುದೇ ಒಳ್ಳೆಯದು ಅನ್ನಿಸುತ್ತದೆ.

ಈಗಿರುವ ಎಷ್ಟೋ ಬಡಾವಣೆಗಳಿಗೆ ಮೂಲ ಸೌಕರ್ಯಗಳಿಲ್ಲ, ನಿವೇಶನಗಳನ್ನು ಖರೀದಿಸಿದ ಜನಸಾಮಾನ್ಯರು ಅತಂತ್ರ ಸ್ಥಿತಿಯಲ್ಲಿದ್ದಾರೆ, ನಗರದಲ್ಲಿ ಜನಸಂಖ್ಯೆ ಮಿತಿಮೀರಿದೆ, ಊಹಿಸಲಾರದಷ್ಟು ಬೆಳವಣಿಗೆ ಆಗಿದೆ, ಸಂಚಾರ ವ್ಯವಸ್ಥೆ ಹದಗೆಟ್ಟಿದೆ, ಕೆಲವೆಡೆ ಕುಡಿಯುವ ನೀರಿನ ವ್ಯವಸ್ಥೆ ಶೋಚನೀಯವಾಗಿದೆ, ಒಂದು ಮಳೆ ಬಂದರೆ ಕೆರೆಗಳಂತಾಗುವ ಬಡಾವಣೆಗಳಿವೆ, ಹರಿದುಹೋಗಲು ಅವಕಾಶವಿಲ್ಲದಂತೆ ಮುಚ್ಚಿರುವ ರಾಜಕಾಲುವೆಗಳಿವೆ... ಇಂತಹ ಸ್ಥಿತಿಯಲ್ಲಿರುವ ಬೆಂಗಳೂರು ನಗರಕ್ಕೆ ಇನ್ನೆಷ್ಟು ಬಡಾವಣೆಗಳು, ಇನ್ನೆಷ್ಟು ನಿವೇಶನಗಳು, ಇನ್ನೆಷ್ಟು ಜನಸಂಖ್ಯೆ ಬೇಕು? ಇದು ಹೀಗೇ ಸಾಗಿದರೆ, ಈ ನಗರವನ್ನು ದೇವರು ಸಹ ಕಾಪಾಡಲಾರ.

ಟಿ.ವಿ.ಬಿ.ರಾಜನ್, ಬೆಂಗಳೂರು

ಡಿನ್ನರ್ ಪಾರ್ಟಿ ಮತ್ತು 'ವಿಶೇಷ ವ್ಯಕ್ತಿತ್ವ'!

ರಾಜಕಾರಣಿಗಳ 'ಡಿನ್ನರ್ ಪಾರ್ಟಿ'ಗಳು ಇತ್ತೀಚೆಗೆ ಸುದ್ದಿಯಲ್ಲಿವೆ. ವ್ಯಂಗ್ಯಚಿತ್ರಕಾರರಾಗಿದ್ದ ಆರ್.ಕೆ.ಲಕ್ಷ್ಮಣ್ ಸುಮಾರು 35 ವರ್ಷಗಳ ಹಿಂದೆ ಬೆಂಗಳೂರು ಆಕಾಶವಾಣಿಗೆ ನೀಡಿದ್ದ ಸಂದರ್ಶನವೊಂದರಲ್ಲಿ, ರಾಜಕಾರಣಿಗಳ ನಡೆ-ನುಡಿ ಬಗ್ಗೆ ನಾವು ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲವೆಂದೂ ಅದರಲ್ಲೂ ಅವರ ಡಿನ್ನರ್‌ಗಳಂತೂ ವಿಚಿತ್ರವಾಗಿರುತ್ತವೆ ಎಂದೂ ಅಭಿಪ್ರಾಯಪಟ್ಟಿರುವುದು ಈಗಿನ ರಾಜಕಾರಣಿಗಳ ಡಿನ್ನರ್ ಪಾರ್ಟಿಗೂ ಹೊಂದುವಂತಿದೆ. ಲಕ್ಷ್ಮಣ್ ಅವರು ಈ ವಿಷಯದ ಬಗ್ಗೆ ಒಂದು ಸಿದ್ಧಾಂತವನ್ನೇ ಮಂಡಿಸುತ್ತಾರೆ. ಅದನ್ನು ತಿಳಿಹಾಸ್ಯದ ಧಾಟಿಯಲ್ಲಿ ಹೀಗೆ ಹೇಳಿದ್ದಾರೆ: 'ರಾಜಕಾರಣಿಗಳು ನಾವು ನೀವು ಇರುವ ಹಾಗೆ ಸಾಮಾನ್ಯ ಮನುಷ್ಯರಲ್ಲ, ಅವರು ಬೇರೆಯದೇ ತಳಿಯವರು! ಅವರ ಊಟ, ನಿದ್ರೆ, ಚರ್ಚೆ ಎಲ್ಲವೂ ತುಂಬಾ ವಿಚಿತ್ರವಾಗಿ ಇರುತ್ತವೆ. ಅವರಿಗೆ ನಾಚಿಕೆ ಅನ್ನುವುದಿಲ್ಲ. ಒಬ್ಬರಿಗೊಬ್ಬರು ಸಿಕ್ಕಾಪಟ್ಟೆ ಬೈದುಕೊಳ್ಳುತ್ತಾರೆ, ಆಮೇಲೆ ನಕ್ಕೊಂಡು ಜೊತೆಯಲ್ಲೇ ಬರ್ತಾರೆ. ನಮ್ಮ ನಿಮ್ಮಂತಹ ಸಾಮಾನ್ಯ ಜನಕ್ಕೆ ಈ ರೀತಿ ಇರಲಿಕ್ಕೆ ಆಗುತ್ತದೆಯೇ?!'

'ಇನ್ನು ಅವರ ಊಟದ ವಿಚಾರಕ್ಕೆ ಬಂದರೆ, ಇವತ್ತು ಒಬ್ಬರ ಮನೆಯಲ್ಲಿ ಡಿನ್ನರ್ ಮಾಡಿದರೆ ಅದೇ ದಿನ ಮತ್ತೊಬ್ಬರ ಮನೆಯಲ್ಲೂ ಡಿನ್ನರ್ ಮಾಡಿರುತ್ತಾರೆ. ಹೀಗೆ ಪ್ರತಿದಿನ ಎರಡು- ಮೂರು ಡಿನ್ನರ್, ನಾಲ್ಕೈದು ಬ್ರೇಕ್‌ಫಾಸ್ಟ್, ಐದೆಂಟು ಟೀ, ಕಾಫಿ! ಇನ್ನೆಲ್ಲೋ ಲಂಚ್. ಅದು ಹ್ಯಾಗೆ ಅಷ್ಟು ಊಟ ಮಾಡ್ತಾರೋ? ರಾತ್ರಿ ಮೂರು ಗಂಟೆಗೆ ಮತ್ತೆ ಡಿನ್ನರ್ ಮಾಡಿರುತ್ತಾರೆ. ನೋಡಿ, ಅವರು ಯಾರು ಕೂಡ ಎಕ್ಸರ್‌ಸೈಜ್ ಮಾಡಲ್ಲ. ಆದರೂ ಅವರೆಲ್ಲ ಆರೋಗ್ಯವಾಗಿ ಇರುತ್ತಾರೆ. ಒಟ್ಟಿನಲ್ಲಿ ಅವರ ಜನ್ಮವೇ ಬೇರೆ ರೀತಿಯದು' ಎಂದು ಅಭಿಪ್ರಾಯಪಡುತ್ತಾರೆ. ಇಂತಹ 'ವಿಶೇಷ ವ್ಯಕ್ತಿತ್ವ' ಇರುವ ರಾಜಕಾರಣಿಗಳ ಡಿನ್ನರ್ ಪಾರ್ಟಿಗಳ ಬಗ್ಗೆ ಸಾಮಾನ್ಯ ವ್ಯಕ್ತಿಗಳಾದ ನಮಗೆ ಏನಾದರೂ ತಿಳಿಯುತ್ತದೆಯೇ? ಹಾಗಾಗಿ, ಅದರ ಬಗ್ಗೆ ಚರ್ಚೆ ನಮಗೆ ಸರಿ ಬರುವುದಿಲ್ಲ ಎನಿಸುತ್ತದೆ!

ಜೆ.ಬಿ.ಮಂಜುನಾಥ, ಪಾಂಡವಪುರ

ಮಕ್ಕಳ ಮುಂದೆ ಹಿರಿಯರ ವರ್ತನೆ ಸೂಕ್ಷ್ಮವಾಗಿರಲಿ

ದೇಶದ ವಿವಿಧೆಡೆ ಬಾಲಕರು ಆತ್ಮಹತ್ಯೆ ಮಾಡಿಕೊಂಡಿರುವ ಸುದ್ದಿಗಳನ್ನು ಇತ್ತೀಚೆಗೆ ಪತ್ರಿಕೆಯಲ್ಲಿ ಓದಿ ವ್ಯಥೆಯಾಯಿತು. ಆತ್ಮಹತ್ಯೆ ಮಾಡಿಕೊಂಡಿರುವ ಮಕ್ಕಳು ಅನುಕೂಲಸ್ಥ ಕುಟುಂಬದಿಂದ ಬಂದವರೇ ಆಗಿದ್ದಾರೆ. ಮಕ್ಕಳ ಅನುಕೂಲಕ್ಕಾಗಿ ಒದಗಿಸುವ ಸೌಕರ್ಯಗಳು ಅವರಿಗೆ ಜೀವನದ ಪಾಠವನ್ನೇ ಕಲಿಸದೆ, ಅವರು ದಾರಿತಪ್ಪಲು ಕೊಡುಗೆ ನೀಡುವಂತಿದ್ದರೆ ಅದು ವಿಪರ್ಯಾಸವೇ ಸರಿ. ಉತ್ತರಪ್ರದೇಶದ ಪ್ರಕರಣವೊಂದರಲ್ಲಿ, ಬಾಲಕನೊಬ್ಬ ಪಿಸ್ತೂಲಿನಿಂದ ಗುಂಡಿಕ್ಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಆತನಿಗೆ ಪಿಸ್ತೂಲು ಸಿಕ್ಕಿದ್ದಾದರೂ ಹೇಗೆ? ಪಿಸ್ತೂಲಿನ ಬಳಕೆಯನ್ನು ಆತ ತಿಳಿದದ್ದಾದರೂ ಹೇಗೆ?

ಮಕ್ಕಳ ಮುಂದೆ ನಮ್ಮ ವರ್ತನೆಗಳು ಎಷ್ಟು ಸೂಕ್ಷ್ಮವಾಗಿ ಇರಬೇಕು ಎನ್ನುವುದಕ್ಕೆ ಈ ಪ್ರಕರಣಗಳೇ ನಿದರ್ಶನ. ಇವು, ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಮನಸ್ಸನ್ನು ಸದೃಢಗೊಳಿಸುವ ಹಾಗೂ ನೈತಿಕ ಶಿಕ್ಷಣ ನೀಡಬೇಕಾದ ಅಗತ್ಯವನ್ನೂ ಎತ್ತಿ ತೋರಿಸುತ್ತವೆ.

ಈರಣ್ಣ ಎನ್.ವಿ., ಶಿರಾ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಒಂದೆಡೆ ಸ್ನೇಹಹಸ್ತ, ಮತ್ತೊಂದೆಡೆ ಸಂಘರ್ಷ

ಕೌಂಟಿ ರಚನೆ ಬಲವಾಗುತ್ತಿದೆಯೇ ಚೀನಾ ಹಿಡಿತ?

ಭಾರತವು ಸಂಬಂಧ ಸುಧಾರಣೆಯ ದಿಸೆಯಲ್ಲಿ ಹಲವು ರೀತಿಯ ಮಾತುಕತೆ, ಒಪ್ಪಂದಕ್ಕೆ ಸಮ್ಮತಿ ಸೂಚಿಸಿದ ನಂತರವೂ ಚೀನಾ ಅದನ್ನು ಉಲ್ಲಂಘಿಸುತ್ತಲೇ ಬರುತ್ತಿದೆ. ಏಕಪಕ್ಷೀಯವಾಗಿ ಗಡಿಯಲ್ಲಿ ಸೇನೆ ನಿಯೋಜಿಸುವುದು ಮತ್ತು ವಿವಾದಾತ್ಮಕ ಪ್ರದೇಶದಲ್ಲಿ ಹಲವು ರೀತಿಯ ಯೋಜನೆಗಳನ್ನು ಕೈಗೆತ್ತಿಕೊಳ್ಳುವಂತಹ ನಡೆಗಳಿಗೆ ಮುಂದಾಗುತ್ತಿದೆ. ಇದೀಗ ಚೀನಾವು ಲಡಾಖ್‌ನ ವಿವಾದಿತ ಅಕ್ಸಾಯ್ ಚಿನ್ ಪ್ರದೇಶವನ್ನು ಒಳಗೊಂಡಂತೆ ಎರಡು ಕೌಂಟಿಗಳನ್ನು ರಚಿಸಿದೆ. ಇದನ್ನು ಭಾರತ ವಿರೋಧಿಸಿದೆ. ವಿವಾದಿತ ಪ್ರದೇಶದ ಮೇಲೆ ತನ್ನ ಆಡಳಿತಾತ್ಮಕ ಹಿಡಿತ ಬಲಪಡಿಸಲು ಚೀನಾ ಕೌಂಟಿಗಳನ್ನು ರಚಿಸಿದೆ ಎನ್ನಲಾಗುತ್ತಿದೆ

ಪ್ರಜಾವಾಣಿ ವಾರ್ತೆ

ಭಾರತ ಮತ್ತು ಚೀನಾ ನಡುವಿನ ದ್ವಿಪಕ್ಷೀಯ ಸಂಬಂಧ ಸುಧಾರಣೆಯ ದಿಸೆಯಲ್ಲಿ 2024ರ ಡಿಸೆಂಬರ್ 18ರಂದು ಚೀನಾದಲ್ಲಿ 23ನೇ ಮಾತುಕತೆ ನಡೆದಿತ್ತು. 2020ರ ಗಾಲ್ವನ್ ಕಣಿವೆಯ ಸಂಘರ್ಷದ ನಂತರ ನಡೆದ ಮೊದಲ ಸಭೆ ಅದು. ಭಾರತದ ಪರವಾಗಿ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೋಭಾಲ್ ಮತ್ತು ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಭಾಗವಹಿಸಿದ್ದರು. ಭಾರತ–ಚೀನಾ ದ್ವಿಪಕ್ಷೀಯ ಸಂಬಂಧ ಉತ್ತಮಪಡಿಸಿಕೊಳ್ಳಲು ಪ್ರಯತ್ನಿಸುವುದು ಮತ್ತು ಗಡಿಯಲ್ಲಿ ಶಾಂತಿ ಮತ್ತು ಸೌಹಾರ್ದವನ್ನು ಕಾಪಾಡಿಕೊಳ್ಳುವುದು ಮುಖ್ಯ ಎಂದು ಸಭೆಯಲ್ಲಿ ನಿರ್ಣಯಿಸಲಾಗಿತ್ತು.

ಆದರೆ, ಇದಾದ 10 ದಿನಗಳ ಬಳಿಕ ಸಭೆಯ ನಿರ್ಣಯಕ್ಕೆ ವಿರುದ್ಧವಾದ ಸುದ್ದಿಯೊಂದನ್ನು ಚೀನಾದ ಸರ್ಕಾರಿ ಸ್ವಾಮ್ಯದ ಕ್ಸಿನ್‌ಹುವಾ ಸುದ್ದಿ ಸಂಸ್ಥೆ ವರದಿ ಮಾಡಿದೆ. ವಾಯವ್ಯ ಚೀನಾದ ಕ್ಸಿನ್‌ಜಿಯಾಂಗ್ ಉಯ್ಗುರ್ ಸ್ವಾಯತ್ತ ಪ್ರದೇಶದ ಸ್ಥಳೀಯ ಸರ್ಕಾರವು ಎರಡು ಹೊಸ ಕೌಂಟಿಗಳನ್ನು ರಚಿಸಿರುವುದಾಗಿಯೂ, 'ಹೆಯಾನ್' ಮತ್ತು 'ಹೆಕಾಂಗ್' ಹೆಸರಿನ ಅವುಗಳನ್ನು ಚೀನಾದ ಕಮ್ಯುನಿಸ್ಟ್ ಪಾರ್ಟಿ ಮತ್ತು ಸ್ಟೇಟ್ ಕೌನ್ಸಿಲ್ ಅನುಮೋದಿಸಿವೆ ಎಂದೂ ವರದಿ ತಿಳಿಸಿದೆ.

ಹೋಟಾನ್ ಪ್ರಾಂತ್ಯದಲ್ಲಿ ಚೀನಾ ಈಗಾಗಲೇ ಏಳು ಕೌಂಟಿಗಳನ್ನು ರಚಿಸಿದೆ. ಅವುಗಳ ಜತೆಗೆ ಈಗ ಎರಡು ಹೊಸ ಕೌಂಟಿಗಳು ಸೇರ್ಪಡೆಗೊಂಡಿವೆ. ಚೀನಾ ತನ್ನ ನೆಲದಲ್ಲಿ ಕೌಂಟಿಗಳನ್ನು ನಿರ್ಮಿಸಿದ್ದರೆ ಯಾರೂ ತಕರಾರು ಮಾಡುತ್ತಿರಲಿಲ್ಲ. ಆದರೆ, ಅಕ್ಸಾಯ್ ಚಿನ್‌ನಲ್ಲಿ ಚೀನಾ ಅಕ್ರಮವಾಗಿ ವಶಪಡಿಸಿಕೊಂಡಿದೆ ಎಂದು ಭಾರತ ಪ್ರತಿಪಾದಿಸುತ್ತಿರುವ ಪ್ರದೇಶದ ಸುಮಾರು 38 ಸಾವಿರ ಚದರ ಕಿ.ಮೀ. ಜಾಗವನ್ನು ಹೆಯಾನ್ ಕೌಂಟಿ ಒಳಗೊಂಡಿದೆ. ವಿವಾದಿತ ಅಕ್ಸಾಯ್ ಚಿನ್ ಪ್ರದೇಶದಲ್ಲಿ ಚೀನಾ ಹಲವು ಬದಲಾವಣೆಗಳನ್ನು ಮಾಡುತ್ತಿದ್ದು, ಅದರ ಮೇಲಿನ ತನ್ನ ಹಿಡಿತವನ್ನು ಬಿಗಿಗೊಳಿಸುತ್ತಿದೆ ಎನ್ನುವ ವಿಶ್ಲೇಷಣೆ ಕೇಳಿಬಂದಿದೆ.

ಚೀನಾ ಹೀಗೆ ಮಾಡುತ್ತಿರುವುದು ಇದೇ ಮೊದಲೇನಲ್ಲ. 1993 ಮತ್ತು 1996ರ ಒಪ್ಪಂದಗಳ ನಂತರ, ವಿವಾದಿತ ಪ್ರದೇಶಗಳಲ್ಲಿ ಗಸ್ತನ್ನು ತೀವ್ರಗೊಳಿಸಿದ್ದಷ್ಟೆ ಅಲ್ಲದೇ, ಹೆಚ್ಚು ಕಾಲ ಸೇನೆಯನ್ನು ಅಲ್ಲಿ ನಿಯೋಜಿಸಿತ್ತು. 2005ರ ಒಪ್ಪಂದ ಏರ್ಪಟ್ಟ ನಂತರ, ಇಡೀ ಅರುಣಾಚಲ ಪ್ರದೇಶವೇ ತನ್ನದೆಂದು ಚೀನಾ ಪ್ರತಿಪಾದಿಸತೊಡಗಿತು. 2014ರಲ್ಲಿ ನರೇಂದ್ರ ಮೋದಿ–ಷಿ ಜಿನ್‌ಪಿಂಗ್ ಭೇಟಿ ಮಾಡಿ ಮಾತುಕತೆ ನಡೆಸಿದ ನಂತರ ಡೋಕ್ಲಾಮ್ ಅನ್ನು ಆಕ್ರಮಿಸಿಕೊಳ್ಳಲು ಅದು ಪ್ರಯತ್ನಿಸಿತು. ಅವರು 2019ರಲ್ಲಿ ಮತ್ತೆ ಮಹಾಬಲಿಪುರದಲ್ಲಿ ಭೇಟಿ ಮಾಡಿ ಮಾತುಕತೆ ನಡೆಸಿದ ನಂತರ ಗಾಲ್ವನ್ ಕಣಿವೆಯ ಸಂಘರ್ಷ ತಲೆದೋರಿತು.

2020ರಲ್ಲಿ ಗಾಲ್ವನ್, ಪ್ಯಾಂಗಾಂಗ್ ಸರೋವರದ ಬಳಿ ಭಾರತ–ಚೀನಾ ಸೈನಿಕರ ನಡುವೆ ಸಂಘರ್ಷ ನಡೆದಿತ್ತು. ಅದರ ನಂತರ ಎರಡೂ ದೇಶಗಳ ನಡುವಿನ ಸಂಬಂಧ ಬಿಗಡಾಯಿಸಿತ್ತು. ನಂತರ ಹಲವು ಸುತ್ತಿನ ಮಾತುಕತೆಗಳು ನಡೆದು ಗಡಿಯಲ್ಲಿ ನಿಯೋಜಿಸಿದ್ದ ಸೈನ್ಯವನ್ನು ವಾಪಸ್ ಕರೆಸಿಕೊಳ್ಳಲಾಗಿತ್ತಾದರೂ, ಬಫರ್ ವಲಯದ ಹೆಸರಿನಲ್ಲಿ ಭಾರತವು ತನ್ನ ಭೂಪ್ರದೇಶದಲ್ಲೇ ಗಸ್ತು ತಿರುಗದಂತೆ ಆಗಿತ್ತು. ಅದರ ನಂತರ, 2024ರ ಅಕ್ಟೋಬರ್ 23ರಂದು ರಷ್ಯಾದಲ್ಲಿ ನಡೆದಿದ್ದ ಬ್ರಿಕ್ಸ್ ಸಮಾವೇಶದಲ್ಲಿಯೂ ಮೋದಿ ಮತ್ತು ಜಿನ್‌ಪಿಂಗ್ ದ್ವಿಪಕ್ಷೀಯ ಸಂಬಂಧ ಸುಧಾರಣೆಯ ಬಗ್ಗೆ ಮಾತುಕತೆ ನಡೆಸಿದ್ದರು. ಆ ನಂತರ, ಡೆಮ್‌ಚೋಕ್ ಮತ್ತು ಡೆಪ್ಸಾಂಗ್ ಪ್ರದೇಶದಲ್ಲಿ ನಾಲ್ಕೂವರೆ ವರ್ಷಗಳಿಂದಲೂ ಬಗೆಹರಿಯದಿದ್ದ ಸೇನಾ ಬಿಕ್ಕಟ್ಟು ಅಂತ್ಯಗೊಳಿಸುವ ನಿಟ್ಟಿನಲ್ಲಿ ಉಭಯ ರಾಷ್ಟ್ರಗಳು ಒಪ್ಪಂದಕ್ಕೆ ಬಂದಿದ್ದವು.

ಲಡಾಖ್ ಮೇಲೆಯೂ ಕಣ್ಣು

ಕೌಂಟಿ ರಚನೆಯನ್ನು ವಿರೋಧಿಸಿ ಭಾರತವು ರಾಜತಾಂತ್ರಿಕ ವಿಧಾನದಲ್ಲಿ ದಾಖಲಿಸಿರುವ ಪ್ರತಿಭಟನೆ ಬಗ್ಗೆ ಚೀನಾ ವಾರ ಕಳೆದರೂ ಪ್ರತಿಕ್ರಿಯಿಸಿಲ್ಲ.

2019ರಲ್ಲಿ ಭಾರತವು ಲಡಾಖ್ ಅನ್ನು ಕೇಂದ್ರಾಡಳಿತ ಪ್ರದೇಶ ಎಂದು ಘೋಷಿಸಿದ್ದಕ್ಕೆ ಚೀನಾ ತೀವ್ರವಾಗಿ ಆಕ್ಷೇಪಿಸಿತ್ತು. ಕಳೆದ ವರ್ಷದ ಆಗಸ್ಟ್‌ನಲ್ಲಿ ಭಾರತವು ಲಡಾಖ್, ಕಾರ್ಗಿಲ್ ಮತ್ತು ಲೇಹ್‌ಗಳನ್ನು ವಿಭಜಿಸಿ ಐದು ಹೊಸ ಜಿಲ್ಲೆಗಳನ್ನು ರಚಿಸಿತ್ತು. ಇದು ಕೂಡ ಚೀನಾದ ಅಸಮಾಧಾನಕ್ಕೆ ಕಾರಣವಾಗಿತ್ತು.

1892ರಿಂದ ಚೀನಾವು ಅಕ್ಸಾಯ್ ಚಿನ್ ಪ್ರದೇಶದಲ್ಲಿ ಅತಿಕ್ರಮಣ ನಡೆಸುತ್ತಾ ಬಂದಿದೆ. 1962ರಲ್ಲಿ ನಡೆದ ಯುದ್ಧದ ಬಳಿಕ ಚೀನಾ ಅಕ್ಸಾಯ್ ಚಿನ್ ಅನ್ನು ತನ್ನ ನಿಯಂತ್ರಣದಲ್ಲಿ ಇಟ್ಟುಕೊಂಡಿದೆ. ಈಗಲೂ ಚೀನಾ ಲಡಾಖ್‌ನಲ್ಲಿ ಅತಿಕ್ರಮಣ ನಡೆಸುತ್ತಿದೆ ಎಂಬ ಆರೋಪ ಇದೆ. ಹೋರಾಟಗಾರ ಸೋನಮ್ ವಾಂಗ್ಚುಕ್ ಅವರು ಇದರ ಬಗ್ಗೆ ಪ್ರಸ್ತಾಪಿಸುತ್ತಲೇ ಇದ್ದಾರೆ. ಕಳೆದ ವರ್ಷ ಅವರು ದೊಡ್ಡ ಪ್ರತಿಭಟನೆಯನ್ನೂ ನಡೆಸಿದ್ದರು.

ಕೌಂಟಿ ಎಂದರೇನು?

ಚೀನಾದಲ್ಲಿ ಕೌಂಟಿ ಎಂದರೆ ಮೂರನೇ ಹಂತದ ಆಡಳಿತ ಘಟಕ. ಚೀನಾದ ಆಡಳಿತ ವ್ಯವಸ್ಥೆಯಲ್ಲಿ ಮೊದಲು ಪ್ರಾಂತ್ಯಗಳು (provinces)/ ಸ್ವಾಯತ್ತ ವಲಯಗಳು (autonomous regions), ನಂತರ ಆಡಳಿತ ಪ್ರಾಂತ್ಯಗಳು (prefecture) ಬರುತ್ತವೆ. ಆಡಳಿತ ಪ್ರಾಂತ್ಯಗಳನ್ನು ವಿಭಾಗಿಸಿ ಕೌಂಟಿಗಳನ್ನು ರಚಿಸಲಾಗುತ್ತದೆ.

ಚೀನಾದಲ್ಲಿ 23 ಪ್ರಾಂತ್ಯಗಳು, ಐದು ಸ್ವಾಯತ್ತ ವಲಯಗಳು, ಎರಡು ವಿಶೇಷ ಆಡಳಿತಾತ್ಮಕ ವಲಯಗಳು ಇವೆ. ರಾಜಧಾನಿ ಬೀಜಿಂಗ್, ಶಾಂಘೈ ಸೇರಿದಂತೆ ನಾಲ್ಕು ಮಹಾನಗರಗಳ ಆಡಳಿತ ಸರ್ಕಾರದ ನೇರ ಸುಪರ್ದಿಗೆ ಬರುತ್ತದೆ. ಚೀನಾದಲ್ಲಿ 1,350ಕ್ಕೂ ಹೆಚ್ಚು ಕೌಂಟಿಗಳು ಇವೆ ಎಂದು ಹೇಳಲಾಗಿದೆ. ಕೌಂಟಿ ಮಟ್ಟದ ಆಡಳಿತದಲ್ಲಿ ಕೆಲವು ಕಡೆಗಳಲ್ಲಿ ಕೌಂಟಿಗಳು, ಜಿಲ್ಲೆ, ಕೌಂಟಿ ಮಟ್ಟದ ನಗರಗಳು, ಸ್ವಾಯತ್ತ ಕೌಂಟಿಗಳು ಬರುತ್ತವೆ. ಬಹುಪಾಲು ಕೌಂಟಿಗಳು ಚೀನಾದ ಗ್ರಾಮೀಣ ಭಾಗದ ಆಡಳಿತವನ್ನು ನಿರ್ವಹಿಸುತ್ತವೆ.

ಲಡಾಖ್‌ಗೆ ಹೊಂದಿಕೊಂಡಂತೆ ಈಗ ರಚಿಸಲಾಗಿರುವ ಹೆಯಾನ್, ಹೆಕಾಂಗ್ ಕೌಂಟಿಗಳು ಕ್ಸಿನ್‌ಜಿಯಾಂಗ್ ಉಯ್ಗುರ್ ಸ್ವಾಯತ್ತ ಪ್ರದೇಶದ ವ್ಯಾಪ್ತಿಯಲ್ಲಿರುವ ಹೋಟಾನ್ ಆಡಳಿತ ಪ್ರಾಂತ್ಯದ ವ್ಯಾಪ್ತಿಯಲ್ಲಿ ಬರುತ್ತವೆ. ಹೋಟಾನ್ ಪ್ರಾಂತ್ಯದ ಹೋಟಾನ್ ಕೌಂಟಿಯ ಸ್ವಲ್ಪ ಭಾಗ ಮತ್ತು ಅಕ್ಸಾಯ್ ಚಿನ್ ಪ್ರದೇಶದ ಬಹುಪಾಲು ಭೂಪ್ರದೇಶ ಸೇರಿಸಿ ಹೆಯಾನ್ ಕೌಂಟಿಯನ್ನು ರಚಿಸಲಾಗಿದೆ ಎಂದು ಹೇಳಲಾಗಿದ್ದು, ಹಾಂಗ್‌ಲಿಯು ಪ್ರದೇಶವನ್ನು ಇದರ ಆಡಳಿತ ಕೇಂದ್ರ ಅಥವಾ ರಾಜಧಾನಿ ಎಂದು ಗುರುತಿಸಲಾಗಿದೆ.

ಹೋಟಾನ್ ಆಡಳಿತ ಪ್ರಾಂತ್ಯದ ಮತ್ತೊಂದು ಪಿಶನ್ ಕೌಂಟಿಯನ್ನು ವಿಭಜಿಸಿ ಹೆಕಾಂಗ್ ಕೌಂಟಿಯನ್ನು ರಚಿಸಲಾಗಿದೆ ಎಂದು ಹೇಳಲಾಗಿದೆ. ಈ ಪ್ರದೇಶವೂ ಭಾರತದ ಗಡಿಗೆ ಸಮೀಪದಲ್ಲಿದ್ದು ಕ್ಸೆಯಿಡುಲಾ ಪ್ರದೇಶವನ್ನು ಈ ಕೌಂಟಿಯ ಆಡಳಿತ ಕೇಂದ್ರ ಎಂದು ಘೋಷಿಸಲಾಗಿದೆ.

ಸಂಘರ್ಷ ಕೊನೆಯಾಗಿ ಸ್ನೇಹ ಸಂಬಂಧದ ಪರ್ವ ಆರಂಭವಾಯಿತು ಎಂದುಕೊಳ್ಳುತ್ತಿರುವಾಗಲೇ ಚೀನಾದ ಕೌಂಟಿ ರಚನೆಯ ಸುದ್ದಿ ಬಂದಿದೆ.

ಚೀನಾ, ಒಂದು ಕಡೆ ಬ್ರಹ್ಮಪುತ್ರ ನದಿಗೆ ಜಗತ್ತಿನಲ್ಲಿಯೇ ಅತಿ ದೊಡ್ಡ ಅಣೆಕಟ್ಟು ಕಟ್ಟಲು ಹೊರಟಿದೆ. ಇನ್ನೊಂದು ಕಡೆ ಲಡಾಖ್‌ನಲ್ಲಿ ಎರಡು ಕೌಂಟಿಗಳನ್ನು ನಿರ್ಮಿಸಿ, ಭಾರತಕ್ಕೆ ಸೇರಿದ ಭೂಪ್ರದೇಶವನ್ನೂ ಅದರ ವ್ಯಾಪ್ತಿಯಲ್ಲಿ ಸೇರಿಸಿದೆ. ಭೂಪ್ರದೇಶ, ನೀರು ಹೀಗೆ ಹಲವು ವಿಧದಲ್ಲಿ ಭಾರತದ ಪಾಲನ್ನು ಕಸಿಯುವ ಕೆಲಸವನ್ನು ಮಾಡುತ್ತಿದ್ದು, ಆಕ್ರಮಣಕಾರಿ ವರ್ತನೆಯನ್ನು ಮುಂದುವರಿಸುತ್ತಿದೆ.

ಕೌಂಟಿ ರಚನೆಯನ್ನು ಭಾರತವು ವಿರೋಧಿಸಿದೆ. 'ನಮ್ಮ ಭೂಭಾಗವನ್ನು ಆಕ್ರಮಿಸಿಕೊಳ್ಳುವ ಚೀನಾದ ಕಾನೂನುಬಾಹಿರ ಕ್ರಮವನ್ನು ಭಾರತ ಎಂದಿಗೂ ಒಪ್ಪಿಕೊಂಡಿಲ್ಲ' ಎಂದು ಅದು ಹೇಳಿದೆ. ರಾಜತಾಂತ್ರಿಕವಾಗಿ ತನ್ನ ಪ್ರತಿಭಟನೆಯನ್ನೂ ದಾಖಲಿಸಿದೆ. ಕೇಂದ್ರ ಸರ್ಕಾರವು ಇದನ್ನು ಗಂಭೀರವಾಗಿ ಪರಿಗಣಿಸಿಲ್ಲ, 'ಸೌಮ್ಯ' ಪ್ರತಿಕ್ರಿಯೆ ನೀಡಿದೆ ಎಂದು ವಿರೋಧ ಪಕ್ಷಗಳು ಆರೋಪಿಸಿವೆ. 'ಭಾರತದ ಭೂಭಾಗ ಆಕ್ರಮಿಸಿಕೊಳ್ಳುವುದನ್ನು ಚೀನಾ ಮುಂದುವರಿಸಿದ್ದು, ಪ್ರಧಾನಿ ನರೇಂದ್ರ ಮೋದಿ ಅವರು ಚೀನಾಗೆ ಕ್ಲೀನ್ ಚಿಟ್ ನೀಡುತ್ತಲೇ ಇದ್ದಾರೆ' ಎಂದು ಅವು ಟೀಕಿಸಿವೆ.

ಆಧಾರ: ಪಿಟಿಐ, ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವೆಬ್‌ಸೈಟ್

ಅಕ್ಸಾಯ್ ಚಿನ್ ಮೇಲೆ ಚೀನಾ ಕಣ್ಣೇಕೆ?

ಚೀನಾವು ಭಾರತದ ಗಡಿ ಪ್ರದೇಶದಲ್ಲಿ ವಿಶೇಷವಾಗಿ ಅರುಣಾಚಲ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಲು ಉದ್ದೇಶಿಸಿದೆ. ದಕ್ಷಿಣ ಟಿಬೆಟ್‌ನಲ್ಲಿ ಚಿನ್ನದ ಗಣಿಗಾರಿಕೆಗೆ ಅದು ಸಿದ್ಧತೆಯನ್ನೂ ನಡೆಸಿದೆ. ಲಡಾಖ್‌ಗೆ ಹೊಂದಿಕೊಂಡ ಅಕ್ಸಾಯ್ ಚಿನ್ ಪ್ರದೇಶದಲ್ಲಿ ಸತು, ಸೀಸ ನಿಕ್ಷೇಪಗಳು ಪತ್ತೆಯಾಗಿವೆ. ಈಗ ರಚಿಸಲಾಗಿರುವ ಹೆಯಾನ್ ಕೌಂಟಿಯ ಆಡಳಿತ ಕೇಂದ್ರ ಹಾಂಗ್‌ಲಿಯು ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಲೀಥಿಯಂ, ಬೆರಿಲಿಯಂ ಸೇರಿದಂತೆ ಕೆಲವು ಅಪರೂಪದ ಲೋಹಗಳು, ಖನಿಜ ಸಂಪನ್ಮೂಲಗಳು ಹೇರಳವಾಗಿವೆ ಎಂದೂ ಹೇಳಲಾಗುತ್ತಿದೆ.

ಹಾಂಗ್‌ಲಿಯು ಪ್ರದೇಶದಲ್ಲಿ ಚೀನಾವು ಭಾರಿ ಪ್ರಮಾಣದಲ್ಲಿ ಮೂಲಸೌಕರ್ಯ ಅಭಿವೃದ್ಧಿ ಪಡಿಸುತ್ತಿದ್ದು, ಅಲ್ಲಿ ಗಣಿಗಾರಿಕೆ ನಡೆಸುವ ಇರಾದೆ ಅದಕ್ಕಿದೆ ಎನ್ನಲಾಗುತ್ತಿದೆ. ಅಕ್ಸಾಯ್ ಚಿನ್ ಪ್ರದೇಶದಲ್ಲಿ ಜನ ವಸತಿ ಇಲ್ಲ. ಅದಕ್ಕೆ ಹೊಂದಿಕೊಂಡಂತಿರುವ ಪ್ರದೇಶದಲ್ಲಿ ಗಣಿಗಾರಿಕೆಗೆ ಅವಕಾಶ ನೀಡಿದರೆ ವಲಸೆ ಕಾರ್ಮಿಕರು ಅಕ್ಸಾಯ್ ಚೀನಾ ಪ್ರದೇಶವನ್ನು ಪ್ರವೇಶಿಸುವ ಸಾಧ್ಯತೆ ಇದೆ. ತನ್ನ ಮಹತ್ವಾಕಾಂಕ್ಷೆಯ ಬೆಲ್ಟ್ ಆ್ಯಂಡ್ ರೋಡ್ ಯೋಜನೆಯ ಜಾಲವನ್ನು ಹೆಯಾನ್ ಕೌಂಟಿಯವರೆಗೂ ವಿಸ್ತರಿಸಿ, ಆ ಪ್ರದೇಶದಲ್ಲಿ ಆರ್ಥಿಕ ವಹಿವಾಟು ಹೆಚ್ಚಿಸುವ ಉದ್ದೇಶವೂ ಚೀನಾಕ್ಕೆ ಇರಬಹುದು ಎಂದು ತಜ್ಞರು ವಿಶ್ಲೇಷಿಸುತ್ತಿದ್ದಾರೆ.

ಡಿ.18ರಂದು ಬೀಜಿಂಗ್‌ನಲ್ಲಿ ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೋಭಾಲ್ ಮತ್ತು ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಅವರು ದ್ವಿಪಕ್ಷೀಯ ಮಾತುಕತೆ ನಡೆಸಿದ್ದರು

ಪಿಟಿಐ ಚಿತ್ರ

ಜ.31ರಂದು 'ಗಣ' ತೆರೆಗೆ

ಪ್ರಜ್ವಲ್ ದೇವರಾಜ್

ಪ್ರಜ್ವಲ್ ದೇವರಾಜ್ ಅಭಿನಯದ 'ಗಣ' ಚಿತ್ರಕ್ಕೆ ಕೊನೆಗೂ ಬಿಡುಗಡೆ ಭಾಗ್ಯ ಕೂಡಿಬಂದಿದೆ. ಹರಿಪ್ರಸಾದ್ ಜಕ್ಕ ನಿರ್ದೇಶನದ ಚಿತ್ರ ಜನವರಿ 31ರಂದು ತೆರೆ ಕಾಣುತ್ತಿದೆ.

'ವಿಭಿನ್ನ ಕಂಟೆಂಟ್ ಹೊಂದಿರುವ ಈ ಚಿತ್ರ ಈಗಾಗಲೇ ಟೀಸರ್ ಹಾಗೂ ಹಾಡುಗಳ ಮೂಲಕ ಜನರನ್ನು ತಲುಪುತ್ತಿದೆ. ಆ್ಯಕ್ಷನ್ ಕಥೆಯನ್ನು ಹೊಂದಿರುವ ಚಿತ್ರವಿದು' ಎಂದಿದ್ದಾರೆ ನಿರ್ದೇಶಕರು.

ಚೆರಿ ಕ್ರಿಯೇಷನ್ಸ್ ಲಾಂಛನದಲ್ಲಿ ಪಾರ್ಥು ಬಂಡವಾಳ ಹೂಡಿದ್ದು, ಅನೂಪ್ ಸೀಳಿನ್ ಸಂಗೀತ ನಿರ್ದೇಶನ, ಜೈ ಆನಂದ್ ಛಾಯಾಚಿತ್ರಗ್ರಹಣ, ಹರೀಶ್ ಕೊಮ್ಮೆ ಸಂಕಲನವಿದೆ.

ಯಶಾ ಶಿವಕುಮಾರ್, ವೇದಿಕಾ ಕುಮಾರ್, ಕೃಷಿ ತಾಪಂಡ, ವಿಶಾಲ್ ಹೆಗಡೆ, ರವಿ ಕಾಳೆ, ಸಂಪತ್ ರಾಜ್, ಶಿವರಾಜ್ ಕೆ.ಆರ್ ಪೇಟೆ, ರಮೇಶ್ ಭಟ್ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.

'ಕಣ್ಣಾ ಮುಚ್ಚೆ...' ಟೀಸರ್

ರಾಘವೇಂದ್ರ ರಾಜಕುಮಾರ್ ಪ್ರಮುಖ ಪಾತ್ರದಲ್ಲಿ ನಟಿಸಿರುವ 'ಕಣ್ಣಾ ಮುಚ್ಚೆ ಕಾಡೇ ಗೂಡೇ' ಚಿತ್ರದ ಟೀಸರ್ ಹಾಗೂ 'ನಿನ್ನ ನೋಡಿದಾಗಲೇ' ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟರಾಜ್ ಕೃಷ್ಣೆಗೌಡ ನಿರ್ದೇಶನದ ಚಿತ್ರ ಶೀಘ್ರದಲ್ಲಿ ತೆರೆಗೆ ಬರಲಿದೆ.

ಹಾಡಿಗೆ ಸಂತೋಷ್ ಜೋಶ್ವಾ ಸಂಗೀತ, ಪುನೀತ್ ಆರ್ಯ ಸಾಹಿತ್ಯ, ವಾಸುಕಿ ವೈಭವ್-ಸುರಭಿ ಭಾರದ್ವಾಜ್ ಧ್ವನಿಯಿದೆ. 'ಈಗಾಗಲೇ ತುಳು ಮತ್ತು ಕನ್ನಡ ಚಿತ್ರ ನಿರ್ದೇಶಿಸಿದ್ದು, ಇದು ನನಗೆ ಎರಡನೇ ಅವಕಾಶ. ಈಗಿನ ಟ್ರೆಂಡ್‌ಗೆ ತಕ್ಕಂತೆ ಮರ್ಡರ್ ಮಿಸ್ಟ್ರಿ ಕಥೆಯಿದೆ. ಸಿನಿಮಾವು ಒಂದು ಕೊಲೆಯ ಸುತ್ತ ನಡೆಯುತ್ತದೆ. ಸಸ್ಪೆನ್ಸ್, ಥ್ರಿಲ್ಲರ್ ಜಾನರ್‌ನ ಸಿನಿಮಾ' ಎನ್ನುತ್ತಾರೆ ನಟರಾಜ್.

ಅಥರ್ವಪ್ರಕಾಶ್‌ಗೆ ಪ್ರಾರ್ಥನಾ ಜೋಡಿಯಾಗಿದ್ದಾರೆ. ನಿವೃತ್ತ ವೈದ್ಯರಾಗಿ ರಾಘವೇಂದ್ರ ರಾಜಕುಮಾರ್ ನಟಿಸಿದ್ದಾರೆ. ಜ್ಯೋತಿಷ್ ಶೆಟ್ಟಿ, ದೀಪಕ್ ರೈ, ಅರವಿಂದ ಬೋಳಾರ್ ಮುಂತಾದವರು ಅಭಿನಯಿಸಿದ್ದಾರೆ. ದೀಪಕ್‌ಕುಮಾರ್.ಜೆ.ಕೆ ಛಾಯಾಚಿತ್ರಗ್ರಹಣವಿದೆ. ಮಂಗಳೂರು, ಬೆಂಗಳೂರಿನ ಹಲವೆಡೆ ಚಿತ್ರೀಕರಣಗೊಂಡಿದೆ.

ಪ್ರಾರ್ಥನಾ, ಅಥರ್ವಪ್ರಕಾಶ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಅಮೆರಿಕದ ಲಾಸ್ ಏಂಜಲೀಸ್‌ನಲ್ಲಿ ಅನಾಹುತ ಸೃಷ್ಟಿಸಿರುವ ಕಾಳ್ಗಿಚ್ಚಿಗೆ ಸಂಬಂಧಿಸಿದಂತೆ ವಿಡಿಯೊ ತುಣುಕೊಂದನ್ನು ಎಕ್ಸ್, ಫೇಸ್‌ಬುಕ್‌ನಲ್ಲಿ ಹಲವರು ಹಂಚಿಕೊಳ್ಳುತ್ತಿದ್ದಾರೆ. ರಸ್ತೆಯ ಹಿನ್ನೆಲೆಯಲ್ಲಿ ದೊಡ್ಡ ಬೆಟ್ಟ ಧಗ ಧಗನೆ ಉರಿಯುವ, ಹೊತ್ತಿ ಉರಿಯುತ್ತಿರುವ ಪ್ರದೇಶದ ವೈಮಾನಿಕ ನೋಟದ ದೃಶ್ಯಾವಳಿ ಆ ತುಣುಕಿನಲ್ಲಿದೆ. ಆದರೆ. ಇದು ನೈಜ ವಿಡಿಯೊ ಅಲ್ಲ.

ವಿಡಿಯೊ ತುಣುಕನ್ನು ಇನ್‌ವಿಡ್ ಟೂಲ್ ಸರ್ಚ್‌ನಲ್ಲಿ ಹಾಕಿದಾಗ ಹಲವು ಕೀಫ್ರೇಮ್‌ಗಳು ಕಂಡು ಬಂದವು. ಒಂದು ಫ್ರೇಮ್ ಅನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಿದಾಗ, ಹಲವರು ಇದೇ ವಿಡಿಯೊ ಪೋಸ್ಟ್ ಮಾಡಿರುವುದು ಕಂಡು ಬಂತು. ಈ ವಿಡಿಯೊಕ್ಕೆ ಪ್ರತಿಕ್ರಿಯೆ ನೀಡಿದವರಲ್ಲಿ ಕೆಲವರು, ಇದು ಕೃತಕ ಬುದ್ಧಿಮತ್ತೆಯ ವಿಡಿಯೊ ಆಗಿರಬಹುದು ಎಂದು ಅನುಮಾನ ವ್ಯಕ್ತಪಡಿಸಿದ್ದರು. ಇದರ ಆಧಾರದಲ್ಲಿ, ವಿಡಿಯೊದ ಕೆಲವು ಕೀಫ್ರೇಮ್‌ಗಳನ್ನು ಕೃತಕ ಬುದ್ಧಿಮತ್ತೆಯಿಂದ ತಯಾರಿಸಿದ ಚಿತ್ರ, ವಿಡಿಯೊಗಳನ್ನು ಪತ್ತೆ ಮಾಡುವ ವಾಸಿಟೈ ಟೂಲ್‌ನಲ್ಲಿ ಹಾಕಿದಾಗ, ವಿಡಿಯೊ ತುಣುಕಿನಲ್ಲಿ ಎಐ ತಂತ್ರಜ್ಞಾನದಲ್ಲಿ ಸೃಷ್ಟಿಸಿದ ದೀಪ್‌ಫೇಕ್ ವಿಡಿಯೊ ಕ್ಲಿಪ್‌ಗಳು ಇರುವುದು ದೃಢಪಟ್ಟಿತು. ಇನ್ನುಳಿದ ಕೀಫ್ರೇಮ್‌ಗಳನ್ನು ಮತ್ತೊಂದು ಎಐ ಪತ್ತೆ ಟೂಲ್ ಹೈವ್ ಮಾಡರೇಷನ್‌ನಲ್ಲಿ ಹಾಕಿದಾಗ, ಇದು ನಕಲಿ ವಿಡಿಯೊ ಎಂದು ತೋರಿಸಿತು. ಹಾಗಾಗಿ, ಕಾಳ್ಗಿಚ್ಚಿಗೆ ಸಂಬಂಧಿಸಿದ ವಿಡಿಯೊ ವಾಸ್ತವದ್ದಲ್ಲ, ಕೃತಕ ಬುದ್ಧಿಮತ್ತೆಯಿಂದ ಸೃಷ್ಟಿಸಿದ ವಿಡಿಯೊ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಜನವರಿ 15, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪೌಷ ಕೃಷ್ಣ ದ್ವಿತೀಯ ಗಂ. 27-24 ನಕ್ಷತ್ರ: ಪುಷ್ಯ ಗಂ. 10-28 ಯೋಗ: ಪ್ರೀತಿ ಗಂ. 25-47 ಕರಣ: ತೈತಿಲ ಗಂ. 15-18, ಮಕರ ಮಾಸದ 01 ನೇ ದಿನ, ಮಳೆನಕ್ಷತ್ರ: ಉತ್ತರಾಷಾಢ 2.

ರಾಹುಕಾಲ: ಮಧ್ಯಾಹ್ನ 12-00 – 01-30

ಸೂರ್ಯೋದಯ : 07-01 ಸೂರ್ಯಾಸ್ತ : 06-19

ಮುಸ್ಲಿಂ ದಿನಾಂಕ : 14 ರಜಬ್

ಅದೃಷ್ಟ ಸಂಖ್ಯೆ : 2, 11

ಮೇಷ: ಆಫೀಸಿನಲ್ಲಿ ಸ್ವಪ್ರಯತ್ನದ ಜತೆಯಲ್ಲಿ ಅಧಿಕಾರಿಗಳ ಬೆಂಬಲದಿಂದ ಬಡ್ತಿ ಹೊಂದುವ ಸಂಭವವಿದೆ. ಹಣಕಾಸಿನ ಪರಿಸ್ಥಿತಿ ಉತ್ತಮ ಪಡಿಸಿಕೊಳ್ಳುವ ಸನ್ನಿವೇಶಗಳು ನಡೆಯುವುದು. ನೂತನ ವಾಹನ ಕೊಳ್ಳುವ ಯೋಗವಿದೆ.

ವೃಷಭ: ಮರಗೆಲಸ ಮಾಡುವವರಿಗೆ ಹೆಚ್ಚಿನ ಅವಕಾಶಗಳು ಬಂದರೂ ಕೆಲಸಕ್ಕೆ ಸೋಮಾರಿತನ ಅಡ್ಡಬರುವುದು. ಹೊಸ ಕೆಲಸಗಳ ಆರಂಭಕ್ಕೆ ಸೂಕ್ತ ಸಮಯವಲ್ಲ. ಯಂತ್ರೋಪಕರಣಗಳ ಮಾರಾಟದಿಂದ ಲಾಭವಿರುವುದು.

ಮಿಥುನ: ಮೆಕ್ಯಾನಿಕಲ್ ಎಂಜಿನಿಯರ್‌ಗಳಿಗೆ ಉದ್ಯೋಗದಲ್ಲಿ ಉತ್ತಮ ಬದಲಾವಣೆ ಸಾಧ್ಯತೆ. ಸಿಹಿ ಪದಾರ್ಥಗಳ ಮಾರಾಟಗಾರರಿಗೆ ಉತ್ತಮ ಆದಾಯ ಇರಲಿದೆ. ಪ್ರಯಾಣದಲ್ಲಿ, ವಾಹನ ಚಾಲನೆಯಲ್ಲಿ ಗಮನವಿರಲಿ.

ಕರ್ಕಾಟಕ: ರಾಜಕೀಯ ವ್ಯಕ್ತಿಗಳಿಗೆ ನಿಕಟವರ್ತಿಗಳ ಪ್ರೋತ್ಸಾಹದಿಂದ ಸಾಮಾಜಿಕ ಬದುಕು ಸುಗಮವಾಗಲಿದೆ. ವ್ಯಾಪಾರದಲ್ಲಿ ಲಾಭಾಂಶದ ಇಳಿಕೆಯಾಗದಂತೆ ಎಚ್ಚರಿಕೆ ವಹಿಸುವಿರಿ. ಹಾಲು ಮಾರಾಟಗಾರರಿಗೆ ಲಾಭ.

ಸಿಂಹ: ಅನಾರೋಗ್ಯದಿಂದ ಹೊರಬರಲು ಚಿಕಿತ್ಸೆಯ ಜೊತೆಯಲ್ಲಿ ನವಗ್ರಹ ಶಾಂತಿಯಂಥ ಧಾರ್ಮಿಕ ಮಾರ್ಗ ಅನುಸರಿಸಿ. ಪ್ರಿಂಟಿಂಗ್ ಪ್ರೆಸ್‌ನವರಿಗೆ ಅವಕಾಶಗಳಿಂದ ಲಾಭವಿರುವುದು.

ಕನ್ಯಾ: ಪದವಿ ವಿದ್ಯಾರ್ಥಿಗಳಿಗೆ ಉತ್ತಮ ಯಶಸ್ಸು ದೊರೆತು ಆನಂದವಿರುವುದು. ವಸ್ತ್ರ ವ್ಯಾಪಾರಿಗಳಿಗೆ ಈ ದಿನ ಅಧಿಕ ವ್ಯಾಪಾರ ಇರಲಿದೆ. ಮಕ್ಕಳ ಶೈಕ್ಷಣಿಕ ವಿಚಾರದಲ್ಲಿ ಹೆಚ್ಚಿನ ಮುತುವರ್ಜಿ ತೋರುವುದು ಉತ್ತಮ.

ತುಲಾ: ಅಧಿಕಾರಸ್ಥರು ಹಾಗೂ ಹಿರಿಯ ನೌಕರರ ಜತೆ ಸ್ನೇಹ ಸಂಬಂಧ ಹೆಚ್ಚಾಗಿ ವೃತ್ತಿಯಲ್ಲಿ ನವ ಉಲ್ಲಾಸ ಮೂಡಲಿದೆ. ವ್ಯವಸಾಯಗಾರರಿಗೆ ಕೆಲಸ ಪ್ರಾರಂಭವಾಗುವುದು. ಮಾನಸಿಕ ಸ್ಥೈರ್ಯ ಹೆಚ್ಚಲಿದೆ.

ವೃಶ್ಚಿಕ: ಸಂಬಂಧಗಳಿಗೆ ಪ್ರಾಮುಖ್ಯತೆ ನೀಡಿದಲ್ಲಿ ಹೊಸ ಬದಲಾವಣೆಯ ಸೂಚನೆಯು ಸಿಗಲಿದೆ. ವ್ಯಾಪಾರ ವ್ಯವಹಾರಗಳಲ್ಲಿ ಆರೋಗ್ಯಕರ ಪೈಪೋಟಿ ನಡೆಸುವ ಬಗ್ಗೆ ತೀರ್ಮಾನಿಸಿ. ಮನದ ಗೊಂದಲ ದೂರಾಗಲಿದೆ.

ಧನು: ತಾಂತ್ರಿಕ ಕ್ಷೇತ್ರದಲ್ಲಿ ಹೆಚ್ಚಿನ ಪರಿಣತಿ ಹೊಂದಿರುವವರಿಗೆ ಉತ್ತಮ ಅವಕಾಶಗಳ ಜತೆಗೆ ಸ್ವಂತ ಉದ್ಯಮ ಸ್ಥಾಪಿಸುವ ಚೈತನ್ಯ ಮೂಡಿ ಬರಲಿದೆ. ವ್ಯಾಪಾರಿಗಳಿಗೆ ಉತ್ತಮ ಲಾಭವಿರುವುದು.

ಮಕರ: ದೇವರ ಆಶೀರ್ವಾದದಿಂದ ಆದಾಯ ಉತ್ತಮವಾಗಿರುವುದು. ಸೋಮಾರಿತನವು ಶತ್ರುವಾಗಿ ಪರಿಣಮಿಸಲಿದೆ. ಹಣ್ಣುಹೂ ವ್ಯಾಪಾರಸ್ಥರಿಗೆ ವಿಶೇಷ ಲಾಭ ಇರುವುದು.

ಕುಂಭ: ಇಷ್ಟಾರ್ಥ ನೆರವೇರುವ ಸಲುವಾಗಿ ಹೇಳಿಕೊಂಡಿರುವ ಹರಕೆಯನ್ನು ತೀರಿಸುವ ಬಗ್ಗೆ ಗಮನವಿರಲಿ. ನೂತನ ವಾಹನ ಖರೀದಿಸಬೇಕೆಂಬ ಕನಸು ನನಸಾಗುವುದು. ಆರೋಗ್ಯವನ್ನು ನಿರ್ಲಕ್ಷಿಸದಿರಿ.

ಮೀನ: ಮನೆಯಲ್ಲಿ ಮಂಗಳ ಕಾರ್ಯವನ್ನು ನಡೆಸಲು ತೀರ್ಮಾನಿಸಿ. ಅದಕ್ಕೆ ಬೇಕಾದ ಜನಬಲ ಮತ್ತು ಆರ್ಥಿಕ ಬೆಂಬಲವು ಬಂಧುಗಳಿಂದ ತಾನಾಗಿಯೇ ಒದಗಿಬರಲಿದೆ. ತೈಲ ಉತ್ಪನ್ನ ವಸ್ತುಗಳ ಮಾರಾಟದಿಂದ ಲಾಭ ಪಡೆಯುವಿರಿ.

ಗ್ರಾಮೋದಯವೇ ರಾಷ್ಟ್ರೋದಯ!

ನುಡಿ ಬೆಳಗು 110

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

ನಮ್ಮ ಹಿರಿಯರು ಗ್ರಾಮಗಳ ಉದ್ಧಾರಕ್ಕೆ ಬಹಳ ಗಮನ ನೀಡಿದ್ದರು. ಅಬ್ದುಲ್ ಕಲಾಂ ಅವರೂ ಒಂದು ಕಲ್ಪನೆಯನ್ನು ನೀಡಿದರು. ಬೇರೆ ಬೇರೆ ವೇದಿಕೆಗಳಲ್ಲಿ ಚರ್ಚೆ ಮಾಡಿ, ಸಂಸತ್ತು ಮತ್ತು ವಿಧಾನಸಭೆಗಳಲ್ಲಿಯೂ ವಿಚಾರ ವಿಮರ್ಶೆ ನಡೆಸಿ ಅವರು 'ಪುರಾ' ಅಂತ ಒಂದು ಕಲ್ಪನೆಯನ್ನು ದೇಶದ ಮುಂದೆ ಇಟ್ಟರು. ಪುರಾ ಅಂದರೆ ಪಟ್ಟಣಗಳಿಗೆ ನೀಡುವ ಎಲ್ಲ ಮೂಲಭೂತ ಸೌಲಭ್ಯಗಳನ್ನು ಹಳ್ಳಿಗಳಿಗೆ ನೀಡಬೇಕು ಎನ್ನುವುದಾಗಿತ್ತು. ಅದರಿಂದ ಹಳ್ಳಿಗಳು ಉದ್ಧಾರ ಆಗ್ತವೆ.

ಗಾಂಧೀಜಿ ಅವರಿಗೆ ಯಾರೋ ಕೇಳಿದರಂತೆ 'ಭಾರತ ಎಲ್ಲಿದೆ? ಅದನ್ನು ನಾನು ನೋಡಬೇಕು' ಅಂತ. ಅದಕ್ಕೆ ಗಾಂಧೀಜಿ, 'ಭಾರತ ಎನ್ನುವುದು ಕುತುಬ್ ಮಿನಾರ್‌ನಲ್ಲಿ ಇಲ್ಲ. ಭಾರತ ಖಜುರಾಹೋದಲ್ಲಿ ಇಲ್ಲ. ನೀವು ಭಾರತ ನೋಡಬೇಕು ಎಂದರೆ ಹಳ್ಳಿಗಳಿಗೆ ಹೋಗಿ. ಹಳ್ಳಿಗಳ ಜನರ ಹೃದಯದಲ್ಲಿ ಭಾರತದ ದರ್ಶನ ಆಗ್ತದೆ' ಎಂದಿದ್ದರು. ನಿಜವಾದ ಭಾರತ ನಿಂತಿರುವುದು ಹಳ್ಳಿಗಳ ಮೇಲೆ. ಭಾರತದಲ್ಲಿ 5.96 ಲಕ್ಷ ಹಳ್ಳಿಗಳಿವೆ. ನಾವು ಈಗ ಸ್ಮಾರ್ಟ್ ಸಿಟಿಗಳ ಬಗ್ಗೆ ಮಾತನಾಡುತ್ತೇವೆ. ಸಿಟಿಗಳು ಸ್ಮಾರ್ಟ್ ಆದರೆ ಭಾರತ ವಿಕಾಸ ಆಗೋದಿಲ್ಲ. ಹಳ್ಳಿಗಳು ಸ್ಮಾರ್ಟ್ ಆಗದೆ ಈ ದೇಶ ವಿಕಾಸ ಆಗೋದಿಲ್ಲ. ಮೊಟ್ಟ ಮೊದಲನೆಯದಾಗಿ ನಮ್ಮ ಹಳ್ಳಿಗಳ ಬಗ್ಗೆ ನಮಗೆ ಅಭಿಮಾನ ಇರಬೇಕು. ಹಳ್ಳಿಯಲ್ಲಿ ಒಬ್ಬ ಮನೆ ಕಟ್ಟಿಸಿದ. ಟೈಲ್ಸ್ ಚೀನಾದ್ದು, ಡೈನಿಂಗ್ ಟೇಬಲ್ ಅಮೆರಿಕದ್ದು, ನಳಗಳೆಲ್ಲ ಜರ್ಮನಿಯದ್ದು. ವಸ್ತುಗಳು ಎಲ್ಲಿಯದ್ದೇ ಆಗಿರಲಿ ಡೈನಿಂಗ್ ಟೇಬಲ್ ಮೇಲೆ ಇಟ್ಟ ರೊಟ್ಟಿ ಪುಂಡಿ ಪಲ್ಯ ನಮ್ಮೂರಿದ್ದೇ ತಾನೆ. ನಮ್ಮದು ಎನ್ನುವ ಅಭಿಮಾನ ಇರಬೇಕು ಮನುಷ್ಯನಿಗೆ. 'ನನ್ನ ಹಳ್ಳಿ, ನನ್ನ ದೇಶ, ನನ್ನ ಹಳ್ಳಿ ನನ್ನ ಜಗತ್ತು' ಎಂಬ ಕಲ್ಪನೆ ಇರಬೇಕು.

ನಮ್ಮ ಹಳ್ಳಿಯನ್ನು ನೋಡುವ ದೃಷ್ಟಿಕೋನ ಬದಲಾಗಬೇಕು. 'ನಮ್ಮ ಹಳ್ಳಿ ಕನಿಷ್ಠ. ಏನೈತ್ರೀ ಇಲ್ಲಿ. ಬೆಂಗಳೂರು ಬಹಳ ಚಲೋ ಅಂತೀವಿ'. ಆದರೆ ಬೆಂಗಳೂರಲ್ಲಿ ಏನೂ ಇಲ್ಲ. ಬೆಂಗಳೂರಿನ್ಯಾಗ ಗಟಾರದ ನೀರು ಹರಿತೈತಿ. ಹಳ್ಳಿಗಳಲ್ಲಿ ಕೃಷ್ಣೆಯೇ ಹರಿದು ನಿಮ್ಮ ಮನೆ ಬಾಗಿಲಿಗೆ ಬರ್ತಾಳಲ್ಲ ಅದಕ್ಕಿಂತ ಭಾಗ್ಯ ಇನ್ನೇನು ಬೇಕು. ನಮ್ಮ ದೃಷ್ಟಿ ಬದಲಾದರೆ ನಮ್ಮ ಸೃಷ್ಟಿ ಬದಲಾಗುತ್ತದೆ. ನೀವು ದೇವಾಲಯಕ್ಕೆ ಹೋಗ್ತೀರಿ. ಮನೆಯಲ್ಲಿಂದ ಒಂದು ಬಾಳೆಹಣ್ಣು ತೆಗೆದುಕೊಂಡು ಹೋಗ್ತೀರಿ. ದೇವರಿಗೆ ಅದನ್ನು ಅರ್ಪಿಸಿ ಜನರಿಗೆ ಅದನ್ನು ಕೊಡುವಾಗ ಪ್ರಸಾದ ಅಂತೀರಿ. ಮನೆಯಲ್ಲಿ ಇದ್ದಿದ್ದು ಬಾಳೆಹಣ್ಣು, ದೇವರಿಗೆ ಅರ್ಪಿಸಿದ್ದು ಬಾಳೆಹಣ್ಣು, ಆದರೆ ಜನರಿಗೆ ನೀಡುವಾಗ ಅದು ಪ್ರಸಾದ ಆಗಿದ್ದು ಹೇಗೆ? ಹೇಗೆಂದರೆ ಹಣ್ಣು ಬದಲಾಗಲಿಲ್ಲ. ಅದನ್ನು ನೋಡುವ ಕಣ್ಣು ಬದಲಾಗಿತ್ತು ಅಷ್ಟೆ. ಅಂದರೆ ದೃಷ್ಟಿ ಬದಲಾದರೆ ಸೃಷ್ಟಿಯೂ ಬದಲಾಗುತ್ತದೆ. ಹಾಗೆಯೇ, ಗಾಳಿ ಅದೇ ಇರ್ತದೆ. ಸೂರ್ಯ ಅದೇ ಇರ್ತಾನೆ, ಮಣ್ಣು ಅದೇ ಇರ್ತದೆ. ಈ ಮಣ್ಣನ್ನು ನೋಡುವ ಕಣ್ಣು ಬದಲಾದರೆ ನಮ್ಮ ಹಳ್ಳಿ ಬದಲಾಗುತ್ತದೆ. ಸೂರ್ಯಾಸ್ತ ನೋಡಲು ಕನ್ಯಾಕುಮಾರಿಗೆ ಹೋಗಬೇಕಿಲ್ಲ. ಸೂರ್ಯೋದಯ ನೋಡಲು ಗ್ಯಾಂಗ್ಟಕ್‌ಗೆ ಹೋಗಬೇಕಿಲ್ಲ. ನೋಡುವ ಕಣ್ಣು ಬದಲಾದರೆ ನಮ್ಮ ಹಳ್ಳಿಯಲ್ಲೇ ಎಲ್ಲವನ್ನೂ ನೋಡಬಹುದು.

ಪದಬಂಧ 5923

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕೊನೆಗೆ ಮಗ ತಿರುಗಿದರೆ ಹುಟ್ಟು! (3)
3.ಆಯಾಳಿಗೆ ಆಗಿರುವ ಸುಸ್ತು (3)
6.ಹಸೆ ಹಾಕುವ ಜಾಗದಲ್ಲಿರುವ ಪಾಚಿ (3)
7.ಮಣಿ ಧರಿಸಿರುವ ಚಲುವೆ (3)
8.ಗರ ಬಡಿದಂತಿರುವ ಷಹರು (3)
9.ಮುದ್ದು ಮಾಡುತ್ತಾ ಕುಡಿಸಿದ ಔಷಧಿ (2)
10.ಕನ್ನ ಹಾಕಿದವನು ಕದ್ದೊಯ್ದ ದರ್ಪಣ (3)
12.ಬಾಣಸಿಗನು ಹಿಡಿದಿರುವ ಶರ (2)
13.ಅಡುಗೆಯವನು ಇಲ್ಲಿದ್ದಾನೆ (3)
15.ಕಂದಾಚಾರ ಅನುಸರಿಸುವವನಿಗೆ ಕಾಣಿಸಿದ ಕಣಿವೆ (3)
16.ಉದಾರಿ ಇಲ್ಲಿದ್ದಾನೆ (3)
17.ವಿವಾದವಿಲ್ಲದೆ ನಡೆದ ಲಗ್ನ (3)
18.ಅತಿ ಪರಿಚಯ (3)

ಮೇಲಿಂದ ಕೆಳಕ್ಕೆ

1.ಅತಿಕ್ರಮಣಕ್ಕೊಂದು ಪರ್ಯಾಯ ಪದ (4)
2.ಮರದಲ್ಲಿ ಮಾಡಿದ ಹೆಬ್ಬಾಗಿಲು (4)
3.ಬಯಕೆ ಈ ರೀತಿ ಬಂದಿದೆ (2)
4.ಹದ್ದು ಕುಳಿತಿರುವ ಗಡಿ (4)
5.ಅಂತಃಪುರವನ್ನು ಹೀಗೂ ಹೇಳುವರು (4)
9.ಮಡದಿ ಮಾಡಿದ ಪಾತಿ (2)
10.ಧಾನ್ಯಗಳನ್ನು ಒಕ್ಕುವ ಸ್ಥಳ (2)
11.ಸಹಾನುಭೂತಿಯನ್ನು ಹೀಗೆ ತೋರಿಸಿ (4)
12.ಅದೇ ತಾನೆ ಮೂಡಿರುವ ಸೂರ್ಯ (4)
13.ದ್ರವ ರೂಪದ ಅನಿಲ (4)
14.ವೀರಶೈವರು ಕೊರಳಿನಲ್ಲಿ ಧರಿಸುವಲಿಂಗದ ಪೆಟ್ಟಿಗೆ (4)
16.ಉದಾಹರಣೆ ನೀಡುವಾಗ ಆದ ಬಾಯಾರಿಕೆ (2)



5922ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಭ್ಯಂಜನ 3.ಮಹಾಕಾವ್ಯ
5.ಖಚರ 7.ತನಯ
8.ತಲ್ಲೀನ 10.ವಿಚಾರವಂತ
11.ಮಹಿಮ 13.ತರಳೆ
14.ಭವಿಷ್ಯ 16.ಕವಾಡಿಗ
17.ಶಿಲಾಯುಗ

ಮೇಲಿಂದ ಕೆಳಕ್ಕೆ:
1..ಅಭ್ಯಾಗತ 2.ನಖ
3.ಮರ 4.ವ್ಯತ್ಯಯ
6.ಚನ್ನವೀರಕಣವಿ 7.ತರತಮ
9.ನವಿರೆಳೆ 12.ಮದುಮಗ
13.ತವಕ 14.ಭಗ
15.ಷ್ಯಶಿ

ಸುಡೊಕು 6308

			8		1	9		
	8						3	1
3		1	2		9		5	6
	1	7			8	3		
							8	4
8		3	9				6	
1			7		2	4		3
		8		4			1	
	3		1		5			8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6307ಸುಡೊಕು

4	9	6	3	7	8	5	2	1
8	5	3	2	1	9	4	7	6
1	7	2	4	6	5	3	9	8
6	1	9	7	2	3	8	4	5
2	8	7	5	4	6	9	1	3
3	4	5	8	9	1	2	6	7
5	6	4	9	3	7	1	8	2
7	2	8	1	5	4	6	3	9
9	3	1	6	8	2	7	5	4

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

47ನೇ ವರ್ಷದ ಚಿರಸ್ಮರಣೆ

ಪೂಜ್ಯಶ್ರೀ ಗಂಗಹನುಮಯ್ಯನವರು

ದೊಡ್ಡಬಳ್ಳಾಪುರ ತಾಲ್ಲೂಕು ಕನಸವಾಡಿ ಚಿಕ್ಕಮದುರೆ, ಶ್ರೀಕ್ಷೇತ್ರದ ಮೂಲ ಸ್ಥಾಪಕರು ಹಾಗೂ ಅರ್ಚಕರಾದ ಪೂಜ್ಯಶ್ರೀ ಗಂಗಹನುಮಯ್ಯನವರು ನಮ್ಮನ್ನಗಲಿ 47 ವರ್ಷಗಳು ಸಂದವು. ಇವರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕರುಣಿಸಲೆಂದು ಕೋರುವ

ಧರ್ಮಪತ್ನಿ, ಮಕ್ಕಳು ಹಾಗೂ ಕುಟುಂಬವರ್ಗದವರು

LOOKING FOR JOB OPPORTUNITY

Refer Classifieds on Wednesday

ವೈಕುಂಠ ಸಮಾರಾಧನೆ

ಶ್ರೀಮತಿ ಅಕ್ಕಣಮ್ಮ ನವರು

(ದಿ॥ ಬೈಸಿಕಲ್ ಶ್ರೀ ರಾಮಕೃಷ್ಣಪ್ಪನವರ ಧರ್ಮಪತ್ನಿ)

#1188, ಕೆ.ಆರ್.ಕುಟೀರ, ರಾಮಕೃಷ್ಣಪ್ಪ ಫಾರಂ, ಟಾಟಾನಗರ, ಕೊಡಿಗೇಹಳ್ಳಿ, ಬೆಂ–92,

ಇವರು ತಾ॥06.01.2025ನೇ ಸೋಮವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

"ಇವರ ಜೀವನದ ತ್ಯಾಗ, ಉಧಾರ ಮತ್ತು ನಿಸ್ವಾರ್ಥ ಮನೋಭಾವದ ಸಂಕೇತವಾಗಿ ತಮ್ಮ ದೇಹವನ್ನು ಆಸ್ಪತ್ರೆಗೆ ದಾನ ಮಾಡಿದ ಇವರ ಸಾರ್ಥಕತೆಗೆ ನಮ್ಮ ಕೋಟಿ ಕೋಟಿ ನಮನಗಳು"

ಈ ತತ್ಸಂಬಂಧ ಪುಣ್ಯಾಹವನ್ನು ತಾ॥16.01.2025ನೇ ಗುರುವಾರ ಬೆಳಿಗ್ಗೆ 9ಕ್ಕೆ ಮತ್ತು 12ಕ್ಕೆ ವೈಕುಂಠಸಮಾರಾಧನೆ ಹಾಗೂ ಶ್ರದ್ಧಾಂಜಲಿ ಕಾರ್ಯವನ್ನು ಮೃತರ ಸ್ವಗೃಹದಲ್ಲಿ ನೆರವೇರಿಸಲಾಗುವುದು. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರ–ಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು,

ಶ್ರೀಮತಿ ಶ್ರೀ ಕೆ.ಆರ್. ನಟರಾಜ್ ಮತ್ತು ಶ್ರೀಮತಿ ಶ್ರೀ ಕೆ.ಆರ್. ದೇವರಾಜ್, ಹೆಣ್ಣು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮಕ್ಕಳು ಮತ್ತು ಕುಲಬಾಂಧವರು ಹಾಗೂ ಅಪಾರ ಬಂಧು–ಮಿತ್ರರು

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,085
ಇಂದಿನ ಅಂತ್ಯ	23,176
▲	90
ದಿನದ ಗರಿಷ್ಠ	23,264

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು 100ಕ್ಕೆ	₹525
12 ಕ್ಕೆ	₹70
ಮೈಸೂರು 100ಕ್ಕೆ	₹525

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹156-642
ದ್ವಿತಳಿ (ಬಿ.ವಿ)	₹478-786

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹187
ಆರ್‌ಎಸ್‌ಎಸ್-5	₹182
ಗುಡ್ ಲಾಟ್	₹176

(ಪ್ರತಿ ಕೆ.ಜಿಗೆ)

ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1430 (1440)
ಸೋಯಾ (ರಿಫೈನ್ಡ್)	₹1315 (1310)
ಸೂರ್ಯಕಾಂತಿ (ರಿಫೈನ್ಡ್)	₹1395 (1400)
ಪಾಮೋಲಿನ್	₹1360 (1370)

ಸಗಟು ಹಣದುಬ್ಬರ: ಡಿಸೆಂಬರ್‌ನಲ್ಲಿ ಶೇ 2.37ರಷ್ಟು ಏರಿಕೆ

ಇಳಿಯದ ತರಕಾರಿ ಬೆಲೆ

ನವದೆಹಲಿ (ಪಿಟಿಐ): ಸಗಟು ಬೆಲೆ ಸೂಚ್ಯಂಕ (ಡಬ್ಲ್ಯುಪಿಐ) ಆಧರಿತ ಹಣದುಬ್ಬರವು 2024ರ ಡಿಸೆಂಬರ್‌ನಲ್ಲಿ ಶೇ 2.37ರಷ್ಟು ಏರಿಕೆಯಾಗಿದೆ. ಆಹಾರೇತರ ಹಾಗೂ ತಯಾರಿಕಾ ಸರಕುಗಳ ಬೆಲೆ ಏರಿಕೆಯೇ ಇದಕ್ಕೆ ಕಾರಣ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಮಂಗಳವಾರ ತಿಳಿಸಿದೆ.

ನವೆಂಬರ್‌ನಲ್ಲಿ ಸಗಟು ಹಣದುಬ್ಬರವು ಶೇ 1.89ರಷ್ಟಿತ್ತು. 2023ರ ಡಿಸೆಂಬರ್‌ನಲ್ಲಿ ಶೇ 0.86ರಷ್ಟು ದಾಖಲಾಗಿತ್ತು.

ನವೆಂಬರ್‌ನಲ್ಲಿ ಶೇ 8.63ರಷ್ಟಿದ್ದ ಆಹಾರ ಪದಾರ್ಥಗಳ ಬೆಲೆಯು ಡಿಸೆಂಬರ್‌ನಲ್ಲಿ ಶೇ 8.47ರಷ್ಟು ಇಳಿಕೆಯಾಗಿದೆ. ಧಾನ್ಯ, ಬೇಳೆಕಾಳು ಮತ್ತು ಗೋಧಿ ಬೆಲೆಯಲ್ಲಿ ಕಡಿಮೆಯಾಗಿದೆ. ಆದರೆ, ತರಕಾರಿಗಳ ಬೆಲೆಯಲ್ಲಿ ಇಳಿಕೆಯಾಗಿಲ್ಲ. ಶೇ 28.65ರಷ್ಟು ಹೆಚ್ಚಳವಾಗಿದೆ. ಆಲೂಗೆಡ್ಡೆ ಶೇ 93.20 ಹಾಗೂ ಈರುಳ್ಳಿ ಬೆಲೆಯಲ್ಲಿ ಶೇ 16.18ರಷ್ಟು ಏರಿಕೆಯಾಗಿದೆ.

ಆಹಾರೇತರ ಸರಕುಗಳಾದ ಎಣ್ಣೆಕಾಳುಬೆಲೆಯಲ್ಲಿ ಶೇ 2.46ರಷ್ಟು ಏರಿಕೆಯಾಗಿದೆ. ತೈಲ ಮತ್ತು ಇಂಧನ ಸೂಚ್ಯಂಕದಲ್ಲಿ ಇಳಿಕೆ ಆಗಿದೆ. ನವೆಂಬರ್‌ನಲ್ಲಿ ಶೇ 5.83ರಷ್ಟು ಇದ್ದಿದ್ದು, ಡಿಸೆಂಬರ್‌ನಲ್ಲಿ ಶೇ 3.79ರಷ್ಟಕ್ಕೆ ಇಳಿಕೆಯಾಗಿದೆ. ತಯಾರಿಕಾ ಸರಕುಗಳ ಬೆಲೆಯು ಶೇ 2.14ರಷ್ಟು ಹೆಚ್ಚಳವಾಗಿದೆ.

'ಕಳೆದ ವರ್ಷದ ಡಿಸೆಂಬರ್‌ಗೆ ಹೋಲಿಸಿದರೆ ಜನವರಿಯಲ್ಲಿ ಜಾಗತಿಕ ಮಟ್ಟದಲ್ಲಿ ಸರಕುಗಳ ಬೆಲೆಯಲ್ಲಿ ಏರಿಕೆಯಾಗಿದೆ. ರಷ್ಯಾದ ತೈಲ ಉತ್ಪಾದಕರು ಮತ್ತು ಸರಕು ಸಾಗಣೆ ಹಡಗುಗಳ ಮೇಲೆ ಅಮೆರಿಕವು ನಿರ್ಬಂಧಗಳನ್ನು ಬಿಗಿಗೊಳಿಸಿದೆ. ಈ ನಡುವೆಯೇ ಪ್ರಸಕ್ತ ತಿಂಗಳ ಎರಡು ವಾರಗಳಲ್ಲಿ ಕಚ್ಚಾ ತೈಲದ ಬೆಲೆಯು ಶೇ 5.8ರಷ್ಟು ಏರಿಕೆಯಾಗಿದೆ' ಎಂದು ಐಸಿಆರ್‌ಎ ಹಿರಿಯ ಅರ್ಥಶಾಸ್ತ್ರಜ್ಞ ರಾಹುಲ್ ಅಗರವಾಲ್ ತಿಳಿಸಿದ್ದಾರೆ.

'ಕಚ್ಚಾ ತೈಲದ ಬೆಲೆ ಏರಿಕೆ ಮತ್ತು ರೂಪಾಯಿ ಮೌಲ್ಯದ ಕುಸಿತ ಮುಂದುವರಿದಿದೆ. ಇದರಿಂದ ಜನವರಿಯಲ್ಲಿ ಸಗಟು ಹಣದುಬ್ಬರವು ಶೇ 3ರಷ್ಟಕ್ಕೆ ಏರಿಕೆಯಾಗಬಹುದು' ಎಂದು ಹೇಳಿದ್ದಾರೆ.

ರೆಪೊ ದರ ಇಳಿಕೆ?



ಗ್ರಾಹಕ ಬೆಲೆ ಸೂಚ್ಯಂಕ ಆಧರಿತ ಚಿಲ್ಲರೆ ಹಣದುಬ್ಬರವು ಡಿಸೆಂಬರ್‌ನಲ್ಲಿ ನಾಲ್ಕು ತಿಂಗಳ ಕನಿಷ್ಠ ಮಟ್ಟವಾದ ಶೇ 5.22ರಷ್ಟು ದಾಖಲಾಗಿದೆ.

ಭಾರತೀಯ ರಿಸರ್ವ್ ಬ್ಯಾಂಕ್ ತನ್ನ ಹಣಕಾಸು ನೀತಿಗಾಗಿ ಈ ಹಣದುಬ್ಬರವನ್ನೇ ಮಾನದಂಡವಾಗಿ ಬಳಸುತ್ತದೆ.

ಡಿಸೆಂಬರ್‌ನಲ್ಲಿ ನಡೆದ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯಲ್ಲಿ ನಗದು ಮೀಸಲು ಅನುಪಾತವನ್ನು (ಸಿಆರ್‌ಆರ್) ಶೇ 0.50ರಷ್ಟು ಕಡಿತಗೊಳಿಸಲಾಗಿತ್ತು. ದೇಶದ ಹಣಕಾಸು ಮಾರುಕಟ್ಟೆಯಲ್ಲಿ ನಗದು ಹರಿವಿನ ಪ್ರಮಾಣ ಹೆಚ್ಚಿಸಲು ಈ ಕ್ರಮಕೈಗೊಂಡಿತ್ತು. ಚಿಲ್ಲರೆ ಹಣದುಬ್ಬರ ಇಳಿಕೆಯಾಗಿದೆ. ಹಾಗಾಗಿ, ಫೆಬ್ರುವರಿ 5ರಿಂದ 7ರ ವರೆಗೆ ನಡೆಯುವ ಎಂಪಿಸಿ ಸಭೆಯಲ್ಲಿ ರೆಪೊ ದರ ಕಡಿತಗೊಳಿಸುವ ಸಾಧ್ಯತೆಯಿದೆ ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ.

ಮುಂಬೈ ಧಾರಣೆ (ಶೇಂಗಾ)

14-01-2025

ಜಾವಾ 70/80(ಹೊಸ)	10500-10600
ಜಾವಾ 80/90(ಹೊಸ)	10000-10100
ದಪ್ಪ ಮಧ್ಯಪ್ರದೇಶ(ಹೊಸ)	8700-8800
ದಪ್ಪ ಗುಜರಾತ್(ಹೊಸ)	9500-9600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1440 (1450)
ಒಂದು ವಾರದ ಡೆಲಿವರಿ	1435 (1445)
ಪಾಮ್ ವಾರದ ಡೆಲಿವರಿ	1358 (1368)
ಸೂರ್ಯಕಾಂತಿ ಎಣ್ಣೆ ಕಚ್ಚಾ	1295 (1300)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ₹**77,800** (77,800)

ಬೆಳ್ಳಿ ಕೆ.ಜಿ ₹**88,700** (89,700)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಅದಾನಿ ಕಂಪನಿ ಷೇರಿನ ಮೌಲ್ಯ ಏರಿಕೆ

ನವದೆಹಲಿ (ಪಿಟಿಐ): ದೇಶದ ಷೇರುಪೇಟೆಯಲ್ಲಿ ಮಂಗಳವಾರ ನಡೆದ ವಹಿವಾಟಿನಲ್ಲಿ ಸೂಚ್ಯಂಕಗಳು ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 169 ಅಂಶ ಏರಿಕೆ ಕಂಡು 76,499 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 90 ಅಂಶ ಹೆಚ್ಚಳ ಕಂಡು, 23,176 ಅಂಶಗಳಲ್ಲಿ ಸ್ಥಿರಗೊಂಡಿತು.

ಅದಾನಿ ಸಮೂಹದ ಕಂಪನಿಗಳ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ. ಅದಾನಿ ಪವರ್ ಶೇ 19.77, ಅದಾನಿ ಗ್ರೀನ್ ಎನರ್ಜಿ ಶೇ 13.22, ಅದಾನಿ ಎನರ್ಜಿ ಸಲ್ಯೂಷನ್ಸ್ ಶೇ 12.06, ಅದಾನಿ ಎಂಟರ್‌ಪ್ರೈಸಸ್ ಶೇ 7.12, ಅದಾನಿ ಟೋಟಲ್ ಗ್ಯಾಸ್ ಶೇ 6.52 ಹಾಗೂ ಎನ್‌ಡಿಟಿವಿ ಷೇರಿನ ಮೌಲ್ಯದಲ್ಲಿ ಶೇ 5.63ರಷ್ಟು ಹೆಚ್ಚಳವಾಗಿದೆ.

ಅದಾನಿ ಪೋರ್ಟ್ಸ್ ಶೇ 4.77, ಅಂಬುಜಾ ಸಿಮೆಂಟ್ಸ್ ಶೇ 4.66, ಎಸಿಸಿ ಶೇ 4.65, ಶಾಂಘಿ ಇಂಡಸ್ಟ್ರಿಸ್ ಶೇ 3.85 ಹಾಗೂ ಅದಾನಿ ವಿಲ್ಮರ್ ಷೇರಿನ ಮೌಲ್ಯದಲ್ಲಿ ಶೇ 1.71ರಷ್ಟು ಏರಿಕೆಯಾಗಿದೆ. 11 ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯ (ಎಂ–ಕ್ಯಾಪ್) ₹12.51 ಲಕ್ಷ ಕೋಟಿ ಆಗಿದೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ

ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಶೇಖರ್ ಎಸ್.ಆರ್., ದೊಡ್ಡಬಳ್ಳಾಪುರ.

- **ಪ್ರಶ್ನೆ:** ನಾನು ಇತ್ತೀಚಿನ ಕೆಲವು ತಿಂಗಳಿನಿಂದ ಈಕ್ವಿಟಿ ವಿಭಾಗದ ಷೇರುಗಳು ಮತ್ತು ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುತ್ತಿದ್ದೇನೆ. ಬಹುತೇಕ ಮಾಹಿತಿ ಪ್ರಕಾರ ಕಂಪನಿಯ ಮೂಲ ಮಾಹಿತಿ ಆಧರಿಸಿ ಹೂಡಿಕೆ ಮಾಡಬೇಕೆಂದು ಹೇಳುತ್ತಾರೆ. ಅದೇ ರೀತಿ ಇನ್ನೊಂದು ಅಭಿಪ್ರಾಯದ ಪ್ರಕಾರ ಟೆಕ್ನಿಕಲ್ ಅನಾಲಿಸಿಸ್ ಆಧರಿಸಿ ಹೂಡಿಕೆ ಮಾಡಬೇಕು ಎಂದು ಸಲಹೆ ನೀಡುತ್ತಾರೆ. ನಮ್ಮ ಹೂಡಿಕೆಗೆ ಯಾವುದು ಸೂಕ್ತ ಮತ್ತು ಇವನ್ನು ಹೇಗೆ ಉಪಯೋಗಿಸಿಕೊಳ್ಳಬಹುದು. ಈ ಬಗ್ಗೆ ಮಾಹಿತಿ ನೀಡಿ.

ಉತ್ತರ: ಯಾವುದೇ ಕಂಪನಿಯ ಫಂಡಮೆಂಟಲ್ ಮಾಹಿತಿ ಹಾಗೂ ಟೆಕ್ನಿಕಲ್ ಅನಾಲಿಸಿಸ್- ಈ ಎರಡೂ ವಿಚಾರಗಳು ಭಿನ್ನವಾಗಿರುತ್ತವೆ. ಇವುಗಳನ್ನು ಪ್ರತ್ಯೇಕವಾಗಿ ಅಥವಾ ಎರಡನ್ನೂ ಸೇರಿಸಿ ನಮ್ಮ ಹೂಡಿಕೆಗೆ ಬಳಸಿಕೊಳ್ಳಬಹುದು. ಆದರೆ, ಇವುಗಳ ಸರಿಯಾದ ಮಾಹಿತಿ ಹಾಗೂ ಬಳಸಿಕೊಳ್ಳಬೇಕಾದ ಅರಿವು ನಮಗಿರಬೇಕು. ಫಂಡಮೆಂಟಲ್ ಮಾಹಿತಿ ಕಂಪನಿಯ ಬಗೆಗಿನ ಚಾರಿತ್ರಿಕ ಆರ್ಥಿಕ ಮಾಹಿತಿ ಹಾಗೂ ಆಡಳಿತ ಮಂಡಳಿಯ ಮುಂದಿನ ದಿಕ್ಸೂಚಿ ನಿರ್ಧಾರಗಳನ್ನು ಗ್ರಹಿಸಿ ಉದ್ದೇಶಿತ ಕಂಪನಿಯಲ್ಲಿ ಹೂಡಿಕೆ ಮಾಡಬಹುದೇ, ಬೇಡವೇ ಎಂಬ ಬಗ್ಗೆ ನಮಗೆ ಮಾಹಿತಿ ನೀಡುತ್ತದೆ. ನಮ್ಮ ಯಾವುದೇ ನಿರ್ಧಾರಕ್ಕೆ ಪುಷ್ಟಿ ನೀಡುವ, ಕಂಪನಿಯ ಬಗೆಗಿನ ಒಟ್ಟು ಆರ್ಥಿಕ ಸ್ಥಿತಿಗತಿಗಳ ಅಧ್ಯಯನವಾಗಿದೆ. ಇದು ದೂರಗಾಮಿ ಉದ್ದೇಶ ಹೊಂದಿದ್ದು, ದೀರ್ಘಾವಧಿ ಹೂಡಿಕೆದಾರರಿಗೆ ಹೆಚ್ಚು ನೆರವಾಗುತ್ತದೆ.

ಆದರೆ, ಟೆಕ್ನಿಕಲ್ ಅನಾಲಿಸಿಸ್ ಅನೇಕ ಕಾಲಘಟ್ಟದ ಅಂತರದಲ್ಲಿ ಮೂಡಿಬಂದ ಚಾರ್ಟ್‌ಗಳ ನೆರವಿನಿಂದ ಯಾವ ಮಟ್ಟದ ಬೆಲೆ ಖರೀದಿಗೆ ಯೋಗ್ಯ ಹಾಗೂ ಯಾವ ಹಂತದಲ್ಲಿ ಷೇರುಗಳ ಬೇಡಿಕೆ, ಪೂರೈಕೆ ಹೆಚ್ಚಾಗಿದೆ ಎಂದು ತಿಳಿದು ನಡೆಸುವ ವ್ಯವಹಾರಕ್ಕೆ ಹೆಚ್ಚು ನೆರವಾಗುತ್ತದೆ. ಇದು ಅಧಿಕವಾಗಿ ದಿನವಹಿ, ಅಲ್ಪಾವಧಿ ಕಾಲಕ್ಕೆ ವಹಿವಾಟು ಮಾಡುವ ಮಂದಿಗೆ ನೆರವಾಗುತ್ತದೆ. ಈ ರೀತಿಯ ಟೆಕ್ನಿಕಲ್ ಅನಾಲಿಸಿಸ್ ಆಧಾರದಲ್ಲಿ ವ್ಯವಹರಿಸಲು ಆ ಬಗ್ಗೆ ಸಾಕಷ್ಟು ತರಬೇತಿ ಅಗತ್ಯ. ಆ ಬಳಿಕವೇ ಯಾವುದೇ ವಹಿವಾಟು ಸೂಕ್ತ.

ಅಲ್ಲದೆ, ಫಂಡಮೆಂಟಲ್ ಆಧಾರದಲ್ಲಿ ಆಯ್ಕೆ ಮಾಡಲಾದ ಕಂಪನಿಗಳಲ್ಲಿ ದೀರ್ಘಾವಧಿ ಸಮಯಕ್ಕೆ ಯಾವ ಹಂತದಲ್ಲಿ ಖರೀದಿ ಮಾಡಬಹುದು ಎಂಬ ಬಗ್ಗೆ ನಿರ್ಧಾರ ಕೈಗೊಳ್ಳಲು ಇದು ಹೆಚ್ಚುವರಿ ನೆರವಾಗುತ್ತದೆ. ಹೀಗಾಗಿ, ದೀರ್ಘಾವಧಿ ಹೂಡಿಕೆದಾರರು ಎರಡೂ ವಿಧದ ಮಾಹಿತಿಯ ಆಧಾರದಲ್ಲಿ ಹೂಡಿಕೆ ನಿರ್ಧಾರ ಕೈಗೊಳ್ಳಲು ನೆರವಾಗುತ್ತದೆ. ಅಲ್ಲದೆ, ಅನೇಕ ಬಾರಿ ದಿನವಹಿ ಬರುವ ವಾಣಿಜ್ಯ ವರ್ತಮಾನಗಳು, ಕಂಪನಿಯ ಫಂಡಮೆಂಟಲ್ ಮಾಹಿತಿ ಹಾಗೂ ಟೆಕ್ನಿಕಲ್ ಅನಾಲಿಸಿಸ್ ಅಲ್ಲದೆ ಪ್ರತ್ಯೇಕ ಪರಿಣಾಮವನ್ನೂ ಬೀರಬಲ್ಲದು.

ನಯನಾ ರಾವ್, ವೈಟ್‌ಫೀಲ್ಡ್, ಬೆಂಗಳೂರು.

- **ಪ್ರಶ್ನೆ:** ನನ್ನ ಮಗ ವಿದೇಶದಲ್ಲಿದ್ದಾನೆ. ಕೆಲವು ವರ್ಷಗಳ ಹಿಂದೆ ಆತ ಬೆಂಗಳೂರಿನಲ್ಲಿ ಒಂದು ಫ್ಲ್ಯಾಟ್ ಕೊಂಡುಕೊಂಡಿದ್ದ. ಆತನೊಂದಿಗೆ ನಾವೂ ಅದರಲ್ಲಿ ವಾಸಿಸುತ್ತಿದ್ದೆವು. ಆದರೆ, ಆತ ಉದ್ಯೋಗದ ನಿಮಿತ್ತ ವಿದೇಶಕ್ಕೆ ತೆರಳಿದ ಕಾರಣ ಕೆಲಕಾಲ ಮನೆ ಖಾಲಿ ಇದೆ. ನಾವು ಯಾರ ನೆರವಿಲ್ಲದೆ ಅಲ್ಲಿ ವಾಸಿಸುವುದು ಕಷ್ಟವಾದ ಕಾರಣ ಬೇರೆಡೆಗೆ ನಮ್ಮ ವಾಸ ಬದಲಿಸಿದ್ದೇವೆ. ಈ ನಡುವೆ ಮನೆ ಬಾಡಿಗೆಗೆ ನೀಡುವ ಯೋಚನೆ ಮಾಡಿದ್ದೇವೆ.

ನನ್ನ ಪ್ರಶ್ನೆ ಏನೆಂದರೆ ನನ್ನ ಮಗನ ಹೆಸರಲ್ಲಿರುವ ಮನೆಯನ್ನು ಬಾಡಿಗೆಗೆ ಕೊಟ್ಟರೆ ಅದರ ಬಾಡಿಗೆಯನ್ನು ನಾವು ಪಡೆಯಬಹುದೇ ಹಾಗೂ ಆ ಮೊತ್ತದಿಂದ ನಮ್ಮ ಖರ್ಚು ಹೊಂದಿಸುವ ಯೋಜನೆ ಇದೆ. ಮನೆಯ ಒಡೆತನ ಮಗನ ಹೆಸರಲ್ಲಿ ಇರುವ ಕಾರಣ ಬಾಡಿಗೆದಾರರು ಅವನ ಹೆಸರಲ್ಲೇ ಬಾಡಿಗೆ ಕೊಡಬೇಕೇ? ಹಾಗಿದ್ದರೆ, ಅದಕ್ಕೆ ಆತನ ವಿದೇಶಿ ಬ್ಯಾಂಕ್ ಖಾತೆ ನೀಡಬೇಕೇ ಅಥವಾ ಅದಕ್ಕೆ ಪರ್ಯಾಯ ವ್ಯವಸ್ಥೆ ಇದೆಯೇ? ಈ ಆದಾಯಕ್ಕೆ ತೆರಿಗೆ ಬರುವುದೇ? ತಿಳಿಸಿ ಕೊಡಿ.

ಉತ್ತರ: ನಿಮ್ಮ ವಿಚಾರದಲ್ಲಿ ಎರಡು ವಿಷಯಗಳ ನಿರ್ಣಯ ಅಗತ್ಯ. ಮೊದಲನೆಯದು ನಿಮ್ಮ ಮಗನ ಹೆಸರಲ್ಲಿರುವ ಮನೆಯನ್ನು ಬಾಡಿಗೆಗೆ ನೀಡಿದಾಗ ಅದರಿಂದ ಬರುವ ಬಾಡಿಗೆ ನಿಮ್ಮ ಹೆಸರಿಗೆ ಪಾವತಿಸುವಂತೆ ಬಾಡಿಗೆದಾರರಿಗೆ ಆದೇಶ ನೀಡಿದಾಗ ಆಗುವ ತೆರಿಗೆ ಪರಿಣಾಮಗಳಾಗಿವೆ. ಎರಡನೆಯದು ನಿಮ್ಮ ಮಗನ ಹೆಸರಲ್ಲೇ ಬಾಡಿಗೆ ಆದಾಯ ಜಮಾ ಆಗುವಂತೆ ಮಾಡಿದಾಗ ಆಗುವ ತೆರಿಗೆ ಪರಿಣಾಮಗಳೇನು ಎಂಬುದಾಗಿದೆ.

ಯಾವುದೇ ವ್ಯಕ್ತಿಯ ಹೆಸರಲ್ಲಿರುವ ಆಸ್ತಿಯನ್ನು ವರ್ಗಾಯಿಸದೆ ಕೇವಲ ಬಾಡಿಗೆ ಪಡೆಯಲು ಅವಕಾಶ ಮಾಡಿಕೊಟ್ಟಾಗ, ಅಂತಹ ಆದಾಯದ ಮೇಲೆ ತೆರಿಗೆ ಯಾರು ಕೊಡಬೇಕೆನ್ನುವ ಪ್ರಶ್ನೆ ಬರುತ್ತದೆ. ಬಾಡಿಗೆ ಆದಾಯಕ್ಕೆ ಸಂಬಂಧಿಸಿ, ಆಸ್ತಿ ಯಾರ ಒಡೆತನದಲ್ಲಿದೆಯೊ ಅವರೇ ತೆರಿಗೆ ಪಾವತಿಗೆ ಬಾಧ್ಯಸ್ಥರು. ನಿಮ್ಮ ವಿಚಾರದಲ್ಲೂ ಇದು ಅನ್ವಯಿಸುತ್ತದೆ. ಒಂದು ವೇಳೆ ನೀವು ಆಂತರಿಕವಾಗಿ ನಿಮ್ಮ ಸೌಕರ್ಯಕ್ಕೆ ಸಂಬಂಧಿಸಿ ಬಾಡಿಕೆ ವರ್ಗಾಯಿಸಿಕೊಂಡರೂ ತೆರಿಗೆಯ ಉತ್ತರದಾಯಿತ್ವ ನಿಮ್ಮ ಮಗನ ಹೆಸರಲ್ಲೇ ಇರುತ್ತದೆ.

ಇನ್ನೂ ಕೆಲವು ವಿಚಾರ ಗಮನಿಸಬೇಕಿದೆ. ಅದು ಏನೆಂದರೆ ಈ ಸಂಬಂಧಿತ ಯಾವುದೇ ಸಾಲದ ಮೇಲಿನ ಬಡ್ಡಿ ವಿನಾಯಿತಿ, ಆಸ್ತಿ ತೆರಿಗೆ ಸಂಬಂಧಿತ ರಿಯಾಯಿತಿ ಇತ್ಯಾದಿ ಮೂಲ ಮಾಲೀಕರಿಗೆ ಮಾತ್ರವೇ ಸಿಗುತ್ತದೆ. ನಿಮ್ಮ ವಿಚಾರದಲ್ಲಿ ಆದಾಯವನ್ನು ನಿಮ್ಮ ಮಗನ ಹೆಸರಿನಲ್ಲೇ ಘೋಷಿಸುವುದು ಆದಾಯ ತೆರಿಗೆ ನಿಯಮಗಳಂತೆ ಸರಿಯಾಗಿದೆ. ರಿಟರ್ನ್ಸ್ ಸಲ್ಲಿಸುವ ಮೊದಲು ನಿಮ್ಮ ಸಮೀಪದ ತೆರಿಗೆ ಸಲಹೆಗಾರರನ್ನು ಸಂಪರ್ಕಿಸಿ ಅಗತ್ಯವಿರುವ ಎಲ್ಲಾ ಮಾಹಿತಿಯನ್ನು ಒದಗಿಸಿ ಕೊಡಿ.

ಇನ್ನು ನಿಮ್ಮ ಪುತ್ರನ ಹೆಸರಲ್ಲಿ ನಾನ್ ರೆಸಿಡೆಂಟ್ ಆರ್ಡಿನರಿ ಅಕೌಂಟ್ (ಎನ್‌ಆರ್‌ಒ) ತೆರೆಯಲು ಅವಕಾಶವಿದೆ. ಯಾವುದೇ ವ್ಯಕ್ತಿ ವಿದೇಶದಲ್ಲಿದ್ದಾಗ ಹಾಗೂ ಆತ ಅನಿವಾಸಿ ಭಾರತೀಯನಾಗಿದ್ದರೆ (ಎನ್‌ಆರ್‌ಐ) ಹಾಗೂ ಆತನಿಗೆ ಭಾರತೀಯ ಮೂಲದಿಂದ ಆದಾಯ ಬರುವುದಿದ್ದರೆ ಭಾರತದ ಯಾವುದೇ ಬ್ಯಾಂಕ್ ಶಾಖೆಗಳಲ್ಲಿ ಎನ್‌ಆರ್‌ಒ ಖಾತೆ ತೆರೆಯುವ ಅವಕಾಶ ಇದೆ. ಅಲ್ಲದೆ, ನೀವು ಆ ಖಾತೆಗೆ ಜಂಟಿ ಖಾತೆದಾರರಾಗಬಹುದು ಹಾಗೂ ಖಾತೆಯನ್ನು ನಿರ್ವಹಿಸಬಹುದು.

ಆದರೆ, ಯಾವುದೇ ಹಣ ವರ್ಗಾವಣೆ ಸಂದರ್ಭ ಬಂದಾಗ ಸಮರ್ಪಕವಾದ ತೆರಿಗೆ ಕಡಿತ ಇತ್ಯಾದಿ ಮಾಡಲಾಗಿದೆಯೇ ಎಂಬ ಬಗ್ಗೆ ಖಚಿತಪಡಿಸಿಕೊಳ್ಳಲು ಫಾರಂ 15ಸಿಎ/15ಸಿಬಿ ನೀಡಬೇಕಾಗುತ್ತದೆ. ಈ ವಿಚಾರವನ್ನು ಗಮನದಲ್ಲಿಟ್ಟು ನೀವು ಸಮೀಪದ ಬ್ಯಾಂಕ್ ಶಾಖೆಗಳನ್ನು ಸಂಪರ್ಕಿಸಬಹುದು.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.

ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.

ಇ–ಮೇಲ್: businessdesk@prajavani.co.in

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Walk-in

MAHATMA GANDHI VIDYAMANDIR
6th floor, K.B.H. Dental College & Hospital, Mumbai-Agra Road, Panchavati, Nashik -422003 (MH)
Phone : (0253) 2628143/144,+91 7391 056 031 | www.mgv.kbhgroup.in

WALK-IN-INTERVIEW

Applications are invited for the following posts :-

Sr.No	College Name	Designation	Course	Vacant Post
01	Samajshree Prashantdada Hiray College of Management & Technology, Panchavati, Nashik(Maharashtra)	Principal	-	01
		Assistant Professor	Bachelor of Hotel Management & Catering Technology	05

1) Qualification, Experience, Age, Pay Scale, and Research Publication for the above posts are subject to norms prescribed by the U.G.C., A.I.C.T.E., S.P.P.U., & Govt. of Maharashtra from time to time.
2) Preference will be given to the candidates having experience in teaching & research.
3) Eligible candidates should be present along with their resume and original & one set of attested copy of relevant documents at the time of interview.
4) We offer a highly competitive salary along with accommodation facility for couples.
5) Interested candidates should send their resume on info@mgvnasik.org before 20.01.2025.

Venue :- PDR Hall, Ground Floor, Welcome Hotel By ITC Hotels, 46, Richmond Road, Victoria Layout, Bengaluru, Karnataka - 560025
Time :- 11.00 A.M. To 01.00 P.M. & 02.00 P.M. To 05.00 P.M.
Interview Day & Date : Tuesday, 21st January, 2025

Dr. Prashant V. Hiray, General Secretary
Smt. Pushpatai Hiray, Chairperson

ನಮ್ಮ ಕಂಪನಿಯಲ್ಲಿ ಕೆಲಸ ಮಾಡಲು ಕ್ಲೀನರ್ ಬೇಕಾಗಿದ್ದಾರೆ (ಕೋಣನಕುಂಟೆ ಕ್ರಾಸ್ ಹತ್ತಿರ) ಅಡುಗೆಪಾತ್ರೆಗಳು, ಕ್ಲೀನಿಂಗ್, etc ಸಂಬಳ:ಮಾರುಕಟ್ಟೆಗೆ ಅನುಗುಣವಾಗಿ ಕರೆ / ವಾಟ್ಸಾಪ್ 9845011336

Wanted

ದರ್ಶಿನಿಯಲ್ಲಿ ಕೆಲಸ ಮಾಡಲು ಪುರುಷ ಹಾಗೂ ಮಹಿಳೆಯರು ಬೇಕಾಗಿದ್ದಾರೆ 1) ಕೌಂಟರ್ ಸರ್ವಿಸಿಗೆ (ರೂ. 12000/- ರಿಂದ 15000/ ವರೆಗೆ ಸಂಬಳ) 2) ಇಡ್ಲಿ ಹಾಗೂ ಉದ್ದಿನ ವಡೆ ಮಾಡಲು (ರೂ. 15000/ ರಿಂದ 20000/- ವರೆಗೆ ಸಂಬಳ) ಸಂಪರ್ಕಿಸಿರಿ: ಬೆಂಗಳೂರು ಟಿಫಿನ್ ಸೆಂಟರ್ ಶ್ರೀರಾಮ ಮಂದಿರ ಎದುರುಗಡೆ ರಾಜಾಜಿನಗರ್, 4ನೇ ಬ್ಲಾಕ್, ಬೆಂಗಳೂರು. 8073725562

ಲಾಂಡ್ರಿಗೆ ಫ್ಯಾಕ್ಟರಿ ಹೆಲ್ಪರ್ ಬೇಕಾಗಿದ್ದಾರೆ. ಬನ್ನೇರುಘಟ್ಟ ರಸ್ತೆ, ಬೆಂಗಳೂರು. ವೇತನ: 17-25 ಸಾವಿರ. ಊಟ+ವಸತಿ ಸೌಲಭ್ಯ ನೀಡಲಾಗುತ್ತದೆ. ಸಮಯ: ಬೆಳಿಗ್ಗೆ 8 ರಿಂದ ರಾತ್ರಿ8. ಸಂ: 8050666007/ 9880266007

Drivers

ಅನುಭವಿ ಬಸ್ ಡ್ರೈವರ್ ಗಳು ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ: ಕಾಮ್ಲಿನ್ ಆಂಗ್ಲಶಾಲೆ, 6ನೇ 'ಸಿ' ಮೇನ್, 4ನೇ ಕ್ರಾಸ್, ಹಂಪಿನಗರ, ಬೆಂಗಳೂರು:104. 08023301363

ನಮ್ಮ ಕಂಪನಿಯಲ್ಲಿ ಕೆಲಸ ಮಾಡಲು ಅಡುಗೆಯವರು ಬೇಕಾಗಿದ್ದಾರೆ (ಕೋಣನಕುಂಟೆ ಕ್ರಾಸ್ ಹತ್ತಿರ) ಬ್ರಾಹ್ಮಣ ಶೈಲಿಯ ಉಪಹಾರ, ಮಧ್ಯಾಹ್ನ ಮತ್ತು ರಾತ್ರಿಯ ಊಟ ಸಂಬಳ:ಮಾರುಕಟ್ಟೆಗೆ ಅನುಗುಣವಾಗಿ ಕರೆ / ವಾಟ್ಸಾಪ್ 9845011336

ವಾಹನ

Automobile Services

For Hire

2022 CNG ಟ್ರಕ್ 10 ಟನ್ ಪೇಲೋಡ್ ಗ್ಯಾಸ್ ಕಂಪನಿಗೆ 5 ವರ್ಷಗಳವರೆಗೆ ಮಾಸಿಕ ಬಾಡಿಗೆಗೆ ಅಗತ್ಯವಿದೆ. ವಾಟ್ಸ್ಆಪ್ 9414186808/ 9414309990

General

✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Hotel

ಸಹಾಯಕರು ಬೇಕಾಗಿದ್ದಾರೆ. (45 ವರ್ಷದೊಳಗಿನ ಪುರುಷರು) ರಾಮನಗರ ಬಳಿಯಿರುವ ರೆಸಾರ್ಟ್‌ಗೆ ಊಟ ವಸತಿಯೊಂದಿಗೆ. ಉತ್ತಮ ಸಂಬಳ. ಸಂಪರ್ಕಿಸಿ: 9663497356/ 8884811114

ಪ್ರವಾಸ

Travel

14.02.2025 ಸೋಮನಾಥ್ ದ್ವಾರಕಾ, ಮಹಾಕಾಳೇಶ್ವರ ಓಂಕಾರೇಶ್ವರ್. 06.03.2025 ಕಾಶಿ,ಅಯೋಧ್ಯ ಬುದ್ಧಗಯಾ,ಅಲಹಾಬಾದ್. 02.04.2025 ಕಾಶ್ಮೀರ್ ವೈಷ್ಣೋದೇವಿ ಕುಲುಮನಾಲಿ ಗುಲ್ಮಾರ್ಗ್. 23.04.2025 ಚಾರ್-ಧಾಮ್ ಸಮೇತ ಪ್ರವಾಸ. ವಿಷ್ಣನ್ ಟ್ರಾವೆಲ್ ಏಜೆನ್ಸಿ ಬೆಂಗಳೂರು.4. 26574131 8431888138 9448508708 9686708171

ಭಾರತಪರಂಪರ ದರ್ಶನ: 10.2.25 7ದಿನ ನವಗ್ರಹಸಹಿತ ರಾಮೇಶ್ವರಂ. 8.3.25 7ದಿನ ಕಾಶಿ,ಅಯೋಧ್ಯ,ಗಯಾ. 17.3.25 11ದಿನ ಮುಕ್ತಿನಾಥ್`ಸಹಿತ ಕಾಶಿ,ಅಯೋಧ್ಯ. ಪ್ರಕಾಶ್`ಹೆಬ್ಬಾರ್ 9448792891.

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

ಸಾರ್ವಜನಿಕ ಪ್ರಕಟಣೆ

BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS

@500/-* PER SQCM

www.dhclassifieds.com BOOK NOW

*Conditions apply

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:

+91 9886213331 | +91 9845114560
+91 9731810277 | 080- 45557163/164

ಸಂಕ್ಷಿಪ್ತ ಸುದ್ದಿ

ರೂಪಾಯಿ ಮೌಲ್ಯ ಚೇತರಿಕೆ



ಮುಂಬೈ (ಪಿಟಿಐ): ಅಮೆರಿಕದ ಡಾಲರ್ ಎದುರು ಸತತವಾಗಿ ಇಳಿಕೆ ಕಂಡಿದ್ದ ರೂಪಾಯಿ ಮೌಲ್ಯವು ಮಂಗಳವಾರದ ವಹಿವಾಟಿನಲ್ಲಿ 17 ಪೈಸೆ ಏರಿಕೆಯಾಗಿದೆ. ಪ್ರತೀ ಡಾಲರ್ ಮೌಲ್ಯವು ₹86.53 ಆಗಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯಲ್ಲಿನ ಏರಿಕೆ ಹಾಗೂ ದೇಶೀಯ ಷೇರುಪೇಟೆಯಿಂದ ವಿದೇಶಿ ಬಂಡವಾಳದ ಹೊರಹರಿವಿನ ಹೆಚ್ಚಳದಿಂದಾಗಿ ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿಯು ಒತ್ತಡಕ್ಕೆ ಸಿಲುಕಿತ್ತು. ಸದ್ಯ ಷೇರುಪೇಟೆಯು ಚೇತರಿಕೆ ಕಂಡಿದ್ದರಿಂದ ರೂಪಾಯಿ ಮೌಲ್ಯ ಏರಿಕೆಯಾಗಿದೆ.

ವಹಿವಾಟಿನ ಆರಂಭದಲ್ಲಿ ರೂಪಾಯಿ ಮೌಲ್ಯವು ₹86.57 ಇತ್ತು. ಇಂಟ್ರಾಡೇನಲ್ಲಿ ₹86.45ಗೆ ತಲುಪಿತ್ತು.

ಸೋಮವಾರದ ವಹಿವಾಟಿನಲ್ಲಿ 66 ಪೈಸೆ ಇಳಿಕೆ ಕಂಡಿತ್ತು.

ಬೆಳ್ಳಿ ಕೆ.ಜಿಗೆ ₹1,300 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಇಳಿಕೆಯಾಗಿದೆ.

ಬೆಳ್ಳಿ ದರವು ಕೆ.ಜಿಗೆ ₹1,300 ಇಳಿಕೆಯಾಗಿ, ₹91,700 ಆಗಿದೆ.

ಚಿನ್ನದ ದರವು 10 ಗ್ರಾಂಗೆ (ಶೇ 99.9 ಪರಿಶುದ್ಧತೆ) ₹80 ಇಳಿಕೆಯಾಗಿ, ₹80,580ರಂತೆ ಮಾರಾಟವಾಗಿದೆ. ಸ್ಟ್ಯಾಂಡರ್ಡ್ ಚಿನ್ನದ (ಶೇ 99.5 ಪರಿಶುದ್ಧತೆ) ಬೆಲೆಯು ಇಷ್ಟೇ ಪ್ರಮಾಣದಲ್ಲಿ ಕಡಿಮೆಯಾಗಿ ₹80,180ರಂತೆ ಮಾರಾಟವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

'ಹಣದುಬ್ಬರವನ್ನು ನಿಯಂತ್ರಿಸುವ ದೃಷ್ಟಿಯಿಂದ ವಿದೇಶಿ ಸರಕುಗಳ ಮೇಲೆ ಸುಂಕ ಏರಿಕೆ ಮಾಡುವ ಬಗ್ಗೆ ಅಮೆರಿಕದ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮುಂದಾಳತ್ವದ ಆರ್ಥಿಕ ತಜ್ಞರ ತಂಡ ಚರ್ಚಿಸಿದೆ. ಹಾಗಾಗಿ, ಹಳದಿ ಲೋಹದ ಬದಲಾಗಿ ಹೂಡಿಕೆದಾರರು ಈಕ್ವಿಟಿ, ಅತಿಹೆಚ್ಚು ಗಳಿಕೆಯ ಬಾಂಡ್‌ಗಳು, ರಿಯಲ್ ಎಸ್ಟೇಟ್, ಕರೆನ್ಸಿಗಳು, ಕ್ರಿಪ್ಟೊಕರೆನ್ಸಿಗಳ ಮೇಲೆ ಬಂಡವಾಳ ಹೂಡುತ್ತಿದ್ದಾರೆ. ಇದರಿಂದ ಚಿನ್ನದ ಬೆಲೆ ಇಳಿಕೆಯಾಗಿದೆ' ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಇಂಡಿಗೊ ವಿಮಾನಕ್ಕೆ ಹುಸಿ ಬಾಂಬ್ ಬೆದರಿಕೆ

ಮುಂಬೈ (ಪಿಟಿಐ): ಗೋವಾದಿಂದ ಮುಂಬೈಗೆ ಬರುತ್ತಿದ್ದ ಇಂಡಿಗೊ ವಿಮಾನಕ್ಕೆ ಸೋಮವಾರ ಸಂಜೆ ಹುಸಿ ಬಾಂಬ್ ಬೆದರಿಕೆ ಕರೆ ಬಂದಿದ್ದು, ವಿಮಾನವು ಮುಂಬೈನಲ್ಲಿ ಇಳಿದ ಬಳಿಕ ನಿಲ್ದಾಣದ ಸಿಬ್ಬಂದಿ ತಪಾಸಣೆ ನಡೆಸಿದರು.

ವಿಮಾನ ನಿಲ್ದಾಣದಲ್ಲಿ ತುರ್ತು ಸ್ಥಿತಿ ಘೋಷಿಸಲಾಗಿತ್ತು. ಎಲ್ಲಾ ಪ್ರಯಾಣಿಕರನ್ನು ಸುರಕ್ಷಿತವಾಗಿ ಕೆಳಗೆ ಇಳಿಸಲಾಯಿತು. ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯದ ನಿಯಮಾವಳಿಗಳನ್ನು ಪೂರೈಸಿದ ಬಳಿಕ ವಿಮಾನದ ಕಾರ್ಯಾಚರಣೆಗೆ ಮತ್ತೆ ಚಾಲನೆ ನೀಡಲಾಯಿತು ಎಂದು ಇಂಡಿಗೊ ಕಂಪನಿಯ ವಕ್ತಾರರು ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಸ್ಪೇನ್ ಕಾನ್ಸುಲೇಟ್ ಕಚೇರಿ

ಮ್ಯಾಂಡ್ರಿಡ್ (ಪಿಟಿಐ): 'ಬೆಂಗಳೂರಿನಲ್ಲಿ ಶೀಘ್ರದಲ್ಲಿಯೇ ಸ್ಪೇನ್ ತನ್ನ ಕಾನ್ಸುಲೇಟ್ ಕಚೇರಿ ಆರಂಭಿಸಲಿದೆ' ಎಂದು ವಿದೇಶಾಂಗ ವ್ಯವಹಾರ ಸಚಿವ ಎಸ್. ಜೈಶಂಕರ್ ಇಲ್ಲಿ ಹೇಳಿದರು.

ಉಭಯ ದೇಶಗಳ ಬಾಂಧವ್ಯವನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಇದೊಂದು ಉತ್ತಮ ಬೆಳವಣಿಗೆ ಎಂದೂ ಅವರು ಪ್ರತಿಕ್ರಿಯಿಸಿದರು.

ಎರಡು ದಿನಗಳ ಭೇಟಿಗೆ ಇಲ್ಲಿಗೆ ಆಗಮಿಸಿರುವ ಜೈಶಂಕರ್, ಭಾರತ ಮೂಲದ ಸ್ಥಳೀಯರ ಜೊತೆಗೆ ಚರ್ಚಿಸಿದ ಸಂದರ್ಭದಲ್ಲಿ ಈ ಮಾಹಿತಿ ನೀಡಿದರು.

ಕದನವಿರಾಮ: ಹಮಾಸ್ ಸಮ್ಮತಿ?

ಕೈರೊ (ಎ.ಪಿ): ಗಾಜಾ ಪಟ್ಟಿಯಲ್ಲಿ ಕದನವಿರಾಮ ಘೋಷಿಸುವ ಕುರಿತ ಕರಡು ಒಪ್ಪಂದಕ್ಕೆ ಹಾಗೂ 12 ಒತ್ತೆಯಾಳುಗಳ ಬಿಡುಗಡೆಗೆ ಹಮಾಸ್ ಬಂಡುಕೋರರು ಒಪ್ಪಿದ್ದಾರೆ ಎಂದು ಮಾತುಕತೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದ ಇಬ್ಬರು ಅಧಿಕಾರಿಗಳು ತಿಳಿಸಿದ್ದಾರೆ.

ಮಧ್ಯಸ್ಥಿಕೆ ವಹಿಸಿದ್ದ ಕತಾರ್ ರಾಷ್ಟ್ರವು, 'ಮಾತುಕತೆ ಅಂತಿಮ ಹಂತದಲ್ಲಿದೆ. ಬಹುತೇಕ ಒಪ್ಪಂದಕ್ಕೆ ಬರಲಾಗುತ್ತದೆ' ಎಂದು ಹೇಳಿದೆ. ಕರಡು ಒಪ್ಪಂದ ಏರ್ಪಟ್ಟಿರುವುದನ್ನು ಹಮಾಸ್ ಮತ್ತು ಈಜಿಪ್ಟ್ ಅಧಿಕಾರಿಗಳು ದೃಢಪಡಿಸಿದ್ದಾರೆ. ಒಪ್ಪಂದಕ್ಕೆ ಅಂತಿಮ ಅನುಮೋದನೆ ಕೋರಿ ಇಸ್ರೇಲ್‌ನ ಸಂಪುಟದ ಮುಂದೆ ಮಂಡಿಸಲಾಗುವುದು ಎಂದು ಹೇಳಿದರು.

ಕ್ಷಿಪಣಿ ದಾಳಿ, 30 ಸಾವು: (ಜೆರುಸಲೇಂ -ಎ.ಪಿ): ಗಾಜಾ ಪಟ್ಟಿಯಲ್ಲಿ ಕದನ ಮುಂದುವರಿದಿದ್ದು, ಮಂಗಳವಾರ ಇಸ್ರೇಲ್ ಸೇನೆ ನಡೆಸಿದ ಪ್ರತ್ಯೇಕ ವಾಯುದಾಳಿಯಲ್ಲಿ ಮಕ್ಕಳು ಸೇರಿ 30 ಮಂದಿ ಮೃತಪಟ್ಟಿದ್ದಾರೆ. ಗಾಜಾದ ಡೇರ್ ಅಲ್ ಬಲಾಹ್ ನಗರದ ಕೇಂದ್ರ ಭಾಗವನ್ನು ಗುರಿಯಾಗಿಸಿ ಎರಡು ದಾಳಿ ನಡೆಯಿತು.

ಕರ್ನಾಟಕ ಸರ್ಕಾರ

ನಗರ ಭೂ ಸಾರಿಗೆ ನಿರ್ದೇಶನಾಲಯ, ನಗರಾಭಿವೃದ್ಧಿ ಇಲಾಖೆ

ಆಯುಕ್ತರ ಕಾರ್ಯಾಲಯ ನಗರ ಭೂ ಸಾರಿಗೆ

ಬಿಎಂಟಿಸಿ, ಟಿಟಿಎಂಸಿ, 'ಬಿ' ಬ್ಲಾಕ್ (ಬಸ್ ಸ್ಟ್ಯಾಂಡ್ ಮೇಲ್ಭಾಗ), 4ನೇ ಮಹಡಿ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು–560027, ದೂರವಾಣಿ : 080–22226627/6628, ಫ್ಯಾಕ್ಸ್ : 080–22226630, ಇಮೇಲ್ : dultbangalore@gmail.com, dult@karnataka.gov.in

ಸಂಖ್ಯೆ: KNMTA-ADMN0MSC/1/2024-O ದಿನಾಂಕ: 15.01.2025

ಪ್ರಕಟಣೆ

ನಗರ ಭೂ ಸಾರಿಗೆ ನಿರ್ದೇಶನಾಲಯದ ಕಛೇರಿಗೆ ಗುತ್ತಿಗೆ ಆಧಾರದ ಮೇಲೆ KNMTA ಅಡಿಯಲ್ಲಿ ಕಂಪ್ಯೂಟರ್ ಅಪ್ಲಿಕೇಶನ್ ಡಿಸೈನ್ ಸ್ಪೆಷಲಿಸ್ಟ್ ಹುದ್ದೆಗೆ ಅರ್ಹ ವೃತ್ತಿಪರರನ್ನು ನೇಮಿಸಿಕೊಳ್ಳಲು ಉದ್ದೇಶಿಸಿರುತ್ತದೆ. ಆಸಕ್ತ ಅಭ್ಯರ್ಥಿಗಳು ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್ https://dult.karnataka.gov.in /59/careers/kn ಗೆ ಭೇಟಿ ನೀಡಬಹುದು ಹಾಗೂ ಅರ್ಜಿ ಸಲ್ಲಿಬಹುದು.

ಸಹಿ/– ಆಡಳಿತಾಧಿಕಾರಿಗಳು
ನಗರ ಭೂ ಸಾರಿಗೆ ನಿರ್ದೇಶನಾಲಯ
ನಗರಾಭಿವೃದ್ಧಿ ಇಲಾಖೆ, ಬೆಂಗಳೂರು

ವಾಸಾಸಂಇ/ವಾಪ್ರ/4314/ಎಸ್‌ಎಸ್‌ಸಿ/2024–25

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
CIN-U04010KA2002SGC030438

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಬೆವಿಕಂ ವಿಚಾರಣ ಸಂಖ್ಯೆ: ಬೆವಿಕಂ/2024-25/ಎಸ್‌ಇ0230 ರ ಅನ್ವಯ ದತ್ತ ಕೇಂದ್ರದಲ್ಲಿ ನಿಯೋಜಿಸಲಾದ ಬ್ಯಾಕ್‌ಅಪ್ ತಂತ್ರಾಂಶದ ವಾರ್ಷಿಕ ತಾಂತ್ರಿಕ ಬೆಂಬಲವನ್ನ (ಎಟಿಎಸ್) ಒದಗಿಸಲು ಟೆಂಡರ್‌ಗಳನ್ನು ಆಹ್ವಾನಿಸಿದೆ.

ಪೂರ್ವ-ಬಿಡ್ ಸಭೆಯ ದಿನಾಂಕ: 20.01.2025, ಬೆಳಗ್ಗೆ 11.00 ಗಂಟೆಗೆ, ಪ್ರಧಾನ ವ್ಯವಸ್ಥಾಪಕರು (ಐಟಿ) ಶಾಖೆ, ಬೆವಿಕಂ, 5ನೇ ಮಹಡಿ, ಬೆಳಕು ಭವನ, ಕಾರ್ಪೊರೇಟ್ ಕಚೇರಿ, ಕೆ.ಆರ್. ವೃತ್ತ, ಬೆಂಗಳೂರು–560001. ಪ್ರಶ್ನೆಗಳು/ಸ್ಪಷ್ಟೀಕರಣವನ್ನು ಸ್ವೀಕರಿಸುವ **ಕೊನೆಯ ದಿನಾಂಕ:** 20.01.2025 ಸಂಜೆ 4.00 ಗಂಟೆಯವರೆಗೆ. ಅಗತ್ಯ ಇಎಂಡಿ ಮತ್ತು ಸಂಬಂಧಿತ ದಾಖಲೆಗಳೊಂದಿಗೆ ಅರ್ಹತಾ ಮಾನದಂಡಗಳ ಸಲ್ಲಿಕೆ/ಅಪ್‌ಲೋಡಿಂಗ್‌ಗೆ **ಅಂತಿಮ ದಿನಾಂಕ:** 29.01.2025, ಸಂಜೆ 4.00 ಗಂಟೆಯವರೆಗೆ.

ಬಿಡ್ ದಾಖಲೆಗಳು ಲಭ್ಯವಿರುವ ದಿನಾಂಕ: 15.01.2025. ಬಿಡ್ಡಿಂಗ್ ದಸ್ತಾವೇಜುಗಳನ್ನು ಕೆಪಿಪಿ ಪೋರ್ಟಲ್ ವೆಬ್‌ಸೈಟ್: https://www.kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಆಸಕ್ತ ಬಿಡ್ಡುದಾರರು ಕೆಪಿಪಿ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ಸಂಖ್ಯೆ: +91 80 46010000, +91 80 68948777 ನ್ನು ಸಂಪರ್ಕಿಸಿ.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ: 1912
"ಬೆಸ್ಕಾಂ ಮಿತ್ರ" Mobile APP ಡೌನ್‌ಲೋಡ್ ಮಾಡಿಕೊಳ್ಳಿ

ಸಹಿ/-
ಪ್ರಧಾನ ವ್ಯವಸ್ಥಾಪಕರು (ICT&MIS)
ಬೆವಿಕಂ, ಕೆ.ಆರ್. ವೃತ್ತ, ಬೆಂಗಳೂರು-01.

ಬಯೋ ಇನೋವೇಶನ್ ಸೆಂಟರ್‌ಗೆ ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಭೇಟಿ ನೀಡಿ, ಪರಿಶೀಲಿಸಿದರು

ನವೋದ್ಯಮ : 13 ಲ್ಯಾಬ್‌ಗೆ ಬೆಂಕಿ

ಒಂದನೇ ಪುಟದಿಂದ...

'ವಿವಿಧ ಬಗೆಯ ರಾಸಾಯನಿಕಗಳಿದ್ದ ಕಾರಣಕ್ಕೆ ಪ್ರಯೋಗಾಲಯದಲ್ಲಿ ಬೆಂಕಿ ವ್ಯಾಪಿಸುತ್ತಲೇ ಇತ್ತು. ಇದರಿಂದ ಕಾರ್ಯಾಚರಣೆಗೆ ಪದೇ ಪದೇ ಅಡಚಣೆ ಉಂಟಾಗುತ್ತಿತ್ತು. ಅಗ್ನಿಶಾಮಕ ದಳದ ನಾಲ್ಕು ವಾಹನಗಳ ಜತೆಗೆ ಸುಮಾರು 35 ಸಿಬ್ಬಂದಿ ನಿರಂತರ ಕಾರ್ಯಾಚರಣೆ ನಡೆಸಿ, ಬೆಂಕಿ ನಿಯಂತ್ರಣಕ್ಕೆ ತರಲಾಯಿತು. ಕೆಲವು ರಾಸಾಯನಿಕಗಳಿಗೆ ಬಲು ದುಬಾರಿ ಬೆಲೆ ಇದೆ. ಅಂತಹ ರಾಸಾಯನಿಕಗಳು ಬೆಂಕಿಗೆ ಆಹುತಿಯಾಗಿವೆ' ಎಂದು ಅಗ್ನಿಶಾಮಕದ ದಳದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಔಷಧ ತಯಾರಿಕೆಗಾಗಿ ಇರುವ ಪ್ರಯೋಗಾಲಯಗಳಲ್ಲಿ ಬೇರೆ ಬೇರೆ ಪ್ರಯೋಗಗಳು ಪ್ರತಿನಿತ್ಯ ನಡೆಯುತ್ತಿದ್ದವು. ನಿತ್ಯ ವಿಜ್ಞಾನಿಗಳು, ಸಂಶೋಧಕರು ಕೆಲಸ ಮಾಡುತ್ತಾರೆ. ಅಲ್ಲದೇ ಸುಮಾರು 35 ನವೋದ್ಯಮ ಸಂಸ್ಥೆಗಳಿಗೆ ಈ ಕಟ್ಟಡದಲ್ಲಿ ಅವಕಾಶ ಕಲ್ಪಿಸಲಾಗಿತ್ತು' ಎಂದು ಮೂಲಗಳು ತಿಳಿಸಿವೆ.

ಅಲಾರ್ಮ್ ಸದ್ದು: ಬೆಂಕಿ ಕಾಣಿಸಿಕೊಂಡ ಕೂಡಲೇ ಕಟ್ಟಡದಲ್ಲಿ ಅಳವಡಿಸಿದ್ದ ಅಲಾರ್ಮ್ ಸೂಚನೆ ನೀಡಿತ್ತು. ಇದರಿಂದ ಕೆಲವು ಪ್ರಯೋಗಾಲದಲ್ಲಿದ್ದ ಯುವ ವಿಜ್ಞಾನಿಗಳು, ಭದ್ರತಾ ಸಿಬ್ಬಂದಿ ಹೊರಕ್ಕೆ ಬಂದು ಅಪಾಯದಿಂದ ಪಾರಾದರು ಎಂದು ಮೂಲಗಳು ತಿಳಿಸಿವೆ. ಬಯೋ ಇನೋವೇಶನ್ ಸೆಂಟರ್‌ಗೆ ಸಚಿವ ಪ್ರಿಯಾಂಕ್ ಖರ್ಗೆ, ಕಾರ್ಯದರ್ಶಿ ಏಕರೂಪ ಕೌರ್ ಭೇಟಿ ನೀಡಿ, ಪರಿಶೀಲಿಸಿದರು. ಘಟನೆ ಕುರಿತು ಮಾಹಿತಿ ಪಡೆದುಕೊಂಡರು.

'ರಾಜ್ಯಕ್ಕೆ ತುಂಬಲಾರದ ನಷ್ಟ'

'ಬೆಂಗಳೂರು ಬಯೋ ಇನೋವೇಶನ್ ಕೇಂದ್ರದಲ್ಲಿ ನಡೆದ ಅಗ್ನಿ ದುರಂತದಿಂದ ರಾಜ್ಯಕ್ಕೆ ತುಂಬಲಾರದ ನಷ್ಟವಾಗಿದೆ. ಹಲವು ನವೋದ್ಯಮಗಳು ನಡೆಸಿದ್ದ ಅಮೂಲ್ಯ ಸಂಶೋಧನೆಗಳು ಬೆಂಕಿಗೆ ಆಹುತಿಯಾಗಿವೆ. ಸಂಶೋಧನೆಗಳಿಗೆ ಬೆಲೆ ಕಟ್ಟುವುದು ಕಷ್ಟ. ಇದು ರಾಜ್ಯಕ್ಕೆ ಆಗಿರುವ ದೊಡ್ಡ ಹಿನ್ನಡೆ' ಎಂದು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಪ್ರತಿಕ್ರಿಯಿಸಿದರು.

ಕಾಳ್ಗಿಚ್ಚು: ಹೆಚ್ಚುವರಿ ಸಿಬ್ಬಂದಿ ನಿಯೋಜನೆ

ಲಾಸ್ ಏಂಜಲೀಸ್ (ಎಪಿ): ಅಮೆರಿಕದ ಲಾಸ್ ಏಂಜಲೀಸ್‌ನಲ್ಲಿ ಗಾಳಿಯು ವೇಗವಾಗಿ ಬೀಸುವ ಸಂಭವವಿದ್ದು, ಕಾಳ್ಗಿಚ್ಚು ನಂದಿಸುವ ಕೆಲಸಕ್ಕೆ ಹಿನ್ನಡೆ ಉಂಟಾಗುವ ಆತಂಕ ಎದುರಾಗಿದೆ.

ಈ ಮಧ್ಯೆ ಮುನ್ನೆಚ್ಚರಿಕಾ ಕ್ರಮವಾಗಿ ಹೆಚ್ಚುವರಿ ನೀರಿನ ಟ್ಯಾಂಕರ್‌ಗಳು ಮತ್ತು ಅಗ್ನಿಶಾಮಕ ಸಿಬ್ಬಂದಿಯನ್ನು ಅಪಾಯ ಹೆಚ್ಚಿರುವ ಪ್ರದೇಶಗಳಲ್ಲಿ ನಿಯೋಜಿಸಲಾಗಿದೆ.

ಕಾಳ್ಗಿಚ್ಚು ಹಬ್ಬಿರುವ ಪ್ರದೇಶಗಳಲ್ಲಿ ಬೆಂಕಿ ನಂದಿಸುವ ಕಾರ್ಯ ಮುಂದುವರಿದಿದ್ದು, ವಿಮಾನಗಳ ಮೂಲಕ ಮನೆಗಳು ಮತ್ತು ಪರ್ವತಗಳ ಮೇಲೆ ಅಗ್ನಿಶಾಮಕ ರಾಸಾಯನಿಕಗಳನ್ನು ಸುರಿಸಲಾಗುತ್ತಿದೆ.

'ಗಾಳಿಯು ವೇಗವಾಗಿ ಬೀಸಿದಲ್ಲಿ, ಅದರಿಂದ ಉಂಟಾಗಬಹುದಾದ ಅಪಾಯ ಎದುರಿಸಲು ಸಿದ್ಧ' ಎಂದು ಲಾಸ್ ಏಂಜಲೀಸ್ ಮೇಯರ್ ಕರೆನ್ ಬಾಸ್ ಮತ್ತು ಇತರ ಅಧಿಕಾರಿಗಳು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಅಮೆರಿಕ, ಕೆನಡಾ ಮತ್ತು ಮೆಕ್ಸಿಕೊದಿಂದ ಅಗ್ನಿಶಾಮಕ ಸಿಬ್ಬಂದಿಯನ್ನು ಕರೆಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಅತಿ ಹೆಚ್ಚು ಅಪಾಯವಿರುವ ಪ್ರದೇಶಗಳ ಜನರು ಕೂಡಲೇ ಮನೆಗಳನ್ನು ತೊರೆಯುವಂತೆ ಮತ್ತು ಸ್ಥಳಾಂತರ ಆದೇಶಕ್ಕಾಗಿ ಕಾಯದಿರುವಂತೆ ಅಧಿಕಾರಿಗಳು ಸಲಹೆ ನೀಡಿದ್ದಾರೆ.

ಭದ್ರತಾ ಸಿಬ್ಬಂದಿಯೊಬ್ಬರು ಸಂಗಮದ ಸ್ನಾನ ಘಟ್ಟದಲ್ಲಿ ಭಕ್ತರನ್ನು ನಿಯಂತ್ರಿಸಿದರು –ಪಿಟಿಐ ಚಿತ್ರ

ಮಹಾಕುಂಭ ಮೇಳದಲ್ಲಿ ಮಂಗಳವಾರ 'ಅಮೃತ ಸ್ನಾನ'ಕ್ಕಾಗಿ ಸಂಗಮದಲ್ಲಿ ನೆರೆದಿದ್ದ ಭಕ್ತ ಸಮೂಹ –ಪಿಟಿಐ ಚಿತ್ರ

ಹೂಮಳೆ...

ಮಹಾಕುಂಭದಲ್ಲಿ ಭಕ್ತರು ಮಂಗಳವಾರ 'ಅಮೃತ ಸ್ನಾನ' ಮಾಡುವ ಸಂದರ್ಭದಲ್ಲಿ ಹೆಲಿಕಾಪ್ಟರ್ ಮೂಲಕ ಹೂಮಳೆ ಸುರಿಸಲಾಯಿತು.

ಭಕ್ತರ ಮೇಲೆ ಗುಲಾಬಿಯ ದಳಗಳ ಸುರಿಮಳೆಯಾಗುತ್ತಿದ್ದಂತೆಯೇ ಅವರು 'ಜೈ ಶ್ರೀ ರಾಮ್', 'ಹರಹರ ಮಹಾದೇವ' ಎಂದು ಘೋಷಣೆ ಮೊಳಗಿಸಿದರು.

'ಯೋಗಿ ಆದಿತ್ಯನಾಥ ಸರ್ಕಾರದ ನಿರ್ದೇಶನದಂತೆ ತೋಟಗಾರಿಕೆ ಇಲಾಖೆಯು ಮಹಾಕುಂಭ ಮೇಳದಲ್ಲಿ ಪುಷ್ಪವೃಷ್ಟಿಗಾಗಿ ಒಂದು ವಾರದಿಂದ ಸಿದ್ಧತೆ ನಡೆಸಿದೆ. ಸ್ನಾನದ ಸಂದರ್ಭದಲ್ಲಿ ತಡೆರಹಿತವಾಗಿ ಹೂಮಳೆ ಸುರಿಸಲು ಬೇಕಾದಷ್ಟು ಗುಲಾಬಿಯ ಎಸಳುಗಳನ್ನು ಸಂಗ್ರಹಿಸಲು ವಿಶೇಷ ವ್ಯವಸ್ಥೆ ಮಾಡಲಾಗಿದೆ' ಎಂದು ಪ್ರಕಟಣೆ ತಿಳಿಸಿದೆ.

ಚೈತನ್ಯ ತುಂಬಿದ ನಾಗಾ ಸಾಧುಗಳು

- ಮಹಾಕುಂಭ ಮೇಳದ ಎರಡನೇ ದಿನ ಗಮನ ಸೆಳೆದ ನಾಗಾ ಸಾಧುಗಳು
- ಡೋಲುಗಳ ತಾಳಕ್ಕೆ ತಕ್ಕಂತೆ ಕುಣಿದು, ಸಾಂಪ್ರದಾಯಿಕ ಆಚರಣೆಗಳನ್ನು ಪ್ರದರ್ಶಿಸುತ್ತಾ ಸಂಗಮ ಪ್ರದೇಶದಲ್ಲಿ ಚೈತನ್ಯ ತುಂಬಿದ ಸಾಧುಗಳು
- ಬೆಳಿಗ್ಗಿನ ಜಾವ 3ರ 'ಬ್ರಾಹ್ಮಿ ಮುಹೂರ್ತ'ದಿಂದ 'ಅಮೃತ ಸ್ನಾನ' ಆರಂಭ
- ವಿದೇಶದಿಂದ ಬಂದ ಭಕ್ತರೂ ಸ್ನಾನದಲ್ಲಿ ಭಾಗಿ
- ಯಾವುದೇ ಅಹಿತಕರ ಘಟನೆ ನಡೆಯದೆ, ಸುಸೂತ್ರವಾಗಿ ನಡೆದ ಪವಿತ್ರ ಸ್ನಾನ

ಮಹಾಕುಂಭ: ಪ್ರಯಾಗ್‌ರಾಜ್‌ನಲ್ಲಿ ಎರಡನೇ ದಿನವೂ ಭಕ್ತಸಾಗರ • ವಿವಿಧ ಅಖಾಡಾಗಳ ಸಂತರು ಭಾಗಿ

3.5 ಕೋಟಿ ಭಕ್ತರಿಂದ 'ಅಮೃತ ಸ್ನಾನ'

ಪ್ರಜಾವಾಣಿ ವಾರ್ತೆ/ ಪಿಟಿಐ

ಮಹಾಕುಂಭ ನಗರ/ ಲಖನೌ: ವಿವಿಧ ಅಖಾಡಾಗಳ ಸಂತರು ಮತ್ತು ಸಾಧುಗಳು ಸೇರಿದಂತೆ ಸುಮಾರು 3.5 ಕೋಟಿ ಭಕ್ತರು 'ಮಕರ ಸಂಕ್ರಾಂತಿ' ದಿನದಂದು ಪ್ರಯಾಗ್‌ರಾಜ್‌ನ ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದರು. ಈ ಬಾರಿಯ ಮಹಾಕುಂಭ ಮೇಳದ ಮೂರು 'ಅಮೃತ ಸ್ನಾನ'ಗಳಲ್ಲಿ (ಶಾಹಿ ಸ್ನಾನ) ಇದು ಮೊದಲನೆಯದು.

12 ವರ್ಷಗಳ ಬಳಿಕ ನಡೆಯುತ್ತಿರುವ ಮಹಾಕುಂಭ ಮೇಳದಲ್ಲಿ ಸೋಮವಾರ 'ಪುಷ್ಯ ಪೂರ್ಣಿಮಾ' ದಿನದಂದು ಮೊದಲ 'ಸ್ನಾನ' ನಡೆದಿತ್ತು. ಸುಮಾರು 1.75 ಕೋಟಿ ಮಂದಿ ಪಾಲ್ಗೊಂಡಿದ್ದರು.

ಎರಡನೇ ದಿನವಾದ ಮಂಗಳವಾರ ವಿವಿಧ ಅಖಾಡಾಗಳ ಸದಸ್ಯರು 'ಅಮೃತ ಸ್ನಾನ' ಮಾಡಿದರು. ಶ್ರೀ ಪಂಚಾಯತಿ ಅಖಾಡಾ ಮಹಾನಿರ್ವಾಣಿ ಸದಸ್ಯರು ಮೊದಲನೆಯವರಾಗಿ ಸ್ನಾನದಲ್ಲಿ ಪಾಲ್ಗೊಂಡರು. ಶ್ರೀ ಶಂಭು ಪಂಚಾಯತಿ ಅಟಲ್ ಅಖಾಡಾ ಸೇರಿದಂತೆ ಇತರ ಅಖಾಡಾಗಳ ಸದಸ್ಯರು ಬಳಿಕ ಸ್ನಾನ ಘಟ್ಟಗಳತ್ತ ಬಂದರು.

ಈ ಬಾರಿಯ ಮಹಾಕುಂಭ ಮೇಳದಲ್ಲಿ ಸಾಧು ಸಂತರ 13 ಅಖಾಡಾಗಳು (ಗುಂಪು) ಭಾಗವಹಿಸಿವೆ. ಬೆಳಗಿನ ಜಾವ 3ರಿಂದ ಆರಂಭವಾದ ಸ್ನಾನದಲ್ಲಿ ಭಕ್ತರು ಮೈಕೊರೆಯುವ ಚಳಿಯನ್ನು ಲೆಕ್ಕಿಸದೆ ಉತ್ಸಾಹದಿಂದ ಪಾಲ್ಗೊಂಡರು. ಈಟಿ ಮತ್ತು ತ್ರಿಶೂಲಗಳನ್ನು ಹಿಡಿದುಕೊಂಡ ನಾಗಾ ಸಾಧುಗಳಲ್ಲಿ ಕೆಲವರು ಕುದುರೆ ಸವಾರಿ ಮಾಡಿಕೊಂಡು ಮೆರವಣಿಗೆಯಲ್ಲಿ ಸ್ನಾನಕ್ಕೆ ತೆರಳಿದರು.

'ಹರ ಹರ ಮಹಾದೇವ', 'ಜೈ ಶ್ರೀ ರಾಮ್' ಮತ್ತು 'ಜೈ ಗಂಗಾ ಮಾತೆ' ಎಂಬ ಘೋಷಣೆಗಳು ಮೊಳಗಿದವು. ಅನೇಕ ಭಕ್ತರು ತಮ್ಮ ಮಕ್ಕಳನ್ನು ಹೆಗಲ ಮೇಲೆ ಕೂರಿಸಿಕೊಂಡು ವಿವಿಧ ಸ್ನಾನ ಘಟ್ಟಗಳ ಕಡೆಗೆ ಗುಂಪು ಗುಂಪಾಗಿ ಸಾಗಿದ್ದು ಕಂಡುಬಂತು.

'ಮೊದಲ ಅಮೃತ ಸ್ನಾನ ಸುಸೂತ್ರವಾಗಿ ನಡೆದಿದ್ದು, ಯಾವುದೇ ಅಹಿತಕರ ಘಟನೆ ವರದಿಯಾಗಿಲ್ಲ' ಎಂದು ಉತ್ತರ ಪ್ರದೇಶ ಗೃಹ ಇಲಾಖೆಯ ಮುಖ್ಯ ಕಾರ್ಯದರ್ಶಿ ಸಂಜಯ್ ಪ್ರಸಾದ್ ತಿಳಿಸಿದ್ದಾರೆ. ಮಹಾಕುಂಭ ಮೇಳ ತಾಣದಲ್ಲಿ 60 ಸಾವಿರಕ್ಕೂ ಅಧಿಕ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದರು.

'ಕಿನ್ನರ ಅಖಾಡಾ'ಕ್ಕೆ ಸೇರಿದ ಲಿಂಗತ್ವ ಅಲ್ಪಸಂಖ್ಯಾತರು ಮಂಗಳವಾರ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದರು –ಪಿಟಿಐ ಚಿತ್ರ

ಕಿನ್ನರ ಅಖಾಡಾ ಭಾಗಿ: ಮಹಾಕುಂಭದ ಮೊದಲ 'ಅಮೃತ ಸ್ನಾನ'ದ ಸಂದರ್ಭದಲ್ಲಿ, ಕಿನ್ನರ ಅಖಾಡಾದ ಸದಸ್ಯರೂ ಪವಿತ್ರ ಸ್ನಾನ ಮಾಡಿ ದೇಶದ ಪ್ರಗತಿಗಾಗಿ ಪ್ರಾರ್ಥಿಸಿದರು. ಆಚಾರ್ಯ ಮಹಾಮಂಡಲೇಶ್ವರ ಲಕ್ಷ್ಮಿ ನಾರಾಯಣ ತ್ರಿಪಾಠಿ ಅವರು ಕಿನ್ನರ ಅಖಾಡಾದ ನೇತೃತ್ವ ವಹಿಸಿದ್ದರು.

ಲಿಂಗತ್ವ ಅಲ್ಪಸಂಖ್ಯಾತ ಸದಸ್ಯರಿಗೆ ಆಧ್ಯಾತ್ಮಿಕ ಮತ್ತು ಸಾಮಾಜಿಕ ವೇದಿಕೆಯನ್ನು ಒದಗಿಸುವ ಉದ್ದೇಶದಿಂದ 2015ರಲ್ಲಿ 'ಕಿನ್ನರ ಅಖಾಡಾ' ಸ್ಥಾಪಿಸಲಾಗಿದೆ. ಇದು ಧಾರ್ಮಿಕ ಚಟುವಟಿಕೆಗಳಲ್ಲಿ ಲಿಂಗತ್ವ ಅಲ್ಪಸಂಖ್ಯಾತ ಸಂಪ್ರದಾಯದವರೂ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸುವ ಉದ್ದೇಶವನ್ನು ಹೊಂದಿದೆ. 2019ರಲ್ಲಿ ಅಧಿಕೃತ ಮಾನ್ಯತೆ ಪಡೆದ ಈ ಅಖಾಡಾದ ಸದಸ್ಯರು ಮಹಾಕುಂಭ ಮೇಳದಲ್ಲಿ ಪಾಲ್ಗೊಂಡಿರುವುದು ಐತಿಹಾಸಿಕ ಮೈಲಿಗಲ್ಲು ಎನಿಸಿದೆ.

ಕಿನ್ನರ ಅಖಾಡಾದ ಸದಸ್ಯರು ತಮ್ಮ ಸಾಂಪ್ರದಾಯಿಕ ಆಚರಣೆಗಳು ಮತ್ತು ಸಮರ ಕಲೆಗಳ ಕೌಶಲ ಮೂಲಕ ಎಲ್ಲರ ಗಮನ ಸೆಳೆದರು. ಖಡ್ಗ ಮತ್ತು ಇತರ ಅಸ್ತ್ರಗಳನ್ನು ಪ್ರದರ್ಶಿಸಿ ತಮ್ಮ ಸಾಮರ್ಥ್ಯ ಮತ್ತು ಶ್ರೀಮಂತ ಪರಂಪರೆಯನ್ನು ಅನಾವರಣಗೊಳಿಸಿದರು ಎಂದು ಉತ್ತರ ಪ್ರದೇಶ ಸರ್ಕಾರ ಪ್ರಕಟಣೆ ತಿಳಿಸಿದೆ.

ಸೋಲಾಪುರ ಮಾಜಿ ಮೇಯರ್ ನಿಧನ

ಪುಣೆ: ಮಹಾರಾಷ್ಟ್ರದ ಸೋಲಾಪುರದ ಮಾಜಿ ಮೇಯರ್, ಎನ್‌ಸಿಪಿ (ಶರದ್ ಪವಾರ್ ಬಣ) ಮುಖಂಡ ಮಹೇಶ್ ಕೋಠೆ (60) ಅವರು ಮಹಾಕುಂಭ ಮೇಳದಲ್ಲಿ ಪವಿತ್ರ ಸ್ನಾನದ ಸಂದರ್ಭದಲ್ಲಿ ಹೃದಯಾಘಾತದಿಂದ ಮೃತಪಟ್ಟಿದ್ದಾರೆ. ತ್ರಿವೇಣಿ ಸಂಗಮದಲ್ಲಿ ಬೆಳಿಗ್ಗೆ 7.30ಕ್ಕೆ ಈ ಘಟನೆ ನಡೆದಿದೆ.

'ಸ್ನಾನಕ್ಕಾಗಿ ನೀರಿಗಿಳಿದ ಸಂದರ್ಭದಲ್ಲೇ ಹೃದಯಾಘಾತ ಸಂಭವಿಸಿದೆ. ಆಸ್ಪತ್ರೆಗೆ ಸಾಗಿಸುವ ಮುನ್ನವೇ ಮೃತಪಟ್ಟರು' ಎಂದು ಅವರ ಆಪ್ತರೊಬ್ಬರು ಹೇಳಿದ್ದಾರೆ.

ರಾಜಧಾನಿಯಲ್ಲಿ ಜಾಟ ಸಮುದಾಯದ 7 ಲಕ್ಷ ಮತದಾರರು • 14 ಕ್ಷೇತ್ರಗಳಲ್ಲಿ ನಿರ್ಣಾಯಕ

ದೆಹಲಿ: ಜಾಟರ ಮತಕ್ಕಾಗಿ ಜಟಾಪಟಿ

• ಮಂಜುನಾಥ ಹೆಬ್ಬಾರ್

ನವದೆಹಲಿ: ದೆಹಲಿಯ ರಾಜ್ಯ ರಾಜಕಾರಣದಲ್ಲಿ ಒಂದು ಕಾಲದಲ್ಲಿ ಜಾಟರು ಪ್ರಬಲ ರಾಜಕೀಯ ಶಕ್ತಿಗಳಾಗಿದ್ದರು. ನಗರೀಕರಣ, ವಲಸೆ ಹಾಗೂ ಬದಲಾದ ರಾಜಕೀಯ ಸಮೀಕರಣಗಳಿಂದಾಗಿ ಅವರ ಪ್ರಾಬಲ್ಯ ಕುಗ್ಗಿದೆ. ಆದರೂ, ಸುಮಾರು 14 ಕ್ಷೇತ್ರಗಳಲ್ಲಿ ಜಾಟರ ಮತಗಳು ನಿರ್ಣಾಯಕ. ಈ ಸಮುದಾಯದ ಜನರ ಮನ ಗೆಲ್ಲಲು ಆಮ್ ಆದ್ಮಿ ಪಕ್ಷ (ಎಎಪಿ) ಹಾಗೂ ಬಿಜೆಪಿ ನಡುವೆ ಜಟಾಪಟಿ ತೀವ್ರಗೊಂಡಿದೆ.

ದೆಹಲಿಯ ಜಾಟರನ್ನು ಕೇಂದ್ರದ ಒಬಿಸಿ (ಇತರ ಹಿಂದುಳಿದ ವರ್ಗಗಳು) ಪಟ್ಟಿಗೆ ಸೇರಿಸದೆ ಬಿಜೆಪಿ ಸರ್ಕಾರ ದ್ರೋಹ ಎಸಗಿದೆ ಎಂದು ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಆರೋಪಿಸಿದ ಬಳಿಕ ಉಭಯ ಪಕ್ಷಗಳ ನಡುವೆ ಮಾತಿನ ಸಂಘರ್ಷ ತೀವ್ರಗೊಂಡಿದೆ. ಚುನಾವಣೆ ಹೊತ್ತಲ್ಲಿ ಕೇಜ್ರಿವಾಲ್ ಅವರು ಜಾಟರನ್ನು ಪ್ರಚೋದಿಸುತ್ತಿದ್ದಾರೆ ಎಂದು ಬಿಜೆಪಿ ತಿರುಗೇಟು ನೀಡಿದೆ. ಈ ಸಮುದಾಯವನ್ನು ಕೇಂದ್ರದ ಪಟ್ಟಿಗೆ ಸೇರಿಸಬೇಕು ಎಂದು ಒತ್ತಾಯಿಸಿ ಕೇಜ್ರಿವಾಲ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ. ಇದರ ನಡುವೆ, ಜಾಟ್ ಸಮುದಾಯದ ನಾಯಕರು ಕೇಜ್ರಿವಾಲ್ ಅವರನ್ನು ಭೇಟಿ ಮಾಡಿ ತಮ್ಮ ಭಿನ್ನವತ್ತಳೆ ಅರ್ಪಿಸಿದ್ದಾರೆ.

ಉತ್ತರ ಪ್ರದೇಶದ ಪಶ್ಚಿಮ ಭಾಗ, ಹರಿಯಾಣ, ಪಂಜಾಬ್ ಹಾಗೂ ರಾಜಸ್ಥಾನದಲ್ಲಿ ಜಾಟರು ಗಣನೀಯ ಸಂಖ್ಯೆಯಲ್ಲಿದ್ದಾರೆ. ಹರಿಯಾಣ ಹಾಗೂ ಉತ್ತರ ಪ್ರದೇಶದ ಪಶ್ಚಿಮ ಭಾಗದ ಗಡಿಯಲ್ಲಿರುವ ಗ್ರಾಮೀಣ ಪ್ರದೇಶಗಳಲ್ಲಿ ಜಾಟರು ಪ್ರಬಲರಾಗಿದ್ದರು. ಈ ಪ್ರದೇಶಗಳು ರಾಜಧಾನಿಯ ಒಡಲೊಳಗೆ ಸೇರಿಕೊಂಡ ಬಳಿಕ ಈ ಸಮುದಾಯದ ಪ್ರಾಬಲ್ಯ ಕುಗ್ಗಿತು. ಈ ಪ್ರದೇಶಗಳು ನಗರದ ಉಪನಗರಗಳಾಗಿ ರೂಪಾಂತರಗೊಳ್ಳುತ್ತಿದ್ದಂತೆ ಜಾಟರು ರಾಜಕೀಯವಾಗಿ ದುರ್ಬಲರಾದರು. ನಗರದಲ್ಲಿ ಸುಮಾರು 7 ಲಕ್ಷ ಜಾಟ್ ಮತದಾರರು ಇದ್ದಾರೆ ಎಂದು ಅಂದಾಜಿಸಲಾಗಿದೆ. ಜಾಟರನ್ನು ಇತರ ಹಿಂದುಳಿದ ಪಟ್ಟಿಗೆ (ಒಬಿಸಿ) ದೆಹಲಿ ಸರ್ಕಾರ ಈ ಹಿಂದೆಯೇ ಸೇರಿಸಿದೆ. ಇದರಿಂದಾಗಿ, ಅವರಿಗೆ ಉದ್ಯೋಗ ಹಾಗೂ ಶಿಕ್ಷಣದಲ್ಲಿ ಮೀಸಲಾತಿ ಸಿಗುತ್ತಿದೆ. ಆದರೆ, ಅವರನ್ನು ಕೇಂದ್ರ ಒಬಿಸಿ ಒಟ್ಟಿಗೆ ಸೇರಿಸಿಲ್ಲ. ಹೀಗಾಗಿ, ದೆಹಲಿ ವಿಶ್ವವಿದ್ಯಾಲಯ ಸೇರಿದಂತೆ ಕೇಂದ್ರದ ಸಂಸ್ಥೆಗಳಲ್ಲಿ ಮೀಸಲಾತಿಯಿಂದ ವಂಚಿತರಾಗಿದ್ದಾರೆ.

2014ರ ಲೋಕಸಭಾ ಚುನಾವಣೆಗೆ ಮುನ್ನ ಜಾಟರನ್ನು ಯುಪಿಎ ಸರ್ಕಾರವು ಕೇಂದ್ರ ಪಟ್ಟಿಗೆ ಸೇರ್ಪಡೆ ಮಾಡಿತ್ತು. ಆದರೆ, ಸುಪ್ರೀಂ ಕೋರ್ಟ್ 2015ರಲ್ಲಿ ಈ ಆದೇಶವನ್ನು ರದ್ದುಪಡಿಸಿತ್ತು. ಕೇಂದ್ರದ ಪಟ್ಟಿಗೆ ಸೇರಿಸಬೇಕು ಎಂಬುದು ಸಮುದಾಯದ ಬಹುಕಾಲದ ಬೇಡಿಕೆ.

'ಜಾಟರನ್ನು ಒಬಿಸಿ ಪಟ್ಟಿಗೆ ಸೇರಿಸುವುದಾಗಿ ಮೋದಿ ಅವರು 2015ರಲ್ಲಿ ಚುನಾವಣಾ ಪ್ರಚಾರ ರ‍್ಯಾಲಿಯಲ್ಲಿ ಹೇಳಿದ್ದರು. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಹಲವು ಸಲ ಈ ಭರವಸೆ ನೀಡಿದ್ದರು. ಆದರೂ, ಈ ಸಮುದಾಯವನ್ನು ಕಡೆಗಣಿಸಿದ್ದಾರೆ' ಎಂಬುದು ಕೇಜ್ರಿವಾಲ್ ಆರೋಪ. 'ಸಮುದಾಯದ ಶ್ರೇಯೋಭಿವೃದ್ಧಿಗಾಗಿ ಎಎಪಿ ಸರ್ಕಾರ 10 ವರ್ಷಗಳಲ್ಲಿ ನಯಾಪೈಸೆಯ ಕೆಲಸ ಮಾಡಿಲ್ಲ. ಕೇಜ್ರಿವಾಲ್ ಮಾಡಿರುವ ವಂಚನೆಗೆ ನೊಂದು ಕೈಲಾಶ್ ಗೆಹಲೋಟ್ ಪಕ್ಷದಿಂದ ಹೊರಬಂದಿದ್ದಾರೆ' ಎಂದು ಬಿಜೆಪಿ ನಾಯಕರು ಪ್ರತ್ಯಾರೋಪ ಮಾಡಿದ್ದಾರೆ.

ಒಂದು ಕಾಲದಲ್ಲಿ ಜಾಟರ ಭದ್ರಕೋಟೆಯಾಗಿದ್ದ 'ಹೊರ ದೆಹಲಿ ಕ್ಷೇತ್ರ' ವನ್ನು ಪಶ್ಚಿಮ ದೆಹಲಿ, ವಾಯವ್ಯ ದೆಹಲಿ ಮತ್ತು ದಕ್ಷಿಣ ದೆಹಲಿ ಎಂಬ ಮೂರು ಕ್ಷೇತ್ರಗಳಾಗಿ ದಶಕದ ಹಿಂದೆ ಮರುವಿಂಗಡಿಸಲಾಯಿತು. ಪಶ್ಚಿಮ ದೆಹಲಿಯ ನಜಫ್‌ಗಢ, ವಿಕಾಸಪುರಿ ಮತ್ತು ಮಟಿಯಾಲಾದಂತಹ ಪ್ರದೇಶಗಳಲ್ಲಿ ಜಾಟರು ಇನ್ನೂ ಪ್ರಾಬಲ್ಯ ಹೊಂದಿದ್ದಾರೆ. ಆದರೆ, ಇಲ್ಲಿ ಬಿಹಾರ, ಉತ್ತರ ಪ್ರದೇಶ ಮತ್ತು ಹರಿಯಾಣದ ವಲಸೆ ಬಂದವರ ಸಂಖ್ಯೆ ಹೆಚ್ಚುತ್ತಿದೆ. ಹೆಚ್ಚಿನ ಜಾಟ್ ಜನಸಂಖ್ಯೆ ಹೊಂದಿರುವ ವಾಯವ್ಯ ದೆಹಲಿಯಲ್ಲಿ ಹಲವು ಕ್ಷೇತ್ರಗಳು ಮೀಸಲು ಕ್ಷೇತ್ರಗಳಾಗಿ ಪರಿವರ್ತನೆಗೊಂಡಿವೆ. ದಕ್ಷಿಣ ದೆಹಲಿಯಲ್ಲಿ ಗುಜ್ಜಾರರ ಪ್ರಾಬಲ್ಯ ಜಾಸ್ತಿ ಆಗುತ್ತಿದೆ. ಈ ಎಲ್ಲ ಬೆಳವಣಿಗೆಗಳಿಂದಾಗಿ, ರಾಜಧಾನಿಯಲ್ಲಿ ಜಾಟರ ರಾಜಕೀಯ ಪ್ರಾಬಲ್ಯ ಕುಗ್ಗಿದೆ.

- 2020ರ ವಿಧಾನಸಭಾ ಚುನಾವಣೆಯಲ್ಲಿ ಆಯ್ಕೆಯಾದ ಜಾಟ್ ಶಾಸಕರು–5 (ಎಎಪಿ 4, ಬಿಜೆಪಿ 1)
- ಕಳೆದ ಚುನಾವಣೆಯಲ್ಲಿ ಜಾಟ್ ಸಮುದಾಯದ ಏಳು ಅಭ್ಯರ್ಥಿಗಳಿಗೆ ಎಎಪಿ ಟಿಕೆಟ್ ನೀಡಿತ್ತು.
- ಜಾಟ್ ಸಮುದಾಯದ ಪ್ರಭಾವಿ ನಾಯಕ ಕೈಲಾಶ್ ಗೆಹಲೋಟ್ ಅವರು ವಿಧಾನಸಭಾ ಚುನಾವಣೆಗೆ ವೇಳಾಪಟ್ಟಿ ಪ್ರಕಟಕ್ಕೆ ಮುನ್ನ ಎಎಪಿಗೆ ರಾಜೀನಾಮೆ ನೀಡಿ ಬಿಜೆಪಿಗೆ ಸೇರ್ಪಡೆಯಾಗಿದ್ದರು. ಅವರಿಗೆ ಬಿಜೆಪಿ ಟಿಕೆಟ್ ನೀಡಿದೆ. ಕೇಜ್ರಿವಾಲ್ ಸಂಪುಟದಲ್ಲಿ ಸಚಿವರಾಗಿದ್ದ ಕೈಲಾಶ್ ಅವರು ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿ ಆಗಿದ್ದರು. ಅತಿಶಿ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿದ್ದರಿಂದ ಮುನಿಸಿಕೊಂಡಿದ್ದರು.
- ನವದೆಹಲಿ ಕ್ಷೇತ್ರದಲ್ಲಿ ಕೇಜ್ರಿವಾಲ್ ವಿರುದ್ಧ ಕಣಕ್ಕಿಳಿದಿರುವ ಬಿಜೆಪಿಯ ಪರ್ವೇಶ್ ವರ್ಮಾ ಜಾಟ್ ಸಮುದಾಯದವರು. ಅವರು ಮಾಜಿ ಮುಖ್ಯಮಂತ್ರಿ ಸಾಹಿಬ್ ಸಿಂಗ್ ವರ್ಮಾ ಪುತ್ರ. 2014 ಹಾಗೂ 2019ರ ಲೋಕಸಭಾ ಚುನಾವಣೆಯಲ್ಲಿ ಗೆದ್ದಿದ್ದರು. 2024ರ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ನಿರಾಕರಿಸಿತ್ತು.

ಜಾಟರ ಪ್ರಾಬಲ್ಯ ಪ್ರದೇಶಗಳು

ಮುಂಡ್ಕ, ರಿಠಾಲ, ನಜಫ್‌ಗಢ, ಬಿಸ್ವಾಸನ್, ವಿಕಾಸಪುರಿ, ಉತ್ತಮ್‌ನಗರ, ಪಾಲಂ, ದೆಹಲಿ ಕಂಟೋನ್ಮೆಂಟ್ ಬಾದ್ಲಿ, ನರೇಲಾ, ಆರ್.ಕೆ.ಪುರಂ, ಮೆಹ್ರೌಲಿ

ಪ್ರಜಾ ಮತ ಜನತಂತ್ರದ ಹಬ್ಬ

ಮತದಾರರಿಗೆ ಬಿಜೆಪಿ ಚಿನ್ನದ ಸರ ಹಂಚುತ್ತಿದೆ: ಕೇಜ್ರಿವಾಲ್

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಬಿಜೆಪಿಯು ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಪಕ್ಷಕ್ಕೆ ಮತ ಹಾಕುವಂತೆ ಕೋರಿ ಎರಡು ಕಾಲೊನಿಗಳ ಮತದಾರರಿಗೆ ಚಿನ್ನದ ಸರ ಮತ್ತು ಹಣ, ಸೀರೆ, ಹೊದಿಕೆಗಳನ್ನು ಹಂಚುವ ಮೂಲಕ ಆಮಿಷವೊಡ್ಡುತ್ತಿದೆ ಎಂದು ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಮಂಗಳವಾರ ಗಂಭೀರ ಆರೋಪ ಮಾಡಿದರು.

ಅರವಿಂದ ಕೇಜ್ರಿವಾಲ್

ಮುಖ್ಯಮಂತ್ರಿ ಆತಿಶಿ ಅವರು ಸರ್ಕಾರದ ವಾಹನವನ್ನು ಪ್ರಚಾರಕ್ಕೆ ಬಳಕೆ ಮಾಡಿದ್ದಾರೆ ಎಂಬ ಆರೋಪದ ಬಗ್ಗೆ ಪ್ರತಿಕ್ರಿಯಿಸಿದ ಅವರು, ಎಎಪಿಯು ಸ್ಪಷ್ಟ ಬಹುಮತದೊಂದಿಗೆ ಸ್ಥಿರ ಸರ್ಕಾರ ರಚಿಸುವುದು ಖಚಿತವಾಗಿದೆ. ಎಎಪಿ ವಿರುದ್ಧ ಬಿಜೆಪಿಗೆ ಯಾವುದೇ 'ಅಸ್ತ್ರ'ಗಳು ಇಲ್ಲದಂತಾಗಿದೆ. ಬಿಜೆಪಿಗೆ ದೂರದೃಷ್ಟಿ, ಮುಖ್ಯಮಂತ್ರಿ ಅಭ್ಯರ್ಥಿ ಸಹ ಇಲ್ಲ. ಹೀಗಾಗಿ ಮತದಾರರ ಓಲೈಕೆಗೆ ಅಕ್ರಮ ಮಾರ್ಗ ಹಿಡಿದಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿ ಉದ್ದೇಶಿಸಿ ಮತನಾಡಿದ ಅವರು, ' ದೆಹಲಿಯಲ್ಲಿ ಪಕ್ಷವು ಗೆಲ್ಲುವುದಿಲ್ಲ ಎಂದು ಅರಿತ ಬಿಜೆಪಿ ನಾಯಕರು ಹೈಕಮಾಂಡ್ ನೀಡಿರುವ ಹಣದಲ್ಲಿ ಮುಕ್ಕಾಲು ಭಾಗವನ್ನು ತಾವೇ ಇಟ್ಟುಕೊಂಡು, ಉಳಿದ ಭಾಗವನ್ನು ಮತದಾರರಿಗೆ ಹಂಚುತ್ತಿದ್ದಾರೆ' ಎಂದರು.

'ಬಿಜೆಪಿ ಹೈಕಮಾಂಡ್ ಪ್ರತಿಯೊಬ್ಬ ಮತದಾರರಿಗೆ ₹10,000 ನೀಡುವಂತೆ ಹೇಳಿದ್ದರೆ, ಬಿಜೆಪಿ ನಾಯಕರು ₹9,000 ತಾವೇ ಇಟ್ಟುಕೊಂಡು, ಉಳಿದ ₹1,000 ಮಾತ್ರ ಮತದಾರರಿಗೆ ನೀಡುತ್ತಿದ್ದಾರೆ. ಜನರಿಗೆ ಇದು ತಿಳಿದು ಪ್ರಶ್ನಿಸಲು ಆರಂಭಿಸಿದ್ದಾರೆ' ಎಂದು ಹೇಳಿದರು.

ರಾಜಕೀಯ ಕಾರಣಕ್ಕಾಗಿ ಆಯುಷ್ಮಾನ್ ಯೋಜನೆಗೆ ನಿರ್ಬಂಧ: ಬಿಜೆಪಿ

ನವದೆಹಲಿ (ಪಿಟಿಐ): ಎಎಪಿ ಸರ್ಕಾರವು ಆಯುಷ್ಮಾನ್ ಭಾರತ ಯೋಜನೆಯನ್ನು ನಿರ್ಬಂಧಿಸುವ ಮೂಲಕ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಬಲಪಡಿಸಲು ಕೇಂದ್ರ ಸರ್ಕಾರವು ನೀಡಿದ್ದ ₹2,400 ಕೋಟಿ ಸ್ವೀಕರಿಸಲು ನಿರಾಕರಿಸುವ ಮೂಲಕ ಉತ್ತಮ ಆರೋಗ್ಯ ಸೇವೆಗಳಿಂದ ಜನರನ್ನು ವಂಚಿತರನ್ನಾಗಿಸಿದೆ ಎಂದು ಬಿಜೆಪಿ ಮಂಗಳವಾರ ವಾಗ್ದಾಳಿ ನಡೆಸಿತು.

ರಾಜಕೀಯ ಕಾರಣಗಳಿಂದ ಎಎಪಿ ಸರ್ಕಾರವು ಆಯುಷ್ಮಾನ್ ಭಾರತ ಯೋಜನೆಯನ್ನು ನಿರ್ಬಂಧಿಸಿದೆ ಎಂದು ದೆಹಲಿ ಬಿಜೆಪಿ ಘಟಕದ ಅಧ್ಯಕ್ಷ ವೀರೇಂದ್ರ ಸಚ್‌ದೇವ್ ಆರೋಪಿಸಿದರು.

ರಾಹುಲ್ ಸುಳ್ಳು ಹರಡುತ್ತಿದ್ದಾರೆ: ಎಎಪಿ

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸುಳ್ಳು ಸುದ್ದಿ ಹರಡುತ್ತಿದ್ದಾರೆ ಎಂದು ಎಎಪಿ ಆರೋಪಿಸಿದೆ.

'ರಾಹುಲ್ ಗಾಂಧಿ ಅವರು ಕಾಂಗ್ರೆಸ್ ಪಕ್ಷವನ್ನು ಉಳಿಸಲು ಈ ರೀತಿ ಹೇಳಿಕೆ ನೀಡುತ್ತಿದ್ದಾರೆ. ಅದರ ಬಗ್ಗೆ ನಾನು ಮಾತನಾಡುವುದಿಲ್ಲ' ಎಂದು ಪಕ್ಷದ ಸಂಚಾಲಕ ಅರವಿಂದ ಕೇಜ್ರಿವಾಲ್ ಹೇಳಿದರು.

ಕೇಜ್ರಿವಾಲ್ ಅವರು ಗೌತಮ್ ಅದಾನಿ ವಿಚಾರವಾಗಿ ಮೌನ ವಹಿಸಿದ್ದಾರೆ, ಜಾತಿ ಗಣತಿ ವಿಷಯದಲ್ಲಿ ಇಬ್ಬಗೆಯ ನೀತಿ ಅನುಸರಿಸುತ್ತಿದ್ದಾರೆ ಎಂದು ರಾಹುಲ್ ಗಾಂಧಿ ಆರೋಪಿಸಿದ್ದರು.

ಆತಿಶಿ ಬಳಿ ₹77 ಲಕ್ಷ ಆಸ್ತಿ, 10 ಗ್ರಾಂ ಚಿನ್ನ

ಪ್ರಜಾವಾಣಿ ವಾರ್ತೆ

ನವದೆಹಲಿ : ದೆಹಲಿ ಮುಖ್ಯಮಂತ್ರಿ ಆತಿಶಿ ಅವರ ಆಸ್ತಿಯು ಕಳೆದ ಐದು ವರ್ಷಗಳಲ್ಲಿ ₹59.79 ಲಕ್ಷದಿಂದ ₹76.93 ಲಕ್ಷಕ್ಕೆ ಏರಿಕೆಯಾಗಿದೆ. ನಾಮಪತ್ರದೊಂದಿಗೆ ಅವರು ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಈ ಮಾಹಿತಿ ತಿಳಿಸಿದ್ದಾರೆ. ಒಂದು ಲಕ್ಷ ಮೌಲ್ಯದ 10 ಗ್ರಾಂ ಚಿನ್ನ ಇದೆ ಎಂದೂ ಅವರು ತಿಳಿಸಿದ್ದಾರೆ.

2020ರಲ್ಲಿ ಸಲ್ಲಿಸಿದ್ದ ನಾಮಪತ್ರದಲ್ಲಿ ಅವರು, ದೆಹಲಿ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ತ್ರಿಪ್ತಾ ವಾಹಿ ಅವರ ಪುತ್ರಿ ಎಂದು ಹೇಳಿಕೊಂಡಿದ್ದರು. ಆದರೆ ಈ ಬಾರಿ ವಿಜಯ್ ಕುಮಾರ್ ಸಿಂಗ್ ಅವರ ಪುತ್ರಿ ಎಂದು ಹೇಳಿಕೊಂಡಿದ್ದಾರೆ. ಈ ಬಗ್ಗೆ ಯಾವುದೇ ಸ್ಪಷ್ಟನೆಯನ್ನು ಅವರು ನೀಡಿಲ್ಲ. ನಾಮಪತ್ರದಲ್ಲಿ ಪತಿಯ ಬಗ್ಗೆ ಯಾವುದೇ ಮಾಹಿತಿ ಉಲ್ಲೇಖಿಸಿಲ್ಲ. 2020ರಲ್ಲಿ ಪತಿಯ ಒಟ್ಟು ಆಸ್ತಿ ₹81.42 ಲಕ್ಷ ಎಂದು ಉಲ್ಲೇಖಿಸಿದ್ದರು.

ಆತಿಶಿ ಅವರು ವಿಧಾನಸಭೆ ಚುನಾವಣೆಯಲ್ಲಿ ಕಾಲ್ಕಾಜಿ ಕ್ಷೇತ್ರದಿಂದ ಸ್ಪರ್ಧಿಸಲು ಮಂಗಳವಾರ ನಾಮಪತ್ರ ಸಲ್ಲಿಸಿದರು.

'ಪಿಒಕೆ ಇಲ್ಲದೆ ಕಾಶ್ಮೀರ ಅಪೂರ್ಣ'

ಪ್ರಜಾವಾಣಿ ವಾರ್ತೆ

ಶ್ರೀನಗರ: 'ಪಾಕಿಸ್ತಾನ ಆಕ್ರಮಿತ ಕಾಶ್ಮೀರ' (ಪಿಒಕೆ) ಇಲ್ಲದೆ ಜಮ್ಮು ಮತ್ತು ಕಾಶ್ಮೀರ ಪರಿಪೂರ್ಣವಾಗುವುದಿಲ್ಲ' ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ತಿಳಿಸಿದರು.

ಜಮ್ಮುವಿನ ಅಖನೂರ್‌ನಲ್ಲಿ ಸೇನಾ ಪಡೆಗಳ 9ನೇ ಹಿರಿಯರ ದಿನದ ಅಂಗವಾಗಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಪಿಒಕೆಯನ್ನು ಪಾಕಿಸ್ತಾನವು ನಿರಂತರವಾಗಿ ಭಯೋತ್ಪಾದನಾ ಚಟುವಟಿಕೆಗಳಿಗೆ ಬಳಸಿಕೊಳ್ಳುತ್ತಿದೆ. ಭಯೋತ್ಪಾದಕ ತರಬೇತಿ ಶಿಬಿರಗಳ ಕೇಂದ್ರವಾಗಿ ಮಾರ್ಪಡಿಸಿದೆ' ಎಂದು ಆರೋಪಿಸಿದರು.

'ಪಿಒಕೆಯಲ್ಲಿ ಭಯೋತ್ಪಾಕರ ತರಬೇತಿ ಕೇಂದ್ರಗಳಿದ್ದು, ಗಡಿಯುದ್ದಕ್ಕೂ ಉಗ್ರರು ನೆಲೆಯಾಗಿಸಿಕೊಂಡಿದ್ದಾರೆ. ಅಲ್ಲಿನ ಚಟುವಟಿಕೆಗಳ ಬಗ್ಗೆ ಭಾರತಕ್ಕೆ ಸಂಪೂರ್ಣ ಅರಿವಿದೆ' ಎಂದರು.

ಸಂಕ್ಷಿಪ್ತ ಸುದ್ದಿ

ಭಾರತೀಯರ ಶೀಘ್ರ ಬಿಡುಗಡೆ: ರಷ್ಯಾಕ್ಕೆ ಒತ್ತಾಯ

ನವದೆಹಲಿ(ಪಿಟಿಐ): ರಷ್ಯಾ ಸೇನೆ ನೇಮಕ ಮಾಡಿಕೊಂಡಿರುವ ಎಲ್ಲ ಭಾರತೀಯರನ್ನು ಬಿಡುಗಡೆ ಮಾಡುವಂತೆ ರಷ್ಯಾ ಸರ್ಕಾರವನ್ನು ಭಾರತ ಮಂಗಳವಾರ ಒತ್ತಾಯಿಸಿದೆ.

ರಣಧೀರ ಜೈಸ್ವಾಲ್

ರಷ್ಯಾ ಸೇನೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಕೇರಳದ ತ್ರಿಶ್ಶೂರಿನ ಬಿನಿಲ್ ಟಿ.ಬಿ ಮೃತಪಟ್ಟ ಬೆನ್ನಲ್ಲೇ, ಭಾರತದಿಂದ ಈ ಒತ್ತಾಯ ಕೇಳಿ ಬಂದಿದೆ. ಬಿನಿಲ್ ಸಾವಿನೊಂದಿಗೆ, ರಷ್ಯಾ–ಉಕ್ರೇನ್ ಯುದ್ಧದ ವೇಳೆ ಮೃತಪಟ್ಟ ಭಾರತೀಯರ ಸಂಖ್ಯೆ 10ಕ್ಕೆ ಏರಿದಂತಾಗಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ ಜೈಸ್ವಾಲ್, 'ಕೇರಳದ ಬಿನಿಲ್ ಮೃತಪಟ್ಟರೆ,ಮತ್ತೊಬ್ಬ ಭಾರತೀಯ ಗಾಯಗೊಂಡಿದ್ದಾರೆ' ಎಂದರು.

'ದೇಹ ಅವಮಾನಿಸುವ ಹೇಳಿಕೆ ಸಲ್ಲದು'

ತಿರುವನಂತಪುರ: 'ವ್ಯಕ್ತಿಯ ದೇಹ ಕುರಿತು ಅವಹೇಳನಕಾರಿ ಮಾತುಗಳನ್ನಾಡುವುದು, ದ್ವಂದ್ವಾರ್ಥದ ಪದ ಬಳಸುವುದನ್ನು ಸಮಾಜ ಒಪ್ಪುವುದಿಲ್ಲ' ಎಂದಿರುವ ಕೇರಳ ಹೈಕೋರ್ಟ್, ಚೆಮ್ಮನೂರ್ ಜುವೆಲ್ಲರ್ಸ್‌ನ ಮಾಲೀಕ ಬಾಬಿ ಚೆಮ್ಮನೂರ್ ಅವರಿಗೆ ಜಾಮೀನು ನೀಡಿದೆ.

ಬಾಬಿ ಚೆಮ್ಮನೂರ್

ಜಾಮೀನು ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪಿ.ವಿ. ಕುಂಞಿಕೃಷ್ಣನ್, 'ಮತ್ತೊಬ್ಬರ ಕುರಿತು ಹೇಳಿಕೆ ನೀಡುವಾಗ, ಟೀಕೆ ಮಾಡುವಾಗ ಪ್ರತಿಯೊಬ್ಬರು ಜಾಗ್ರತೆ ವಹಿಸಬೇಕು' ಎಂದು ಎಚ್ಚರಿಸಿದರು.

ಬಹುಭಾಷಾ ನಟಿ ಹನಿ ರೋಸ್ ಅವರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇರೆಗೆ ಬಾಬಿ ಅವರನ್ನು ಬಂಧಿಸಲಾಗಿತ್ತು.

ನಟಿ ಕುರಿತು ದ್ವಂದ್ವಾರ್ಥದ ಶಬ್ದಗಳನ್ನು ಬಳಕೆ ಮಾಡಿದ್ದಕ್ಕಾಗಿ ಬಾಬಿ ಅವರನ್ನು ನ್ಯಾಯಾಲಯ ತೀವ್ರ ತರಾಟೆಗೆ ತೆಗೆದುಕೊಂಡಿತು.

'ಈ ಜಾಮೀನು ಅರ್ಜಿ ವಿಚಾರಣೆಯನ್ನು ಮುಕ್ತಾಯಗೊಳಿಸುವುದಕ್ಕೂ ಮುನ್ನ ನಾನು ಈ ಮಾತುಗಳನ್ನು ಹೇಳಬೇಕಾದ ಅನಿವಾರ್ಯತೆ ಇದೆ. 'ಬಹಳ ದಪ್ಪಗಿದ್ದೀರಿ, ಬಹಳ ಕುಳ್ಳಗೆ, ತೀರ ಎತ್ತರ, ಬಹಳ ಕಪ್ಪು ಬಣ್ಣ ಈ ರೀತಿ ಒಬ್ಬ ವ್ಯಕ್ತಿಯ ದೇಹ ಕುರಿತು ಹೇಳುವುದನ್ನು ನಿಲ್ಲಿಸಬೇಕು. ನಾವು ಯಾರೂ ಪರಿಪೂರ್ಣರಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು' ಎಂದು ನ್ಯಾಯಮೂರ್ತಿ ಹೇಳಿದರು.

ಟಿಎಂಸಿ ಕಾರ್ಯಕರ್ತನ ಗುಂಡಿಕ್ಕಿ ಹತ್ಯೆ

ಮಾಲ್ಡಾ (ಪಿಟಿಐ): ಪಶ್ಚಿಮ ಬಂಗಾಳದ ಮಾಲ್ಡಾ ಜಿಲ್ಲೆಯಲ್ಲಿ ತೃಣಮೂಲ ಕಾಂಗ್ರೆಸ್‌ನ (ಟಿಎಂಸಿ) ಕಾರ್ಯಕರ್ತರೊಬ್ಬರನ್ನು ಗುಂಡಿಕ್ಕಿ ಹತ್ಯೆ ಮಾಡಲಾಗಿದೆ ಎಂದು ಪೊಲೀಸರು ಮಂಗಳವಾರ ತಿಳಿಸಿದರು.

ಸ್ಥಳೀಯ ಟಿಎಂಸಿ ಘಟಕದ ಅಧ್ಯಕ್ಷ ಬಾಕುಲ್ ಶೇಖ್ ಹಾಗೂ ಅವರ ಸಹಚರರ ಮೇಲೆ ಕಾಲಿಯಾಗಂಜ್‌ನಲ್ಲಿ ಅಪರಿಚಿತ ವ್ಯಕ್ತಿಗಳು ಗುಂಡಿನ ದಾಳಿ ನಡೆಸಿದ್ದಾರೆ. ಈ ವೇಳೆ ಅತಾವುಲ್ ಹಕ್ ಎಂಬವರು ಸ್ಥಳದಲ್ಲೇ ಮೃತಪಟ್ಟಿದ್ದು, ಬಾಕುಲ್ ಶೇಖ್ ಹಾಗೂ ಪಂಚಾಯಿತಿ ಮಾಜಿ ಮುಖ್ಯಸ್ಥ ಎಸಾರುದ್ದೀನ್ ಶೇಖ್ ತೀವ್ರವಾಗಿ ಗಾಯಗೊಂಡಿದ್ದಾರೆ.

ಐಎಂಡಿ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಸಲಹೆ

'ಭೂಕಂಪ ಮುನ್ನೆಚ್ಚರಿಕೆ ವ್ಯವಸ್ಥೆ ಅಗತ್ಯ'

ನವದೆಹಲಿ (ಪಿಟಿಐ): ಭೂಕಂಪಗಳ ಬಗ್ಗೆ ಮುನ್ನೆಚ್ಚರಿಕೆ ನೀಡುವಂತಹ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ವಿಜ್ಞಾನಿಗಳು ಮತ್ತು ಸಂಶೋಧಕರು ಕಾರ್ಯೋನ್ಮುಖವಾಗಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಭಾರತೀಯ ಹವಾಮಾನ ಇಲಾಖೆಯ (ಐಎಂಡಿ) 150ನೇ ವರ್ಷಾಚರಣೆ ಅಂಗವಾಗಿ ಮಂಗಳವಾರ ಏರ್ಪಡಿಸಿದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಹವಾಮಾನ ಮುನ್ಸೂಚನೆ ಕ್ಷೇತ್ರದಲ್ಲಿನ ಪ್ರಗತಿಯಿಂದಾಗಿ ನೈಸರ್ಗಿಕ ವಿಕೋಪಗಳಿಂದ ಉಂಟಾಗುವ ಹಾನಿಯನ್ನು ತಗ್ಗಿಸಲು ದೇಶಕ್ಕೆ ಸಾಧ್ಯವಾಗಿದೆ' ಎಂದರು.

1998ರಲ್ಲಿ ಗುಜರಾತ್‌ನ ಕಾಂಡ್ಲಾ ಮತ್ತು 1999ರಲ್ಲಿ ಒಡಿಶಾಕ್ಕೆ ಅಪ್ಪಳಿಸಿದ ಚಂಡಮಾರುತಗಳು ಸಾವಿರಕ್ಕೂ ಅಧಿಕ ಮಂದಿಯ ಸಾವಿಗೆ ಕಾರಣವಾಗಿದ್ದನ್ನು ನೆನಪಿಸಿದ ಪ್ರಧಾನಿ, 'ಚಂಡಮಾರುತಗಳ ಬಗ್ಗೆ ಮುನ್ಸೂಚನೆ ನೀಡುವಂತಹ ಉತ್ತಮ ವ್ಯವಸ್ಥೆ ಇರುವುದರಿಂದ ಈಗ ಪ್ರಾಣಹಾನಿಯ ಪ್ರಮಾಣ ಕಡಿಮೆಯಾಗಿದೆ' ಎಂದರು.

'ಹವಾಮಾನ ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಧಿಸಿರುವ ಪ್ರಗತಿಯಿಂದಾಗಿ ಭಾರತದ ವಿಪತ್ತು ನಿರ್ವಹಣಾ ಸಾಮರ್ಥ್ಯ ಗಮನಾರ್ಹವಾಗಿ ಸುಧಾರಿಸಿದ್ದು, ಇದು ದೇಶಕ್ಕೆ ಮಾತ್ರವಲ್ಲದೆ ಜಾಗತಿಕ ಸಮುದಾಯಕ್ಕೂ ಪ್ರಯೋಜನಕಾರಿಯಾಗಿದೆ. ಹಠಾತ್ ಪ್ರವಾಹದ ಬಗ್ಗೆ ಮುನ್ಸೂಚನೆ ನೀಡಲು ನಮ್ಮಲ್ಲಿರುವ ವ್ಯವಸ್ಥೆಯು ನೇಪಾಳ, ಭೂತಾನ್, ಬಾಂಗ್ಲಾದೇಶ ಮತ್ತು ಶ್ರೀಲಂಕಾ ಸೇರಿದಂತೆ ನೆರೆಯ ರಾಷ್ಟ್ರಗಳಿಗೆ ನಿರ್ಣಾಯಕ ಮಾಹಿತಿ ಒದಗಿಸುತ್ತದೆ' ಎಂದು ತಿಳಿಸಿದರು. 'ಯಾವುದೇ ದೇಶದ ವಿಪತ್ತು ನಿರ್ವಹಣಾ ಸಾಮರ್ಥ್ಯಕ್ಕೆ ಹವಾಮಾನಶಾಸ್ತ್ರವು ಪ್ರಮುಖ ಬೆಂಬಲ ನೀಡುತ್ತದೆ. ನೈಸರ್ಗಿಕ ವಿಕೋಪಗಳ ಪ್ರಭಾವವನ್ನು ಕಡಿಮೆ ಮಾಡಲು, ನಾವು ಹವಾಮಾನಶಾಸ್ತ್ರದ ದಕ್ಷತೆಯನ್ನು ಹೆಚ್ಚಿಸಬೇಕು' ಎಂದು ಸಲಹೆ ನೀಡಿದರು.

'ಮಿಷನ್ ಮೌಸಮ್'ಗೆ ಚಾಲನೆ: ಹವಾಮಾನದಲ್ಲಿ ಆಗುವ ಬದಲಾವಣೆ ಮೇಲೆ ನಿಗಾ ಇಡುವಂತಹ ಅತ್ಯಾಧುನಿಕ ತಂತ್ರಜ್ಞಾನಗಳು, ರಾಡಾರ್‌ಗಳು ಮತ್ತು ಉಪಗ್ರಹಗಳನ್ನು ಅಭಿವೃದ್ಧಿಪಡಿಸಲು ಆರಂಭಿಸಿರುವ 'ಮಿಷನ್ ಮೌಸಮ್' ಯೋಜನೆಗೆ ಚಾಲನೆ ಪ್ರಧಾನಿ ಅವರು ನೀಡಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಐಎಂಡಿಯ 150ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳೊಂದಿಗೆ ಸಂವಾದ ನಡೆಸಿದರು –ಪಿಟಿಐ ಚಿತ್ರ

'ಮೆಟಾ'ಗೆ ಶೀಘ್ರ ಸಮನ್ಸ್: ದುಬೆ

ನವದೆಹಲಿ (ಪಿಟಿಐ): 'ಭಾರತದ ವರ್ಚಸ್ಸಿಗೆ ಧಕ್ಕೆ ಉಂಟು ಮಾಡುವ ತಪ್ಪು ಮಾಹಿತಿಗಾಗಿ ಸಾಮಾಜಿಕ ಜಾಲತಾಣ ವೇದಿಕೆಗಳ ಮಾಲೀಕತ್ವದ ಸಂಸ್ಥೆ 'ಮೆಟಾ' ಕ್ಷಮೆ ಕೋರಬೇಕು' ಎಂದು ಬಿಜೆಪಿ ಸಂಸದ ನಿಶಿಕಾಂತ್ ದುಬೆ ಒತ್ತಾಯಿಸಿದ್ದಾರೆ.

ಸಂವಹನ ಮತ್ತು ಮಾಹಿತಿ ತಂತ್ರಜ್ಞಾನ ಕುರಿತ ಜಂಟಿ ಸಂಸದೀಯ ಸ್ಥಾಯಿ ಸಮಿತಿಯ ಅಧ್ಯಕ್ಷರೂ ಆಗಿರುವ ದುಬೆ, 'ಲೋಕಸಭೆ ಚುನಾವಣೆ ಕುರಿತಂತೆ ಮೆಟಾ ಅಧ್ಯಕ್ಷರ ಹೇಳಿಕೆ ಹಿನ್ನೆಲೆಯಲ್ಲಿ ಸಮಿತಿಯು ಅವರಿಗೆ ಸಮನ್ಸ್ ಜಾರಿಗೊಳಿಸಲಿದೆ' ಎಂದು ತಿಳಿಸಿದರು.

'ಅಸಮರ್ಪಕ ಮಾಹಿತಿಗಾಗಿ ಸಮಿತಿ ಮೆಟಾಗೆ ಸಮನ್ಸ್ ನೀಡಲಿದೆ. ಪ್ರಜಾಪ್ರಭುತ್ವ ರಾಷ್ಟ್ರದ ವರ್ಚಸ್ಸಿಗೆ ಧಕ್ಕೆ ಆಗುವಂತಹ ತಪ್ಪು ಮಾಹಿತಿಗಳ ಹಂಚಿಕೆ ಸಲ್ಲದು. ಈ ತಪ್ಪಿಗಾಗಿ ಮೆಟಾ ಭಾರತದ ಸಂಸತ್ತು ಮತ್ತು ದೇಶದ ಜನರ ಕ್ಷಮೆ ಕೋರಬೇಕು' ಎಂದು ಪ್ರತಿಪಾದಿಸಿದರು.

ಬಿಆರ್‌ಎಸ್‌ನ ಇಬ್ಬರಿಗೆ 'ಗೃಹ ಬಂಧನ'

ಹೈದರಾಬಾದ್ (ಪಿಟಿಐ): ಬಿಆರ್‌ಎಸ್ ಶಾಸಕ ಕೌಶಿಕ್ ರೆಡ್ಡಿ ಅವರ ಬಂಧನದ ಹಿಂದೆಯೇ ಆ ಪಕ್ಷದ ಹಿರಿಯ ಮುಖಂಡರಾದ ಕೆ.ಟಿ.ರಾಮರಾವ್ ಮತ್ತು ಟಿ.ಹರೀಶ್ ರಾವ್ ಅವರನ್ನು ಪೊಲೀಸರು ಮಂಗಳವಾರ 'ಗೃಹ-ಬಂಧನ'ದಲ್ಲಿ ಇರಿಸಿದ್ದಾರೆ. ಈ ಮುಖಂಡರನ್ನು ಅವರ ಮನೆಯಲ್ಲಿಯೇ 'ಗೃಹಬಂಧನ'ದಲ್ಲಿರಿಸಲಾಗಿದೆ ಎಂದು ಪಕ್ಷ ಹೇಳಿದೆ. ಜ. 12ರಂದು ಸಭೆಯೊಂದರಲ್ಲಿ ಶಾಸಕ ಸಂಜಯ್ ಕುಮಾರ್‌ಗೆ ನಿಂದಿಸಿದ್ದ ಆರೋಪದಡಿ ಕೌಶಿಕ್ ರೆಡ್ಡಿ ಬಂಧನವಾಗಿತ್ತು.

ಆರು ಯೋಧರಿಗೆ ಗಾಯ

ಜಮ್ಮು (ಪಿಟಿಐ): ರಜೌರಿಯ ಗ್ರಾಮವೊಂದರಲ್ಲಿ ಮಂಗಳವಾರ ನೆಲಬಾಂಬ್ ಸ್ಫೋಟದಿಂದಾಗಿ ಆರು ಮಂದಿ ಯೋಧರು ಗಾಯಗೊಂಡಿದ್ದಾರೆ. ಇಲ್ಲಿನ ನೌಶೇರಾದ ಖಂಬಾ ಕೋಟೆ ಪ್ರದೇಶದಲ್ಲಿ ಬೆಳಿಗ್ಗೆ 10.45ರ ವೇಳೆಗೆ ಭದ್ರತಾ ಪಡೆಗಳು ಗಸ್ತು ತಿರುಗುತ್ತಿದ್ದ ವೇಳೆ ಆಕಸ್ಮಿಕವಾಗಿ ನೆಲಬಾಂಬ್ ಮೇಲೆ ಕಾಲಿಟ್ಟ ವೇಳೆ ಸ್ಫೋಟಗೊಂಡಿದೆ.

ತಂಡದ ಬಸ್‌ನಲ್ಲಿಯೇ ಆಟಗಾರರ ಪ್ರಯಾಣ ಕಡ್ಡಾಯ: ಬಿಸಿಸಿಐ ಪ್ರಸ್ತಾವ

ಶಿಸ್ತು ಸಂಹಿತೆ ಪರಿಷ್ಕರಣೆ?

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡವು ಪ್ರವಾಸಕ್ಕೆ ತೆರಳಿದಾಗ ಪಾಲಿಸಬೇಕಾದ ಶಿಸ್ತು ಸಂಹಿತೆಯಲ್ಲಿ ಅಮೂಲಾಗ್ರ ಪರಿಷ್ಕರಣೆಗೆ ಬಿಸಿಸಿಐ ಸಿದ್ಧತೆ ನಡೆಸಿದೆ.

ಈಚೆಗೆ ಆಸ್ಟ್ರೇಲಿಯಾದಲ್ಲಿ ನಡೆದ ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯಲ್ಲಿ ತಂಡದಲ್ಲಿ ಕೆಲವು ಶಿಸ್ತು ಉಲ್ಲಂಘನೆಯ ಪ್ರಕರಣಗಳು ಕಂಡು ಬಂದ ಹಿನ್ನೆಲೆಯಲ್ಲಿ ಮಂಡಳಿ ಈ ಹೆಜ್ಜೆ ಇಡಲು ಸಿದ್ಧವಾಗಿದೆ.

ಅದರಲ್ಲಿ ಪ್ರಮುಖವಾಗಿ ; ಪ್ರವಾಸದಲ್ಲಿ ಆಟಗಾರರ ಪತ್ನಿ ಹಾಗೂ ಕುಟುಂಬ ಸದಸ್ಯರ ಜೊತೆಗಿರುವಿಕೆಯ ಕಾಲಮಿತಿಯನ್ನು ಕಡಿತಗೊಳಿಸುವುದೂ ಸೇರಿದೆ.

ಅದಲ್ಲದೇ; ತಂಡದ ಅಧಿಕೃತ ಬಸ್‌ನಲ್ಲಿ ಆಟಗಾರರ ವೈಯಕ್ತಿಕ ವ್ಯವಸ್ಥಾಪಕ ಸಿಬ್ಬಂದಿ ಹಾಗೂ ತರಬೇತುದಾರರು ಪ್ರಯಾಣಿಸುವುದನ್ನೂ ನಿರ್ಬಂಧಿಸಲಿದೆ.

ಆಸ್ಟ್ರೇಲಿಯಾ ಪ್ರವಾಸದ ಸಂದರ್ಭದಲ್ಲಿ ತರಬೇತುದಾರರ ತಂಡದ ಹಿರಿಯ ಸದಸ್ಯರೊಬ್ಬರ ವೈಯಕ್ತಿಕ ವ್ಯವಸ್ಥಾಪಕರೊಬ್ಬರು ತಂಡದ ಬಸ್‌ನಲ್ಲಿ ಪಯಣಿಸಿದ್ದರು ಎನ್ನಲಾಗಿದೆ.

ಪಂದ್ಯಗಳ ಸಂದರ್ಭದಲ್ಲಿ ಆಟಗಾರರು ಕಡ್ಡಾಯವಾಗಿ ತಂಡದ ಅಧಿಕೃತ ಬಸ್‌ನಲ್ಲಿಯೇ ಪ್ರಯಾಣಿಸಬೇಕು. ತಮ್ಮ ಖಾಸಗಿ ಅಥವಾ ಇನ್ನಿತರ ವಾಹನಗಳಲ್ಲಿ ಓಡಾಡುವಂತಿಲ್ಲ. ಮೊದಲಿನಿಂದಲೂ ಬಹುತೇಕ ಆಟಗಾರರು ಈ ನಿಯಮ ಪಾಲಿಸುತ್ತಿದ್ದಾರೆ. ಕೆಲವು ಆಟಗಾರರು ಮತ್ತು ನೆರವು ಸಿಬ್ಬಂದಿ ಬೇರೆ ವಾಹನಗಳನ್ನು ಬಳಸಿದ ನಿದರ್ಶನಗಳೂ ಇವೆ.


ಗೌತಮ್ ಗಂಭೀರ್ ಮತ್ತು ಅಜಿತ್ ಅಗರ್ಕರ್

ಆಸ್ಟ್ರೇಲಿಯಾ ಎದುರಿನ ಸರಣಿಯ ವೈಫಲ್ಯದ ಕುರಿತು ಭಾನುವಾರ ನಡೆದ ಅವಲೋಕನ ಸಭೆಯಲ್ಲಿ ಈ ಎಲ್ಲ ಸಾಧ್ಯತೆಗಳ ಕುರಿತು ಮಾತುಕತೆ ನಡೆಯಿತು. ಆದರೆ ಇವುಗಳನ್ನು ಕೂಡಲೇ ಜಾರಿಗೊಳಿಸುವ ಕುರಿತು ಯಾವುದೇ ಮಾಹಿತಿ ಇಲ್ಲ.

ಈ ಸಭೆಯಲ್ಲಿ ಮುಖ್ಯ ಕೋಚ್ ಗೌತಮ್ ಗಂಭೀರ್, ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ, ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರ್ಕರ್ ಮತ್ತು ನಾಯಕ ರೋಹಿತ್ ಶರ್ಮಾ ಹಾಜರಿದ್ದರು.

‘ವೈಯಕ್ತಿಕ ಮ್ಯಾನೇಜರ್‌ಗಳು ತಂಡದ ಬಸ್‌ನಲ್ಲಿ ಪ್ರಯಾಣಿಸುವುದು ಭ್ರಷ್ಟಾಚಾರ ತಡೆ ಘಟಕದ ಕೆಂಗಣ್ಣಿಗೆ ಗುರಿಯಾಗುತ್ತದೆ. ಈ ರೀತಿಯ ಪರಿಪಾಠವನ್ನು ತಪ್ಪಿಸಬೇಕು. ಆಟಗಾರರು ತಮ್ಮ ಪತ್ನಿ ಅಥವಾ ಕುಟುಂಬ ಸದಸ್ಯರೊಂದಿಗೆ ಪ್ರಯಾಣಿಸುವ ನಿಯಮದ ಕುರಿತು ಮಂಡಳಿಯಲ್ಲಿ ಚರ್ಚಿಸಿ, ಶೀಘ್ರದಲ್ಲಿ ನಿರ್ಧಾರ ಕೈಗೊಳ್ಳಲಾಗುವುದು’ ಎಂದು ಬಿಸಿಸಿಐ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಆಟಗಾರರು ಮತ್ತು ಕೋಚ್‌ಗಳು ತಂಡದ ಬಸ್ ಮೂಲಕವೇ ಪ್ರಯಾಣಿಸಬೇಕು. ಇದು ಬಹಳ ಕಾಲದಿಂದಲೂ ಇರುವ ನಿಯಮ. ಆದರೂ ಕೆಲವೊಮ್ಮೆ ಪ್ರತ್ಯೇಕ ಸಾರಿಗೆ ವ್ಯವಸ್ಥೆ ಮೂಲಕ ಓಡಾಡುತ್ತಾರೆ. ಇದನ್ನು ತಪ್ಪಿಸಬೇಕಿದೆ’ ಎಂದೂ ಅವರು ಹೇಳಿದರು.

ಶಿಸ್ತು ಪಾಲನೆ ನಿಯಮಗಳ ಕುರಿತ ಚರ್ಚೆಯ ಸುದ್ದಿ ಬಹಿರಂಗವಾಗುತ್ತಿದ್ದಂತೆಯೇ ಪ್ರತಿಕ್ರಿಯಿಸಿರುವ ವೀಕ್ಷಕ ವಿವರಣೆಗಾರ ಆಕಾಶ್ ಚೋಪ್ರಾ, ‘ಆಟಗಾರರೆಲ್ಲರೂ ತಂಡದ ಅಧಿಕೃತ ಬಸ್‌ನಲ್ಲಿಯೇ ಪ್ರಯಾಸಬೇಕೆಂಬ ನಿಯಮ ಅಚ್ಚರಿ ಮೂಡಿಸುತ್ತಿದೆ. ಇದು ಮೊದಲಿನಿಂದಲೂ ಇದ್ದ ನಿಯಮವೇ ಅಲ್ಲವೇ? ಒಂದೊಮ್ಮೆ ಪರಿಷ್ಕರಣೆಯಾಗಿತ್ತೇ? ಹಾಗಿದ್ದರೆ ಅದನ್ನು ಯಾರು ಮತ್ತು ಏಕೆ ಬದಲಾವಣೆ ಮಾಡಿದರು?’ ಎಂದು ಎಕ್ಸ್‌ನಲ್ಲಿ ಸಂದೇಶ ಹಾಕಿದ್ದಾರೆ.

ಆಸ್ಟ್ರೇಲಿಯಾ ಪ್ರವಾಸದ ಸಂದರ್ಭದಲ್ಲಿ ಭಾರತ ತಂಡದ ಕಾಯ್ದಿಟ್ಟ ಆಟಗಾರನ ಪತ್ನಿಯೊಬ್ಬರು ತಮ್ಮ ಯೂಟ್ಯೂಬ್ ವಾಹಿನಿಗೆ ಆಟಗಾರರ ಪ್ರಯಾಣದ ಕುರಿತು ವಿಡಿಯೊ ಚಿತ್ರೀಕರಣ ಮಾಡಿದ್ದರೆನ್ನಲಾಗಿದೆ. ಈ ಕಾರಣಕ್ಕಾಗಿಯೇ ಶಿಸ್ತು ಸಂಹಿತೆಯನ್ನು ಮತ್ತಷ್ಟು ಬಿಗಿಗೊಳಿಸುವ ಕುರಿತು ಬಿಸಿಸಿಐ ಗಂಭೀರವಾಗಿ ಚಿಂತಿಸಿದೆ.

ಗಂಭೀರ್ ಭವಿಷ್ಯ..?: ಮುಂದಿನ ತಿಂಗಳು ನಡೆಯಲಿರುವ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ ನಂತರ ಭಾರತ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರ ಭವಿಷ್ಯ ನಿರ್ಧಾರವಾಗಲಿದೆ.

ಗಂಭೀರ್ ಅವರು ಕಳೆದ ಜುಲೈನಲ್ಲಿ ಭಾರತ ತಂಡದ ಮುಖ್ಯ ಕೋಚ್ ಆಗಿ ಅಧಿಕಾರ ವಹಿಸಿಕೊಂಡಿದ್ದರು. ಅದರ ನಂತರ ತಂಡವು ಆಡಿರುವ 10 ಟೆಸ್ಟ್‌ಗಳಲ್ಲಿ 6ರಲ್ಲಿ ಸೋತಿದೆ. ಶ್ರೀಲಂಕಾದಲ್ಲಿ ಏಕದಿನ ಸರಣಿಯನ್ನೂ ಸೋತಿತ್ತು.

ಕೊಕ್ಕೊ ವಿಶ್ವಕಪ್: ಭಾರತಕ್ಕೆ ಜಯ

ನವದೆಹಲಿ (ಪಿಟಿಐ): ಭಾರತ ಮಹಿಳೆ ಮತ್ತು ಪುರುಷರ ತಂಡಗಳು ನಡೆಯುತ್ತಿರುವ ಕೊಕ್ಕೊ ವಿಶ್ವಕಪ್ ಟೂರ್ನಿಯ ಪಂದ್ಯಗಳಲ್ಲಿ ಜಯಗಳಿಸಿದವು.

ಇಂದಿರಾಗಾಂಧಿ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಮಂಗಳವಾರ ಮಹಿಳೆಯರ ವಿಭಾಗದ ಪಂದ್ಯದಲ್ಲಿ ದಕ್ಷಿಣ ಕೊರಿಯಾ ಎದುರು ಭಾರತದ ಆಟಗಾರ್ತಿಯರು ಪ್ರಾಬಲ್ಯ ಮೆರೆದರು. ಆತಿಥೇಯರ ಅನುಭವದ ಆಟದ ಮುಂದೆ ಕೊರಿಯಾದ ಶರಣಾಯಿತು. ಏಕಪಕ್ಷೀಯವಾಗಿದ್ದ ಪಂದ್ಯದಲ್ಲಿ ಭಾರತ ತಂಡವು 175–18ರ ಭಾರಿ ಅಂತರದಿಂದ ಜಯಗಳಿಸಿತು.

ಭಾರತದ ಬಿ. ಚೈತ್ರಾ, ಮೀರು ಮತ್ತು ನಾಯಕಿ ಪ್ರಿಯಾಂಕಾ ಇಂಗ್ಳೆ ಅವರು ಗೆಲುವಿನ ರೂವಾರಿಗಳಾದರು. ಅದರಲ್ಲಿ ಚೈತ್ರಾ ಅವರು ಕರ್ನಾಟಕದ ಆಟಗಾರ್ತಿಯಾಗಿದ್ದಾರೆ.

ಪಂದ್ಯದ ಆರಂಭದಲ್ಲಿಯೇ ಈ ಮೂವರು ಆಟಗಾರ್ತಿಯರು ಗೆಲುವಿಗೆ ಭದ್ರ ಅಡಿಪಾಯ ಹಾಕಿದರು. ಈ ಉತ್ತಮ ಆರಂಭದಿಂದಾಗಿ ತಂಡದ ಗೆಲುವಿನ ಹಾದಿಯು ಸರಾಗವಾಯಿತು.

ಪುರುಷರ ವಿಭಾಗದಲ್ಲಿ ಭಾರತ ತಂಡವು 64–34 ಬ್ರೆಜಿಲ್ ವಿರುದ್ಧ ಗೆದ್ದಿತು.

ರಾತ್ರಿ ನಡೆದ ಪಂದ್ಯವು ಬಹಳ ತುರುಸಿನ ಸ್ಪರ್ಧೆಯಿಂದ ಕೂಡಿತ್ತು. ಬ್ರೆಜಿಲ್ ದಾಳಿಯ ಮೂಲಕ 16 ಅಂಕಗಳನ್ನು ಗಳಿಸಿ ಆರಂಭ ಮಾಡಿತು. ನಂತರ ತಿರುಗೇಟು ನೀಡಿದ ಭಾರತ ತಂಡವು ಗೆಲುವಿನತ್ತ ಸಾಗಿತು.

ವಿಶ್ವಕಪ್ ಕೊಕ್ಕೊ ಟೂರ್ನಿಯಲ್ಲಿ ಭಾರತ ಮತ್ತು ದಕ್ಷಿಣ ಕೊರಿಯಾ ಆಟಗಾರ್ತಿಯರ ಪೈಪೋಟಿ

ಆತಿಥೇಯ ತಂಡದ ರಾಕಿಸನ್ ಸಿಂಗ್, ಪಬನಿ ಸೇಬರ್ ಹಾಗೂ ಆದಿತ್ಯ ಗಣಪುಲೆ ಅವರ ಆಟ ರಂಗೇರಿತು.

ಈ ಗೆಲುವಿನೊಂದಿಗೆ ಭಾರತ ತಂಡವು ನಾಕೌಟ್ ಹಂತದ ಸಮೀಪ ಬಂದಿತು.

ಕಳೆಗುಂದಿದ ಒಲಿಂಪಿಕ್ಸ್ ಪದಕ: ಬದಲಾಯಿಸಲು ಕ್ರಮ

ನವದೆಹಲಿ (ಪಿಟಿಐ): ಹೋದ ವರ್ಷ ನಡೆದ ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ ಕೆಲವು ವಿಜೇತರಿಗೆ ನೀಡಿದ ಪದಕಗಳು ಕಳೆಗುಂದುತ್ತಿವೆ. ಅದರಿಂದಾಗಿ ಅಂತರರಾಷ್ಟ್ರೀಯ ಒಲಿಂಪಿಕ್ ಕೌನ್ಸಿಲ್ (ಐಒಸಿ) ಅಂತಹ ಪದಕಗಳನ್ನು ಮರಳಿ ಪಡೆದು ಹೊಸದನ್ನು ನೀಡಲು ನಿರ್ಧರಿಸಿದೆ.

ಭಾರತದ ಶೂಟಿಂಗ್ ತಾರೆ ಮನು ಭಾಕರ್ ಅವರು ಗಳಿಸಿದ ಎರಡು ಕಂಚಿನ ಪದಕಗಳು ಕೂಡ ಬಣ್ಣ ಕಳೆದುಕೊಂಡಿವೆ. ಅಲ್ಲದೇ ಗುಣಮಟ್ಟವು ಕೂಡ ಕುಂದಿದೆ. ಆದ್ದರಿಂದ ಅವರಿಗೂ ಹೊಸ ಪದಕಗಳನ್ನು ನೀಡಲಾಗುವುದು.

ಅಸಲಿ ಪದಕಗಳನ್ನು ಟಂಕಿಸಿದ ಸಂಸ್ಥೆಯೇ ಹೊಸದನ್ನೂ ತಯಾರಿಸಲಿದೆ. ಅಸಲಿ ಪದಕಗಳಲ್ಲಿದ್ದ ಎಲ್ಲ ಉಬ್ಬು ಚಿತ್ರಗಳು ಮತ್ತು ವಿನ್ಯಾಸವೇ ಇರುತ್ತದೆ.

ಹಾಕಿ ಲೀಗ್: ಬೆಂಗಾಲ್ ಟೈಗರ್ಸ್‌ಗೆ ಜಯ

ರಾಂಚಿ (ಪಿಟಿಐ): ಕಾಥರಿನ್ ಮುಲ್ಲನ್ ಅವರು ಗಳಿಸಿದ ಗೋಲಿನಿಂದ ಶ್ರಾಚಿ ರಾರ್ ಬೆಂಗಾಲ್ ಟೈಗರ್ಸ್ ತಂಡ ಮಹಿಳಾ ಹಾಕಿ ಲೀಗ್ ಪಂದ್ಯದಲ್ಲಿ ಮಂಗಳವಾರ 1–0 ಗೋಲಿನಿಂದ ಡೆಲ್ಲಿ ಎಸ್‌ಜಿ ಪೈಪರ್ಸ್ ತಂಡವನ್ನು ಸೋಲಿಸಿತು.23ನೇ ನಿಮಿಷ ಮುಲ್ಲನ್ ನಿರ್ಣಾಯಕ ಗೋಲು ಗಳಿಸಿದರು. ಟೈಗರ್ಸ್ ತಂಡ ಕೊನೆಯವರೆಗೂ ಆ ಗೋಲನ್ನು ರಕ್ಷಿಸಿಕೊಂಡು ಜಯ ಸಾಧಿಸುವಲ್ಲಿ ಯಶಸ್ವಿಯಾಯಿತು.



ರಣಜಿ ಪಂದ್ಯ ಆಡಲಿರುವ ಪಂತ್

ನವದೆಹಲಿ (ಪಿಟಿಐ): ಭಾರತ ತಂಡದ ವಿಕೆಟ್ ಕೀಪರ್–ಬ್ಯಾಟರ್ ರಿಷಭ್ ಪಂತ್ ಅವರು ಇದೇ 23ರಿಂದ ನಡೆಯುವ ರಣಜಿ ಪಂದ್ಯದಲ್ಲಿ ದೆಹಲಿ ತಂಡದಲ್ಲಿ ಆಡಲು ಲಭ್ಯರಿದ್ದಾರೆ.

‘ರಾಜ್‌ಕೋಟ್‌ನಲ್ಲಿ ಸೌರಾಷ್ಟ್ರ ಎದುರು ನಡೆಯಲಿರುವ ರಣಜಿ ಪಂದ್ಯದಲ್ಲಿ ರಿಷಭ್ ಆಡುವುದು ಖಚಿತ. ಅವರೇ ಈ ವಿಷಯ ತಿಳಿಸಿದ್ದಾರೆ.

ವಿರಾಟ್ ಕೊಹ್ಲಿ ಕೂಡ ಆಡುವ ನಿರೀಕ್ಷೆ ನಮಗಿದೆ. ಆದರೆ ಅವರಿಂದ ಇನ್ನೂ ಯಾವುದೇ ಮಾಹಿತಿ ಬಂದಿಲ್ಲ‘ ಎಂದು ಡೆಲ್ಲಿ ಡಿಸ್ಟ್ರಿಕ್ಟ್ಸ್ ಕ್ರಿಕೆಟ್ ಸಂಸ್ಥೆ (ಡಿಡಿಸಿಎ) ಕಾರ್ಯದರ್ಶಿ ಅಶೋಕ್ ಶರ್ಮಾ ತಿಳಿಸಿದ್ದಾರೆ.

ರಿಷಭ್ ಪಂತ್

ರೋಹಿತ್ ಅಭ್ಯಾಸ: ಮಂಗಳವಾರ ಮುಂಬೈ ರಣಜಿ ತಂಡದೊಂದಿಗೆ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರು ಬ್ಯಾಟಿಂಗ್ ಅಭ್ಯಾಸ ನಡೆಸಿದರು. ಅವರು ಕೂಡ ಈ ಬಾರಿ ರಣಜಿ ಪಂದ್ಯದಲ್ಲಿ ಆಡುವ ಸಾಧ್ಯತೆ ಇದೆ.

ಗಿಲ್ ಲಭ್ಯ: ಕರ್ನಾಟಕ ಎದುರಿನ ರಣಜಿ ಪಂದ್ಯದಲ್ಲಿ ಪಂಜಾಬ್ ತಂಡದಲ್ಲಿ ಬ್ಯಾಟರ್ ಶುಭಮನ್ ಗಿಲ್ ಕಣಕ್ಕಿಳಿಯುವರು. ಇದೇ ಜನವರಿ 23ರಿಂದ ಬೆಂಗಳೂರಿನಲ್ಲಿ ಪಂದ್ಯ ನಡೆಯಲಿದೆ.

ವೈಟ್ ಜಾಕೆಟ್ ಅನಾವರಣ

ದುಬೈ (ಪಿಟಿಐ): ಐಸಿಸಿ ಚಾಂಪಿಯನ್ಸ್ ಟ್ರೋಫಿ ಹಿನ್ನೆಲೆಯಲ್ಲಿ ಪಾಕಿಸ್ತಾನ ಕ್ರಿಕೆಟ್ ತಂಡದ ಮಾಜಿ ನಾಯಕ ವಸೀಂ ಅಕ್ರಂ ಅವರು ವೈಟ್ ಜಾಕೆಟ್‌ಗಳನ್ನು ಬಿಡುಗಡೆ ಮಾಡಿದ್ದಾರೆ. ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯು ಫೆ.19ರಿಂದ ಪಾಕಿಸ್ತಾನ ಮತ್ತು ಯುಎಇಯಲ್ಲಿ ನಡೆಯಲಿದೆ. ಟೂರ್ನಿ ಆರಂಭಕ್ಕೆ ಇನ್ನೊಂದು ತಿಂಗಳು ಬಾಕಿ ಇರುವ ಹಿನ್ನೆಲೆಯಲ್ಲಿ ಐಸಿಸಿ ಪ್ರೊಮೊ ವಿಡಿಯೋ ಮೂಲಕ ವೈಟ್ ಜಾಕೆಟ್‌ಗೆ ಗೌರವ ಸಲ್ಲಿಸಿದೆ.

ಚಾಂಪಿಯನ್ನರ ಪಯಣದಲ್ಲಿ ವಿಶ್ವ ಕ್ರಿಕೆಟ್‌ನ ಅಭಿಮಾನಿಗಳು ಸೇರುವಂತೆ ವಾಸೀಮ್ ಅಕ್ರಮ್ ಮನವಿ ಮಾಡಿದ್ದಾರೆ.

ಆಸ್ಟ್ರೇಲಿಯನ್ ಓಪನ್: ಎರಡನೇ ಸುತ್ತಿಗೆ ರಿಬಾಕಿನಾ, ಜಾಸ್ಮಿನ್; ರುಬ್ಲೇವ್ ನಿರ್ಗಮನ

ಸೋಲಿನಿಂದ ಪಾರಾದ ಡೇನಿಯಲ್ ಮೆಡ್ವೆಡೇವ್

ಮೆಲ್ಬರ್ನ್ (ಎಎಫ್‌ಪಿ): ಹೋದ ಸಲದ ರನ್ನರ್ ಅಪ್ ಡೇನಿಯಲ್ ಮೆಡ್ವೆಡೇವ್ ಅವರು ಹತಾಶೆಯಲ್ಲಿ ರ‍್ಯಾಕೆಟ್‌ಅನ್ನು ನೆಲಕ್ಕೆ ಕುಕ್ಕಿ ಹಾಳುಗೆಡವಿದರು. ಮಂಗಳವಾರ ಥಾಯ್ಲೆಂಡ್‌ನ ಆಟಗಾರನೆದುರು ಕೊನೆಗೂ ಸಂಯಮ ಕಾಯ್ದುಕೊಂಡ ರಷ್ಯದ ಆಟಗಾರ ಸೋಲಿನ ಸುಳಿಯಿಂದ ಹೊರಬಂದು ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯ ಎರಡನೇ ಸುತ್ತನ್ನು ತಲುಪಿದರು.

ಉಳಿದಂತೆ, ನಾಲ್ಕನೇ ಶ್ರೇಯಾಂಕದ ಟೇಲರ್ ಫ್ರಿಟ್ಜ್ ಮತ್ತು 30ನೇ ಶ್ರೇಯಾಂಕದ ಗೇಲ್ ಮಾನ್‌ಫಿಲ್ಸ್ ಅವರು ಮೊದಲ ಸುತ್ತಿನಲ್ಲಿ ಅಧಿಕಾರಯುತ ಜಯಗಳಿಸಿದರು. ಮಹಿಳೆಯರ ವಿಭಾಗದಲ್ಲಿ ನಾಲ್ಕನೇ ಶ್ರೇಯಾಂಕದ ಜಾಸ್ಮಿನ್ ಪಾವ್ಲಿನಿ, ಆರನೇ ಶ್ರೇಯಾಂಕದ ಎಲೆನಾ ರಿಬಾಕಿನಾ ಕೂಡ ಗೆಲ್ಲಲು ಕಷ್ಟಪಡಲಿಲ್ಲ.

ಈ ಹಿಂದಿನ ನಾಲ್ಕು ವರ್ಷಗಳಲ್ಲಿ ಮೂರು ಬಾರಿ ಫೈನಲ್‌ನಲ್ಲಿ ಸೋತಿದ್ದ ಮೆಡ್ವೆಡೇವ್ ಅವರು ರಾಡ್ ಲೇವರ್ ಅರೇನಾದಲ್ಲಿ 418ನೇ ಕ್ರಮಾಂಕದ ಕಸಿಡಿತ್ ಸಮ್ರೆಜ್ ಎದುರು ಗೆಲ್ಲುವ ನೆಚ್ಚಿನ ಆಟಗಾರನಾಗಿದ್ದರು. ಆದರೆ ಐದನೇ ಶ್ರೇಯಾಂಕದ ಮೆಡ್ವೆಡೇವ್ ವರ್ಷದ ತಮ್ಮ ಮೊದಲ ಪಂದ್ಯದ ಮಧ್ಯದಲ್ಲಿ ಜಗಳಗಂಟನಂತೆ ಕಂಡರು. ಕೊನೆಗೂ ಶಾಂತಚಿತ್ತರಾದ ಅವರು ಲಯಕ್ಕೆ ಮರಳಿ 3 ಗಂಟೆ 8 ನಿಮಿಷಗಳಲ್ಲಿ ಪಂದ್ಯ ಗೆದ್ದರು.

ಡೇನಿಯಲ್ ಮೆಡ್ವೆಡೇವ್ ಎಎಫ್‌ಪಿ ಚಿತ್ರ

‘ಎರಡು ಮತ್ತು ಮೂರನೇ ಸೆಟ್‌ನಲ್ಲಿ ಚೆಂಡನ್ನು ಹೊಡೆಯಲಾಗಲೇ ಇಲ್ಲ. ಏನು ಮಾಡಬೇಕೆಂದು ತೋಚಲಿಲ್ಲ’ ಎಂದು 6–2, 4–6, 3–6, 6–1, 6–2 ರಿಂದ ಗೆದ್ದ ಮೆಡ್ವೆಡೇವ್ ಪ್ರತಿಕ್ರಿಯಿಸಿದರು. ಮೂರನೇ ಸೆಟ್‌ನಲ್ಲಿ 28 ವರ್ಷ ವಯಸ್ಸಿನ ಆಟಗಾರ ಒಮ್ಮೆ ರ‍್ಯಾಕೆಟನ್ನು ನೆಲಕ್ಕೆ ಕುಕ್ಕಿ ತುಂಡುಮಾಡಿದರು. ನೆಟ್‌ಗೆ ಅಳವಡಿಸಿದ್ದ ಕ್ಯಾಮೆರಾಕ್ಕೂ ಹಾನಿಯಾಯಿತು. ವೈಲ್ಡ್‌ಕಾರ್ಡ್ ಪಡೆದಿದ್ದ ಸಮ್ರೆಜ್‌ಗೆ ಇದು ಮೊದಲ ಗ್ರ್ಯಾನ್‌ಸ್ಲಾಮ್ ಟೂರ್ನಿಯಾಗಿತ್ತು.

ನಾಲ್ಕನೇ ಶ್ರೇಯಾಂಕದ ಟೇಲರ್ ಫ್ರಿಟ್ಜ್ (ಅಮೆರಿಕ) ಅವರು 6–2, 6–0, 6–4 ರಿಂದ ಸ್ವದೇಶದ ಜೆನ್ಸನ್ ಬ್ರೂಕ್ಸ್‌ಬಿ ಎದುರು ಜಯಗಳಿಸಿದರು. ಫ್ರೆಂಚ್ ಆಟಗಾರರ ವ್ಯವಹಾರವಾಗಿದ್ದ ಇನ್ನೊಂದು ಪಂದ್ಯದಲ್ಲಿ, 38 ವರ್ಷ ವಯಸ್ಸಿನ ಗೇಲ್ ಮಾನ್ಫಿಲ್ಸ್ 7–6, 6–3, 6–7, 6–7, 6–4 ರಿಂದ 21 ವರ್ಷ ವಯಸ್ಸಿನ ಗಿಯೊವನಿ ಪೆರಿಕಾರ್ಡ್ ಅವರನ್ನು ಸೋಲಿಸಿದರು.

ರುಬ್ಲೇವ್‌ಗೆ ಆಘಾತ: ಬ್ರೆಜಿಲ್‌ನ ಹದಿಹರೆಯದ ಆಟಗಾರ ಜಾವೊ ಫೊನ್ಸೆಕಾ ಅವರು ಮೊದಲ ಸುತ್ತಿನಲ್ಲಿ 7–6 (7–1), 6–3, 7–6 (7–5) ರಿಂದ ಒಂಬತ್ತನೇ ಶ್ರೇಯಾಂಕದ ಆ್ಯಂಡ್ರಿ ರುಬ್ಲೇವ್ ಅವರಿಗೆ ಆಘಾತ ನೀಡಿದರು. 18 ವರ್ಷ ವಯಸ್ಸಿನ ಫೊನ್ಸೆಕಾ ಅವರಿಗೆ ಇದು ಮೊದಲ ಗ್ರ್ಯಾನ್‌ಸ್ಲಾಮ್ ಟೂರ್ನಿ.

13ನೇ ಶ್ರೇಯಾಂಕದ ಹೋಲ್ಗರ್ ರೂನ್ (ಡೆನ್ಮಾರ್ಕ್) 4–6, 6–3, 6–4, 3–6, 6–4ರಿಂದ ಚೀನಾದ ಝೂಂಗ್ ಜಿಝೆನ್ ಅವರನ್ನು ಸೋಲಿಸಿದರು.

ಪಾವ್ಲೊಲಿನಿ ಮುನ್ನಡೆ: ಇಟಲಿಯ ಪಾವ್ಲಿನಿ 6–0, 6–4 ರಿಂದ ವೀ ಸೀಜಿಯಾ (ಚೀನಾ) ಅವರನ್ನು ಹಿಮ್ಮೆಟ್ಟಿಸಿದರು. 29 ವರ್ಷ ವಯಸ್ಸಿನ ಆಟಗಾರ್ತಿ ಕಳೆದ ವರ್ಷ ರೋಲಂಡ್ ಗ್ಯಾರೋಸ್ ಮತ್ತು ವಿಂಬಲ್ಡನ್‌ನಲ್ಲಿ ಫೈನಲ್ ತಲುಪಿದ್ದರು. ಆರನೇ ಶ್ರೇಯಾಂಕದ ರಿಬಾಕಿನಾ (ಕಜಕಸ್ತಾನ) 6–1, 6–1 ರಿಂದ 16 ವರ್ಷ ವಯಸ್ಸಿನ ಎಮರ್ಸನ್ ಜೋನ್ಸ್ (ಆಸ್ಟ್ರೇಲಿಯಾ) ಅವರನ್ನು ಸೋಲಿಸಿದರು.

ಬೋಪಣ್ಣ ನಿರ್ಗಮನ

ಮೆಲ್ಬರ್ನ್ (ಪಿಟಿಐ): ವಿಶ್ವದ ಮಾಜಿ ಅಗ್ರಮಾನ್ಯ ಡಬಲ್ಸ್ ಆಟಗಾರ ರೋಹನ್ ಬೋಪಣ್ಣ ಮತ್ತು ಅವರ ಹೊಸ ಜೊತೆಗಾರ, ಕೊಲಂಬಿಯಾದ ನಿಕೋಲಸ್ ಬೇರಿನ್‌ಟೋಸ್ ಅವರು ಆಸ್ಟ್ರೇಲಿಯನ್ ಓಪನ್ ಟೂರ್ನಿಯ ಮೊದಲ ಸುತ್ತಿನಲ್ಲೇ ಹೊರಬಿದ್ದರು. ಸ್ಪೇನ್‌ನ ಪೆಡ್ರೊ ಮಾರ್ಟಿನೆಝ್– ಜುಮ್ ಮುನರ್ ಮಂಗಳವಾರ ನಡೆದ ಪಂದ್ಯದಲ್ಲಿ ರೋಹನ್– ನಿಕೋಲಸ್ ಜೋಡಿಯನ್ನು ಸೋಲಿಸಿತು. ಸುಮಾರು ಎರಡು ಗಂಟೆ ನಡೆದ ಪಂದ್ಯದಲ್ಲಿ, 14ನೇ ಶ್ರೇಯಾಂಕದ ಬೋಪಣ್ಣ–ಬೇರಿನ್‌ಟೋಸ್ ಜೋಡಿ 5–6, 6–7 (5) ರಲ್ಲಿ ಸೋಲನುಭವಿಸಿತು.

L&K | SAATCHI & SAATCHI